ಭಾಷೆ ಮತ್ತು ಸಂಸ್ಕೃತಿಯ ಅಂತಃಸಂಬಂಧಗಳು

ಕೋಟ ಉಪಭಾಷೆಯನ್ನು ಅನುಲಕ್ಷಿಸಿ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಭಾರತೀ ದೇವಿ ಪಿ.

ಮಾರ್ಗದರ್ಶಕರು
ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೧೧

ಭಾಷೆ ಮತ್ತು ಸಂಸ್ಕೃತಿಯ ಅಂತಃಸಂಬಂಧಗಳು

ಕೋಟ ಉಪಭಾಷೆಯನ್ನು ಅನುಲಕ್ಷಿಸಿ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಭಾರತೀ ದೇವಿ ಪಿ.

ಮಾರ್ಗದರ್ಶಕರು
ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೧೧

ಸಂಶೋಧಕರ ಘೋಷಣಾ ಪತ್ರ

ಭಾಷೆ ಮತ್ತು ಸಂಸ್ಕೃತಿಯ ಅಂತಃಸಂಬಂಧಗಳು : ಕೋಟ ಉಪಭಾಷೆಯನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎ. ಸುಬ್ಬಣ್ಣ ರೈ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ : ೧೪-೧೨-೨೦೧೧
ಸ್ಥಳ : ವಿದ್ಯಾರಣ್ಯ

(ಭಾರತೀ ದೇವಿ ಪಿ.)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಭಾರತೀ ದೇವಿ ಪಿ. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಭಾಷೆ ಮತ್ತು ಸಂಸ್ಕೃತಿಯ ಅಂತಃಸಂಬಂಧಗಳು : ಕೋಟ ಉಪಭಾಷೆಯನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : ೧೭.೧೨.೨೦೧೮
ಸ್ಥಳ : ವಿದ್ಯಾರಣ್ಯ

(ಡಾ. ಎ. ಸುಬ್ಬಣ್ಣ ರೈ)
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರವೇಶ

೧.೧. ಕೋಟ ಒಳನುಡಿ, ವ್ಯಾಪ್ತಿ ನಿರ್ವಚನ

೧.೨. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

೧.೩. ಅಧ್ಯಯನದ ಉದ್ದೇಶ

೧.೪. ಅಧ್ಯಯನದ ವ್ಯಾಪ್ತಿ

೧.೫. ಅಧ್ಯಯನ ವಿಧಾನ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರವೇಶ

ಭಾಷೆ ಮತ್ತು ಸಂಸ್ಕೃತಿಯ ನಡುವಣ ಸಂಬಂಧ ಮನುಷ್ಯನ ಉಗಮವಾದಾಗಿನಿಂದಲೂ ಬೆಳೆದು ಬಂದಿರುವಂಥದ್ದು. ಸಮುದಾಯದ ಜೀವನವಿಧಾನದ ಒಟ್ಟು ಮೊತ್ತ ಸಂಸ್ಕೃತಿಯಾದರೆ ಪರಸ್ಪರ ಸಂವಹನಕ್ಕೆ ರೂಪಿಸಿಕೊಂಡ ಮಾಧ್ಯಮ ಭಾಷೆ. ಭಾಷೆ ಸಂಸ್ಕೃತಿಯ ವಾಹಕ ಎಂಬುದು ನಮ್ಮ ಸಾಮಾನ್ಯವಾದ ತಿಳುವಳಿಕೆ. ಆದರೆ ಇವುಗಳ ಅಂತಃಸಂಬಂಧದ ನೆಲೆಗಳು ಇಷ್ಟಕ್ಕೇ ಸೀಮಿತಗೊಳ್ಳುವುದಿಲ್ಲ. ಭಾಷೆ ನಾವು ವಾಸ್ತವವನ್ನು ಗ್ರಹಿಸುವ ರೀತಿಯ ಮೇಲೆ ಪ್ರಭಾವ ಬೀರುತ್ತದೆ. ಜೊತೆಗೆ ಭಾಷೆಯ ಮೂಲಕ ಅನೇಕ ಸಂಗತಿಗಳು ಬದುಕನ್ನು ಪ್ರಭಾವಿಸುತ್ತಿರುತ್ತವೆ. ಜನರ ಬದುಕಿನಲ್ಲಿ ಆದ ಪಲ್ಲಟಗಳು ಭಾಷೆಯಲ್ಲಿ ಪ್ರತಿಫಲಿಸುತ್ತಿರುತ್ತವೆ, ಹಾಗೇ ಹೊಸ ಭಾಷೆಯ ಆಗಮನ ಜನರ ಜೀವನ ವಿಧಾನದಲ್ಲಿ ಅನೇಕ ಪಲ್ಲಟಗಳನ್ನು ಉಂಟುಮಾಡುತ್ತದೆ.

ಒಳನುಡಿಗಳು ಇಂದು ಅಳಿವಿನ ಭಯದಲ್ಲಿವೆ ಎಂಬುದು ಜಾಗತಿಕವಾಗಿ ಚರ್ಚಿತವಾಗುತ್ತಿರುವ ವಿದ್ಯಮಾನ. ಒಂದೆಡೆ ಪ್ರಮಾಣ ಭಾಷೆಯ ಹೇರಿಕೆ, ಇನ್ನೊಂದೆಡೆ ಎಲ್ಲ ಕ್ಷೇತ್ರಗಳಲ್ಲಿ ಇಂಗ್ಲಿಷ್‌ನ ಹಾಜರಿ ಮತ್ತು ಅನಿವಾರ್ಯತೆ ಒಳನುಡಿಗಳ ಮೇಲೆ ವಿಚಿತ್ರ ಒತ್ತಡವನ್ನು ಹಾಕಿವೆ. ಈ ನೆಲೆಯಲ್ಲಿ ವಿಭಿನ್ನ ಭಾಷಿಕ ಸಮುದಾಯಗಳು ಸ್ಥಿತ್ಯಂತರದಲ್ಲಿರುವ

ಈ ಕಾಲಘಟ್ಟದಲ್ಲಿ ಭಾಷೆ ಮತ್ತು ಸಂಸ್ಕೃತಿಯ ನಡುವಣ ಸಂಬಂಧದ ಎಳೆಗಳನ್ನು ಶೋಧಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಸಾಗುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಆರಿಸಿಕೊಂಡಿರುವ ಕೋಟ ಒಳನುಡಿ (ಇದನ್ನು ಕುಂದಾಪ್ರ ಭಾಷೆಯೆಂದೂ ಕರೆಯುತ್ತಾರೆ) ಅಲ್ಪಸ್ವಲ್ಪ ಪ್ರಾದೇಶಿಕ ವೈವಿಧ್ಯಗಳೊಡನೆ ಕಲ್ಯಾಣಪುರ ಹೊಳೆಯಿಂದ ಉತ್ತರಕ್ಕೆ ಬೈಂದೂರಿನವರೆಗೆ ಹರಡಿಕೊಂಡಿರುವ ಪ್ರದೇಶದಲ್ಲಿ ಕಂಡುಬರುವ ಭಾಷಾ ಪ್ರಭೇದ. ಅತ್ಯಂತ ವೇಗವಾಗಿ ನಗರೀಕರಣಕ್ಕೆ ತೆರೆದುಕೊಳ್ಳುತ್ತಿರುವ ಈ ಪ್ರದೇಶ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಒಡ್ಡಿಕೊಂಡಿದೆ.

ಚರ್ಚೆಯನ್ನು ಮುಂದುವರೆಸುವ ಮುನ್ನ ಸ್ಪಷ್ಟತೆಯ ಕಾರಣಕ್ಕಾಗಿ ಒಂದೆರಡು ಸಂಗತಿಗಳನ್ನು ವಿವರಿಸಿಕೊಂಡು ಮುಂದುವರೆಯಲಾಗುತ್ತದೆ.

ಮೊದಲನೆಯದಾಗಿ, ಈ ಅಧ್ಯಯನದ ಶೀರ್ಷಿಕೆಯನ್ನು ಆಯ್ದುಕೊಳ್ಳುವ ಹೊತ್ತಿಗೆ ಜನಪ್ರಿಯ ನಂಬಿಕೆಯ ಪ್ರಧಾನ ಭಾಷೆ, ಉಪಭಾಷೆ ಎಂಬ ಗ್ರಹಿಕೆ ಕೆಲಸ ಮಾಡಿದೆ. ಆದರೆ ಅಧ್ಯಯನದ ಪ್ರಕ್ರಿಯೆಯಲ್ಲಿ ಮುಂದುವರೆದಂತೆಲ್ಲ ಉಪಭಾಷೆ ಎಂಬ ಗ್ರಹಿಕೆಯೇ ಯಾಜಮಾನ್ಯದ[1] ನೆಲೆಯದ್ದು ಎಂಬ ತಿಳುವಳಿಕೆ ಬಲವಾಗುತ್ತಾ ಹೋಯಿತು. ಹೀಗಾಗಿ ಒಳಗಿನ ಅಧ್ಯಾಯಗಳಲ್ಲಿ ಒಳನುಡಿ, ಭಾಷಾಪ್ರಭೇದ ಎಂದೇ ಬಳಸಲಾಗಿದೆ. ಪ್ರಾದೇಶಿಕ ನೆಲೆಯಲ್ಲಿ ಸೀಮಿತ ಪ್ರಸಾರವನ್ನು ಪಡೆದ ಭಾಷೆಯನ್ನು ಒಳನುಡಿಯೆಂದೂ ಅದೇ ವಿಸ್ತೃತ ಪ್ರಸಾರ ಪಡೆದ ಭಾಷೆಯನ್ನು ಪ್ರಮಾಣ ಕನ್ನಡ[2]ವೆಂದೂ ಕರೆಯಲಾಗಿದೆ. ಒಳನುಡಿ ಮತ್ತು ಪ್ರಮಾಣ ಕನ್ನಡಗಳೆರಡೂ ಭಾಷಾ ಪ್ರಭೇದಗಳೇ. ಹಾಗೆಯೇ ಆಧುನಿಕ ಸಂಸ್ಕೃತಿ ಅಧ್ಯಯನ 'ಶಿಷ್ಟ' 'ಪರಿಶಿಷ್ಟ' ಕಲ್ಪನೆಗಳನ್ನು ಪ್ರಶ್ನಿಸುತ್ತದೆ. ಈ ನೆಲೆಯಲ್ಲಿ ವ್ಯಾವಹಾರಿಕ ಅನುಕೂಲಕ್ಕಾಗಿ ರೂಪಿತವಾದ ಒಂದು ಭಾಷಾಪ್ರಭೇದ ಪ್ರಮಾಣ ಕನ್ನಡ ಎನಿಸಿಕೊಳ್ಳುತ್ತದೆ. ಆದರೆ ಅದೂ ಒಂದು ಭಾಷಾಪ್ರಭೇದವೇ. ಆದರೆ ಅದರ ಜೊತೆಗೆ ಅಧಿಕಾರ ಕೇಂದ್ರದ ಬೆಂಬಲ ಇರುವುದರಿಂದ ಅದು ಇತರ ಪ್ರಭೇದಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ. ಈ ಭಾಷೆ ಮತ್ತು ಉಪಭಾಷೆಗಳ ಕಲ್ಪನೆಯ ಬಗ್ಗೆ ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಎರಡನೆಯದಾಗಿ, ಕನ್ನಡದ ಭಾಷಾ ಪ್ರಭೇದಗಳ ಕುರಿತು ಚರ್ಚಿಸುವಾಗ ಪ್ರಸ್ತುತ ಅಧ್ಯಯನಕ್ಕೆ ಆರಿಸಿಕೊಂಡ ಭಾಷಾ ಪ್ರಭೇದವನ್ನು ಕೋಟ(ಕ್ವಾಟ)ಕನ್ನಡ, ಕುಂದಾಪ್ರ ಕನ್ನಡ, ಬಾರಕೂರು ಕನ್ನಡ ಮತ್ತು ಕುಂದಗನ್ನಡಗಳೆಂಬ ಹೆಸರಿನಿಂದ ಕರೆಯಲಾಗಿರುವುದನ್ನು ಕಾಣುತ್ತೇವೆ. ಈ ಹೆಸರುಗಳನ್ನು ಒಂದರ ಜಾಗದಲ್ಲೊಂದನ್ನು ಮುಕ್ತವಾಗಿ ಬಳಸುತ್ತಾ

ಬರಲಾಗಿದೆ. ಈ ಅಧ್ಯಯನದಲ್ಲಿ ಕ್ಷೇತ್ರಕಾರ್ಯಕ್ಕೆ ಪ್ರಧಾನವಾಗಿ ಕೋಟ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಆರಿಸಿಕೊಂಡರೂ ಭಾಷೆಯ ವಿಸ್ತಾರವಾದ ವ್ಯಾಪ್ತಿಯನ್ನು ಗಮನದಲ್ಲಿರಿಸಿಕೊಂಡೇ ಅಧ್ಯಯನ ನಡೆಸಲಾಗಿದೆ.

ಜಾಗತಿಕ ಮಟ್ಟದಲ್ಲಿ ಆರಂಭದಲ್ಲಿ ನಡೆದ ಭಾಷೆ ಮತ್ತು ಸಂಸ್ಕೃತಿ ಆಧರಿಸಿ ನಡೆದ ಬಹುತೇಕ ಮಾನವಶಾಸ್ತ್ರೀಯ ಅಧ್ಯಯನಗಳು ಒಂದು ಜನಾಂಗವನ್ನು ಕೇಂದ್ರವಾಗಿರಿಸಿ ಕೊಂಡವು. ಜನಾಂಗ ಎಂದು ಭಾವಿಸಿದಾಗ ಪ್ರತಿ ಜನಾಂಗಕ್ಕೂ ವಿಶಿಷ್ಟ ಸಂಸ್ಕೃತಿ ಜೊತೆಗೆ ಭಿನ್ನ ಮುಖಚಹರೆ, ವಂಶಾವಳಿ ಇರುತ್ತದೆ. ಈಗ ಇದು ಸಮುದಾಯದ ಅಧ್ಯಯನದತ್ತಲೂ ಹೊರಳಿಕೊಂಡಿದೆ. ಸಮುದಾಯ ಬಹುತ್ವವನ್ನು ಒಳಗೊಂಡಿರುವಂಥದ್ದು. ಇದಕ್ಕೆ ಜಾನಾಂಗಿಕ ಚಹರೆ ಇರುವುದಿಲ್ಲ. ವರ್ಗ, ಜಾತಿ ನೆಲೆಯ ಹಲವು ಅಸ್ಮಿತೆಗಳು ಇರುತ್ತವೆ. ಈ ಹಲವು ಅಸ್ಮಿತೆಗಳಲ್ಲಿ ಭಾಷಿಕ ಅಸ್ಮಿತೆಯೂ ಒಂದು. ಈ ನೆಲೆಯಲ್ಲಿ ಭಾಷೆಯ ಆಧಾರದಲ್ಲಿ ಭಾಷಿಕ ಸಮುದಾಯವನ್ನು ಗುರುತಿಸಿ ಆ ಸಮುದಾಯದ ಭಾಷೆ ಮತ್ತು ಸಂಸ್ಕೃತಿಗಿರುವ ಸಂಬಂಧವನ್ನು ಶೋಧಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಸಾಗುತ್ತದೆ.

ಜಾತಿ, ವರ್ಗ ಅಥವಾ ಜನಾಂಗಕ್ಕಿಂತ ಭಿನ್ನವಾಗಿ ಭಾಷಿಕ ಸಮುದಾಯವೆಂಬುದು ನಿರ್ದಿಷ್ಟ ಭಾಷೆಯನ್ನಾಡುವ, ಭಾಷೆಯ ಬಳಕೆ ಕುರಿತು ಸಾಮಾನ್ಯ ನಿಯಮಗಳನ್ನು ಮತ್ತು ನಿರೀಕ್ಷೆ ಹೊಂದಿರುವ ಸಮುದಾಯ. ಜನರು ಏಕಕಾಲಕ್ಕೆ ಭಿನ್ನ ಸಮುದಾಯಗಳ ಸದಸ್ಯರಾಗಿರುವಂತೆಯೇ ಭಾಷಿಕ ಸಮುದಾಯದ ಸದಸ್ಯರೂ ಆಗಿರುತ್ತಾರೆ. ಕೋಟ ಭಾಷಿಕ ಸಮುದಾಯವೂ ಹಲವು ವರ್ಗ, ಜಾತಿಗಳ ಜನರಿಂದ ಕೂಡಿದ್ದು.

೧.೧. ಕೋಟ ಒಳನುಡಿ, ವ್ಯಾಪ್ತಿ, ನಿರ್ವಚನ

ಉಡುಪಿಯಿಂದ ಉತ್ತರಕ್ಕೆ ಕಲ್ಯಾಣಪುರ ಹೊಳೆಯಿಂದಾರಂಭಿಸಿ ಬೈಂದೂರು, ಶಿರೂರು ವರೆಗಿನ ಪ್ರದೇಶದಲ್ಲಿ ಜನರಾಡುವ ಭಾಷಾ ಪ್ರಭೇದವನ್ನು ಪ್ರಮುಖವಾಗಿ 'ಕೋಟ ಕನ್ನಡ', 'ಕುಂದಾಪುರ ಕನ್ನಡ' ಎಂಬ ಹೆಸರಿನಿಂದ ಕರೆಯುತ್ತಾ ಬರಲಾಗಿದೆ.[೩] ಕುಂದಾಪ್ರ ಕನ್ನಡವನ್ನು ಸಂಕ್ಷಿಪ್ತಗೊಳಿಸಿದ 'ಕುಂದಗನ್ನಡ' ಎಂಬ ರೂಪವೂ ಈಚಿನ ವರ್ಷಗಳಲ್ಲಿ ಬಳಕೆಯಲ್ಲಿದೆ. ಕೆಲವೇ ಕೆಲವು ಸಂದರ್ಭಗಳಲ್ಲಿ ಈ ಪ್ರಭೇದವನ್ನು 'ಬಾರಕೂರು ಕನ್ನಡ' (ಆಚಾರ್ಯ.ಎ.ಎಸ್;೧೯೭೧)ಎಂಬ ಹೆಸರಿನಿಂದಲೂ ಕರೆಯಲಾಗಿದೆ.

ಇದನ್ನು ಮೊದಲಿಗೆ ಕೋಟ ಕನ್ನಡ ಎಂದು ಕರೆದವರು ಯಾರು ಎಂದು ಗಮನಿಸಬೇಕಾಗುತ್ತದೆ. ಸಿ.ಉಪೇಂದ್ರ ಸೋಮಯಾಜಿ ಅವರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ

ಈ ಹೆಸರು ಬಂದುದರ ಬಗ್ಗೆ ಒಂದು ಕುತೂಹಲಕಾರಿ ಅಂಶವನ್ನು ಉಲ್ಲೇಖಿಸಿದ್ದಾರೆ. ಕೋಟ ಪ್ರದೇಶದಿಂದ ಜೀವನ ನಿರ್ವಹಣೆಗಾಗಿ ಬೇರೆಡೆಗೆ ಹೋದವರು ತಮ್ಮೊಳಗೇ ಮಾತಾಡಿಕೊಳ್ಳುವಾಗ ಈ ಪ್ರದೇಶದ ಭಾಷೆಯನ್ನೇ ಮಾತಾಡಿಕೊಳ್ಳುತ್ತಿದ್ದರು. ಇದು ಯಾವ ಭಾಷೆ ಎಂದು ಅಲ್ಲಿನವರು ಕೇಳಿದಾಗ ತಾವು ಕೋಟ ಪ್ರದೇಶದವರಾದ್ದರಿಂದ ಕೋಟಭಾಷೆ ಎಂದು ಹೇಳಿದ್ದರಿಂದ ಈ ಭಾಷಾ ಪ್ರಭೇದಕ್ಕೆ ಕೋಟ ಕನ್ನಡ ಎಂಬ ಹೆಸರು ಬಂತು ಎನ್ನುತ್ತಾರೆ. ಹೀಗೆ ವಲಸೆ ಹೋದವರಲ್ಲಿ ಬ್ರಾಹ್ಮಣರು ಪ್ರಮುಖರು.

ಡಿ.ಎನ್. ಶಂಕರಭಟ್ಟರು 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ'ಯಲ್ಲಿ (೧೯೯೫) ಕರಾವಳಿ ಕನ್ನಡ, ಹವ್ಯಕ-ಕೋಟ-ಹಾಲಕ್ಕಿ ಮುಂತಾದ ಕನ್ನಡಗಳು ಸಂಸ್ಕೃತಕ್ಕೆ ಋಣಿಯಾಗದ ಮೂಲ ಕನ್ನಡದ ಕವಲುಗಳೆಂದು ಕರೆದಿದ್ದಾರೆ. ಈ ಭಾಷೆಯ ಕುರಿತು ಅಧ್ಯಯನ ನಡೆಸಿದ ಗುಂಡ್ಮಿ ಚಂದ್ರಶೇಖರ ಐತಾಳ(೧೯೭೩), ವಿಶ್ವಂಭರ ಉಪಾಧ್ಯಾಯ(೨೦೦೦), ಪಾ.ನ.ಮಯ್ಯ(೨೦೦೧), ಕನರಾಡಿ ವಾದಿರಾಜ ಭಟ್(೧೯೭೭), ಡಾ. ಶ್ರೀರಮಣ ಆಚಾರ್ಯ ಅಲೆವೂರು(೧೯೯೬), ಡಾ. ಕೆಂಪೇಗೌಡ(೧೯೭೬), ಎ.ವಿ. ನಾವಡ(೧೯೮೪) ಇವರೆಲ್ಲರೂ ಈ ಪ್ರಭೇದವನ್ನು ಕೋಟ ಕನ್ನಡ ಮತ್ತು ಕುಂದಾಪ್ರ ಕನ್ನಡ ಎಂಬ ಎರಡೂ ಹೆಸರಿನಿಂದ ಕರೆಯುತ್ತಾರೆ ಎಂಬುದನ್ನು ವಿವರಿಸಿದ್ದಾರೆ.

ಈ ಭಾಷಾ ಪ್ರಭೇದದ ನಿಘಂಟು ತಯಾರಿಸಿದ ಎ.ಎಚ್. ಸೂರ್ಯನಾರಾಯಣ ಹಂದೆ(೧೯೮೪)ಯವರೂ ಇದನ್ನು 'ಕೋಟ ಉಪಭಾಷೆ'ಯೆಂದು ಕರೆದಿದ್ದಾರೆ.

ಈ ಭಾಷಾ ಪ್ರಭೇದವನ್ನು ವರ್ಣನಾತ್ಮಕವಾಗಿ ವಿವರಿಸಿದ ಎ.ಎಸ್.ಆಚಾರ್ಯ ಅವರು ಇದನ್ನು 'ಬಾರಕೂರು ಕನ್ನಡ'(೧೯೭೧) ಎಂಬ ಹೆಸರಿನಿಂದ ಕರೆದಿರುವುದನ್ನು ಗಮನಿಸಬಹುದು. ಯಾಕೆ ಈ ಭಾಷಾ ಪ್ರಭೇದವನ್ನು 'ಬಾರಕೂರು ಕನ್ನಡ' ಎಂದು ಹೆಸರಿಸಲಾಗಿದೆ ಎಂಬುದರ ಬಗ್ಗೆ ಅವರು ಕೃತಿಯಲ್ಲಿ ಹೆಚ್ಚಿನ ವಿವರಣೆಯನ್ನೇನೂ ನೀಡುವುದಿಲ್ಲ.

ಒಟ್ಟಿನಲ್ಲಿ ಕೋಟ ಕನ್ನಡ ಮತ್ತು ಕುಂದಾಪುರ ಕನ್ನಡ ಇವೆರಡೂ ಒಂದೇ ಪ್ರಭೇದಕ್ಕಿರುವ ಹೆಸರುಗಳು ಎಂಬುದು ಸ್ಪಷ್ಟವಾಗುತ್ತದೆ. ಕಲ್ಯಾಣಪುರ ಹೊಳೆಯಿಂದ ಉತ್ತರಕ್ಕೆ ಬೈಂದೂರಿನವರೆಗಿರುವ ಈ ಪರಿಸರದ ಭಾಷೆ ಹಲವು ಸಾಮಾನ್ಯ ಚಹರೆಗಳನ್ನು ಹೊಂದಿದ್ದರೂ ಪ್ರಾದೇಶಿಕವಾಗಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಹೊಂದಿದೆ. ಈ ಪ್ರಾದೇಶಿಕ ವ್ಯತ್ಯಾಸಗಳನ್ನು ದಕ್ಷಿಣ ಕುಂದಾಪುರ(ಸಾಯಿಬ್ರಕಟ್ಟೆ, ಕೋಟ ಇತ್ಯಾದಿ), ಮಧ್ಯ ಕುಂದಾಪುರ (ಬಸ್ರೂರು, ಬಳ್ಕೂರು, ಜಪ್ತಿ, ಶಂಕರನಾರಾಯಣ ಇತ್ಯಾದಿ), ಉತ್ತರ ಕುಂದಾಪುರ

(ಬೈಂದೂರು, ನೂಜಾಡಿ, ಆಲೂರು ಇತ್ಯಾದಿ) ಎಂದು ಗುರುತಿಸಲಾಗಿದೆ(ವಾದಿರಾಜಭಟ್; ೧೯೭೭;ಪು:viii). ಈ ಪ್ರಾದೇಶಿಕ ವ್ಯತ್ಯಾಸಗಳನ್ನು ಬಹಳ ಸೂಕ್ಷ್ಮವಾಗಿ ಪ್ರಸ್ತುತ ಅಧ್ಯಯನದಲ್ಲಿ ಗಮನಿಸಲಾಗಿಲ್ಲ. ಪ್ರಸ್ತುತ ಅಧ್ಯಯನದುದ್ದಕ್ಕೂ ಈ ಭಾಷಾ ಪ್ರಭೇದವನ್ನು ಹೆಸರಿಸುವಾಗ ಕೋಟ ಒಳನುಡಿ ಅಥವಾ ಭಾಷಾ ಪ್ರಭೇದ ಎಂದೇ ಬಳಸಲಾಗಿದೆ.

೧.೨. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಕೋಟ ಒಳನುಡಿ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವು ಪ್ರತ್ಯೇಕವಾದ ಅಧ್ಯಯನಗಳು ಈವರೆಗೆ ನಡೆದಿವೆ. ಆರಂಭದಲ್ಲಿ ಈ ಭಾಷಾ ಪ್ರಭೇದದ ವೈಶಿಷ್ಟ್ಯವನ್ನು ಮನಗಂಡು ವಿಶೇಷವಾದ ಪದಗಳನ್ನು ಪಟ್ಟಿ ಮಾಡುವ ಮತ್ತು ಭಾಷಿಕ ರಚನೆಯನ್ನು ವರ್ಣನಾತ್ಮಕವಾಗಿ ತೆರೆದಿಡುವ ಕೆಲಸಗಳು ನಡೆದವು.

ಇವುಗಳಲ್ಲಿ ಪ್ರಮುಖವಾದವನ್ನು ಇಲ್ಲಿ ಉಲ್ಲೇಖಿಸಿ ವಿಶ್ಲೇಷಿಸುವ ಕೆಲಸ ನಡೆಸಲಾಗಿದೆ.

ಭಾಷಿಕ ಅಧ್ಯಯನ

ಭಾಷಿಕವಾಗಿ ಎರಡು ನೆಲೆಯಲ್ಲಿ ನಡೆದ ಅಧ್ಯಯನಗಳು ಕಾಣಸಿಗುತ್ತವೆ. ಮೊದಲನೆಯದು ವರ್ಣನಾತ್ಮಕವಾಗಿ ಒಳನುಡಿಯನ್ನು ವಿವರಿಸಿರುವುದು, ಎರಡನೆಯದಾಗಿ ಶಬ್ದಕೋಶಗಳ ರಚನೆ.

ವರ್ಣನಾತ್ಮಕ ನೆಲೆ: ಎ.ಎಸ್. ಆಚಾರ್ಯ ಅವರು ಡೆಕ್ಕನ್ ಕಾಲೇಜು, ಪುಣೆಯಿಂದ ಹೊರತಂದ 'ಬಾರಕೂರು ಕನ್ನಡ'(೧೯೭೧) ಈ ಭಾಷಾ ಪ್ರಭೇದವನ್ನು ವರ್ಣನಾತ್ಮಕವಾಗಿ ವಿವರಿಸುವ ಪ್ರಯತ್ನ. ಇಲ್ಲಿ ಈ ಪ್ರದೇಶದ ಸಂಸ್ಕೃತಿಯ ಜೊತೆಗೆ ಭಾಷೆಯನ್ನು ಇಟ್ಟು ವಿಶ್ಲೇಷಿಸುವ ಕೆಲಸ ನಡೆದಿಲ್ಲ.

'ದರ್ಶನ', ಭಂಡಾರ್‌ಕಾರ್ಸ್ ಕಾಲೇಜಿನ ವಾರ್ಷಿಕ ಸಂಚಿಕೆಯಲ್ಲಿ ಕನರಾಡಿ ವಾದಿರಾಜ ಭಟ್ ಬರೆದ 'ಕುಂದಾಪುರ ಕನ್ನಡ'(೧೯೭೭) ಎಂಬ ಲೇಖನವೂ ವರ್ಣನಾತ್ಮಕವಾದುದಾಗಿದೆ.

ಡಾ. ಕೆ. ಕೆಂಪೇಗೌಡ ಅವರು ತಮ್ಮ 'ಕರಾವಳಿ ಕನ್ನಡದ ಸ್ವರೂಪ' (೧೯೭೬)ಎನ್ನುವ ಲೇಖನದಲ್ಲಿ ಈ ಪ್ರದೇಶದ ಬ್ರಾಹ್ಮಣರು ಆಡುವ ಕನ್ನಡವನ್ನು ವಿಶ್ಲೇಷಿಸಿದ್ದಾರೆ. ಈ ಲೇಖನದಲ್ಲಿ ಅವರು ಕರಾವಳಿಯ ಹವ್ಯಕ, ಗೌಡ, ಶಿವಳ್ಳಿ, ಕೋಟೆ ಮತ್ತು ಕೋಟ ಕನ್ನಡಗಳ ಧ್ವನಿಮಾ, ವಚನ, ಲಿಂಗ, ಸರ್ವನಾಮ, ಕ್ರಿಯಾರೂಪಗಳನ್ನು ವಿಶ್ಲೇಷಿಸುತ್ತಾ ಅವುಗಳ ನಡುವಿನ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಗುರುತಿಸಿದ್ದಾರೆ.

ಡಾ. ಶ್ರೀರಮಣ ಆಚಾರ್ಯ ಅಲೆವೂರು ಅವರು ತಮ್ಮ 'Kannadas of Dakshina Kannada'(1996)ಎಂಬ ಲೇಖನದಲ್ಲಿ ಕುಂದಾಪುರ ಅಥವಾ ಕೋಟ ಕನ್ನಡದ ಕುರಿತು ಚರ್ಚಿಸಿದ್ದಾರೆ.

ಇವುಗಳಲ್ಲಿ ಎ.ಎಸ್. ಆಚಾರ್ಯ ಅವರ ಪುಸ್ತಕವನ್ನು ಹೊರತುಪಡಿಸಿ ಉಳಿದವು ಪರಿಚಯಾತ್ಮಕವಾದುವೇ ಹೊರತು ಸಮಗ್ರತೆಯನ್ನು ಹೊಂದಿಲ್ಲ.

ಶಬ್ದಕೋಶಗಳು: ಕೆ.ಎಚ್.ಸೂರ್ಯನಾರಾಯಣ ಹಂದೆಯವರು ಮೊತ್ತಮೊದಲಿಗೆ (೧೯೮೪) 'ಬಂಧನಗಾಣದ ಶಬ್ದಸಂಪತ್ತು' ಎಂಬ ಹೆಸರಿನಲ್ಲಿ ಈ ಭಾಷಿಕ ಪ್ರಭೇದದ ವಿಶಿಷ್ಟ ಪದಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಆದರೆ ಇಲ್ಲಿ ಸಂಸ್ಕೃತ ಮತ್ತು ಪ್ರಮಾಣ ಕನ್ನಡದ ಪದಗಳನ್ನು ಸೂಕ್ಷ್ಮವಾಗಿ ಪ್ರತ್ಯೇಕಿಸುವ ಕೆಲಸ ಮಾಡಿದಂತೆ ಕಂಡುಬರುವುದಿಲ್ಲ. ಹೀಗಿದ್ದರೂ ಅಷ್ಟು ಹಿಂದೆಯೇ ಒಳನುಡಿ ನಿಘಂಟು ಮಾಡಲು ಹೊರಟ ಪ್ರಯತ್ನ ಮಹತ್ವದ್ದಾಗಿ ಕಾಣುತ್ತದೆ. ಇಂದು ಬಳಕೆಯಲ್ಲಿರದ ಎಷ್ಟೋ ರೂಪಗಳು ಇಲ್ಲಿ ಕಾಣಸಿಗುತ್ತವೆ.

ನಂತರದಲ್ಲಿ ಕುಂಭಾಸಿ ವಿಶ್ವಂಭರ ಉಪಾಧ್ಯಾಯ ಅವರು 'ಕುಂದಗನ್ನಡ ಶಬ್ದನಿಧಿ' (೨೦೦೦) ಎಂಬ ಶಬ್ದಕೋಶವನ್ನು ಹೊರತಂದರು. ಇದು ಕೇವಲ ಶಬ್ದಗಳ ಪಟ್ಟಿ ಮಾತ್ರವಾಗಿರದೆ ಅವರು ಕೊನೆಗೆ ಅನುಬಂಧದಲ್ಲಿ ಧಾತುಗಳ ಪಟ್ಟಿ, ವಿವಿಧ ಪ್ರತ್ಯಯಗಳ ಪಟ್ಟಿ ಕೊಡುವುದರ ಜೊತೆಗೆ ಒಂದೇ ಪದರೂಪಕ್ಕಿರುವ ಎರಡು ಅರ್ಥಗಳು, ಭಾಷಿಕವಾಗಿ ಜಗತ್ತನ್ನು ವಿಂಗಡಿಸುವ ಕ್ರಮ ಮತ್ತು ಮನೆಮದ್ದುಗಳ ಕುರಿತಾದ ಸಾಂಸ್ಕೃತಿಕ ವಿವರಗಳನ್ನು ನೀಡಿರುವುದು ಕಾಣುತ್ತದೆ.

ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ವಾರ್ಷಿಕ ಸಂಚಿಕೆ 'ದರ್ಶನ'ದಲ್ಲಿ ಈ ಭಾಷಿಕ ಪರಿಸರದ ವಿಶಿಷ್ಟ ಪದಗಳನ್ನು ಸಂಗ್ರಹಿಸುವ ಕೆಲಸ ಮಾಡುತ್ತಾ ಬರಲಾಗಿದೆ.

ಪಾ.ನ.ಮಯ್ಯ ಅವರ ಕೃತಿ 'ಕ್ವಾಟ(ಕೋಟ)–ಕುಂದಾಪ್ರ ಪ್ರದೇಶದ ಚಾಟೂಕ್ತಿಗಳು–ಚಾಟೂಕ್ತಿ ನಿಘಂಟು'(೨೦೦೧) ಕೂಡಾ ಶೀರ್ಷಿಕೆಯೇ ಹೇಳುವ ಹಾಗೆ ಕುಂದಾಪುರ ಸಮೀಪದ 'ಕೋಟ'ದ ಭಾಷೆಯಿಂದ ಸಂಗ್ರಹಿಸಿದ ಚಾಟೂಕ್ತಿಗಳ ಕೋಶವಾಗಿದೆ. ಇದರಲ್ಲಿ ದೈನಂದಿನ ಮತ್ತು ವಿಶೇಷ ಸಂದರ್ಭಗಳಲ್ಲಿ ಭಾಷೆಯ ರೂಪಕಾತ್ಮಕ, ಕಾವ್ಯಾತ್ಮಕ ಅಭಿವ್ಯಕ್ತಿಯನ್ನು ಗುರುತಿಸಿ ದಾಖಲಿಸಲಾಗಿದೆ.

ಇವುಗಳಲ್ಲಿ ಸೂಕ್ತ ಅಕಾರಾದಿ, ವಿಂಗಡಣೆ, ಅರ್ಥವಿವರಣೆ ಮುಂತಾದವುಗಳನ್ನು ಕ್ರಮಾನುಗತವಾಗಿ ಅನುಸರಿಸಿರುವುದು ಕಂಡುಬರುವುದಿಲ್ಲ. ಹಾಗಾಗಿ ಸಮಗ್ರತೆಯ ಕೊರತೆಯಿಂದಾಗಿ ಇವ್ಯಾವುವೂ ಪೂರ್ಣಪ್ರಮಾಣದ ಶಬ್ದಕೋಶಗಳಾಗಿಲ್ಲ.

ಶಾರದಾ ಕಾಲೇಜು, ಬಸ್ರೂರಿನ ವಾರ್ಷಿಕ ವಿದ್ಯಾರ್ಥಿ ಸಂಚಿಕೆ 'ಶಾರದಾ ವಾಣಿ'ಯಲ್ಲಿ ಕೂಡಾ ಭಾಷೆಗೆ ಸಂಬಂಧಿಸಿದ ಅನೇಕ ಬರಹಗಳು ಪ್ರಕಟವಾಗಿವೆ.

ಇನ್ನು, ಎ.ವಿ. ನಾವಡರು ಬರೆದ 'ಮಂಗಳೂರು ಪರಿಸರದ ಕೋಟದವರ ಆಡುನುಡಿ ಹಾಗೂ ತುಳು'(೧೯೭೪). ಈ ಲೇಖನದಲ್ಲಿ ತುಳುವಿನ ಪ್ರಭಾವದಿಂದ ಮಂಗಳೂರು, ಬಂಟ್ವಾಳ, ಕಾಸರಗೋಡು ಪ್ರದೇಶಗಳ ಕನ್ನಡ ಕೋಟ ಪ್ರದೇಶದ ಕನ್ನಡಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಕೋಟ ಒಳನುಡಿಯ ಈ ಪ್ರಭೇದದ ಬಗ್ಗೆ ಬಂದಿರುವ ಮೊದಲ ಸಂಶೋಧನಾ ಲೇಖನ ಇದು.

ಸಂಸ್ಕೃತಿ ಅಧ್ಯಯನ

ಈ ಪ್ರದೇಶದ ಸಂಸ್ಕೃತಿಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನಗಳು ನಡೆದಿವೆಯಾದರೂ ಇಡೀ ಭಾಷಿಕ ಪರಿಸರದ ಸಂಸ್ಕೃತಿಯನ್ನು ಸಮಗ್ರವಾಗಿ ಗಮನಿಸಿ ಸಾಕಷ್ಟು ಅಧ್ಯಯನ ನಡೆದಿಲ್ಲ. ಈ ಕುರಿತು ಅಧ್ಯಯನದಲ್ಲಿ ತೊಡಗಿರುವ ಕೆಲವು ಸಂಸ್ಥೆಗಳನ್ನು ಇಲ್ಲಿ ಹೆಸರಿಸಬೇಕು. ಮೊದಲನೆಯದಾಗಿ 'ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ', ಉಡುಪಿ ಕರಾವಳಿಯ ಸಂಸ್ಕೃತಿ ಕುರಿತಂತೆ ಅಧ್ಯಯನದಲ್ಲಿ ನಿರತವಾಗಿದೆ. ಉಪ್ಪುಂದ ಚಂದ್ರಶೇಖರ ಹೊಳ್ಳ ಅವರು 'ಕುಂದ ಅಧ್ಯಯನ ಕೇಂದ್ರ'ದ ಮೂಲಕ ಸಂಸ್ಕೃತಿಯ ಸುತ್ತ ನಡೆದ ಅಧ್ಯಯನಗಳನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಭಂಡಾರ್‌ಕಾರ್ಸ್ ಕಾಲೇಜು ಕುಂದಾಪುರ ಕಾಲೇಜಿನ ವಾರ್ಷಿಕ ಸಂಚಿಕೆಯಾದ 'ದರ್ಶನ' ಹಾಗೂ ಶಾರದಾ ಕಾಲೇಜು ಬಸ್ರೂರಿನ ವಾರ್ಷಿಕ ಸಂಚಿಕೆ 'ಶಾರದಾ ವಾಣಿ' ವಿವಿಧ ವಿದ್ವಾಂಸರಿಂದ ಲೇಖನ ಬರೆಸಿ ಸ್ಥಳೀಯ ವಿದ್ಯಾರ್ಥಿಗಳನ್ನು ಸಂಶೋಧನೆಗೆ ಹಚ್ಚಿ ಪ್ರಾದೇಶಿಕ ಸಂಸ್ಕೃತಿಯನ್ನು ದಾಖಲಿಸುವ ಕೆಲಸದಲ್ಲಿ ನಿರತವಾಗಿವೆ.

ಡಾ. ಪಾ.ನ.ಮಯ್ಯ ಅವರು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ ನಿಬಂಧದ ಪುಸ್ತಕ ರೂಪ 'ಕೋಟದವರು'(೧೯೯೫) ಕುಂದಾಪುರ ಸಮೀಪದ ಕೋಟ ಮತ್ತು ಆ ಪ್ರದೇಶದ ವ್ಯಾಪ್ತಿಗೆ ಬರುವ ೧೪ ಹಳ್ಳಿಗಳನ್ನು ಗಮನದಲ್ಲಿಟ್ಟುಕೊಂಡು ಅಲ್ಲಿನ ಬೇರೆ ಬೇರೆ ಜಾತಿಯ ಜನರು, ಅವರಾಡುವ ಭಾಷೆ ಮತ್ತು ಆಚರಣೆಗಳನ್ನು ವಿಶ್ಲೇಷಿಸುತ್ತದೆ. ಈ ಅಧ್ಯಯನದಲ್ಲಿ 'ಕೋಟ' ಎಂಬ ಪದವನ್ನು ಪ್ರದೇಶವಾಚಿಯಾಗಿ ಗಮನಿಸಲಾಗಿದೆ. ಈ ಕೃತಿಯಲ್ಲಿ ಸಂಸ್ಕೃತಿ ವಿಶ್ಲೇಷಣೆಯ ಜೊತೆಗೆ ಅವರು ನೀಡಿದ ಭಾಷಿಕ ವಿವರಗಳು ಪ್ರಸ್ತುತ ಅಧ್ಯಯನಕ್ಕೆ ನೆರವಾಗುತ್ತವೆ.

ಕುಂದಾಪುರ ಪರಿಸರದ ಜೀವನ ಸಂಸ್ಕೃತಿಯನ್ನು ಗ್ರಹಿಸಿ ದಾಖಲಿಸಿ ಅದನ್ನು 'ಬೀಜ ಮುಹೂರ್ತ' (೨೦೦೬)ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಜಯಪ್ರಕಾಶ ಶೆಟ್ಟಿ ಹೆಚ್ ಮತ್ತು ಚಿಕ್ಕಮಗಳೂರು ಗಣೇಶ ಅವರು ಮಾಡಿದ್ದಾರೆ. ಕುಂದಗನ್ನಡದ ಜನಪದ

ಜಗತ್ತನ್ನು ಕಟ್ಟಿಕೊಡುವ ಪ್ರಯತ್ನ ನಮ್ಮದು ಎಂದು ಅವರು ಹೇಳಿದ್ದು ಒಂದು ಭಾಷಿಕ ಪರಿಸರದ ಸಂಸ್ಕೃತಿಯನ್ನು ತೆರೆದಿಡುವ ಪ್ರಯತ್ನವಾಗಿ ಕಾಣುತ್ತದೆ. ಜಯಪ್ರಕಾಶ್ ಶೆಟ್ಟಿಯವರು ಪ್ರಸ್ತಾವನೆಯಲ್ಲಿ ಹೇಳುವ "ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆಗಿಂತ ಹೊಂಡಗಳೇ ಜಾಸ್ತಿಯಾಗಿ ಚಾಲಕರು ಸರ್ಕಸ್ ಮಾಡಿಕೊಂಡು ರಸ್ತೆ ದಾಟುವ ಪರಿಯಂತೆ ನಗರ ಕೇಂದ್ರಿತ ಪರಿಸರಗಳಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು ಅನಾಥವಾಗುತ್ತಿವೆ ಎಂಬ ಕೊರಗುಗಳು ನಿತ್ಯವಾಗುತ್ತಿರುವ ಈ ಸಂದರ್ಭದಲ್ಲಿ ಭಾಷೆ ಮತ್ತು ಅದರ ಸಂಸ್ಕೃತಿಯ ಬಹುರೂಪಗಳನ್ನು ಬಿಂಬಿಸುವ ಗ್ರಾಮ್ಯ ಪರಿಸರದ ಜನಪದ ಜೀವನಕ್ರಮದ ಅಧ್ಯಯನ ಹೆಚ್ಚು ಸೂಕ್ತವಾದುದು" (ಜಯಪ್ರಕಾಶ್ ಶೆಟ್ಟಿ.ಎಚ್;೨೦೦೬;ಪು:x)ಎಂಬ ಮಾತು ಭಾಷೆ ಮತ್ತು ಸಂಸ್ಕೃತಿ ನಡುವಣ ನಿಕಟವಾದ ಸಂಬಂಧವನ್ನು ಅವರು ಗ್ರಹಿಸಿರುವ ಬಗೆಯನ್ನು ತಿಳಿಸುತ್ತದೆ.

ಈ ಪ್ರದೇಶದ ಜನಪದ ಸಾಹಿತ್ಯವನ್ನು ಅನೇಕ ವಿದ್ವಾಂಸರು ಸಂಗ್ರಹಿಸಿ ಪ್ರಕಟಿಸುವ ಕೆಲಸ ಮಾಡಿದ್ದಾರೆ. ಕೋಟ ಶಿವರಾಮ ಕಾರಂತರು ಈ ಪ್ರದೇಶದ ಹಾಡುಗಳನ್ನು 'ಜಾನಪದ ಗೀತೆಗಳು'(೧೯೫೬) ಎಂಬ ಹೆಸರಿನಲ್ಲಿ ಸಂಗ್ರಹಿಸಿದ್ದಾರೆ. ಗುಂಡ್ಮಿ ಚಂದ್ರಶೇಖರ ಐತಾಳರು 'ಕೈಲೀಯ ಕರೆದ ನೊರೆಹಾಲು'(೧೯೮೨), 'ಚಿನ್ನದ ಕದಿರಾಂಗೆ ಸಲಹೀನಿ'(೧೯೭೦) ಮತ್ತು 'ಮದ್ದುಂಟೆ ಜನನ ಮರಣಕ್ಕೆ'(೧೯೭೩) ಎಂಬ ಮೂರು ಜನಪದ ಹಾಡುಗಳ ಸಂಗ್ರಹವನ್ನು ಹೊರತಂದಿದ್ದಾರೆ. ಆದರೆ ಜನಸಾಮಾನ್ಯರಿಂದ ಸಂಗ್ರಹಿಸಿದ ಈ ಹಾಡುಗಳನ್ನು ಆದಿಪ್ರಾಸ, ಛಂದಸ್ಸಿಗನುಗುಣವಾಗಿ ಪರಿಷ್ಕರಿಸುವ ಕೆಲಸವನ್ನು ಇವರು ಮಾಡಿರುವುದು ಮೂಲ ಎಳೆಗಳನ್ನು ಅರಿಯಲು ಎರವಾಗುತ್ತದೆ.[೪] ಶಿವರಾಮ ಐತಾಳರ 'ದಕ್ಷಿಣ ಕನ್ನಡದ ಜನಪದ ಸಾಹಿತ್ಯ'(೧೯೭೧) ಎಂಬ ತ್ರಿಪದಿ ಸಂಕಲನದಲ್ಲಿ ಕೋಟ ಪ್ರದೇಶದ ಸಾಂಪ್ರದಾಯಿಕ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಗಾಯತ್ರೀ ನಾವಡ ಅವರು ಈ ಪ್ರದೇಶದ ಹಾಡುಗಳ ಸಂಗ್ರಹವನ್ನು 'ಚಿತ್ತಾರ ಬರೆದ ಬದುಕು'(೧೯೯೧) ಎಂಬ ಸಂಗ್ರಹದಲ್ಲಿ ಹೊರತಂದಿದ್ದಾರೆ. ಯು.ವರಮಹಾಲಕ್ಷ್ಮೀ ಹೊಳ್ಳ ಅವರೂ ಈ ಪ್ರದೇಶದ ಜನಪದ ಹಾಡುಗಳನ್ನು 'ಅಕ್ಕ ಕುಂಕುಮದಕ್ಕ'(೨೦೦೪) ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಜನಪದ ಕತೆಗಳನ್ನು, ಗಾದೆ, ಒಗಟುಗಳನ್ನು ಸಂಗ್ರಹಿಸುವ ಕೆಲಸ ಅಲ್ಲಲ್ಲಿ ನಡೆದಿದೆ. ಹೀಗೆ ಸಂಗ್ರಹಿಸಿದ ಜನಪದ ಸಾಹಿತ್ಯ, ಭಾಷಿಕ ಅಧ್ಯಯನಕ್ಕೆ ಆಕರವಾಗಿ ಒದಗಿಬರುತ್ತದೆ.

ಡಾ. ಎ.ವಿ. ನಾವಡ ಮತ್ತು ಗಾಯತ್ರೀ ನಾವಡ ದಂಪತಿಗಳು ಜಾನಪದ ಮತ್ತು ಪ್ರದರ್ಶನಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿದ್ದಾರೆ. ಜಾನಪದ ಪಠ್ಯಗಳ ಸಂಗ್ರಹವನ್ನೂ ಮಾಡಿದ್ದಾರೆ. ಇವುಗಳಲ್ಲಿ ಬರುವ ಭಾಷಿಕ ಪಠ್ಯಗಳ ವಿಶ್ಲೇಷಣೆ ಭಾಷೆ ಮತ್ತು ಸಂಸ್ಕೃತಿ ಅಧ್ಯಯನಕ್ಕೆ ಪೂರಕವಾಗಿವೆ.

ಇತರ ಅಧ್ಯಯನಗಳು

ಶಿವರಾಮ ಕಾರಂತರು ಅನುವಾದಿಸಿದ ಕಾರ್ಸ್ಟೈಯರ್ಸ್.ಜಿ.ಎಂ ಮತ್ತು ಕಪೂರ್.ಆರ್.ಎಲ್ ಅವರ 'ಕೂಟ ಮಹಾಜಗತ್ತು'(೧೯೮೫) ಕೋಟ ಪ್ರದೇಶದ ಜನರ ಮಾನಸಿಕ ಸ್ಥಿತಿ ಮೇಲೆ ಮಾಡಿದ ಅಧ್ಯಯನವಾದರೂ ಹಿನ್ನೆಲೆಯಾಗಿ ಅಲ್ಲಿನ ವಿಭಿನ್ನ ಜಾತಿ ಸಮುದಾಯದ ಸಾಂಸ್ಕೃತಿಕ ವಿವರಗಳು ಕಾಣಸಿಗುತ್ತವೆ. ಇದು ಕೋಟ ಪ್ರಾದೇಶಿಕ ಪರಿಸರವನ್ನು ಹಿನ್ನೆಲೆ ಯಾಗಿರಿಸಿಕೊಂಡು ನಡೆಸಿದ ಅಧ್ಯಯನವೇ ಹೊರತು ಭಾಷಿಕ ಪರಿಸರವನ್ನು ಇರಿಸಿಕೊಂಡು ನಡೆಸಿದ ಅಧ್ಯಯನ ಅಲ್ಲ.

ನಿಟಿಲಾಪುರ ಕೃಷ್ಣಮೂರ್ತಿಯವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ 'ಕೂಟಬಂಧು' ಎಂಬ ತ್ರೈಮಾಸಿಕ ಈ ಪರಿಸರದ ಮತ್ತು ಮಂಗಳೂರು, ಪುತ್ತೂರು ಸುಳ್ಯಗಳಲ್ಲಿ ನೆಲೆ ಸಿರುವ ಕೋಟ ಬ್ರಾಹ್ಮಣರ ಭಾಷೆ ಮತ್ತು ಸಂಸ್ಕೃತಿಯನ್ನು ಕೇಂದ್ರವಾಗಿರಿಸಿಕೊಂಡು ಹೊರಬರುತ್ತಿದೆ. ಪಾ.ನ.ಮಯ್ಯರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಮಾಸಿಕ 'ಕೂಟವಾಣಿ'ಯೂ ಇದೇ ಸ್ವರೂಪದ್ದು.

೧.೩. ಅಧ್ಯಯನದ ಉದ್ದೇಶ

ಭಾಷೆಗೂ ಸಂಸ್ಕೃತಿಗೂ ಇರುವ ನಂಟು ಪ್ರಶ್ನಾತೀತವಾದರೂ ಈ ಸಂಬಂಧದ ಎಳೆಗಳನ್ನು ಒಂದು ಒಳನುಡಿಯನ್ನು ಇರಿಸಿಕೊಂಡು ನಡೆಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನ ಹೊಂದಿದೆ. ಭಾಷೆ ಸಂಸ್ಕೃತಿಯ ವಾಹಕವಾಗಿರುವುದರಿಂದಾಚೆಗೆ ಯಾವ ಬಗೆಯಲ್ಲಿ ಸಂಸ್ಕೃತಿಯೊಡನೆ ಸಂಬಂಧ ಹೊಂದಿದೆ? ಭಾಷೆ ಸಂಸ್ಕೃತಿಯ ಭಾಗವೇ? ಸಂಸ್ಕೃತಿ ಭಾಷೆಯ ಮೂಲಕ ರೂಪಿತವಾಗುತ್ತದೆಯೇ? ಭಾಷೆ ನಮ್ಮ ಗ್ರಹಿಕೆಯನ್ನು ಪ್ರಭಾವಿಸುವ ಬಗೆ ಯಾವುದು? ಭಾಷೆಯ ಮೂಲಕ ಜಗತ್ತನ್ನು ವಿಭಾಗಿಸುವ ಕ್ರಮ ಬದುಕನ್ನು ಹೇಗೆ ಪ್ರಭಾವಿಸುತ್ತದೆ? ಭಾಷೆಯ ಮೂಲಕ ಸಮುದಾಯ ಹೇಗೆ ತನ್ನ ಅಸ್ಮಿತೆಯನ್ನು ನಿರ್ವಚಿಸಿಕೊಳ್ಳುತ್ತದೆ? ಭಾಷೆ ಮತ್ತು ಅಧಿಕಾರದ ಸಂಬಂಧ ಯಾವ ನೆಲೆಯದು? ಭಾಷೆ ಮತ್ತು ಸಮುದಾಯಗಳ ಚಲನೆಗಿರುವ ಸಂಬಂಧವೇನು? ಈ ಪೂರ್ವಪ್ರಶ್ನೆಗಳನ್ನು ಇರಿಸಿಕೊಂಡು ಅಧ್ಯಯನ ಸಾಗುತ್ತದೆ.

ಜಾಗತಿಕವಾಗಿ ಗಮನಿಸುವುದಾದರೆ ಇಂದು ಒಳನುಡಿಗಳು ವಿಚಿತ್ರ ಸಂಕ್ರಮಣ ಸ್ಥಿತಿಯಲ್ಲಿವೆ. ಆಧುನಿಕತೆ, ಜಾಗತೀಕರಣ ತಂದೊಡ್ಡುತ್ತಿರುವ ಅಭಿವೃದ್ಧಿಯ ಮಾದರಿಗಳು ಭಾಷಿಕ ವೈವಿಧ್ಯಕ್ಕೆ ಮಾರಕವಾಗಿವೆ. ಜೊತೆಗೆ, ಇವು ಸಂಸ್ಕೃತಿಯ ಬಹುತ್ವವನ್ನು ಸದ್ದಿಲ್ಲದೆ ಅಳಿಸಿಹಾಕುತ್ತಿವೆ. ಈ ಭಾಷಿಕ ಇಕ್ಕಟ್ಟಿಗೂ ಸಂಸ್ಕೃತಿಯ ಇಕ್ಕಟ್ಟಿಗೂ ಇರುವ ಸಂಬಂಧವೇನು?

ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಈ ಅಧ್ಯಯನ ಸಾಗುತ್ತದೆ. ಇಂತಹ ಸ್ಥಿತ್ಯಂತರದಲ್ಲಿ ಒಂದು ಭಾಷಿಕ ಸಮುದಾಯದೊಳಗಣ ಬಿಕ್ಕಟ್ಟುಗಳನ್ನು, ತಲ್ಲಣಗಳನ್ನು ಮತ್ತು ಅದರೊಳಗಿನ ಶಕ್ತಿಯನ್ನು ಗುರುತಿಸುವುದು ಅಧ್ಯಯನದ ಉದ್ದೇಶ.

ಆಧುನಿಕತೆ ಮತ್ತು ನಗರೀಕರಣದಿಂದಾಗಿ ಇಂದು ಜನಜೀವನಶೈಲಿಯಲ್ಲಿ ಅನೇಕ ಮಾರ್ಪಾಟುಗಳಾಗಿವೆ. ಹಲವು ಆಚರಣೆಗಳು ಇಂದು ಇಲ್ಲವಾಗಿವೆ ಅಥವಾ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಈ ಬದಲಾವಣೆಗೂ ಭಾಷಿಕ ಬದಲಾವಣೆಗೂ ಇರುವ ಸಂಬಂಧದ ಸ್ವರೂಪವನ್ನು ಕಂಡುಕೊಳ್ಳುವುದೂ ಅಧ್ಯಯನ ಉದ್ದೇಶಗಳಲ್ಲಿ ಒಂದಾಗಿದೆ.

ಇಲ್ಲಿ ಕೋಟ ಭಾಷಿಕ ಸಮುದಾಯ ಇತರ ಸಮುದಾಯಗಳಿಗಿಂತ ಹೇಗೆ ಭಿನ್ನ ಎಂದು ಗುರುತಿಸುವಷ್ಟೇ ಇದರ ತಲ್ಲಣಗಳು ಮತ್ತು ಪ್ರತಿಕ್ರಿಯೆಗಳು ಇತರ ಭಾಷೆಗಳ ಸದ್ಯದ ಸ್ಥಿತಿಯೊಂದಿಗೆ ಎಲ್ಲಿ ಸಮಾನ ನೆಲೆಯನ್ನು ಹಂಚಿಕೊಳ್ಳುತ್ತದೆ ಎಂಬುದೂ ಮುಖ್ಯವಾಗುತ್ತದೆ.

ಭಾಷೆ ಮತ್ತು ಸಂಸ್ಕೃತಿ ಕುರಿತಂತೆ ನಡೆದ ಬಹುತೇಕ ಪಾಶ್ಚಾತ್ಯ ಅಧ್ಯಯನಗಳು ವರ್ಗ ಮತ್ತು ಜನಾಂಗಕೇಂದ್ರಿತವಾದವು. ಆದರೆ ಭಾರತದ ಸಮಾಜ ಜಾತಿಯ ಆಧಾರದಲ್ಲಿ ಶ್ರೇಣೀಕರಣಗೊಂಡದ್ದು. ಜೊತೆಗೆ ಇಂದು ಜಾತಿ ಒಂದು ಅಸ್ಮಿತೆಯ ಗುರುತಾಗಿ ಸಮಾಜ ವರ್ಗದ ನೆಲೆಗೆ ನಿಧಾನವಾಗಿ ಹೊರಳಿಕೊಳ್ಳುತ್ತಿರುವುದನ್ನು ಗುರುತಿಸಲಾಗಿದೆ. ಅಧಿಕಾರ ಸಂಬಂಧ ಜಾತಿಗಿಂತ ಸಂಪತ್ತು ಆಧಾರಿತವಾಗಿ ಮರುವಿಂಗಡಣೆ ಆಗುತ್ತಿದೆ. ಇಂತಹ ಸಂದರ್ಭದಲ್ಲಿ ಭಾಷಿಕ ಚಲನೆಯ ದಿಕ್ಕನ್ನು ಗುರುತಿಸುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಸಾಗುತ್ತದೆ.

೧.೪. ಅಧ್ಯಯನದ ವ್ಯಾಪ್ತಿ

ಪ್ರಸ್ತಾವನೆಯಲ್ಲಿ ಹೇಳಿದಂತೆ ಕಲ್ಯಾಣಪುರದ ಹೊಳೆಯಿಂದ ಉತ್ತರಕ್ಕೆ ಶಿರೂರಿನವರೆಗೆ ಹರಡಿಕೊಂಡಿರುವ ಭಾಗದಲ್ಲಿನ ಬಹುಸಂಖ್ಯೆಯ ಜನ ಮಾತಾಡುವ ಕನ್ನಡದ ಒಂದು ಪ್ರಭೇದವನ್ನು, ಕೋಟ ಕನ್ನಡ, ಕುಂದಗನ್ನಡ, ಕುಂದಾಪ್ರ ಕನ್ನಡ ಎಂಬೆಲ್ಲ ಹೆಸರುಗಳಿಂದ ಕರೆಯಲಾಗಿದೆ. ಹೀಗಾಗಿ ಇದೊಂದು ಪ್ರಾದೇಶಿಕ ಪ್ರಭೇದ. ಇಲ್ಲೂ ಮತ್ತೆ ಪ್ರದೇಶಕ್ಕನುಗುಣ ವಾಗಿ ಸೂಕ್ಷ್ಮ ವ್ಯತ್ಯಾಸಗಳು ಕಾಣಿಸಿಕೊಂಡರೂ ಹಲವು ಸಮಾನ ಚಹರೆಗಳನ್ನು ಭಾಷೆ ಹೊಂದಿದೆ. ಈ ಪ್ರದೇಶದಲ್ಲಿ ವಾಸಮಾಡುತ್ತಿರುವ ಬ್ರಾಹ್ಮಣ, ಬಂಟ, ಮೊಗವೀರ, ಬಿಲ್ಲವ, ನಾಯಿರಿ ಮತ್ತು ಕೂಸಾಳುಗಳಲ್ಲಿ[೫] ಒಂದು ಉಪಜಾತಿಯಾದ ಬತ್ತಾಡರ ಭಾಷೆಯನ್ನು

ಪ್ರಧಾನವಾಗಿಟ್ಟುಕೊಂಡು ಅಧ್ಯಯನ ನಡೆಸಲಾಗಿದೆ. ಏಕೆಂದರೆ ಈ ಪ್ರದೇಶದಲ್ಲಿ ಜಾತಿ ಶ್ರೇಣೀಕರಣ ಬ್ರಾಹ್ಮಣ, ಶೂದ್ರ ಮತ್ತು ಶೂದ್ರೇತರ[೬] ಎಂಬ ಬಗೆಯಲ್ಲಿ ವಿನ್ಯಾಸಗೊಂಡಿರುವುದರಿಂದ ಇವರ ಭಾಷೆಯ ಸ್ವರೂಪವು ಅರಿತಾಗ ಒಟ್ಟು ಸಾಮಾಜಿಕ ರಚನೆಯನ್ನು ಹೆಚ್ಚು ಸ್ಪಷ್ಟವಾಗಿ ಅರಿಯಲು ಸಹಾಯಕವಾಗಬಹುದು ಎಂಬ ಕಾರಣದಿಂದ. ಜೊತೆಗೆ ಕೋಟಕನ್ನಡವನ್ನು ಮಾತಾಡುವ ಬ್ರಾಹ್ಮಣ ಸಮುದಾಯವೊಂದು ಮಂಗಳೂರು ಜಿಲ್ಲೆಯಲ್ಲಿ ಹರಡಿಕೊಂಡಿದೆ. ಈ ಪರಿಸರದಲ್ಲಿ ಇದು ಸಾಮಾಜಿಕ ಪ್ರಭೇದವಾಗಿದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಕೋಟ ಮತ್ತು ಕುಂದಾಪುರಕ್ಕೆ ಸೇರಿಕೊಂಡಂತಿರುವ ಕೆಲವು ಹಳ್ಳಿಗಳನ್ನು ಕ್ಷೇತ್ರಕಾರ್ಯಕ್ಕಾಗಿ ಆರಿಸಿಕೊಳ್ಳಲಾಗಿದೆ. ಆಂಶಿಕವಾಗಿ ಮಂಗಳೂರು ಪರಿಸರದ ಕೋಟ ಬ್ರಾಹ್ಮಣರು ಮಾತಾಡುವ ಕೋಟ ಕನ್ನಡವನ್ನು ಪರಿಗಣಿಸಲಾಗಿದೆ.

ಇಲ್ಲಿ ಭಾಷೆ ಎನ್ನುವಾಗ ಆಂಗಿಕ ಸನ್ನೆಗಳನ್ನು, ಸಂಕೇತಗಳನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತಿಲ್ಲ. ಇಲ್ಲಿ ಮುಖ್ಯವಾದ ಗಮನ ಇರುವುದು 'ಮಾತಿ'ನ(Speech) ಕಡೆಗೆ ಮತ್ತು ಈ'ಮಾತಿ'ನ ದಾಖಲಿತ ರೂಪಗಳ ಕಡೆಗೆ. ಹಾಗೆಯೇ ಧ್ವನಿಮಾತ್ಮಕವಾದ ಮತ್ತು ರಾಚನಿಕ ವಿಶ್ಲೇಷಣೆಗೂ ಹೋಗಿಲ್ಲ. ಸಾಂದರ್ಭಿಕವಾಗಷ್ಟೆ ಅವುಗಳನ್ನು ಗಮನಿಸಲಾಗಿದೆ. ಪದಗಳು, ಮತ್ತು ಸಂದರ್ಭಕ್ಕನುಗುಣವಾಗಿ ಬಳಕೆಯಲ್ಲಾಗುವ ವ್ಯತ್ಯಾಸ, ಜನರ ಭಾಷಿಕ ವರ್ತನೆ ಇವುಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಸಮುದಾಯದ ಭೌತಿಕ ಮತ್ತು ಅಭೌತಿಕ ಸಂಸ್ಕೃತಿ ಮತ್ತು ಅವುಗಳಿಗೆ ಭಾಷೆಯೊಡನೆ ಇರುವ ಸಂಬಂಧವನ್ನು ವಿಶ್ಲೇಷಣೆಗೊಳಪಡಿಸಲಾಗುತ್ತದೆ. ಸಮುದಾಯವನ್ನು ಒಗ್ಗೂಡಿಸುವ ಮತ್ತು ಪ್ರತ್ಯೇಕಿಸುವ ಸಂಗತಿಗಳು ಇಲ್ಲಿ ಮುಖ್ಯವಾಗುತ್ತವೆ.

ಸೈದ್ಧಾಂತಿಕ ನೆಲೆಯಲ್ಲಿ, ಪ್ರಸ್ತುತ ಅಧ್ಯಯನವನ್ನು ಬಹುತೇಕ 'ಮಾನವಶಾಸ್ತ್ರೀಯ ಭಾಷಾವಿಜ್ಞಾನ'[೭]ದ ಸಿದ್ಧಾಂತ ಮತ್ತು ಅಧ್ಯಯನ ವಿಧಾನಗಳ ಹಿನ್ನೆಲೆಯಲ್ಲಿ ನಡೆಸಲಾಗಿದೆ. 'ಮಾನವಶಾಸ್ತ್ರೀಯ ಭಾಷಾವಿಜ್ಞಾನ', 'ಉಪಭಾಷೆಗಳ ಅಧ್ಯಯನ' ಮತ್ತು 'ಸಾಮಾಜಿಕ ಭಾಷಾವಿಜ್ಞಾನ'[೮] ಕೆಲವು ವಿಷಯಗಳಲ್ಲಿ ಸಮಾನ ಆಸಕ್ತಿಯನ್ನು ಹೊಂದಿವೆ. ಆದರೆ ಮಾನವಶಾಸ್ತ್ರೀಯ ಭಾಷಾವಿಜ್ಞಾನ ಇವುಗಳಿಗಿಂತ ಯಾವ ನೆಲೆಯಲ್ಲಿ ಭಿನ್ನ ಎಂದರೆ, ಪ್ರತಿನಿಧೀಕರಣದ ರಾಜಕೀಯ, ಅಧಿಕಾರ ವ್ಯವಸ್ಥೆಗೊಂಡಿರುವ ಬಗೆ, ಜನಾಂಗೀಯ ಭಾವನೆಯ ಸಾಂಸ್ಕೃತಿಕ ಹಿನ್ನೆಲೆ, ಅಧಿಕಾರವನ್ನು ಕಾನೂನುಬದ್ಧಗೊಳಿಸುವಿಕೆ, ಜನಾಂಗೀಯ ಸಂಘರ್ಷಗಳು ಮತ್ತು ಸಾಮಾಜೀಕರಣದ ಪ್ರಕ್ರಿಯೆ ಮತ್ತು ಸಾಂಸ್ಕೃತಿಕವಾಗಿ ರೂಪಣೆಗೊಳ್ಳುವ 'ತನ್ನತನ', ಭಾವಾವೇಶದ ಹಿಂದಿನ ರಾಜಕೀಯ, ಸಾಮಾಜಿಕ ನಿಯಂತ್ರಣ ಮತ್ತು

ಆಚರಣೆಗಳ ನಡುವಣ ಸಂಬಂಧ, ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಜ್ಞಾನ ಮತ್ತು ಗ್ರಹಿಕೆ, ಕಲಾತ್ಮಕ ಪ್ರದರ್ಶನ, ಸಾಂಸ್ಕೃತಿಕ ಸಂಪರ್ಕ ಮತ್ತು ಸಾಮಾಜಿಕ ಬದಲಾವಣೆ ಮುಂತಾದ ವಿಷಯಗಳ ಬಗ್ಗೆ ಇದಕ್ಕಿರುವ ವಿಶೇಷ ಆಸಕ್ತಿಯಿಂದ.[೯] ಇದುವರೆಗೆ ನಡೆದಿರುವ ಬಹುತೇಕ ಮಾನವಶಾಸ್ತ್ರೀಯ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನಗಳು ಜನಾಂಗವನ್ನು ಕೇಂದ್ರವಾಗಿರಿಸಿಕೊಂಡವು. ಸಾಮಾಜಿಕ ಭಾಷಾವಿಜ್ಞಾನ ನಗರದ ಹಿನ್ನೆಲೆಯಲ್ಲಿ ವರ್ಗಗಳ ಭಾಷಾ ಭಿನ್ನತೆಯ ಕಡೆಗೆ ಹೆಚ್ಚಿನ ಆಸಕ್ತಿ ತೋರಿದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ಭಾಷಿಕ ಸಮುದಾಯ ಸಂಕ್ರಮಣ ಸ್ಥಿತಿಯಲ್ಲಿರುವ, ನಗರೀಕರಣಕ್ಕೆ, ಆಧುನಿಕತೆಗೆ ಹೆಚ್ಚಾಗಿ ತೆರೆದುಕೊಂಡಿರುವ ಸಮುದಾಯವಾದ್ದರಿಂದ ಸಾಮಾಜಿಕ ಭಾಷಾವಿಜ್ಞಾನದ ಕೆಲವು 'ನೋಟ' (approach)ಗಳನ್ನು ಅಳವಡಿಸಿಕೊಳ್ಳಲಾಗಿದೆ.

೧.೫. ಅಧ್ಯಯನ ವಿಧಾನ

ಗುಣಾತ್ಮಕ (Qualitative)[೧೦] ವಿಧಾನವನ್ನು ಅನುಸರಿಸಿ ಪ್ರಸ್ತುತ ಅಧ್ಯಯನ ನಡೆಸಲಾಗಿದೆ. ಭಾಷಿಕ ಮಾಹಿತಿಯನ್ನು ಇರಿಸಿಕೊಂಡು ಚರ್ಚಿಸುವಲ್ಲಿ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಲಾಗಿದೆ.

ಆರಂಭದ ಹಂತದಲ್ಲಿ ಈ ವಿಷಯದ ಕುರಿತು ಲಭ್ಯವಿರುವ ಪುಸ್ತಕಗಳ ಅಧ್ಯಯನ ಮತ್ತು ವಿದ್ವಾಂಸರ ಜೊತೆಗಿನ ಸಂವಾದದ ಮೂಲಕ ಪೂರ್ವಕಲ್ಪನೆಯನ್ನು ಕಟ್ಟಿಕೊಳ್ಳಲಾಯಿತು. ಇದನ್ನು ಪರಿಶೀಲಿಸುವ ನಿಟ್ಟಿನಲ್ಲಿ ಪ್ರಾಥಮಿಕ ಹಂತದ ಕ್ಷೇತ್ರಕಾರ್ಯ ನಡೆಸಲಾಯಿತು. ಇವುಗಳ ಆಧಾರದಲ್ಲಿ ಪ್ರಶ್ನಾವಳಿಯೊಂದನ್ನು ರಚಿಸಿಲಾಯಿತು. ಈ ಪ್ರಶ್ನಾವಳಿಯನ್ನು ಆಧಾರವಾಗಿಟ್ಟುಕೊಂಡು, ಅಲ್ಲಿನ ಜನರ ಜೊತೆ ನೇರ ಮಾತಿಗಿಳಿಯುವ ಮೂಲಕ ಅನೇಕ ಸಂಗತಿಗಳನ್ನು ಗ್ರಹಿಸಲಾಯಿತು. ಈ ಬಗೆಯ ಅಧ್ಯಯನಗಳಲ್ಲಿ ಪ್ರಶ್ನಾವಳಿಯೊಂದೇ ಎಲ್ಲ ಹಂತದಲ್ಲೂ ನೆರವಾಗುವುದಿಲ್ಲ. ಹೀಗಾಗಿ ವಿವಿಧ ಹಿನ್ನೆಲೆಯ ಜನರೊಂದಿಗೆ ನೇರವಾಗಿ ಮಾತಿಗಿಳಿಯುವ ಮೂಲಕ ಮತ್ತು ಅವರಲ್ಲೊಬ್ಬರಾಗಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಗಮನಿಸುವ ಮೂಲಕ ಹಾಗೂ ದೂರನಿಂತು ಗಮನಿಸುವ ಮೂಲಕ ಅಗತ್ಯ ಮಾಹಿತಿ ಸಂಗ್ರಹಿಸಲಾಯಿತು. ಜೊತೆಗೆ ಪ್ರತಿಯೊಂದು ಹಂತದಲ್ಲೂ ಅನುಭವದ ಆಧಾರದಲ್ಲಿ ಪ್ರಶ್ನಾವಳಿಯನ್ನು ಪರಿಷ್ಕರಿಸುವ, ನೋಟವನ್ನು ಸೂಕ್ಷ್ಮಗೊಳಿಸುವ ಪ್ರಯತ್ನ ಮಾಡುತ್ತಾ ಬರಲಾಗಿದೆ.

ಜೊತೆಗೆ ಪೂರಕವಾದ ಸೈದ್ಧಾಂತಿಕ ಸ್ಪಷ್ಟತೆಗಾಗಿ ಪುಸ್ತಕಗಳನ್ನು, ಸಂಶೋಧನ ಗ್ರಂಥಗಳನ್ನು ಮತ್ತು ಇ-ಸಂಪನ್ಮೂಲಗಳನ್ನು ಬಳಸಿಕೊಳ್ಳಲಾಗಿದೆ.

ಟಿಪ್ಪಣಿಗಳು

೧. ಯಾವ ಭಾಷೆ ಅಧಿಕಾರದ ಜೊತೆ ಸಂಬಂಧ ಹೊಂದಿರುತ್ತದೆಯೋ ಅದನ್ನು ಶಿಷ್ಟ ಅಥವಾ ಪ್ರಮಾಣ ಭಾಷೆ ಎಂದು ಕರೆಯುತ್ತಾ ಬರಲಾಗಿದೆ. ಗ್ರಾಮ್ಶಿ 'ಯಾಜಮಾನ್ಯ' ಪರಿಕಲ್ಪನೆಯನ್ನು ಇಟ್ಟುಕೊಂಡು ಭಾಷೆಯ ಸುತ್ತಲಿನ ರಾಜಕಾರಣ ಕುರಿತು ನಡೆಸುವ ಚರ್ಚೆಯ ಹಿನ್ನೆಲೆಯಲ್ಲಿ ಇದನ್ನು ಗಮನಿಸಬೇಕಾಗುತ್ತದೆ.

೨. ಇದನ್ನು ಶಿಷ್ಟ ಕನ್ನಡ ಎಂದು ಕರೆಯುತ್ತಾ ಬರಲಾಗಿದೆ. 'ಶಿಷ್ಟ' ಎನ್ನುವ ಕಲ್ಪನೆ ಉಳಿದ ಪ್ರಭೇದಗಳನ್ನು 'ಅಶಿಷ್ಟ' ಎಂದು ಪರಿಗಣಿಸುವಂತೆ ಮಾಡುತ್ತದೆ.

೩. 'ಉಡುಪಿಯಿಂದ ಉತ್ತರಕ್ಕೆ ಐದು ಮೈಲು ದೂರದಲ್ಲಿರುವ ಕಲ್ಯಾಣಪುರದಿಂದ ತೊಡಗಿ ಬೈಂದೂರಿನಿಂದ ಸುಮಾರು ಎಂಟು ಮೈಲಿ ಉತ್ತರಕ್ಕಿರುವ ಶಿರಾಲಿಯವರೆಗೆ ದಕ್ಷಿಣ ಕನ್ನಡದ ಉತ್ತರದ ಗಡಿಯವರೆಗೆ ಒಂದು ರೀತಿಯ ಕನ್ನಡ ಭಾಷೆಯನ್ನು ಮಾತಾಡುವರು. ಇದರ ಹೃದಯ ಕೋಟ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳು. ಆದ್ದರಿಂದ ಈ ಭಾಷೆಯನ್ನು 'ಕೋಟ ಕನ್ನಡ' ಎಂದು ಕರೆಯಬಹುದು. ಇದನ್ನು ಕುಂದಾಪುರ ಕನ್ನಡ ಎಂದು ಕರೆದವರೂ ಇದ್ದಾರೆ'.(ಗುಂಡ್ಮಿ ಚಂದ್ರಶೇಖರ ಐತಾಳ;೧೯೭೩;ಪು:೩೦). ಆದರೆ ಶಿರಾಲಿ ಭಟ್ಕಳದ ಸಮೀಪದ ಊರಾಗಿದ್ದು ಉತ್ತರ ಕನ್ನಡ ಜಿಲ್ಲೆಗೆ ಸೇರುತ್ತದೆ. ದಕ್ಷಿಣ ಕನ್ನಡದ ಗಡಿ ದಾಟಿ ಮುಂದೆ ಹೋದಂತೆ ಭಾಷೆಯ ಚಹರೆ ಗಣನೀಯವಾಗಿ ಬದಲಾಗುತ್ತದೆ. ಇದನ್ನು ಗಮನಿಸಿ ಈ ಭಾಷಿಕ ವ್ಯಾಪ್ತಿ ಬೈಂದೂರಿನಿಂದ ಐದು ಮೈಲಿ ದೂರದಲ್ಲಿರುವ ಶಿರೂರಿನವರೆಗೆ ಹಬ್ಬಿ ನಂತರ ವಿರಳವಾಗುವುದು ಕಾಣುತ್ತದೆ. ಕ್ಷೇತ್ರಕಾರ್ಯದ ಅನುಭವ ಇದನ್ನು ದೃಢಪಡಿಸಿದೆ.

೪. ಗುಂಡ್ಮಿ ಚಂದ್ರಶೇಖರ ಐತಾಳರು ತಮ್ಮ 'ಮದ್ದುಂಟೆ ಜನನ ಮರಣಕ್ಕೆ' ಎಂಬ ಜನಪದ ಹಾಡುಗಳ ಸಂಗ್ರಹದಲ್ಲಿ "ಸಿಕ್ಕಿದುದನ್ನು ಸಿಕ್ಕ ಹಾಗೆಯೇ ಅಚ್ಚು ಮಾಡಿದರೆ ಸಂಗ್ರಹಕಾರನಿಗೂ compositorನಿಗೂ ವ್ಯತ್ಯಾಸವೆಲ್ಲಿ? ಅದು Scientific Editing ಹೇಗಾದೀತೋ ನಾ ಕಾಣೆ. ಹಾಗೆ ಮಾಡಲು ತಿಳಿಯದೆ ಒಂದು ರೀತಿಯ ಅಭಾವ ವೈರಾಗ್ಯದಿಂದ ಇಷ್ಟರವರೆಗಿನ ಸಂಕಲನಕಾರರಲ್ಲಿ ಹೆಚ್ಚಿನವರು ಸುಲಭದಲ್ಲಿ ಸಂಪಾದಕರಾದರು. ಈ ದಿಸೆಯಲ್ಲಿ ಈ ಕೃತಿ ಮೊತ್ತಮೊದಲಿನ ಸಾಹಸ ಮಾಡಿ ಜನಪದ ಸಾಹಿತ್ಯ ಸಂಪಾದನ ಕಾರ್ಯದಲ್ಲಿ ಹೊಸ ಹಾದಿ ತೋರಿಕೊಟ್ಟಿದೆ. ಇಲ್ಲಿಯೂ 'ಊಹಾತ್ಮಕ ಪರಿಷ್ಕರಣ'ಕ್ಕೆ ಸಾಕಷ್ಟು ಅವಕಾಶವುಂಟು ಎಂಬುದನ್ನು ಧೈರ್ಯದಿಂದ ತೋರಿಸಿಕೊಟ್ಟಿದೆ" ಹೀಗೆ ಹೇಳುತ್ತಾರೆ.(ಗುಂಡ್ಮಿ ಚಂದ್ರಶೇಖರ ಐತಾಳ; ೧೯೭೩;ಪು:vii).

೫. ಪರಿಶಿಷ್ಟ ಜಾತಿಗೆ ಸೇರಿದವರನ್ನು ಈ ಪರಿಸರದಲ್ಲಿ ಕೂಸಾಳುಗಳೆಂದು ಕರೆಯುತ್ತಾರೆ. ಆದರೆ ಇವರನ್ನು 'ಕೂಸಾಳು' ಎಂಬ ಹೆಸರಿನಿಂದ ಕರೆಯುವುದು ತಪ್ಪು ಎಂಬ ಪ್ರಜ್ಞೆ ಈಗ ಜನರಲ್ಲಿ ಮೂಡಿದೆ.

೬. ಬ್ರಾಹ್ಮಣೇತರರಾದ ಬಂಟ, ಬಿಲ್ಲವ, ನಾಯಿರಿ ಮತ್ತು ಮೊಗವೀರರು, ಹರಿಜನ ಮತ್ತು ಕೊರಗರನ್ನು ಶೂದ್ರರ ವರ್ಗದಲ್ಲಿ ಸೇರಿಸಲು ನಿರಾಕರಿಸುತ್ತಾರೆ. ಆದರೆ ಹರಿಜನರನ್ನು ಪ್ರಶ್ನಿಸಿದರೆ ಅವರು ಬ್ರಾಹ್ಮಣರನ್ನು ಹೊರತುಪಡಿಸಿ ತಾವೆಲ್ಲರೂ ಶೂದ್ರರೇ ಎಂದು ಹೇಳುತ್ತಾರೆ.

೭. ಮಾನವಶಾಸ್ತ್ರದ ಒಂದು ಶಾಖೆಯಾದ ಇದು ಭಾಷೆ ಮತ್ತು ಸಂಸ್ಕೃತಿಯ ನಡುವಣ ಸಂಬಂಧವನ್ನು ಶೋಧಿಸುವಲ್ಲಿ ಆಸಕ್ತಿ ಹೊಂದಿದೆ. ಅಮೆರಿಕದಲ್ಲಿ ಫ್ರಾನ್ಜ್ ಬೋಸ್, ಎಡ್ವರ್ಡ್ ಸಪೀರ್, ವೂರ್ಫ್ ಮುಂತಾದವರು ಈ ನೆಲೆಯಲ್ಲಿ ಅಧ್ಯಯನ ನಡೆಸಿದವರಲ್ಲಿ ಪ್ರಮುಖರು.

೮. ಸಮಾಜ ಮತ್ತು ಭಾಷೆಯ ನಡುವಣ ಸಂಬಂಧದ ಅಧ್ಯಯನವೇ ಸಾಮಾಜಿಕ ಭಾಷಾ ವಿಜ್ಞಾನ.

೯. What distinguishes Linguistic Anthropologists from other students of language is not only the interest in language use, a perspective that is shared by other researchers, dialectologists and sociolinguists in particular but their focus on language as a set of symbolic resources that enter the constitution of social fabric and the individual representation of actual or possible worlds. Such a focus allows Linguistic Anthropologists to address in innovative ways of some of the issues and topics that are at the core of anthropological research such as the politics of representation, the constitution of authority, the legitimation of power, the cultural basis of racism and ethnic conflict, the process of socialization, the cultural construction of the person (self), the politics of emotion, the relationship between ritual performance and forms of social control, domain specific knowledge and cognition, artistic performance, and the politics of aesthetic consumption, cultural contact and social change (Duranti Alessandro;1997; p:3-4)

೧೦. ಗುಣಾತ್ಮಕ ಸಂಶೋಧನಾ ವಿಧಾನ ಯಾವುದೇ ಪೂರ್ವನಿರ್ಧಾರಗಳೊಂದಿಗೆ ಹೊರಡುವುದಿಲ್ಲ. ಶೋಧನೆಯೇ ಇದರ ಪ್ರಮುಖ ಗುರಿ. ಪ್ರಶ್ನಾವಳಿ, ನೇರ ಭಾಗವಹಿಸುವಿಕೆ, ಗಮನಿಸುವಿಕೆಯಿಂದ ಇಲ್ಲಿ ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಇದು ಸಂಖ್ಯಾತ್ಮಕವಾಗಿ ಅಲ್ಲದೆ, ಗುಣಾತ್ಮಕವಾಗಿ ಒಂದು ಸಂಗತಿಯನ್ನು ಗ್ರಹಿಸುತ್ತದೆ.

• • •

ಅಧ್ಯಾಯ : ಎರಡು

ಅಧ್ಯಯನದ ತಾತ್ವಿಕ ಸ್ವರೂಪ

೨.೧. ಕೋಟ ಭಾಷಿಕ ಪರಿಸರದ ವಿನ್ಯಾಸ

೨.೧.೧. ಭೌಗೋಳಿಕ ವಿನ್ಯಾಸ

೨.೧.೨. ಇತಿಹಾಸ ಮತ್ತು ರಾಜಕೀಯ

೨.೧.೩. ಜನಜೀವನ ಮತ್ತು ಆರ್ಥಿಕತೆ

೨.೨. ಸಂಸ್ಕೃತಿ ನಿರ್ವಚನ

೨.೨.೧. ಶ್ರೇಣೀಕೃತ ನೆಲೆಯ ಗ್ರಹಿಕೆ

೨.೨.೨. ಅನನ್ಯ ನೆಲೆಯ ಗ್ರಹಿಕೆ

೨.೨.೩. ಸಾರ್ವತ್ರಿಕ ನೆಲೆಯ ಗ್ರಹಿಕೆ

೨.೩. ತಾತ್ವಿಕ ಚರ್ಚೆ

೨.೩.೧. ಇದುವರೆಗೆ ನಡೆದ ಅಧ್ಯಯನಗಳಲ್ಲಿ ಭಾಷೆ ಮತ್ತು ಸಂಸ್ಕೃತಿಯ ಸಂಬಂಧವನ್ನು ಕಂಡರಿಸಿದ ಬಗೆ

೨.೩.೨. ಜನಾಂಗ, ಜಾತಿ, ವರ್ಗ ಮತ್ತು ಸಮುದಾಯಗಳ ಪರಿಕಲ್ಪನೆ

೨.೩.೩. ಪ್ರಸ್ತುತ ಅಧ್ಯಯನದ ತಾತ್ವಿಕ ನೆಲೆಗಟ್ಟು

ಅಧ್ಯಾಯ : ಎರಡು

ಅಧ್ಯಯನದ ತಾತ್ವಿಕ ಸ್ವರೂಪ

ಭಾಷೆಯ ಆಧಾರದಲ್ಲಿ ಗುರುತಿಸಲಾದ ಸಮುದಾಯದ ಆರ್ಥಿಕ, ಸಾಮಾಜಿಕ, ರಾಜಕೀಯ, ಭೌಗೋಳಿಕ ಸ್ವರೂಪಕ್ಕೂ ಸಂಸ್ಕೃತಿಗೂ ಹತ್ತಿರದ ಸಂಬಂಧವಿರುತ್ತದೆ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಭಾಷೆ ಮತ್ತು ಸಂಸ್ಕೃತಿಯ ನಡುವಣ ನಂಟನ್ನು ಗ್ರಹಿಸಬೇಕಾಗುತ್ತದೆ. ಈ ಅಧ್ಯಾಯದ ಮೊದಲನೆಯ ಭಾಗದಲ್ಲಿ ಕೋಟ ಭಾಷಿಕ ಪರಿಸರದ ವಿನ್ಯಾಸವನ್ನು ಸಂಕ್ಷಿಪ್ತವಾಗಿ ಗಮನಿಸಲಾಗಿದೆ. ಎರಡನೇ ಹಂತದಲ್ಲಿ ಸಂಸ್ಕೃತಿ ವ್ಯಾಖ್ಯೆ ಕುರಿತು ಮತ್ತು ಇದುವರೆಗೆ ಭಾಷೆ ಮತ್ತು ಸಂಸ್ಕೃತಿಯ ಕುರಿತು ನಡೆದ ಅಧ್ಯಯನದ ಜಾಡನ್ನು ಕುರಿತು ಚರ್ಚಿಸಲಾಗಿದೆ. ಈ ನೆಲಗಟ್ಟಿನಲ್ಲಿ ಪ್ರಸ್ತುತ ಅಧ್ಯಯನದ ದಿಕ್ಕು ಮತ್ತು ತಾತ್ವಿಕತೆಯನ್ನು ಕೊನೆಯಲ್ಲಿ ನಿರೂಪಿಸಲಾಗಿದೆ.

೨.೧. ಕೋಟ ಭಾಷಿಕ ಪರಿಸರದ ವಿನ್ಯಾಸ

ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಕಲ್ಯಾಣಪುರ ಹೊಳೆಯಿಂದ ಉತ್ತರಕ್ಕೆ ಬೈಂದೂರಿನಿಂದ ಐದು ಮೈಲಿ ಉತ್ತರದಲ್ಲಿರುವ ಶಿರೂರಿನವರೆಗಿನ ಜನರು ಮಾತಾಡುವ ಕನ್ನಡದ ಒಂದು ಪ್ರಭೇದವನ್ನು ಕೋಟ ಕನ್ನಡ ಅಥವಾ ಕುಂದಾಪುರ ಕನ್ನಡ ಎಂದು ಕರೆಯುತ್ತಾ ಬರಲಾಗಿದೆ. ಈ ಭಾಷಿಕ ಸಮುದಾಯದ ರಚನೆ ಮತ್ತು ಚಹರೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

[illegible]

೨.೧.೧. ಭೌಗೋಳಿಕ ವಿನ್ಯಾಸ

ಭಾಷಿಕ ವ್ಯತ್ಯಾಸಗಳಿಗೆ ಭೌಗೋಳಿಕ ಸಂಗತಿಗಳು ಕಾರಣವಾಗುತ್ತವೆ ಎಂಬುದು ಒಳನುಡಿಗಳ ಅಧ್ಯಯನದಲ್ಲಿ ಸಾಕಷ್ಟು ಚರ್ಚಿತವಾದ ಸಂಗತಿ. ದಕ್ಷಿಣ ಕರಾವಳಿಯಲ್ಲಿ ಕಲ್ಯಾಣಪುರ ಹೊಳೆ ತುಳು ಮತ್ತು ಕನ್ನಡ ಭಾಷಿಕ ಪ್ರದೇಶವನ್ನು ವಿಂಗಡಿಸುವ ಭೌಗೋಳಿಕ ಅಂಶವಾಗಿ ಕೆಲಸ ಮಾಡಿದೆ.[೧] ಈ ಹೊಳೆಯಿಂದ ಉತ್ತರಕ್ಕಿರುವ ಪ್ರದೇಶದಲ್ಲಿ ಬಹುತೇಕ ಪ್ರಮುಖ ಸಮುದಾಯಗಳು ಕನ್ನಡವನ್ನೇ ತಮ್ಮ ಆಡುನುಡಿಯಾಗಿಸಿಕೊಂಡಿರುವುದರಿಂದ ಅವನ್ನು ಭಾಷೆ ಆಧಾರದಲ್ಲಿ ಒಂದು ಸಮುದಾಯವಾಗಿ ಗುರುತಿಸಬಹುದಾಗಿದೆ. ಈ ಪ್ರದೇಶದ ಪಶ್ಚಿಮಕ್ಕೆ ಅರಬೀ ಸಮುದ್ರವಿದೆ, ಪೂರ್ವಕ್ಕೆ ಪಶ್ಚಿಮ ಘಟ್ಟಗಳಿವೆ. ಸಮುದ್ರ ತೀರಕ್ಕೆ ಸೇರಿಕೊಂಡಂತಿರುವ ಈ ಪ್ರದೇಶದ ಹವೆ ವರ್ಷದ ಹೆಚ್ಚು ಕಾಲ ಬಿಸಿಲು ಮತ್ತು ಆರ್ದ್ರತೆಯಿಂದ ಕೂಡಿರುತ್ತದೆ.

ಕರಾವಳಿಯ ಈ ನೆಲ ಪರಶುರಾಮ ಸೃಷ್ಟಿ ಎಂಬ ಐತಿಹ್ಯವಿದೆ. ಪರಶುರಾಮ ಕೊಡಲಿ ಬೀಸಿದಾಗ ಅದು ಹಾರಿ ಬಿದ್ದಷ್ಟು ದೂರ ಸಮುದ್ರ ನೆಲವನ್ನು ಬಿಟ್ಟು ಹಿಂದೆ ಸರಿಯಿತು ಎಂದು ಜನ ನಂಬುತ್ತಾರೆ. ಇಡೀ ಕರಾವಳಿ, ಸಮುದ್ರ ಹಿಂದೆ ಸರಿದು ಉಂಟಾದ ಭೂಪ್ರದೇಶ ಎಂಬುದು ಇಲ್ಲಿನ ಜನರ ನಂಬಿಕೆ.

೨.೧.೨ ಇತಿಹಾಸ ಮತ್ತು ರಾಜಕೀಯ

ಕೋಟ ಕನ್ನಡ ಭಾಷಿಕ ಸಮುದಾಯ ಇರುವ ಈ ಪ್ರದೇಶಕ್ಕೆ ಸುದೀರ್ಘವಾದ ಇತಿಹಾಸವಿದೆ. ಪ್ರಾಗೈತಿಹಾಸಿಕ ಕಾಲಕ್ಕೆ ಸಂಬಂಧಿಸಿದ ಅವಶೇಷಗಳು ಈ ಪ್ರದೇಶದಲ್ಲಿ ದೊರೆತಿವೆ. ನಂತರದಲ್ಲಿ ಕ್ರಿ.ಶ. ೧೪ನೇ ಶತಮಾನದವರೆಗೂ ಆಳುಪರು ಬಾರಕೂರನ್ನು ಕೇಂದ್ರವಾಗಿರಿಸಿಕೊಂಡು ಆಳುತ್ತಿದ್ದರು. ಬಳಿಕ ಈ ಪ್ರದೇಶ ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ನಂತರ ಪೋರ್ಚುಗೀಸರು ಬಂದು ಆಕ್ರಮಿಸಿಕೊಳ್ಳುವವರೆಗೂ ಕೆಳದಿಯ ನಾಯಕರು ಈ ಪ್ರದೇಶವನ್ನು ಆಳುತ್ತಿದ್ದರು ಎಂಬುದು ತಿಳಿದುಬರುತ್ತದೆ. ಕೆಳದಿಯ ನಾಯಕರ ಬಳಿಕ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಪೋರ್ಚುಗೀಸರು ಮತ್ತು ಬ್ರಿಟಿಷರ ನಡುವೆ ಮೇಲಾಟ ನಡೆಯುತ್ತಿದ್ದುದನ್ನು ಗಮನಿಸಬಹುದು. ಹೈದರಾಲಿಯೂ ಈ ಪ್ರದೇಶದ ಮೇಲೆ ಆಕ್ರಮಣ ಮಾಡಿದ್ದ. ೧೮೫೯ರವರೆಗೆ ಇದು ರಾಜಕೀಯವಾಗಿ ತುಳುನಾಡಿನ ಭಾಗವಾಗಿತ್ತು. ನಂತರ ಇದು ಕೆನರಾ ಜಿಲ್ಲೆಯ ಭಾಗವಾಗಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಹೋಯಿತು. ಬಾರಕೂರು ಮತ್ತು ಬಸ್ರೂರು ಇಲ್ಲಿನ ಪ್ರಮುಖ ಐತಿಹಾಸಿಕ ಕೇಂದ್ರಗಳಾಗಿವೆ.

ಸ್ವಾತಂತ್ರ್ಯಾನಂತರ ಇದು ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು. ಮೊದಲು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಈ ಪ್ರದೇಶ ೧೯೯೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ವಿಭಜನೆಗೊಂಡು

ಉಡುಪಿ ಜಿಲ್ಲೆ ಸ್ಥಾಪನೆಯಾದ ನಂತರ ಉಡುಪಿ ಜಿಲ್ಲೆಗೆ ಸೇರಿದೆ. ಉಡುಪಿ ತಾಲೂಕಿನ ಕೆಲ ಭಾಗ ಮತ್ತು ಕುಂದಾಪುರ ತಾಲೂಕಿನ ಜನ ಈ ಭಾಷಿಕ ಪ್ರಭೇದವನ್ನಾಡುತ್ತಾರೆ.

೨.೧.೩ ಜನಜೀವನ ಮತ್ತು ಆರ್ಥಿಕತೆ

ಇಲ್ಲಿನ ಜನಸಮುದಾಯ ಪ್ರಮುಖವಾಗಿ ಜಾತಿ ಆಧಾರದಲ್ಲಿ ವಿಗಂಡಿತವಾಗಿದೆ. ಶ್ರೇಣೀಕರಣದ ಮೇಲಿನ ತುದಿಯಲ್ಲಿ ಬ್ರಾಹ್ಮಣರಿದ್ದು ನಂತರದಲ್ಲಿ ಗೌಡ ಸಾರಸ್ವತ ಬ್ರಾಹ್ಮಣರು, ವಿಶ್ವಕರ್ಮಿ ಸಮುದಾಯ, ಬಂಟರು, ಮೊಗವೀರರು, ಬಿಲ್ಲವರು, ಗಾಣಿಗರು, ಶೇರೆಗಾರರು, ಹರಿಜನರು, ಕೊರಗರು ಮುಂತಾದವರೆಲ್ಲ ಈ ಏಣಿಯ ವಿವಿಧ ಮೆಟ್ಟಲುಗಳಲ್ಲಿ ಹರಡಿ ಕೊಂಡಿದ್ದಾರೆ. ಇತರ ಭಾಷೆಗಳನ್ನಾಡುವ ಗೌಡ ಸಾರಸ್ವತ ಬ್ರಾಹ್ಮಣರು, ಕ್ರೈಸ್ತರು ಮತ್ತು ಮುಸಲ್ಮಾನರು ಇದ್ದಾರೆ. ಜೊತೆಗೆ ತಮ್ಮದೇ ಆದ ಭಿನ್ನ ಭಾಷಾ ಪ್ರಭೇದವನ್ನಾಡುವ ಕೊರಗ, ಬೆಳಾರಿ ಮುಂತಾದ ಸಮುದಾಯದವರಿದ್ದಾರೆ. ಇವರ ವೃತ್ತಿ, ಆಚರಣೆಗಳಲ್ಲಿ ಭಿನ್ನತೆ ಇದೆ. ಭಾಷಿಕವಾಗಿಯೂ ಸಮುದಾಯದಿಂದ ಸಮುದಾಯಕ್ಕೆ ಅಲ್ಪಸ್ವಲ್ಪ ವ್ಯತ್ಯಾಸಗಳಿವೆ. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡ ಸಮುದಾಯಗಳಲ್ಲಿ ಬ್ರಾಹ್ಮಣರು 'ಮಕ್ಕಳ ಸಂತಾನ'ಕ್ಕೆ ಸೇರಿದವರಾಗಿದ್ದರೆ ಇತರ ಸಮುದಾಯದವರು 'ಅಳಿಯ ಸಂತಾನ'ಕ್ಕೆ ಸೇರಿದವರು. ಮಕ್ಕಳ ಕಟ್ಟಿನಲ್ಲಿ ಮನೆಯ ಯಜಮಾನ ಗಂಡಸಾಗಿದ್ದರೆ ಅಳಿಯ ಸಂತಾನದಲ್ಲಿ ಹೆಣ್ಣು ಮನೆಯ ಯಜಮಾನಿ. ಹೀಗಾಗಿ ಇಲ್ಲಿನ ಪ್ರಧಾನ ಸಮುದಾಯಗಳು ಮಾತೃಮೂಲೀಯ[೨] ಕುಟುಂಬ ವ್ಯವಸ್ಥೆಯನ್ನು ಹೊಂದಿದ್ದು ಈಗ ಕಾನೂನು[೩] ಮತ್ತು ಸಂಸ್ಕೃತೀಕರಣದ[೪] ಪ್ರಕ್ರಿಯೆಯಿಂದ ನಿಧಾನವಾಗಿ ಮಕ್ಕಳ ಸಂತಾನದೆಡೆಗೆ ಹೊರಳಿಕೊಳ್ಳುತ್ತಿವೆ.

ಕರಾವಳಿಗೆ ತಾಗಿಕೊಂಡಂತಿರುವ ಈ ಪ್ರದೇಶದ ಜನ ಕೃಷಿಯನ್ನೇ ಪ್ರಧಾನವಾಗಿ ನೆಮ್ಮಿಕೊಂಡಂತವರು. ಜೊತೆಗೆ ಮೀನುಗಾರಿಕೆ ಮತ್ತು ವ್ಯಾಪಾರಗಳನ್ನೂ ಜೀವನೋಪಾಯಕ್ಕಾಗಿ ನೆಚ್ಚಿಕೊಂಡಿದ್ದಾರೆ. ಹಿಂದೆ ಬ್ರಾಹ್ಮಣರು ಮತ್ತು ಬಂಟರು ಭೂಮಾಲೀಕರಾಗಿದ್ದು ಇನ್ನಿತರ ಸಮುದಾಯದವರು ಅವರ ಭೂಮಿಗಳಲ್ಲಿ ಕೆಲಸ ಮಾಡುತ್ತಿದ್ದರು. ನಾಯಿರಿ ಸಮುದಾಯ ದವರೂ ಕೃಷಿ ಕೆಲಸವನ್ನೇ ಅವಲಂಬಿಸಿದ್ದವರು. ಮೊಗವೀರರ ಪ್ರಮುಖ ಉದ್ಯೋಗ ಮೀನುಗಾರಿಕೆ. ಇನ್ನು ಕಳ್ಳು ಇಳಿಸುವ ಕೆಲಸ ಬಿಲ್ಲವರದಾದರೂ ಅವರು ಹೊಟ್ಟೆಪಾಡಿಗಾಗಿ ಕೃಷಿಕೆಲಸವನ್ನೇ ಅವಲಂಬಿಸಿದ್ದಾರೆ. ಹರಿಜನರು ಮತ್ತು ಗಿರಿಜನರಿಗೆ ಇಂತಹ ಉದ್ಯೋಗ ಎಂಬುದು ಇಲ್ಲ. ಅವರು ಕೂಲಿ ನಾಲಿ ಮಾಡಿಕೊಂಡು, ಜೀವನ ಸಾಗಿಸುತ್ತಿದ್ದಂತಹ ಕಾಲ ಇತ್ತು. ಈ ರೀತಿಯಲ್ಲಿ ಹಿಂದೆ ಜಾತಿ ಮತ್ತು ವೃತ್ತಿ ಒಂದರೊಡನೊಂದು ಬೆಸೆದುಕೊಂಡಿದ್ದು ಆಯಾ ಜಾತಿಯ ಜನ ಆ ಜಾತಿಗೆ ನಿರ್ದೇಶಿತವಾದ ಕುಲಕಸುಬನ್ನೇ ಮಾಡಿಕೊಂಡು

ಬರುತ್ತಿದ್ದರು. ಉಳುವವನೇ ಒಡೆಯ ಎಂಬ ಕಾನೂನು ಬಂದ ಬಳಿಕ ಮತ್ತು ಆಧುನಿಕತೆಯ ಪ್ರವೇಶವಾದ ಬಳಿಕ ಈ ಗಡಿಗಳು ಇಲ್ಲವಾಗಿವೆ. ನಿಧಾನಕ್ಕೆ ಇಲ್ಲಿ ಜಾತಿ ಒಂದು ಅಸ್ಮಿತೆಯ ನೆಲೆಗೆ ತಲುಪಿದ್ದು ಹೊಸಬಗೆಯ ಶ್ರೇಣೀಕರಣ, ಸಂಪತ್ತು ಮತ್ತು ಅಧಿಕಾರದ ನೆಲೆಯಲ್ಲಿ ಸ್ಥಾಪಿತಗೊಂಡಿರುವುದು ಕಂಡುಬರುತ್ತದೆ.[೫]

ಈ ಪ್ರದೇಶದ ಹಲವರು ಇಂದು ರಾಜ್ಯದ, ದೇಶದ ಬೇರೆ ಬೇರೆ ಭಾಗಗಳಲ್ಲಿ ಹೋಟೆಲ್ ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಜೊತೆಗೆ ಮತ್ಸ್ಯ ಸಂಸ್ಕರಣೆ, ಶೇಖರಣೆಯ ಉದ್ಯಮ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಜಾತಿಯೊಂದಿಗೆ ವೃತ್ತಿ ಬೆಸೆದುಕೊಂಡಿಲ್ಲ. ಮೀನುಗಾರಿಕೆ ಯಾಂತ್ರೀಕೃತಗೊಂಡ ನಂತರದಲ್ಲಿ ಬ್ರಾಹ್ಮಣರೂ ಮೀನುಗಾರಿಕಾ ಬೋಟ್‌ನ ಒಡೆಯರಾಗಿದ್ದಾರೆ. ಬಿಲ್ಲವರೂ, ಮೊಗವೀರರೂ ಹೆಚ್ಚಿನ ಸಂಖ್ಯೆಯಲ್ಲಿ ಈ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಉಳುವವನೇ ಭೂಮಿಯ ಒಡೆಯ ಕಾನೂನಿನ ಅತಿ ಹೆಚ್ಚಿನ ಪ್ರಯೋಜನವನ್ನು ಪಡೆದವರಲ್ಲಿ ಬಂಟರು ಪ್ರಮುಖರು. ಇತರ ಸಮುದಾಯದವರೂ ಶಿಕ್ಷಣ ಪಡೆದು ಪ್ರಗತಿಯ ಏಣಿಯಲ್ಲಿ ಮುನ್ನಡೆದಿದ್ದಾರೆ.

ಈ ಪ್ರದೇಶದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ೬೬ (ಹಿಂದೆ ಇದು ೧೭ ಆಗಿತ್ತು), ಇಲ್ಲಿನ ಜನಜೀವನದಲ್ಲಿ ಬಹಳ ದೊಡ್ಡ ಚಲನೆಯನ್ನು ಉಂಟುಮಾಡಿದೆ. ಅತಿ ವೇಗವಾಗಿ ಆಧುನಿಕತೆಗೆ ನಗರೀಕರಣಕ್ಕೆ ಇಲ್ಲಿನ ಸಮುದಾಯಗಳು ತೆರೆದುಕೊಂಡಿವೆ. ಅದು ಅವರ ಜೀವನಶೈಲಿ, ಭಾಷೆಯ ಮೇಲೆ ದಟ್ಟ ಪ್ರಭಾವ ಬೀರಿದೆ.

೨.೨. ಸಂಸ್ಕೃತಿ ನಿರ್ವಚನ

ಜಾಗತಿಕವಾಗಿ ಮತ್ತು ಕರ್ನಾಟಕದ ಸಂದರ್ಭದಲ್ಲಿ ಸಂಸ್ಕೃತಿಯನ್ನು ವಿಭಿನ್ನ ನೆಲೆಗಳಲ್ಲಿ ಅರ್ಥೈಸುವ ಪ್ರಯತ್ನಗಳು ನಡೆದಿವೆ. ಕಲೆ, ಸಾಹಿತ್ಯ, ಸಂಗೀತ ಇತ್ಯಾದಿ ಎಂಬರ್ಥದಿಂದ ಹಿಡಿದು ವ್ಯಕ್ತಿ ಹೊಂದಿದ ಸಂಸ್ಕಾರವೇ ಸಂಸ್ಕೃತಿ ಎಂಬಲ್ಲಿಂದ ಜನರ ಜೀವನ ವಿಧಾನವೇ ಸಂಸ್ಕೃತಿ ಎನ್ನುವವರೆಗೆ ಹಲವು ಬಗೆಯಲ್ಲಿ 'ಸಂಸ್ಕೃತಿ'ಯನ್ನು ವ್ಯಾಖ್ಯಾನಿಸಲಾಗಿದೆ.

ಸಮಾಜಶಾಸ್ತ್ರಜ್ಞ ಜಿಗ್ಮಂಟ್ ಬೌಮನ್ ತಮ್ಮ(Bauman Zygmunt;1973;p:26) ಸಂಸ್ಕೃತಿಯ ವ್ಯಾಖ್ಯೆಗಳನ್ನು ಮೂರು ಪ್ರಧಾನ ಪರಿಕಲ್ಪನೆಗಳಡಿಯಲ್ಲಿ ತರುತ್ತಾರೆ. ಅವುಗಳೆಂದರೆ, *ಅ.ಶ್ರೇಣೀಕೃತ ನೆಲೆಯ ಗ್ರಹಿಕೆ, ಆ. ಅನನ್ಯ ನೆಲೆಯ ಗ್ರಹಿಕೆ, ಇ. ಸಾರ್ವತ್ರಿಕ ನೆಲೆಯ ಗ್ರಹಿಕೆ.* ಈ ವಿಂಗಡಣೆಯನ್ನು ಎಳೆಯಾಗಿ ಇಟ್ಟುಕೊಂಡು ವಿಸ್ತರಿಸುವುದಾದರೆ,

೨.೨.೧. ಶ್ರೇಣೀಕೃತ ನೆಲೆಯ ಗ್ರಹಿಕೆ

ಶ್ರೇಣೀಕೃತ ನೆಲೆಯ ಗ್ರಹಿಕೆ ವೈಯಕ್ತಿಕ ಮತ್ತು ಸಾಮಾಜಿಕ ಎರಡೂ ನೆಲೆಗಳಲ್ಲಿ ಕೆಲಸ ಮಾಡುತ್ತದೆ. ಒಬ್ಬ ವ್ಯಕ್ತಿ ಸಂಸ್ಕಾರವಂತ ಎಂಬಲ್ಲಿ ಆತ ಇತರರಿಗಿಂತ ಮೇಲು, ಅವನಂತಿಲ್ಲದ

ಇತರರು ಅವನಿಗಿಂತ ಕೆಳಗೆ ಎಂಬ ಭಾವ ಮೂಡುತ್ತದೆ. ಅದೇ ಸಮುದಾಯದ ಮಟ್ಟದಲ್ಲಿ ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಗಿಂತ ಶ್ರೇಷ್ಠ ಅಥವಾ ಒಂದು ಗುಂಪಿನ ಜನರು ಸಂಸ್ಕೃತಿಹೀನರು ಎಂಬ ತಿಳುವಳಿಕೆ ಶ್ರೇಣೀಕೃತ ನೆಲೆಯದ್ದೇ ಆಗಿದೆ. ವಸಾಹತು ಕಾಲಘಟ್ಟದಲ್ಲಿ ಆಳುವ ಜನ ತಾವು ನಾಗರಿಕರೆಂದೂ (civilized) ತಮ್ಮ ಅಧೀನಕ್ಕೆ ಒಳಪಟ್ಟ ಜನ ಅಸಂಸ್ಕೃತರು ಅಥವಾ ಅನಾಗರಿಕರೆಂದೂ (barbaric) ಭಾವಿಸಿರುವುದನ್ನು ಗಮನಿಸಬಹುದು. 'ಶಿಷ್ಟ', 'ಅಶಿಷ್ಟ' ಕಲ್ಪನೆ ಕೂಡಾ ಇದೇ ಬಗೆಯದ್ದು.

ಶ್ರೇಷ್ಠ, ಕನಿಷ್ಠಗಳನ್ನು ಶ್ರೇಣೀಕೃತವಾಗಿ ಗ್ರಹಿಸುವ ನೆಲೆ ಒಂದಾದರೆ ಇನ್ನೊಂದು ಅಪಾಯಕಾರಿ ನೆಲೆ ಬಹುತ್ವದ ನಿರಾಕರಣೆ. ನಮ್ಮ ಸಂದರ್ಭದಲ್ಲಿ ನೋಡುವುದಾದರೆ 'ಭಾರತೀಯ ಸಂಸ್ಕೃತಿ' ಎಂಬ ಏಕಾಕೃತಿಯ ಕಲ್ಪನೆ ಇಲ್ಲಿನ ಇತರ ಸಂಸ್ಕೃತಿಗಳ ಅಸ್ತಿತ್ವವನ್ನು ಸದ್ದಿಲ್ಲದೆ ನಿರಾಕರಿಸುತ್ತಿರುವುದೂ ಶ್ರೇಣೀಕೃತ ನೆಲೆಯ ವಿಸ್ತರಣೆಯೇ ಆಗಿದೆ. 'ಕಲಾಕೇಂದ್ರಿತ'. 'ನೈತಿಕ ಮೌಲ್ಯ ಕೇಂದ್ರಿತ' ಸಂಸ್ಕೃತಿ ವ್ಯಾಖ್ಯಾನಗಳೂ ಈ ಶ್ರೇಷ್ಠ ಕನಿಷ್ಠ ಕಲ್ಪನೆಗಳಿಗೆ ಅಂಟಿಕೊಂಡಿವೆಯಾದ್ದರಿಂದ ಅವನ್ನೂ ಇಲ್ಲಿ ಗಮನಿಸಬಹುದಾಗಿದೆ. ಜಾತಿ, ವರ್ಗ, ಲಿಂಗ, ಸಮುದಾಯ, ದೇಶಗಳ ಮಟ್ಟದಲ್ಲಿ ಮನೆಮಾಡಿರುವುದು ಈ ಶ್ರೇಣೀಕೃತ ಗ್ರಹಿಕೆಯೇ.

೨.೨.೨. ಅನನ್ಯ ನೆಲೆಯ ಗ್ರಹಿಕೆ

ಇಲ್ಲಿ ಸಂಸ್ಕೃತಿಗಳ ವಿಭಿನ್ನತೆಯನ್ನು ಒಪ್ಪಿಕೊಂಡರೂ ಇದು ಮೇಲಿನ ಗ್ರಹಿಕೆಯಿಂದ ಭಿನ್ನ. ಅಂದರೆ ಇಲ್ಲಿ ಸಂಸ್ಕೃತಿಗಳ ವಿಶಿಷ್ಟತೆಯನ್ನು ಮನ್ನಿಸಲಾಗುತ್ತದೆಯಾದರೂ ಇವುಗಳನ್ನು ಪ್ರಧಾನ ಮತ್ತು ಅಧೀನ ನೆಲೆಯಿಂದ ನೋಡಲಾಗುವುದಿಲ್ಲ.

ಇದನ್ನೂ ವೈಯಕ್ತಿಕ ಮತ್ತು ಸಾಮೂಹಿಕ ಈ ಎರಡು ನೆಲೆಗಳಲ್ಲಿ ಅರ್ಥೈಸಬಹುದು. ವೈಯಕ್ತಿಕ ನೆಲೆಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಸಂಸ್ಕೃತಿಯ ಪಾಲುದಾರನಾಗಿದ್ದೂ ಹೇಗೆ ಅನನ್ಯತೆಯನ್ನು ತೋರಿಸುತ್ತಾನೆ ಎಂಬುದನ್ನು ಗಮನಿಸಬಹುದು. ಸಾಮುದಾಯಿಕ ನೆಲೆಯಲ್ಲಿ ಒಂದು ಸಮುದಾಯದ ಸಂಸ್ಕೃತಿ ಹೇಗೆ ವಿಶಿಷ್ಟತೆಯನ್ನು ಪ್ರದರ್ಶಿಸುತ್ತದೆ ಎಂಬುದು ಮುಖ್ಯವಾಗುತ್ತದೆ.

ಆದರೆ ಮುಖ್ಯವಾಗಿ, ಇದನ್ನು ನಾವು ಗಮನಿಸಬೇಕಾದುದು ಸಾಮೂಹಿಕ ನೆಲೆಯಲ್ಲಿ. ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಗಿಂತ ಭಿನ್ನ, ಹೀಗಾಗಿ ಒಂದು ಸಂಸ್ಕೃತಿಯ ಒನ್ನೆಲೆಯಲ್ಲಿ ಬೆಳೆದವರಿಗೆ ಇನ್ನೊಂದು ಸಂಸ್ಕೃತಿಯ ಒಳಹೊಗುವುದು ಸ್ವಲ್ಪ ಕಷ್ಟವಾಗುತ್ತದೆ ಎಂಬಲ್ಲಿ ಈ ತಿಳುವಳಿಕೆ ಕೆಲಸ ಮಾಡುತ್ತದೆ. ಪ್ರತಿಯೊಂದು ಸಂಸ್ಕೃತಿಗೂ ಜಗತ್ತನ್ನು ಗ್ರಹಿಸುವ ತನ್ನದೇ ಆದ ವಿಶೇಷ ಬಗೆ ಇರುತ್ತದೆ. ಈ ಮೂಲಕ ಅದು ವಿಶಿಷ್ಟತೆಯನ್ನು.

ಅನನ್ಯತೆಯನ್ನು ತೋರುತ್ತದೆ. ಅಮೆರಿಕದ ಮಾನವಶಾಸ್ತ್ರಜ್ಞರು ಅಲ್ಲಿನ ಬುಡಕಟ್ಟುಗಳ ಭಾಷೆಯನ್ನು ಅಧ್ಯಯನ ಮಾಡಿ ಭಾಷೆ ಮತ್ತು ಸಂಸ್ಕೃತಿಗಿರುವ ಸಂಬಂಧವನ್ನು ನಿರ್ವಚಿಸುವ ಸಂದರ್ಭದಲ್ಲಿ ಹೇಳಿರುವುದು ಇದನ್ನೇ. ಇಲ್ಲಿ ಯಾವೊಂದು ಸಂಸ್ಕೃತಿ ಶ್ರೇಷ್ಠವೂ ಅಲ್ಲ, ಇನ್ನೊಂದು ಸಂಸ್ಕೃತಿ ಕನಿಷ್ಠವೂ ಅಲ್ಲ.

೨.೨.೩. ಸಾರ್ವತ್ರಿಕ ನೆಲೆಯ ಗ್ರಹಿಕೆ

ಮನುಷ್ಯನನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸುವ ಸಂಗತಿ ಯಾವುದು? ಎಂಬ ಪ್ರಶ್ನೆ ಹಾಕಿಕೊಂಡಾಗ ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನನಾಗಿ 'ಮನುಷ್ಯ' ಎನಿಸಿ ಕೊಂಡಿರುವುದೇ ಸಂಸ್ಕೃತಿಯ ಕಾರಣಕ್ಕಾಗಿ ಎಂಬ ಅರ್ಥದಲ್ಲಿ ಈ ಪರಿಕಲ್ಪನೆಯನ್ನು ಬಳಸ ಲಾಗಿದೆ. ಮನುಷ್ಯ ವಿಕಾಸದ ಹಾದಿಯಲ್ಲಿ ಇತರ ಜೀವಿಗಳಿಗಿಂತ ಮುಂದುವರೆಯಲು ಕಾರಣವಾದ ಎರಡು ಸಂಗತಿಗಳಲ್ಲಿ ಒಂದು 'ಉಪಕರಣ'ಗಳ ಆವಿಷ್ಕಾರ, ಇನ್ನೊಂದು 'ಭಾಷೆ'ಯ ಆವಿಷ್ಕಾರ. ವಿಶ್ವಾತ್ಮಕ ಆವರಣದಲ್ಲಿ ಇದು ಒಟ್ಟಾರೆಯಾಗಿ 'ಮನುಷ್ಯ ಸಂಸ್ಕೃತಿ' ಎಂಬುದನ್ನು ಪರಿಭಾವಿಸುತ್ತದೆ.

ಕನ್ನಡದ ಸಂದರ್ಭದಲ್ಲಿ ಇದುವರೆಗೆ ನಡೆದ ಸಂಸ್ಕೃತಿ ಅಧ್ಯಯನಗಳಲ್ಲಿ ಮೇಲೆ ಚರ್ಚಿಸಿದ ಮೂರೂ ನೆಲೆಗಳು ಭೂಮಿಕೆಯಾಗಿರುವುದು ಕಂಡುಬರುತ್ತದೆ. ಕಳೆದ ಮೂರು ದಶಕಗಳಿಂದ ಸಂಸ್ಕೃತಿ ಅಧ್ಯಯನ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡ ರಹಮತ್ ತರೀಕೆರೆಯವರು ಸಂಸ್ಕೃತಿ ಎಂಬ ಹೆಸರಿಟ್ಟುಕೊಂಡು ನಡೆದ ಅಧ್ಯಯನ ಮತ್ತು ಸಂಸ್ಕೃತಿ ನಿರ್ವಚನ ಕುರಿತು ನಡೆಸಿದ ವಿಶ್ಲೇಷಣೆಯ ಮೂಲಕ ಇದನ್ನು ಚೆನ್ನಾಗಿ ಗ್ರಹಿಸಬಹುದು. ಈ ಬಗ್ಗೆ ಚರ್ಚೆ ಮಾಡುತ್ತಾ ಅವರು ಒಟ್ಟಾಗಿ ೨೦ನೇ ಶತಮಾನದಲ್ಲಿ ಪ್ರಚಲಿತ ಇರುವ ಸಂಸ್ಕೃತಿಯ ನಾಲ್ಕು ವ್ಯಾಖ್ಯೆಗಳನ್ನು ಕಲಾಕೇಂದ್ರಿತ ಮತ್ತು ನೈತಿಕ ಮೌಲ್ಯ ಕೇಂದ್ರಿತ, ಮಾನವಶಾಸ್ತ್ರೀಯ, ವರ್ಗಪ್ರಜ್ಞೆಯ ಗ್ರಹಿಕೆಗಳು(ರಹಮತ್ ತರೀಕೆರೆ;೨೦೦೬;ಪು:೮೯)ಎಂಬುದಾಗಿ ಗುರುತಿಸಿದ್ದಾರೆ. ಕಲಾಕೇಂದ್ರಿತ ಮತ್ತು ಮೌಲ್ಯಕೇಂದ್ರಿತ ಸಂಸ್ಕೃತಿ ವ್ಯಾಖ್ಯಾನಗಳು ಮನುಷ್ಯನ ಬದುಕಿನ ವಿವರಗಳಿಂದ, ಅಧಿಕಾರ ರಾಜಕಾರಣದ ಪ್ರಶ್ನೆಯಿಂದ ದೂರ ಉಳಿಯುತ್ತವೆ ಮತ್ತು ಇವು ಕೆಲವು ವರ್ಗಗಳ ಹಿತಾಸಕ್ತಿಯನ್ನು ಪೋಷಿಸುತ್ತಾ ಏಕಾಕೃತಿಯ ಮಾದರಿಯನ್ನು, ಶ್ರೇಷ್ಠತೆಯ ಕಲ್ಪನೆಯನ್ನು ಎತ್ತಿಹಿಡಿಯುತ್ತವೆ.

ಇನ್ನು ಮಾನವಶಾಸ್ತ್ರೀಯ ಸಂಸ್ಕೃತಿ ಗ್ರಹಿಕೆ ರಾಚನಿಕ ವಿನ್ಯಾಸದ ಕಡೆಗೆ ಆಸಕ್ತಿ ತೋರಿಸುವಷ್ಟು ಅಸ್ಮಿತೆ ಮತ್ತು ಅಧಿಕಾರ ರಾಜಕಾರಣದ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುವುದಿಲ್ಲ. ವರ್ಗಪ್ರಜ್ಞೆಯ ನೆಲೆ ಎಲ್ಲವನ್ನೂ ಆರ್ಥಿಕತೆಯ ನೆಲೆಯಿಂದಲೇ ನಿರ್ಧರಿಸುತ್ತದೆ. ಹೀಗೆ

ನೋಡುವಾಗ ಸಮುದಾಯದ ಹಲವು ಚೈತನ್ಯದಾಯಕ ಸಂಗತಿಗಳು ಮೂಢ ಆಚರಣೆಗಳಾಗಿ ಇವರಿಗೆ ಕಾಣುತ್ತದೆ. ಇವುಗಳಲ್ಲಿ ಹುದುಗಿರುವ ಸಮುದಾಯವನ್ನು ಪೊರೆಯುವ ಅಂಶ ಇವರ ದೃಷ್ಟಿಯಿಂದ ಆಚೆಗೆ ಉಳಿಯುತ್ತದೆ. ಈ ಮಿತಿಗಳನ್ನು ಮೀರುವಂತೆ ನಮ್ಮ ಅಧ್ಯಯನ ವಿಧಾನವನ್ನು ತಾತ್ವಿಕ ಎಚ್ಚರದಿಂದ ರೂಪಿಸಿಕೊಳ್ಳುವ ಅಗತ್ಯವನ್ನು ಅವರು ಹೇಳುತ್ತಾರೆ.

೨.೩. ತಾತ್ವಿಕ ಚರ್ಚೆ

ಭಾಷೆಯನ್ನು ಅದು ನೆಲೆಗೊಂಡಿರುವ ಸಂಸ್ಕೃತಿಯಿಂದ ಬೇರ್ಪಡಿಸಿ ನೋಡುವುದು ಸಾಧ್ಯವಿಲ್ಲ. ಭಾಷೆಯ ವರ್ಣನಾತ್ಮಕ ರಚನೆಯಿಂದಷ್ಟೆ ಆ ಭಾಷೆಯ ಕುರಿತಾದ ಎಲ್ಲವನ್ನೂ ತಿಳಿಯುವುದು ಸಾಧ್ಯವಿಲ್ಲ. ಆರಂಭದಲ್ಲಿನ ಭಾಷಾವಿಜ್ಞಾನಿಗಳು ಭಾಷೆಯ ರಾಚನಿಕ ಅಂಶಕ್ಕೆ ಹೆಚ್ಚಿನ ಗಮನ ನೀಡಿದರು. ಆದರೆ ಭಾಷೆ ಎಂದೂ ತನಗೆ ತಾನೇ ಸ್ವಾಯತ್ತವಾಗಿರುವುದಿಲ್ಲ. ಅದು ಅರ್ಥ ಪಡೆದುಕೊಳ್ಳುವುದು ಅದು ಬಳಕೆಯಾದ ಭಿನ್ನ ಸಂದರ್ಭಗಳಲ್ಲಿ. ಸಂದರ್ಭಗಳನ್ನು ನಿರ್ದೇಶಿಸುವುದು ಆಯಾ ಪರಿಸರದ ಸಂಸ್ಕೃತಿ. ಅದಕ್ಕೆ ಆಯಾ ಸಂಸ್ಕೃತಿಯ ಸಂದರ್ಭಲ್ಲಿ ಭಾಷೆಯನ್ನು ಇಟ್ಟು ನೊಡಬೇಕಾಗುತ್ತದೆ ಎಂಬ ಅಭಿಪ್ರಾಯಕ್ಕೆ ಇಂದಿನ ಭಾಷಾವಿಜ್ಞಾನ ಬಂದು ನಿಂತಿದೆ. ಹಾಗೆಯೇ ಸಂಸ್ಕೃತಿ ಪರಿಕಲ್ಪನೆಯೊಳಗೆ ಬರುವ ಎಲ್ಲವೂ ಭಾಷಿಕವಾಗಿಯೇ ವ್ಯಕ್ತವಾಗುತ್ತದೆ ಎಂದು ಹೇಳಲಾಗದು. ಭಾಷಿಕ ಆವರಣದಿಂದ ಆಚೆಗಿರುವ ಅನೇಕ ಸಂಗತಿ ಗಳೂ ಸಂಸ್ಕೃತಿಯಲ್ಲಿ ಇರುತ್ತವೆ. ಭಾಷಿಕವಾಗಿ ವ್ಯಕ್ತವಾಗುವ ಸಂಸ್ಕೃತಿಯ ಭಾಗವನ್ನು 'Languaculture'[೬] ಎಂಬ ಪರಿಕಲ್ಪನೆಯ ಮೂಲಕ ಮೈಕೆಲ್ ಅಗರ್ ಗುರುತಿಸುತ್ತಾರೆ. ಕನ್ನಡದಲ್ಲಿ ಇದನ್ನು 'ಭಾಷಿಕ ಸಂಸ್ಕೃತಿ' ಎನ್ನಬಹುದು. ಇಲ್ಲಿ ನಮ್ಮ ಗಮನ ಇರುವುದು ಸಂಸ್ಕೃತಿಯ ಈ ಭಾಗದೆಡೆಗೆ.

ಇಲ್ಲಿ ಮೊದಲಿಗೇ ಮತ್ತೆ ಸ್ಪಷ್ಟಪಡಿಸಬೇಕಾದ ಸಂಗತಿ ಎಂದರೆ 'ಭಾಷೆ' (Language) ಎಂಬುದನ್ನು ಸಮಗ್ರವಾಗಿ ಕಂಡಾಗ ಸಂಕೇತಗಳು, ಆಂಗಿಕ ಸನ್ನೆಗಳು ಎಲ್ಲವೂ ಬರುತ್ತವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಭಾಷೆಯ ಧ್ವನಿರೂಪ 'ಮಾತು'(Speech) ಅನ್ನು ಗಮನಿಸಲಾಗಿದೆ. ಹೀಗಾಗಿ ಮುಂದೆ 'ಭಾಷೆ' ಎಂದು ಬಂದಾಗಲೆಲ್ಲ ಅದನ್ನು 'ಮಾತು' ಎಂಬ ಅರ್ಥದಲ್ಲೇ ಗ್ರಹಿಸಲಾಗಿದೆ. ಮತ್ತು ಪ್ರತಿ ಬಾರಿಯೂ ಮಾತು ಜೀವಂತಿಕೆ ಪಡೆಯುವುದು ಅದು ಬಳಕೆಯಾಗುವ ಸಂದರ್ಭದಲ್ಲೇ. ಹೀಗಾಗಿ ದೈನಂದಿನ ಮತ್ತು ವಿಶೇಷ ಸಂದರ್ಭಗಳಲ್ಲಿ ಮಾತು ಹೊಮ್ಮುವ ಬಗೆ ಇಲ್ಲಿ ಮುಖ್ಯವಾಗುತ್ತದೆ. ಜೊತೆಗೆ, ದೈನಂದಿನ ಮತ್ತು ವಿಶೇಷ ಸಂದರ್ಭಗಳ ಸ್ವರೂಪ, ರಚನೆ ಇವೂ ಮಾತಿನ ಹಿನ್ನೆಲೆಯನ್ನು ಅರಿಯುವಲ್ಲಿ ಗಮನಾರ್ಹ ವಾಗುತ್ತದೆ.

೨.೬.೧. ಇದುವರೆಗೆ ನಡೆದ ಅಧ್ಯಯನಗಳಲ್ಲಿ ಭಾಷೆ ಮತ್ತು ಸಂಸ್ಕೃತಿಯ ಅಂತಃಸಂಬಂಧಗಳನ್ನು ಕಂಡರಸಿದ ಬಗೆ

ಇದುವರೆಗೆ ನಡೆದ ಅಧ್ಯಯನಗಳಲ್ಲಿ ಭಾಷೆ ಮತ್ತು ಸಂಸ್ಕೃತಿಗಿರುವ ಸಂಬಂಧವನ್ನು ಗ್ರಹಿಸಿದ ಭಿನ್ನ ನೆಲೆಗಳನ್ನು ತಾತ್ವಿಕವಾಗಿ ಸಂಕ್ಷಿಪ್ತವಾಗಿ ಚರ್ಚಿಸಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ತಾತ್ವಿಕ ಚರ್ಚೆಯೆಡೆಗೆ ಹೊರಳಲಾಗುತ್ತದೆ.

ಭಾಷೆ ಮತ್ತು ಸಂಸ್ಕೃತಿ ಇವೆರಡೂ ಮನುಷ್ಯನಿಗೆ ಆನುವಂಶಿಕವಾಗಿ ದತ್ತವಾದವುಗಳಲ್ಲ. ಇವು ಕಲಿಕೆಯ ಭಾಗವಾಗಿ ಬರುವಂಥವುಗಳು. ಮಾನವ ಸಮುದಾಯಗಳು ಬದುಕಲು ಸಾಂಘಿಕವಾಗಿ ರೂಪಿಸಿಕೊಂಡ ಬದುಕುವ ಕ್ರಮ ಸಂಸ್ಕೃತಿಯಾಗಿ ರೂಪುಪಡೆದರೆ, ಅವು ತಮ್ಮ ಸುತ್ತಲಿನ ಜಗತ್ತನ್ನು ಗ್ರಹಿಸಿ ಅದನ್ನು ಅಭಿವ್ಯಕ್ತಿಸಲು ಭಾಷೆಯನ್ನು ರೂಪಿಸಿಕೊಂಡಿವೆ. ಈ ನಂಟನ್ನು ಭಾಷೆಯ ಅಧ್ಯಯನಗಳಲ್ಲಿ ಹೇಗೆ ವಿಭಿನ್ನ ನೆಲೆಗಳಲ್ಲಿ ಚರ್ಚಿಸಲಾಗಿದೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.

ಭಾಷೆ ಮತ್ತು ಚಿಂತನೆ: ಭಾಷೆಯ ಮೂಲಕ ಹೀಗೆ ಜಗತ್ತನ್ನು ಕಟ್ಟಿಕೊಂಡ ಬಳಿಕ ಈ ಭಾಷಿಕ ರಚನೆ ಮತ್ತು ರೂಪಗಳೇ ಅವರು ಜಗತ್ತನ್ನು ನೋಡುವ ಬಗೆಯನ್ನು ಪ್ರಭಾವಿಸುತ್ತವೆ. ಈ ನಿಟ್ಟಿನಲ್ಲಿ ಮಾನವಶಾಸ್ತ್ರೀಯ ಭಾಷಾವಿಜ್ಞಾನಿಗಳು, ಸಂಜ್ಞಾನಾತ್ಮಕ ಭಾಷಾವಿಜ್ಞಾನಿಗಳು (Cognitive Linguists) ಚಿಂತನೆ ನಡೆಸಿದ್ದಾರೆ. ಇವರಲ್ಲಿ ಪ್ರಮುಖರು ಆರಂಭದಲ್ಲಿ ಅಮೆರಿಕದ ಮೂಲನಿವಾಸಿಗಳ ಸಂಸ್ಕೃತಿ ಮತ್ತು ಭಾಷೆ ಕುರಿತು ಅಧ್ಯಯನ ನಡೆಸಿದ ರುತ್ ಬೆನೆಡಿಕ್ಟ್, ಆಲ್‌ಫ್ರೆಡ್ ಕ್ರೋಬರ್, ಫ್ರಾನ್ಜ್ ಬೋಸ್, ಎಡ್ವರ್ಡ್ ಸಪೀರ್, ಬೆಂಜಮಿನ್ ಲೀ ವೂರ್ಫ್ ಮುಂತಾದವರು. ಇವರಲ್ಲಿ ಎಡ್ವರ್ಡ್ ಸಪೀರ್ ಮತ್ತು ಈತನ ಶಿಷ್ಯ ಬೆಂಜಮಿನ್ ಲೀ ವೂರ್ಫ್ ಕೂಡಿ ಮಂಡಿಸಿದ ಭಾಷಾ ಸಿದ್ಧಾಂತ 'ಸಪೀರ್ ವೂರ್ಫ್ ಪ್ರಮೇಯ' ಎಂದು ಹೆಸರಾಗಿದೆ. "ಈ ವಾದದಲ್ಲಿ ಮುಖ್ಯವಾಗಿ ಎರಡು ನಿರ್ಣಯಗಳಿವೆ. ಮೊದಲನೆಯದನ್ನು 'ಭಾಷಾ ವಿಧಿವಾದ' ಎನ್ನಬಹುದು. ಅದರಂತೆ ನಮ್ಮ ಭಾಷೆಯೇ ನಮ್ಮ ಜಗತ್ತು. ನಾವು ಹೇಗೆ ಯೋಚಿಸಬೇಕೆಂಬುದನ್ನು ನಮ್ಮ ಭಾಷೆಯೇ ನಿರ್ದೇಶಿಸುತ್ತದೆ. ಎರಡನೆಯ ನಿರ್ಣಯವನ್ನು 'ಭಾಷಾ ಸಾಪೇಕ್ಷವಾದ' ಎನ್ನಬಹುದು. ಪ್ರತಿ ಭಾಷೆಗೂ ಅವರದೇ ಆದ ವಿಶಿಷ್ಟತೆ ಇರುತ್ತದೆ. ಒಂದು ಭಾಷೆಯ ಲೋಕಗ್ರಹಿಕೆಯ ವಿಧಾನ ಇನ್ನೊಂದು ಭಾಷೆಯದಕ್ಕಿಂತ ಭಿನ್ನ"(ಉದ್ಧೃತ; ನಾರಾಯಣ ಕೆ.ವಿ(ಸಂ);೨೦೦೫;ಪು:೨೨). ನಂತರದಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆ ನಡೆದು ಭಾಷಾ ವಿಧಿವಾದವನ್ನು ಒಪ್ಪದೇ ಹೋದರೂ ಭಾಷೆ ಗ್ರಹಿಕೆಯನ್ನು ಪ್ರಭಾವಿಸುತ್ತದೆ ಎಂಬ ಎರಡನೆಯ ಅಭಿಪ್ರಾಯವನ್ನು ಸ್ವೀಕರಿಸಲಾಗಿದೆ. ಸಂಜ್ಞಾನಾತ್ಮಕ

ಭಾಷಾವಿಜ್ಞಾನಿಗಳು ಈ ಎರಡನೇ ದುರ್ಬಲ ವಾದವನ್ನು ಒಪ್ಪುತ್ತಾರೆ. ಡಬ್ಲ್ಯು. ಗುಡ್ ಇನಫ್, ಆರ್.ಎಂ. ಕೀಸಿಂಗ್ ಮುಂತಾದವರು ಈ ನೆಲೆಯಲ್ಲಿ ಚಿಂತನೆ ನಡೆಸಿದ್ದಾರೆ.

ಭಾಷೆ ಮತ್ತು ಚಿಂತನೆಗೆ ಸಂಬಂಧ ಇದೆ ಎಂಬುದು ಸ್ಥಾಪಿತವಾದರೂ ಇದು ಇಡೀ ಮಾನವ ಸಂಕುಲವನ್ನು ಇಟ್ಟುಕೊಂಡು ನೋಡಿದಾಗ ಒಂದೇ ಬಗೆಯಲ್ಲಿ ಇರುತ್ತದೆಯೋ ಅಥವಾ ವಿಶಿಷ್ಟವಾಗಿರುತ್ತದೆಯೋ ಎಂಬ ಬಗ್ಗೆ ಚರ್ಚೆಗಳು ನಡೆದಿವೆ. ಮಾನಸಿಕ ಬಿಂಬಗಳು ಏಕರೂಪಿ, ಅಂದರೆ ವಿಶ್ವಾತ್ಮಕವಾಗಿರುತ್ತದೆ, ಅದಕ್ಕೆ ತೊಡಿಸುವ ಭಾಷೆಯ ತೊಡುಗೆ ಮಾತ್ರ ಭಿನ್ನ ಎಂದು ಕೆಲವು ಭಾಷಾವಿಜ್ಞಾನಿಗಳು ಹೇಳುತ್ತಾರೆ. ನೋಮ್ ಚಾಮ್‌ಸ್ಕಿ ಇದೇ ನೆಲೆಯಲ್ಲಿ ಚಿಂತನೆ ನಡೆಸಿ 'ಯುನಿವರ್ಸಲ್ ಗ್ರಾಮರ್' ಕುರಿತು ಯೋಚಿಸಿದ್ದಾರೆ. ಇದಕ್ಕಿಂತ ಬೇರೆಯಾದ ಇನ್ನೊಂದು ಯೋಚನೆ ಭಾಷೆ ಮತ್ತು ಚಿಂತನೆ ಸಂಸ್ಕೃತಿ ನಿರ್ದಿಷ್ಟವಾದುದು, ಇದು ಭಿನ್ನ ಸಮುದಾಯಗಳಲ್ಲಿ ಭಿನ್ನವಾಗಿರುತ್ತದೆ ಎಂಬುದು. ಮೇಲೆ ಉಲ್ಲೇಖಿಸಿಲಾದ ಮಾನವಶಾಸ್ತ್ರೀಯ ಭಾಷಾವಿಜ್ಞಾನಿಗಳು ಈ ನೆಲೆಯಿಂದ ಚರ್ಚಿಸುತ್ತಾರೆ.

ರಾಚನಿಕ ಮಾನವಶಾಸ್ತ್ರ ಈ ಸಂಬಂಧದ ನೆಲೆಯನ್ನು ವ್ಯಾಕರಣ, ಮಿತ್ ಮುಂತಾದವುಗಳ ರಚನೆಯನ್ನು ಅಭ್ಯಸಿಸುವುದರ ಮೂಲಕ ಅರ್ಥಮಾಡಿಕೊಳ್ಳಲು ಹೊರಡುತ್ತದೆ. ಕ್ಲಾಡ್ ಲೆವಿಸ್ಟ್ರಾಸ್ ಈ ದಿಕ್ಕಿನಲ್ಲಿ ಮಹತ್ವದ ಕೆಲಸ ಮಾಡಿದ್ದಾರೆ.

ವಿಶಿಷ್ಟತೆ ಮತ್ತು ಅನನ್ಯತೆ: ಜಗತ್ತನ್ನು ಒಂದು ಭಾಷಿಕ ಸಮುದಾಯ ಕಟ್ಟಿಕೊಳ್ಳುವ ಬಗೆಯನ್ನು ಲೋಕಗ್ರಹಿಕೆ[2] ಎಂದು ಹೇಳುವುದಾದರೆ ಪ್ರತಿಯೊಂದು ಭಾಷಿಕ ಸಮುದಾಯವೂ ಈ ನೆಲೆಯಲ್ಲಿ ವಿಶಿಷ್ಟತೆಯನ್ನು ತೋರುತ್ತದೆ. ಮತ್ತು ಇದು ಆ ಸಮುದಾಯದ ಜನರ ಒಟ್ಟು ತಿಳುವಳಿಕೆ. ಹೀಗಾಗಿ ಸಂಸ್ಕೃತಿ ಎಂಬುದು 'ತಿಳುವಳಿಕೆ' ಅಥವಾ 'ಜ್ಞಾನ'; ಇದು ಸಮುದಾಯದ ಜನ ಒಟ್ಟು ಹಂಚಿಕೊಂಡ ತಿಳುವಳಿಕೆ; ಭಾಷೆ ಇದಕ್ಕೆ ರೂಪ ಕೊಡುತ್ತದೆ ಎಂದು ಸಂಜ್ಞಾನಾತ್ಮಕ ಭಾಷಾವಿಜ್ಞಾನಿಗಳು ಪ್ರತಿಪಾದಿಸುತ್ತಾರೆ.

ಈ ತಿಳುವಳಿಕೆ ಸಂಸ್ಕೃತಿ ನಿರ್ದಿಷ್ಟವಾದುದರಿಂದ ಪ್ರತಿಯೊಂದು ಸಂಸ್ಕೃತಿಯೂ ಜಗತ್ತನ್ನು ಗ್ರಹಿಸುವ, ಅದನ್ನು ಭಾಷಿಕವಾಗಿ ಕಟ್ಟಿಕೊಡುವ ಬಗೆಯಲ್ಲಿ ಅನನ್ಯತೆಯನ್ನು ಪ್ರದರ್ಶಿಸುತ್ತದೆ. ಮತ್ತು ಈ ಸೂಚಕಗಳನ್ನು ಅನನ್ಯತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕಾಪಿಡುತ್ತಾ ಬರುತ್ತದೆ. ಮಾನವಶಾಸ್ತ್ರೀಯ ಭಾಷಾವಿಜ್ಞಾನಿಗಳು, ಸಾಮಾಜಿಕ ಭಾಷಾವಿಜ್ಞಾನಿಗಳು ಮತ್ತು ಸಂಸ್ಕೃತಿ ಅಧ್ಯಯನಕಾರರು ಈ 'ಅನನ್ಯತೆ' ಮತ್ತು 'ಅಸ್ಮಿತೆ'ಯನ್ನು ಸಮುದಾಯಗಳು ಹೇಗೆ ಪರಿಭಾವಿಸುತ್ತವೆ, ಸ್ಥಾಪಿಸಿಕೊಳ್ಳುತ್ತವೆ ಮತ್ತು ಕಾಯ್ದುಕೊಳ್ಳುತ್ತವೆ ಎಂಬುದರ ಬಗೆಗೆ ಆಸಕ್ತಿ ತೋರುತ್ತಾರೆ.

ಈ ಅನನ್ಯತೆ ಮತ್ತು ವಿಶಿಷ್ಟತೆಯ ಕಾರಣದಿಂದಾಗಿ ಒಂದು ಭಾಷಿಕ ಪರಿಸರದಲ್ಲಿ ಬೆಳೆದ ವ್ಯಕ್ತಿಗೆ ಇನ್ನೊಂದು ಸಂಸ್ಕೃತಿ ಅಥವಾ ಭಾಷೆಯನ್ನು ಅರಿಯುವುದು ಸುಲಭವಲ್ಲ. ಏಕೆಂದರೆ ಆತನ ಗ್ರಹಿಕೆ ಮೊದಲ ಭಾಷೆಗೆ ಅನುಗುಣವಾಗಿ ರೂಪಿತವಾಗಿರುತ್ತದೆ. ಇದು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವ ಸಂದರ್ಭದಲ್ಲಿ, ದ್ವಿತೀಯ ಭಾಷಾ ಕಲಿಕೆಯ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದ ಮಾಡುವ ಸಂದರ್ಭದಲ್ಲಿ ಆಯಾ ಭಾಷೆಯ ಸಂಸ್ಕೃತಿ ನಿರ್ದಿಷ್ಟ ಪದಗಳನ್ನು ಇನ್ನೊಂದು ಭಾಷೆಗೆ ತರುವಾಗ ಅಲ್ಲಿ ಅದಕ್ಕೆ ಸಂವಾದಿಯಾದ ಪದಗಳಿಲ್ಲದೆ ಹೋಗಬಹುದು. ಉದಾಹರಣೆಗೆ, ಎ.ಕೆ.ರಾಮಾನುಜನ್ ಕನ್ನಡದ ಶಿವಶರಣರ ವಚನಗಳನ್ನು ಇಂಗ್ಲಿಷ್‌ಗೆ ಅನುವಾದಿಸುವಾಗ, ಭಾರತದ 'ಧರ್ಮ' ಪದವನ್ನು ಇಂಗ್ಲಿಷ್‌ಗೆ ಅನುವಾದಿಸುವಾಗ ಇಂತಹ ಸಮಸ್ಯೆ ಎದುರಾಗಿರುವುದನ್ನು ಕಾಣಬಹುದು. ಇಲ್ಲಿನ 'ಧರ್ಮ' ಎಂಬ ಪದಕ್ಕೂ ಅಲ್ಲಿನ 'ರಿಲಿಜನ್' ಅನ್ನುವ ಪದಕ್ಕೂ ಅರ್ಥದ ನೆಲೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಇದು ಲೋಕಗ್ರಹಿಕೆಯ ಭಿನ್ನತೆಯಿಂದ ಎದುರಾಗುವ ಸಮಸ್ಯೆ.

ದ್ವಿತೀಯ ಭಾಷಾ ಕಲಿಕೆಯ ಸಂದರ್ಭದಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಎರಡನೇ ಭಾಷೆಯನ್ನು ಅದರ ಸಾಂಸ್ಕೃತಿಕ ಸಂದರ್ಭದ ಹೊರಗಿಟ್ಟು ಕಲಿಸಲಾಗುವುದು. ಜೊತೆಗೆ ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ಬೆಳೆದು, ಅಲ್ಲಿನ ಭಾಷೆಯನ್ನು ಕಲಿತ ವ್ಯಕ್ತಿಗೆ ಇನ್ನೊಂದು ಭಾಷೆಯನ್ನು ಗ್ರಹಿಸಿ ಕಲಿಯುವಲ್ಲಿ ಉಂಟಾಗುವ ತೊಡಕುಗಳ ಕುರಿತು ಈ ಶಾಖೆ ಆಸಕ್ತವಾಗಿದೆ. ಸ್ಟಿಫನ್ ಕ್ರಾಶನ್, ರಾಡ್ ಎಲ್ಲಿಸ್, ಕ್ಲೇರ್ ಕ್ರಾಂಶ್ ಮುಂತಾದವರು ಈ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿದ್ದಾರೆ.

ಅಸ್ಮಿತೆ ಮತ್ತು ಶ್ರೇಣೀಕರಣ: 'ಭಾಷಿಕ ಸಂಸ್ಕೃತಿ' ಎಂಬುದು ಸಮುದಾಯದಿಂದ ಸಮುದಾಯಕ್ಕೆ ವಿಶಿಷ್ಟವಾದುದು ಎಂಬುದನ್ನು ಒಪ್ಪಿಕೊಳ್ಳುತ್ತಲೇ ಅವು ಹೇಗೆ ರಾಚನಿಕವಾಗಿ ವಿಂಗಡಣೆಗೊಂಡಿವೆ ಎಂಬುದನ್ನು ಗಮನಿಸಿದಾಗ ಅವು ಶ್ರೇಣೀಕೃತವಾಗಿ ಭಿನ್ನ ಜಾಗಗಳಲ್ಲಿ ವ್ಯವಸ್ಥಿತಗೊಂಡಿರುವುದನ್ನು ಗಮನಿಸಬಹುದು. ಈ ಶ್ರೇಣೀಕರಣದ ಹಿಂದೆ ಕೆಲಸ ಮಾಡಿರುವುದು ಮೇಲು ಮತ್ತು ಕೀಳು ಎಂಬ ಭಾವನೆ. ಉದಾಹರಣೆಗೆ, ವಿದ್ಯಾವಂತರು ಅಥವಾ ನಗರದ ಜನ ಆಡುವ ಭಾಷಾ ಪ್ರಭೇದ ಮೇಲು, ಅನಕ್ಷರಸ್ಥರು ಅಥವಾ ಹಳ್ಳಿಜನ ಆಡುವ ಭಾಷಾ ಪ್ರಭೇದ ಕೀಳು ಎಂಬ ಭಾವನೆ. ಈ ಮೇಲು-ಕೀಳು ಎಂಬುದೇ ಇನ್ನೊಂದು ಬಗೆಯಲ್ಲಿ ಪ್ರಧಾನ ಮತ್ತು ಅಧೀನ ಎಂಬುದಾಗಿ ವ್ಯವಸ್ಥಿತಗೊಂಡಿರುವುದನ್ನು ಗಮನಿಸಬಹುದು.

ಉದಾಹರಣೆಗೆ, ಭಾಷೆ ಮತ್ತು ಉಪಭಾಷೆ ಎಂಬ ಕಲ್ಪನೆ. ಇದು ಪ್ರಮಾಣ ಕನ್ನಡ ಎಂಬ ಭಾಷಾ ಪ್ರಭೇದವನ್ನು ಪ್ರಧಾನ ಎಂದೂ ಉಳಿದ ಭಾಷಾ ಪ್ರಭೇದಗಳು ಅದಕ್ಕೆ 'ಉಪ' ಎಂದೂ ಪರಿಭಾವಿಸುತ್ತದೆ.

ಈ ಶ್ರೇಣಿಯ ವಿವಿಧ ಮೆಟ್ಟಲುಗಳಲ್ಲಿ ಇದ್ದೂ ಈ ಭಿನ್ನ ಭಾಷಿಕ ಸಮುದಾಯಗಳು ಹೇಗೆ ಭಾಷಿಕವಾಗಿ ತಮ್ಮ ಅಸ್ಮಿತೆಯನ್ನು ಕಾಯ್ದುಕೊಳ್ಳುತ್ತವೆ ಎಂಬ ಬಗ್ಗೆ ಸಂಶೋಧನೆಗಳು ನಡೆದಿವೆ. ಹೆಣ್ಣಿನ ಭಾಷೆ, ವಿವಿಧ ವರ್ಗಗಳ ಜನರಾಡುವ ಭಾಷೆ, ಭಾಷಾನೀತಿ ಮುಂತಾದವುಗಳಿಗೆ ಸಂಬಂಧಿಸಿದಂತೆ ಈ ಬಗೆಯ ಅಧ್ಯಯನಗಳು ನಡೆದಿವೆ.

ಯಾವುದು ಮೇಲು, ಯಾವುದು ಕೀಳು ಅಥವಾ ಯಾವುದು ಪ್ರಧಾನ ಮತ್ತು ಯಾವುದು ಅಧೀನ ಎಂಬುದನ್ನು ನಿರ್ಧರಿಸುವವರು ಯಾರು? ಎಂಬ ಪ್ರಶ್ನೆ ಹುಟ್ಟುತ್ತದೆ. ರಾಜಕೀಯ, ಸಾಮುದಾಯಿಕ ನೆಲೆಯ ಅಧಿಕಾರ ಎಂಬುದು ಇದನ್ನು ನಿರ್ಧರಿಸುತ್ತದೆ. ಈ ನೆಲೆಯಿಂದ ಸಂಸ್ಕೃತಿ ಅಧ್ಯಯನಕಾರರಾದ ರೇಮಂಡ್ ವಿಲಿಯಮ್ಸ್, ಆಂಟೊನಿಯೊ ಗ್ರಾಮ್ಶಿ, ಮಿಶೆಲ್ ಫೂಕೋ ಮತ್ತು ಸಮಾಜಶಾಸ್ತ್ರಜ್ಞ ಪಿಯರೆ ಬೋರ್ದೋ ಮುಂತಾದವರು ಭಾಷೆ ಮತ್ತು ಅಧಿಕಾರ ಸಂಬಂಧ ಕುರಿತು ತಾತ್ವಿಕ ಚರ್ಚೆ ನಡೆಸಿದ್ದಾರೆ.

ಭಾಷೆ ಮತ್ತು ಸಮಾಜದ ನಡುವಣ ಸಂಬಂಧವನ್ನು ಶೋಧಿಸುವ ಸಾಮಾಜಿಕ ಭಾಷಾವಿಜ್ಞಾನ, ಸಾಮಾಜಿಕ ಸಂಸ್ಥೆಗಳು, ಲಿಂಗ, ವರ್ಗ, ಶಿಕ್ಷಣ, ಭಾಷಾನೀತಿ, ಭಾಷಾ ಯೋಜನೆ ಮುಂತಾದ ವಿಷಯಗಳನ್ನು ಇರಿಸಿಕೊಂಡು ಜನಸಮುದಾಯದ ಭಾಷೆಗಳ ಅಧ್ಯಯನ ನಡೆಸಿದೆ.

ವಿಲಿಯಂ ಲಾಬೊವ್, ಬಾಸಿಲ್ ಬರ್ನ್‌ಸ್ಟೈನ್, ಪೀಟರ್ ಟ್ರಡ್ಜಿಲ್ ಮುಂತಾದವರು ಈ ನಿಟ್ಟಿನಲ್ಲಿ ವರ್ಗಗಳ ನೆಲೆಯಲ್ಲಿ ಕಾಣುವ ಭಾಷಿಕ ಭಿನ್ನತೆಗಳು, ಅದರೊಂದಿಗೆ ತಳುಕು ಹಾಕಿಕೊಂಡಿರುವ ಅಧಿಕಾರ, ಪ್ರತಿಷ್ಠೆ, ಅಸ್ಮಿತೆ ಮುಂತಾದ ಸಂಗತಿಗಳ ಕುರಿತು ಚರ್ಚಿಸಿದ್ದಾರೆ. ಇವರಲ್ಲಿ ಡೆಲ್‌ಹೈಮ್ಸ್, ಜಾನ್ ಗುಂಫರ್ಜ್ ಮಾನವಶಾಸ್ತ್ರೀಯ ಭಾಷಾವಿಜ್ಞಾನ ಮತ್ತು ಸಾಮಾಜಿಕ ಭಾಷಾವಿಜ್ಞಾನ ಇವೆರಡು ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ.

ಸಾಮಾಜಿಕ ಭಾಷಾವಿಜ್ಞಾನದ ಭಾಗವಾಗಿ ನಡೆದ ಭಾಷೆ ಮತ್ತು ಲಿಂಗಪ್ರಜ್ಞೆ ಕುರಿತ ಅಧ್ಯಯನಗಳು ಪ್ರತ್ಯೇಕ ಗಮನವನ್ನು ಬೇಡುತ್ತವೆ. ವ್ಯಕ್ತಿಯ ಭಾಷಾ ಸಾಮರ್ಥ್ಯ ಮತ್ತು ಬಳಕೆಯನ್ನು ಸಮಾಜ ನಿಯಂತ್ರಿಸುತ್ತದೆ. ಹೀಗಾಗಿ ಸಾಮಾಜಿಕ ತಾರತಮ್ಯಗಳು ಭಾಷೆಯಲ್ಲೂ ಪ್ರತಿಫಲಿತವಾಗುತ್ತವೆ. ಈ ನೆಲೆಯಲ್ಲಿ ಭಾಷೆ ಎನ್ನುವುದು ಪುರುಷನನ್ನೇ ಪ್ರಮಾಣ ಎಂದಿರಿಸಿ ಕೊಂಡಿವೆ ಮತ್ತು ಇಲ್ಲಿ ಹಲವು ಸ್ತರಗಳಲ್ಲಿ ತಾರತಮ್ಯ ನೆಲೆಗೊಂಡಿದೆ ಎಂದು ಈ

ಗುಂಪಿನ ಭಾಷಾವಿಜ್ಞಾನಿಗಳು ವಿಶ್ಲೇಷಿಸುತ್ತಾರೆ. "ಸ್ತ್ರೀವಾದವು ಭಾಷೆಯನ್ನು ತನ್ನ ಚಿಂತನೆಗಳ ಚೌಕಟ್ಟಿನಲ್ಲಿ ವಿವರಿಸುವಾಗ ಮೂರು ವಲಯಗಳನ್ನು ಆಯ್ದುಕೊಂಡಿದೆ. ಮೊದಲ ಎರಡು ವಲಯಗಳು ವಿಶ್ಲೇಷಣೆಯ ನೆಲೆಯಲ್ಲಿದ್ದರೆ ಮೂರನೆಯದು ಪರಿವರ್ತನೆಯನ್ನು ಗುರಿಯಾಗಿಸಿ ಕೊಂಡಿದೆ. ಮೊದಲೆರಡು ವಲಯಗಳು ೧. ಭಾಷೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ ೨. ಗಂಡು ಹೆಣ್ಣುಗಳ ನಡುವಣ ತಾರತಮ್ಯಗಳನ್ನು ಭಾಷೆಯು ಕಾಯ್ದಿಡುತ್ತಿರುವ ಬಗೆ ಇವುಗಳನ್ನು ಗಮನದಲ್ಲಿರಿಸಿಕೊಳ್ಳುತ್ತದೆ. ೩. ಮೂರನೆಯ ವಲಯ ಇಂಥ ಪರಿಸ್ಥಿತಿಯಿಂದ ಹೊರಬರಲು ಭಾಷೆ ಎಂಬ ವ್ಯವಸ್ಥೆಯಲ್ಲೇ ಆಗಬೇಕಾಗಿರುವ ಪರಿವರ್ತನೆಗಳನ್ನು ಕುರಿತದ್ದು" (ಶ್ರೀಮತಿ ಎಚ್.ಎಸ್; ೨೦೦೯; ಪು:೪). ರೊಬಿನ್ ಲಾಕೊಫ್, ಡೆಬೋರಾ ಕಾಮರಾನ್, ಸಾರಾ ಮಿಲ್ಸ್, ಡೆಬೋರಾ ಟೆನ್ನೆನ್, ಡೇಲ್ ಸ್ಪೆಂಡರ್ ಮುಂತಾದವರು ಹೆಣ್ಣಿನ ಭಾಷೆ, ಮಾತುಕತೆಯ ವಿಶ್ಲೇಷಣೆ, ಭಾಷೆಯಲ್ಲಿ ಅಡಗಿರುವ ಲಿಂಗ ತಾರತಮ್ಯದ ನೆಲೆಗಳ ಕುರಿತು ಗಂಭೀರವಾಗಿ ಚಿಂತನೆ ನಡೆಸಿದ್ದಾರೆ.

ಕನ್ನಡದಲ್ಲಿ ಭಾಷೆ ಮತ್ತು ಸಂಸ್ಕೃತಿಯ ನಂಟನ್ನು ಶೋಧಿಸಿದವರಲ್ಲಿ ಪ್ರಮುಖರು ಶಂ.ಬಾ.ಜೋಷಿಯವರು. ಇವರ ದಾರಿಯನ್ನು ಕೆ.ವಿ.ನಾರಾಯಣ ಅವರು "ಭಾಷಿಕ ಆಕೃತಿಯ ಹಿಂದಿನ ಆಶಯಗಳ ನೆಲೆಯನ್ನು ಹುಡುಕುವುದರ ಮೂಲಕ ಅದರ ಸಾಂಸ್ಕೃತಿಕ ನೆಲೆ, ಪ್ರಭಾವ, ಪರಿಣಾಮಗಳನ್ನು ಜೀವನದಲ್ಲಿ ಗುರುತಿಸುವುದು" ಎಂಬುದಾಗಿ ಗುರುತಿಸಿದ್ದಾರೆ (ಮಲ್ಲೇಪುರಂ ಜಿ.ವೆಂಕಟೇಶ್(ಸಂ);೧೯೯೪;ಪು:೧೩೪). ಇಂದಿನ ಬದುಕಿನ ನೆಲೆಗಳನ್ನು ವ್ಯಾಖ್ಯಾನಿಸಲು ಅವರು ಭಾಷೆಯನ್ನು ಸಂಕೇತವಾಗಿ ಬಳಸಿಕೊಂಡಿರುವುದು ಅವರ ಬರಹಗಳಲ್ಲಿ ಕಾಣುತ್ತದೆ. ಅವರ ಅರ್ಥಗ್ರಹಣ ಪದ್ಧತಿಯಲ್ಲಿ ಭಾಷೆಯ ಸ್ಥಾನ ಏನು? ಎಂಬ ಬಗ್ಗೆ ಅವರೇ ಸಂದರ್ಶನವೊಂದರಲ್ಲಿ ಆಡಿದ ಮಾತುಗಳು ಇಲ್ಲಿ ಉಲ್ಲೇಖಾರ್ಹ.

> ಮಾನವ ಸಂಸ್ಕೃತಿಯ ಪ್ರಪ್ರಥಮ ಅಭಿವ್ಯಕ್ತಿ ಅಥವಾ ಆವಿಷ್ಕಾರವು ಆದದ್ದು ಭಾಷಾ ಮಾಧ್ಯಮದ ಮೂಲಕವಾಗಿಯೇ ಎಂಬುದನ್ನು ಅಲ್ಲಗಳೆಯಲು ಯಾರಿಂದಲೂ ಶಕ್ಯವಿಲ್ಲ. ಜರ್ಮನಿಯ ವಿಖ್ಯಾತ ಸಂಶೋಧಕ ಹಂಬೋಲ್ಟನ ಸೂತ್ರವು: 'By the virtue of language man has become MAN' ನರನು (ಭಾಷಾಪೂರ್ವ ಪ್ರಾಣಿ) 'ಮನು'> ಮಾನವ, ಮನು-ಜ ಆದದ್ದು ಭಾಷೆಯಿಂದಾಗಿ! ಭಾಷೆಯು ಸಂಸ್ಕೃತಿಗೆ ಆಧಾರವಾಗಿರುವಂತೆ ಸಾಂಸ್ಕೃತಿಕ ಪಾರ್ಶ್ವಭೂಮಿ (ಪ್ರೇರಣೆ) ಇಲ್ಲದೆ, ಭಾಷೆಯು ಮೈದೋರಲು ಶಕ್ಯವಿಲ್ಲ. ಆದಕಾರಣ ಡಾ. ಸಪೀರ್ ಹೇಳುವಂತೆ ಭಾಷೆ ಹಾಗೂ ಸಂಸ್ಕೃತಿ ಇವೆರಡರಲ್ಲಿ ಅನ್ಯೋನ್ಯವಿರುತ್ತದೆ. ಭಾಷೆಯ ಮೇಲಿಂದ-ಭಾಷಿಕ ಸಂಕೇತ, ಶಬ್ದ ಪ್ರತಿಮೆಗಳ ಮೂಲಕ-ಸಂಸ್ಕೃತಿಯನ್ನು ಗ್ರಹಿಸಿಕೊಳ್ಳಲು ಶಕ್ಯವಿರುವಂತೆ, ಸಾಂಸ್ಕೃತಿಕ

ಸಮಯ(ಪರಿಸರದ) ಪಾರ್ಶ್ವಭೂಮಿಯ ಹಿನ್ನೆಲೆಯಲ್ಲಿ ಭಾಷೆ ಮೈವೆತ್ತ ಸಂದರ್ಭವನ್ನು ಗ್ರಹಿಸಿಕೊಳ್ಳಲು ಶಕ್ಯವಾಗಲೇಬೇಕು(ಮಲ್ಲೇಪುರಂ ಜಿ. ವೆಂಕಟೇಶ(ಸಂ);೧೯೯೪; ಪು:೨೩೨).

ಸಂಸ್ಕೃತಿಯ ಅವಿಷ್ಕಾರ ಪಡೆದ ಈ ಭಾಷೆಯನ್ನು ಕಡೆಗಣಿಸಿ ಸಂಸ್ಕೃತಿಯ ಅನ್ವೇಷಣೆ ಶಕ್ಯವೇ? ಸಂಸ್ಕೃತಿಯು, ಆ ಭಾಷೆಯ ಮೂಲಕ ಗೊತ್ತಾಗುವಂತೆ ಸಾಂಸ್ಕೃತಿಕ ಪಾತಳಿಯು ಆ ಭಾಷೆಯ ಸ್ವರೂಪವನ್ನು ನಿರ್ಧರಿಸುತ್ತದೆ(ಮಲ್ಲೇಪುರಂ ಜಿ. ವೆಂಕಟೇಶ(ಸಂ);೧೯೯೪; ಪು:೨೩೩ಪಾತಳಿ).

ನಂತರದಲ್ಲಿ ಮಾನಶಾಸ್ತ್ರೀಯ ನೆಲೆಗಟ್ಟಿನಲ್ಲಿ ಬುಡಕಟ್ಟು ಅಧ್ಯಯನ ಮತ್ತು ಜನಪದ ಅಧ್ಯಯನ ಮಾಡಲು ಹೊರಟ ವಿದ್ವಾಂಸರು ಅಲ್ಲಿನ ಜನಪದ ಪಠ್ಯಗಳ ರಚನಾತ್ಮಕ ಅಧ್ಯಯನ ಮಾಡುವ ಸಂದರ್ಭದಲ್ಲಿ ಸಂರಚನಾ ಮಾನವಶಾಸ್ತ್ರದ ತತ್ವಗಳನ್ನು ಅನುಸರಿಸಿ ರುವುದು ಕಂಡುಬರುತ್ತದೆ.

ಭಾಷಾ ನೀತಿ, ಒಳನುಡಿಗಳು, ಅಸ್ಮಿತೆ ಕುರಿತ ಚಿಂತನೆ, ಅಧ್ಯಯನದಲ್ಲಿ ಸದ್ಯದಲ್ಲಿ ಕನ್ನಡದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವವರು ಕೆ.ವಿ. ನಾರಾಯಣ ಅವರು. ಅವರ 'ಕನ್ನಡ ಜಗತ್ತು ಅರ್ಧಶತಮಾನ'(೨೦೦೭) 'ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ' (೧೯೯೯), 'ಭಾಷೆಯ ಸುತ್ತಮುತ್ತ'(೨೦೦೦), 'ಮತ್ತೆ ಭಾಷೆಯ ಸುತ್ತಮುತ್ತ'(೨೦೦೧) ಮುಂತಾದ ಪುಸ್ತಕಗಳು ಈ ಕುರಿತಾದ ಅವರ ಒಳನೋಟಗಳನ್ನು ತೆರೆದಿಡುತ್ತವೆ. ಕನ್ನಡವನ್ನು ಇನ್ನೊಬ್ಬ ಮಹತ್ವದ ಭಾಷಾವಿಜ್ಞಾನಿ ಡಿ.ಎನ್. ಶಂಕರಭಟ್ ಅವರು 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ'(೨೦೦೧) ಎನ್ನುವುದರ ಮೂಲಕ, ಸಂಸ್ಕೃತ ಪದಗಳಿಂದ ಕಿಕ್ಕಿರಿದ ಕನ್ನಡ ಬಳಕೆ ಯಲ್ಲಿ ಕನ್ನಡದ್ದೇ ಆದ ಪದಗಳನ್ನು ಮುನ್ನೆಲೆಗೆ ತರುವುದರ ಮೂಲಕ, ಸಂಸ್ಕೃತ ವರ್ಣಮಾಲೆಯ ನೆರಳಿನಿಂದ ಕನ್ನಡ ವರ್ಣಮಾಲೆಯನ್ನು ಬಿಡಿಸಿ, ಬರಹವನ್ನು ಸರಳಗೊಳಿಸ ಬೇಕು ಎನ್ನುವುದರ ಮೂಲಕ ಕನ್ನಡದ ಅನನ್ಯತೆಯನ್ನು ಮುನ್ನೆಲೆಗೆ ತರುವ ಪ್ರಯತ್ನದಲ್ಲಿ ತೊಡಗಿಕೊಂಡಿದ್ದಾರೆ. ಅವರ 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ'(೧೯೯೫), 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ'(೨೦೦೧), 'ಕನ್ನಡ ಬರಹವನ್ನು ಸರಿಪಡಿಸೋಣ' (೨೦೦೫)ಭಾಷೆ ಮತ್ತು ಜನಸಾಮಾನ್ಯರ ಜೊತೆಗಿನ ಸಂಬಂಧವನ್ನು ಹತ್ತಿರ ತರುವ ಮಹತ್ವದ ಪ್ರಯತ್ನಗಳು. ಎಸ್.ಎನ್.ಶ್ರೀಧರ್ ಅವರು 'ಇಂದಿನ ಕನ್ನಡ ರಚನೆ ಮತ್ತು ಬಳಕೆ'(೧೯೯೫) ಪುಸ್ತಕದಲ್ಲಿ ಸಾಮಾಜಿಕ ಭಾಷಾವಿಜ್ಞಾನದ ನೆಲೆಯಿಂದ ಕನ್ನಡ ಭಾಷೆಯ ಚಲನೆಯನ್ನು ವಿಶ್ಲೇಷಿಸಿದ್ದಾರೆ. ಇವಲ್ಲದೆ ಇನ್ನೂ ಹಲವು ಸಂಶೋಧನಾ ಪ್ರಬಂಧಗಳು, ಪುಸ್ತಕಗಳು ಈ ನೆಲೆಯಲ್ಲಿ ಹೊರಬಂದಿವೆ.

೨.೩.೨ ಜನಾಂಗ, ಜಾತಿ, ವರ್ಗ ಮತ್ತು ಸಮುದಾಯಗಳ ಪರಿಕಲ್ಪನೆ

ಇದುವರೆಗೆ ನಡೆದ ಹಲವಾರು ಅಧ್ಯಯನಗಳಲ್ಲಿ ಜನಾಂಗ, ಜಾತಿ, ಸಮುದಾಯ ಎಂಬ ಪದಗಳನ್ನು ಹೆಚ್ಚಿನ ತಾತ್ವಿಕ ಖಚಿತತೆ ಇಲ್ಲದೆ ಒಂದರ ಜಾಗದಲ್ಲಿ ಇನ್ನೊಂದನ್ನು ಇರಿಸಿ ಬಳಸುತ್ತಾ ಬರಲಾಗಿದೆ. ಆದರೆ ಇವುಗಳ ನಡುವೆ ಇರುವ ಪ್ರಮುಖ ವ್ಯತ್ಯಾಸಗಳನ್ನು ಗುರುತಿಸಿಯೇ ಮುಂದುವರೆಯಬೇಕಾಗುತ್ತದೆ. ಸಂಸ್ಕೃತಿ ಕುರಿತಂತೆ ಪಾಶ್ಚಾತ್ಯ ಮಾನವಶಾಸ್ತ್ರಜ್ಞರು ನಡೆಸಿದ ಬಹುತೇಕ ಅಧ್ಯಯನಗಳು ಜನಾಂಗವನ್ನು ಆಧರಿಸಿದವು. ಒಂದು ದೇಶದಿಂದ ಅಥವಾ ಖಂಡದಿಂದ ಇನ್ನೊಂದು ದೇಶಕ್ಕೆ ಅಥವಾ ಖಂಡಕ್ಕೆ ಬಂದು ಅಲ್ಲಿನ ಜನರ ರೀತಿ ನೀತಿಗಳನ್ನು ಅಭ್ಯಸಿಸಿ ಮಾಡಿದ ಜಾನಾಂಗಿಕ ಅಧ್ಯಯನಗಳು ಅವು. ಜನಾಂಗ ಎಂದು ತೆಗೆದುಕೊಂಡಾಗ ಪ್ರತಿ ಜನಾಂಗಕ್ಕೂ ವಿಶಿಷ್ಟ ಸಂಸ್ಕೃತಿ ಜೊತೆಗೆ ಭಿನ್ನ ಮುಖಚಹರೆ, ವಂಶಾವಳಿ ಇರುತ್ತದೆ. ಅದಕ್ಕೂ ಹೆಚ್ಚಾಗಿ ಜನಾಂಗೀಯ ದ್ವೇಷಕ್ಕೆ ಮೂಲ ಕೆಲವು ಸಮುದಾಯದವರು ಆನುವಂಶಿಕವಾಗಿಯೇ ಕೀಳು ಎಂಬ ಭಾವನೆಯಾಗಿದೆ.

ಆದರೆ ಜಾತಿ ಎಂಬುದು ಜನಾಂಗಕ್ಕಿಂತ ಭಿನ್ನವಾದುದು. ಇಲ್ಲಿ ಜಾತಿ ಅಸ್ಮಿತೆಯ, ಶ್ರೇಣೀಕರಣದ ಕುರುಹಾಗಿರುತ್ತದೆ. ಜಾತಿ ನೆಲೆನಿಂತಿರುವುದೇ ವೃತ್ತಿ ಆಧಾರಿತವಾಗಿ. 'ಸ್ವಜಾತಿ ವಿವಾಹ' ಜಾತಿಯನ್ನು ಕಾಯ್ದುಕೊಳ್ಳುವಲ್ಲಿ ನಿರ್ಧಾರಕವಾಗಿರುತ್ತದೆ. ಆಧುನೀಕರಣದೊಂದಿಗೆ ಜಾತಿಗೆ ವೃತ್ತಿಯ ಜೊತೆಗಿನ ಸಂಬಂಧ ಕಡಿದುಹೋದಂತೆ ಜಾತಿಯ ಸ್ವರೂಪವೂ ಬದಲಾಗುತ್ತದೆ. ಭಾರತದಲ್ಲಿ ಜಾತಿ ಕುರಿತು ಅಧ್ಯಯನ ಮಾಡಿದ ಡಾ. ಬಿ.ಆರ್. ಅಂಬೇಡ್ಕರ್ (೧೯೧೭), ಲೂಯಿ ದೂಮೊ(೧೯೬೬), ಎಂ.ಎನ್. ಶ್ರೀನಿವಾಸ್(೨೦೦೦), ದೀಪಾಂಕರ್ ಗುಪ್ತ (೨೦೦೪) ಇವರೆಲ್ಲರೂ ಭಾರತದಲ್ಲಿ ಜಾತಿ ಪಡೆದ ಭಿನ್ನರೂಪಗಳ ಕುರಿತು ಮತ್ತು ಜಾತಿ ವರ್ಗ ಕಲ್ಪನೆಗಿಂತ ಹೇಗೆ ಭಿನ್ನ ಎಂಬ ಕುರಿತು ಚರ್ಚೆ ನಡೆಸಿದ್ದಾರೆ. 'ಜಾತಿ'ಯ ಕಟ್ಟು ಜನರನ್ನು ಸಮುದಾಯವಾಗಿ ಸಂಘಟಿತವಾಗುವಲ್ಲಿ ತಡೆಯೊಡ್ಡುತ್ತದೆ ಎಂದು ಆರಂಭದಲ್ಲಿ ವ್ಯಕ್ತವಾದ ಅಭಿಪ್ರಾಯವನ್ನು ಇಂದಿನ ವಿದ್ವಾಂಸರು ಒಪ್ಪುವುದಿಲ್ಲ. ಜಾತಿಯಾಚೆಗೂ ಇರುವ ಬೇರೆಬೇರೆ ನೆಲೆಯ ಅಸ್ಮಿತೆಗಳು ಸಮುದಾಯ ಸಂಘಟಿತವಾಗುವಲ್ಲಿ ಕಾರಣವಾಗಿರುವುದು ನಮ್ಮ ಕಣ್ಣ ಮುಂದಿದೆ.

ವರ್ಗದ ಪರಿಕಲ್ಪನೆ ಸಂಪೂರ್ಣವಾಗಿ ಆರ್ಥಿಕತೆಯನ್ನು ಆಧರಿಸಿದ್ದು. ಯಾವ ಗುಂಪು ಆರ್ಥಿಕವಾಗಿ ಸಬಲವಾಗಿರುತ್ತದೋ ಅದು ತನ್ನಿಂತಾನೇ ಮೇಲಿನ ಹಂತಕ್ಕೇರುತ್ತದೆ. ಹೀಗಾಗಿ ಜಾತಿಯ ಏಣಿಯಲ್ಲಿ ಕೆಳಗಿರುವ ಸಮುದಾಯವೂ ಆರ್ಥಿಕವಾಗಿ ಸಬಲವಾಗಿ ಮೇಲ್ಚಲನೆ ಸಾಧಿಸಬಹುದು.

ಸಮುದಾಯ ಎಂಬುದು ಇವೆರಡಕ್ಕಿಂತಲೂ ಭಿನ್ನವಾದುದು. ಇದು ಜಾತಿ ಮತ್ತು ಜನಾಂಗದಂತಲ್ಲದೆ ನಮನಶೀಲ(flexible)ವಾದದ್ದು. ವ್ಯಕ್ತಿಗೆ ಇರುವ ಭಿನ್ನ ಅಸ್ಮಿತೆಯ ಚಹರೆಗಳ ಆಧಾರದಲ್ಲಿ ಸಮುದಾಯವು ರೂಪಿತವಾಗುತ್ತದೆ. ಜಾತಿ ಆಧಾರದಲ್ಲಿ ಜಾತಿ ಸಮುದಾಯ, ವರ್ಗದ ಆಧಾರದಲ್ಲಿ ವರ್ಗ ಸಮುದಾಯ, ಅದೇ ರೀತಿಯಲ್ಲಿ ಭಾಷಿಕ ಸಮುದಾಯ, ಲಿಂಗ ಸಮುದಾಯ ಹೀಗೆ ಒಂದೇ ವ್ಯಕ್ತಿ ಹಲವು ಸಮುದಾಯಗಳ ಭಾಗವಾಗಿರಬಹುದು. ಆದರೆ ಆತನ ಜಾತಿ ಹುಟ್ಟಿನಿಂದ ಕೊನೆತನಕವೂ ಒಂದೇ ಆಗಿರುತ್ತದೆ.

೨.೩.೩ ಪ್ರಸ್ತುತ ಅಧ್ಯಯನದ ತಾತ್ವಿಕ ನೆಲೆಗಟ್ಟು

ಮೇಲಿನ ಭಾಗದಲ್ಲಿ ಸ್ಪಷ್ಟಪಡಿಸಿರುವಂತೆ ಭಾಷೆಯೂ ಸಂಸ್ಕೃತಿಯಂತೆಯೇ ಕಲಿಕೆಯ ಭಾಗವಾಗಿ ಬರುವಂಥದ್ದು. ಇದು ಸಂಸ್ಕೃತಿಯ ವಾಹಕವಾಗಿರುವುದರ ಜೊತೆಗೆ ಸಂಸ್ಕೃತಿಯ ಭಾಗ ಕೂಡಾ ಹೌದು ಎನ್ನುವ ತಿಳುವಳಿಕೆಯೊಂದಿಗೆ ಅಧ್ಯಯನದಲ್ಲಿ ಮುಂದುವರೆಯಲಾಗಿದೆ.

ಭಾಷೆಯೇ ನಮ್ಮ ಯೋಚನಾಕ್ರಮವನ್ನು ನಿರ್ಧರಿಸುತ್ತದೆ ಎಂಬ ವಾದವನ್ನು ಪೂರ್ಣವಾಗಿ ಅಲ್ಲದಿದ್ದರೂ ಅದು ನಮ್ಮ ಗ್ರಹಿಕೆಯನ್ನು ಪ್ರಭಾವಿಸುತ್ತದೆ ಎಂಬ ನಿಲುವಿನೊಂದಿಗೆ ಪ್ರಸ್ತುತ ಅಧ್ಯಯನ ಸಂಸ್ಕೃತಿಯ ಮಾನವಶಾಸ್ತ್ರೀಯ ವ್ಯಾಖ್ಯೆಯನ್ನು ಪುರಸ್ಕರಿಸುತ್ತದೆ. ಇಲ್ಲಿ ಸಂಸ್ಕೃತಿ 'ಸಮಷ್ಟಿ ಜ್ಞಾನ, ನಂಬಿಕೆ, ಕಲೆ, ನೀತಿಗಳು, ಕಾನೂನು, ಸಂಪ್ರದಾಯಗಳು ಹಾಗೂ ಮನುಷ್ಯ ತನ್ನ ಸಮಾಜದ ಸದಸ್ಯನಾಗಿ ಗಳಿಸಿಕೊಂಡ ಸಮಸ್ತ ಸಾಮರ್ಥ್ಯಗಳು ಮತ್ತು ಅಭ್ಯಾಸಗಳನ್ನೆಲ್ಲ ಒಳಗೊಳ್ಳುತ್ತದೆ'[೯].

ಇಲ್ಲಿ ಕೋಟ ಸಮುದಾಯದ ಕಲೆ, ವಿಶಿಷ್ಟ ಆಚರಣೆಯಿಂದ ಹಿಡಿದು ಅವರ ಉಡುಗೆ ತೊಡುಗೆ, ಆಹಾರ ಇವುಗಳನ್ನೊಳಗೊಂಡ ಜೀವನ ವಿಧಾನ ಎಂಬ ವಿಶಾಲ ಅರ್ಥದಲ್ಲಿ ಸಂಸ್ಕೃತಿಯನ್ನು ಗ್ರಹಿಸಲಾಗುತ್ತದೆ. ಇಲ್ಲಿ 'ಸಂಸ್ಕೃತಿ ಎಂದರೆ ಸಮುದಾಯದ ಜೀವನವಿಧಾನಗಳ ಒಟ್ಟು ಮೊತ್ತ'.[೧೦] ವ್ಯಕ್ತಿಯೊಬ್ಬ ಸಮುದಾಯದ ಸದಸ್ಯನಾಗಿ ವ್ಯವಹರಿಸಲು ಬೇಕಾದ ಎಲ್ಲ ತಿಳುವಳಿಕೆಯೂ ಸಂಸ್ಕೃತಿ. ಇದು ವ್ಯಕ್ತಿಯೊಬ್ಬ ಸಮುದಾಯದ ಭಾಗವಾಗಿ ಕಲಿಕೆಯ ಮೂಲಕ ಗಳಿಸುವಂಥದ್ದು.

ಒಂದು ಸಮುದಾಯದ ಸಂಸ್ಕೃತಿ ಅದರ ಅನನ್ಯತೆಯ ಸೂಚಕವಾಗಿರುವುದರ ಜೊತೆಗೇ ಅದು ಇನ್ನಿತರ ಸಮುದಾಯಗಳ ಜೊತೆ ಒಳಗೊಳ್ಳುವಿಕೆಯನ್ನೂ ಪ್ರದರ್ಶಿಸುತ್ತದೆ. ಸುತ್ತಲಿನ ಭಾಷೆ, ಸಂಸ್ಕೃತಿಗಳ ಸಂಪರ್ಕ, ಪ್ರಾದೇಶಿಕ ಸಾಮ್ಯ, ಸಮಾನವಾಗಿ ಎದುರಾಗುವ ಬಿಕ್ಕಟ್ಟುಗಳು, ಪ್ರಭಾವಗಳನ್ನು ಅರಗಿಸಿಕೊಳ್ಳುವ ಬಗೆ ಮುಂತಾದವುಗಳು ಇಲ್ಲಿ ಗಮನಿಸಬೇಕಾದ ಸಂಗತಿಗಳು. ಈ ವಿಚಾರಗಳಿಗೆ ಬಂದಾಗ ಒಂದು ಸಂಸ್ಕೃತಿ ಇತರ ಸಂಸ್ಕೃತಿಗಳೊಡನೆ ಯಾವ ನೆಲೆಯಲ್ಲಿ

ಸಮಾನತೆಯನ್ನು ಮತ್ತು ವಿಶಿಷ್ಟತೆಯನ್ನು ಪ್ರದರ್ಶಿಸುತ್ತದೆ ಇವೆರಡೂ ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತದೆ. ಹೀಗಾಗಿ ಅಸ್ಮಿತೆ, ಅಧಿಕಾರ ರಾಜಕಾರಣದ ಪ್ರಶ್ನೆಗಳು ಮುಖ್ಯವಾಗುತ್ತವೆ.

ಸಂಸ್ಕೃತಿ ಮತ್ತು ಭಾಷೆಯ ನಡುವಣ ಸಂಬಂಧ ದೈನಂದಿನ ವ್ಯವಹಾರಗಳಲ್ಲಿ, ವಿಶಿಷ್ಟ ಸಂದರ್ಭಗಳಲ್ಲಿ ಅನೇಕ ಬಗೆಗಳಲ್ಲಿ ವ್ಯಕ್ತವಾಗುತ್ತಾ ಹೋಗುತ್ತದೆ. ಮತ್ತು ಇದು ಸಮುದಾಯದಲ್ಲಿ ವಿವಿಧ ಸನ್ನಿವೇಶಗಳಲ್ಲಿ ವ್ಯಕ್ತಿಯ, ವ್ಯಕ್ತಿಗಳ ಭಾಗವಹಿಸುವಿಕೆಯನ್ನು ನಿರ್ದೇಶಿಸುವ ವ್ಯವಸ್ಥೆಯೂ ಹೌದು. ಕೋಟ ಭಾಷಿಕ ಸಮುದಾಯ ಶ್ರೇಣೀಕೃತವಾಗಿ ವಿಂಗಡನೆಗೊಂಡಿರುವುದರಿಂದ ಇಲ್ಲಿ ಜಾತಿ, ವರ್ಗ, ಲಿಂಗಗಳ ನೆಲೆಯಲ್ಲಿ ಭಾಷಿಕ ಬಳಕೆ, ವರ್ತನೆಗಳ ಸ್ವರೂಪ ಕುರಿತಂತೆ ವಿವೇಚನೆ ನಡೆಸಲಾಗಿದೆ. ಇಲ್ಲಿ 'ಸಂಸ್ಕೃತಿ' ಪರಿಕಲ್ಪನೆಯನ್ನು ಬಹುತ್ವದ ನೆಲೆಯಲ್ಲೇ ಗ್ರಹಿಸಲಾಗಿದೆ.

ಹೀಗೆ ಸಂಸ್ಕೃತಿ ಎಂದರೆ ಜನರ ಜೀವನವಿಧಾನದ ಒಟ್ಟು ಮೊತ್ತ ಎಂದು ಪರಿಭಾವಿಸುತ್ತಾ ಸಂಸ್ಕೃತಿಯೊಳಗಿರುವ ಚೈತನ್ಯದಾಯಕ ಸಂಗತಿಗಳನ್ನು ಗುರುತಿಸುತ್ತಾ ಅದರಲ್ಲಿ ಅಧಿಕಾರದ, ಅಸ್ಮಿತೆಯ ಪ್ರಶ್ನೆಗಳನ್ನು ಮುಖಾಮುಖಿಯಾಗುತ್ತಾ ಸಾಗುವುದು ಸಮುದಾಯಗಳ ಅಧ್ಯಯನದಲ್ಲಿ ಮುಖ್ಯವಾಗುತ್ತದೆ. ಈ ದಿಕ್ಕಿನಲ್ಲಿ ಭಾಷೆ ಮತ್ತು ಸಂಸ್ಕೃತಿಯ ನಂಟನ್ನು ಶೋಧಿಸುವ ದಿಕ್ಕಿನಲ್ಲಿ ಪ್ರಸ್ತುತ ಅಧ್ಯಯನ ಸಾಗುತ್ತದೆ.

ಟಿಪ್ಪಣಿಗಳು

೧. ಅದರ ಉತ್ತರಕ್ಕೂ ಹೊಳೆ ಅಥವಾ ನದಿ ಬಂದಾಗಲೆಲ್ಲ ಸೂಕ್ಷ್ಮವಾದ ಭಾಷಿಕ ವ್ಯತ್ಯಾಸವನ್ನು ಗಮನಿಸುವುದು ಸಾಧ್ಯವಿದೆ.

೨. ಇದುವರೆಗಿನ ಬಹುತೇಕ ಅಧ್ಯಯನಗಳಲ್ಲಿ 'ಅಳಿಯ ಸಂತಾನ' ಕುರಿತು ವಿವರಿಸುವಾಗ 'ಮಾತೃಪ್ರಧಾನ' ಎಂಬ ಪದವನ್ನು ಹೆಚ್ಚಾಗಿ ಬಳಸಲಾಗಿದೆ. ಆದರೆ ತುಳುನಾಡಿನಲ್ಲಿರುವುದು 'ಮಾತೃಮೂಲೀಯ' ಕುಟುಂಬಗಳೇ ಹೊರತು 'ಮಾತೃ ಪ್ರಧಾನ' ಕುಟುಂಬಗಳಲ್ಲ. ಇಲ್ಲಿ ಗುರುತು ಹೆಣ್ಣಿನ ಮೂಲಕ ಆಗುತ್ತದೆ ಹೊರತು ಉಳಿದಂತೆ ಪುರುಷ ಪ್ರಾಧಾನ್ಯ ಇರುವುದು ಕಂಡುಬರುತ್ತದೆ.

೩. ೧೯೩೩ರಲ್ಲಿ ಮದ್ರಾಸ್ ಸರ್ಕಾರ ಅಳಿಯ ಸಂತಾನವನ್ನು ನಿಷೇಧಿಸಿ ಕಾನೂನು ಹೊರಡಿಸಿದರೆ ಭಾರತ ಸ್ವತಂತ್ರವಾದ ಬಳಿಕ ೧೯೫೭ರಲ್ಲಿ 'ಹಿಂದೂ ಕೋಡ್ ಬಿಲ್'ನಲ್ಲೂ ಅದು ಅಂಗೀಕೃತವಾಯಿತು.

೪. ಜಾತಿ ಶ್ರೇಣೀಕರಣದ ಭಿನ್ನ ಮೆಟ್ಟಿಲುಗಳಲ್ಲಿ ಇರುವವರು ಮೇಲು ಜಾತಿಯವರನ್ನು ಅನುಕರಿಸುವ ಮೂಲಕ ಮುಂಚಲನೆ ಸಾಧಿಸಲು ಹೊರಡುವ ಪ್ರಕ್ರಿಯೆಯನ್ನು 'ಸಂಸ್ಕೃತೀಕರಣ' ಎಂಬ

ಹೆಸರಿನಿಂದ ಕರೆಯಲಾಗುತ್ತದೆ. ಸಮಾಜಶಾಸ್ತ್ರಜ್ಞ ಎಂ.ಎನ್. ಶ್ರೀನಿವಾಸ್ ಈ ಪರಿಕಲ್ಪನೆಯನ್ನು ಹೆಚ್ಚು ಜನಪ್ರಿಯಗೊಳಿಸಿದರು.

೫. ಈ ಬಗ್ಗೆ ದೀಪಾಂಕರ್ ಗುಪ್ತಾ ಸಂಪಾದಿಸಿದ 'Caste in Question: Identity or Hierarchy?'(೨೦೦೪) ಪುಸ್ತಕವನ್ನು ಗಮನಿಸಬಹುದು.

೬. Languaculture is a term meaning a language thst includes not only elements such as grammar and vocabulary, but also past knowledge, local and cultural information, habits and behaviours.

೭. ಸ್ಥಾಪಿಸಿಕೊಳ್ಳುವುದು(Assertion): ತಮ್ಮ ಹಕ್ಕನ್ನು ಮತ್ತು ಅಭಿಪ್ರಾಯವನ್ನು ಗಟ್ಟಿಯಾಗಿ ಮತ್ತು ಧೈರ್ಯದಿಂದ ನಿರೂಪಿಸುವುದು.

೮. ಒಂದು ಸಮುದಾಯ ತನ್ನ ಸುತ್ತಲಿನ ಲೋಕವನ್ನು ಭಾಷಿಕವಾಗಿ ಕಟ್ಟಿಕೊಳ್ಳುವ ಬಗೆಯನ್ನು 'ಲೋಕಗ್ರಹಿಕೆ' ಎಂಬ ಪರಿಕಲ್ಪನೆ ಸೂಚಿಸುತ್ತದೆ.

೯. "Culture or civilization taken in its boroad, geographical sense, is that complex whole which includes knowledge, art, morals, law custom and any other capabilities and habits acquired by man as a member of society"(Tylor Edward B; 1897).

೧೦. "A society's culture consists of whatever it is one has to know or believe in order to operate in a manner acceptable to its membres. Culture, being what people have to learn as distinct from their biological heritage, must consist of the end product of learning. Knowledge is a most general sense of the term"(Good Enough; 1957).

• • •

ಅಧ್ಯಾಯ : ಮೂರು

ಭೌತಿಕ ಸಂಸ್ಕೃತಿ ಮತ್ತು ಭಾಷೆ

ಅಧ್ಯಾಯ : ಮೂರು

ಭೌತಿಕ ಸಂಸ್ಕೃತಿ ಮತ್ತು ಭಾಷೆ

ಸಮುದಾಯದ ಸಂಸ್ಕೃತಿಗೆ ಭೌತಿಕ ಮತ್ತು ಅಭೌತಿಕ ಆಯಾಮಗಳಿರುತ್ತವೆ. ಭೌತಿಕ ಸಂಸ್ಕೃತಿ ಮೂರ್ತವಾದುದು. ಇದು ಕಣ್ಣಿಗೆ ಕಾಣುವ ಸಾಧನಗಳು, ಸಲಕರಣೆಗಳು, ಪೀಠೋಪಕರಣಗಳು, ವಾಹನಗಳು, ಪುಸ್ತಕಗಳು, ಕಟ್ಟಡಗಳು ಮುಂತಾದವನ್ನು ಒಳಗೊಳ್ಳುತ್ತದೆ. ಇವು ಮನುಷ್ಯ ನಿರ್ಮಿತವಾಗಿದ್ದು ಇವನ್ನು ಬಳಸುವ ಜನರೇ ಇವಕ್ಕೆ ಅರ್ಥ ನೀಡುತ್ತಾರೆ. ಇವಕ್ಕೆ ನಿರ್ದಿಷ್ಟ ಅರ್ಥ ನೀಡಲಾದ ಬಳಿಕ ಇವು ಸಂಸ್ಕೃತಿಯ ಭಾಗವಾಗುತ್ತವೆ. ಉದಾಹರಣೆಗೆ, ಕಲ್ಲು. ಇದು ಒಂದೆಡೆಯಲ್ಲಿ ಇದ್ದಾಗ ತನಗೆ ತಾನೇ ಸಂಸ್ಕೃತಿಯಲ್ಲಿ ಇದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಅದೇ ಅರೆಯುವ ಗುಂಡಾಗಿ ಅಥವಾ ದೈವವಾಗಿ ಒಂದು ಸಂಸ್ಕೃತಿ ಇದನ್ನು ಕಾಣಲು ಆರಂಭಿಸಿದೊಡನೆ ಆಯಾ ಸಂಸ್ಕೃತಿಗೆ ಅನುಸಾರವಾಗಿ ಇದು ವಿಶೇಷ ಅರ್ಥವನ್ನು ಸ್ಫುರಿಸುತ್ತದೆ.

ಅಭೌತಿಕ ಸಂಸ್ಕೃತಿ ಅಮೂರ್ತವಾದುದು. ಸಂಸ್ಕೃತಿಯ ಭಾಗವಾಗಿ ಜನರ ನಡವಳಿಕೆ ಮತ್ತು ಯೋಚನಾಕ್ರಮವನ್ನು ಇದು ಒಳಗೊಳ್ಳುತ್ತದೆ. ಆಚರಣೆಗಳು, ಸಂಪ್ರದಾಯ, ಅಭ್ಯಾಸಗಳು, ಹವ್ಯಾಸಗಳು, ನಂಬಿಕೆಗಳು, ಭಾಷೆ, ಸಾಹಿತ್ಯ, ಕಲೆ, ಕಾನೂನು, ಧರ್ಮ ಮುಂತಾದುವನ್ನು ಅಭೌತಿಕ ಸಂಸ್ಕೃತಿಯಡಿಯಲ್ಲಿ ಗಮನಿಸಲಾಗುತ್ತದೆ.

ಭೌತಿಕ ಸಂಸ್ಕೃತಿಯನ್ನು ವಸ್ತುಗಳು ಮತ್ತು ಸಾಮಾಜಿಕ ಸಂಬಂಧಗಳ ನಡುವಣ ಸೂಚಕ ಎಂಬ ನೆಲೆಯಲ್ಲಿ ಅಧ್ಯಯನ ಮಾಡುತ್ತಾ ಬರಲಾಗಿದೆ. ಮಾನವಶಾಸ್ತ್ರೀಯ

ಅಧ್ಯಯನಗಳಲ್ಲಿ ಭೌತಿಕ ಸಂಸ್ಕೃತಿಯ ಅಧ್ಯಯನಕ್ಕೆ ವಿಶೇಷ ಸ್ಥಾನವಿದೆ. ಕ್ಲಾಡ್ ಲೆವಿಸ್ಟ್ರಾಸ್, ಜನರು ತಾವು ಬಳಸುವ ಸಲಕರಣೆಗಳ ಮೂಲಕ ಅರ್ಥದ ಜಗತ್ತೊಂದನ್ನು ಕಟ್ಟಿಕೊಳ್ಳುತ್ತಾರೆ; ಕಣ್ಣಿಗೆ ಕಾಣುವಂತಹ ರೀತಿಯಲ್ಲಿ, ನಿರ್ದಿಷ್ಟವಾಗಿ ಸಾಂಸ್ಕೃತಿಕವಾಗಿ ವಿಂಗಡಣೆ ಮಾಡಿಕೊಳ್ಳಲು, ವ್ಯತ್ಯಾಸಗಳನ್ನು ರಚಿಸಿಕೊಳ್ಳಲು 'ತಾನು' ಮತ್ತು 'ಅನ್ಯ'ವನ್ನು ಗುರುತಿಸಿಕೊಳ್ಳಲು ಅವರು ಈ ವಸ್ತುಗಳನ್ನು ಬಳಸಿಕೊಳ್ಳುತ್ತಾರೆ ಎನ್ನುತ್ತಾರೆ.(೧೯೬೩).[೧]

ಈ ಅಧ್ಯಾಯದಲ್ಲಿ ಜನಸಮುದಾಯ ತನ್ನ ದೈನಂದಿನ ವ್ಯವಹಾರಗಳಲ್ಲಿ ಬಳಸುವ ವಸ್ತುಗಳು, ಆಹಾರ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳು, ಉಡುಗೆ-ತೊಡುಗೆ, ಸಲಕರಣೆಗಳು ಮತ್ತು ಅವುಗಳನ್ನು ಭಾಷಿಕವಾಗಿ ಹೆಸರಿಸಿರುವ ಬಗೆ ಮತ್ತು ಆಯಾ ಸಮುದಾಯಗಳ ವೃತ್ತಿಸಂಬಂಧಿ ಪರಿಕರಗಳ ಪದಗಳನ್ನು ಗುರುತಿಸಿ ಅವುಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಚರ್ಚೆ ನಡೆಸಲಾಗಿದೆ. ಭೌತಿಕ ಸಂಸ್ಕೃತಿಯಡಿಯಲ್ಲಿ ಬರುವ ವಸ್ತುಗಳ ಪಟ್ಟಿಯನ್ನು ನೀಡುತ್ತಾ ಹೋದರೆ ಅದು ಸುದೀರ್ಘವಾದೀತು ಎಂಬ ಕಾರಣಕ್ಕೆ ಇಲ್ಲಿ ವಿಶ್ಲೇಷಣೆಯ ಸಂದರ್ಭದಲ್ಲಿ ಪ್ರಾತಿನಿಧಿಕವಾಗಿ ಒಂದಷ್ಟು ಪದಗಳನ್ನು ಸ್ವೀಕರಿಸಲಾಗಿದೆ. ಅನುಬಂಧದಲ್ಲಿ ಸುದೀರ್ಘವಾದ ಪಟ್ಟಿಯನ್ನು ಕೊಡುವ ಪ್ರಯತ್ನ ಮಾಡಲಾಗಿದೆ.

೩.೧. ಸಂಸ್ಕೃತಿ ಅಧ್ಯಯನದಲ್ಲಿ ಭೌತಿಕ ಸಂಸ್ಕೃತಿಯ ಪಾತ್ರ

ವಸ್ತು ಅಥವಾ ಸಾಧನ, ಸಲಕರಣೆ ಎಂದ ಕೂಡಲೇ ಅದು ಜೀವವಿಲ್ಲದ್ದು ಎಂಬ ಸಂಗತಿ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ಆದರೆ ಇವು ಕೇವಲ ಜಡ ವಸ್ತುಗಳಲ್ಲ. ಸಾಮಾಜಿಕ ಅರ್ಥದ ರೂಪಣೆಯಲ್ಲಿ ಇವು ಪ್ರಮುಖ ಪಾತ್ರ ವಹಿಸುತ್ತವೆ. ಉದಾಹರಣೆಗೆ, ಕೃಷಿಯನ್ನೇ ನಂಬಿ ಬದುಕುವ ಸಮುದಾಯಗಳಲ್ಲಿ ನೇಗಿಲು ಕೇವಲ ವಸ್ತು ಮಾತ್ರವಲ್ಲ, ಬದುಕಿಗೆ ಆಧಾರವಾಗಿರುವಂಥದ್ದು ಎಂಬ ಕಾರಣಕ್ಕೆ ಸಮುದಾಯದ ಬದುಕಲ್ಲಿ ಅದಕ್ಕೆ ವಿಶೇಷ ಸ್ಥಾನವಿರುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳ ಕುರಿತು ಇತ್ತೀಚೆಗೆ ನಡೆದ ಸಮಾಜಶಾಸ್ತ್ರೀಯ ಅಧ್ಯಯನ ಗಳು ಇವುಗಳನ್ನು ಕೇವಲ 'ಒಬ್ಜೆಕ್ಟ್', 'ಮೆಟೀರಿಯಲ್', 'ಆರ್ಟಿಫ್ಯಾಕ್ಟ್' ಎನ್ನುವ ಬದಲಿಗೆ 'ಆಕ್ಟಾಂಟ್ಸ್'[೨] ಎಂಬ ಪದವನ್ನು ಬಳಸಲು ಆರಂಭಿಸಿವೆ. ಈ ಪಾರಿಭಾಷಿಕ ಪದ ಸಾಮಾಜಿಕ ನೆಲೆಯಲ್ಲಿ ಕ್ರಿಯಾಶೀಲವಾಗಿರುವ ಮಾನವ ಮತ್ತು ಮಾನವೇತರ ಅಸ್ತಿತ್ವಗಳನ್ನು ಒಟ್ಟಾಗಿ ಸಂಕೇತಿಸುತ್ತದೆ. ಸಾಮಾಜಿಕ ಅರ್ಥ ರೂಪಣೆಯ ನೆಲೆಯಲ್ಲಿ ಭೌತಿಕ ವಸ್ತುಗಳಿಗೂ ಅಭೌತಿಕ ಸಂಗತಿಗಳಿಗೂ ವ್ಯತ್ಯಾಸವಿಲ್ಲ ಎಂದು ಇವರು ಪ್ರತಿಪಾದಿಸುತ್ತಾರೆ.

'ಭೌತಿಕ ಸಂಸ್ಕೃತಿಯ ಅಧ್ಯಯನ ಸಾಮಾಜಿಕ ಸಂಬಂಧಗಳನ್ನು ನಿರ್ದೇಶಿಸುವಲ್ಲಿ, ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸುವಲ್ಲಿ, ಮಾನವ ಚಟುವಟಿಕೆಗಳಿಗೆ ಸಾಂಕೇತಿಕ

ಅರ್ಥ ನೀಡುವಲ್ಲಿ ವಸ್ತುಗಳ ಪಾತ್ರ ಏನು ಎಂಬ ಕಡೆಗೆ ಒತ್ತು ನೀಡುತ್ತದೆ' (Woodword Ian;2007; p:3). ಅಂದರೆ ಈ ಭೌತಿಕ ವಸ್ತುಗಳೊಂದಿಗೆ ಉಪಯುಕ್ತತೆಯ ಪರಿಧಿಯಾಚೆಗೆ ಸಮುದಾಯ ಬೇರೆ ಯಾವ ಬಗೆಯಲ್ಲಿ ಸಂಬಂಧ ಸ್ಥಾಪಿಸಿಕೊಳ್ಳುತ್ತದೆ ಎಂಬುದನ್ನು ಶೋಧಿಸುವ ನಿಟ್ಟಿನಲ್ಲಿ ಮಾನವಶಾಸ್ತ್ರಜ್ಞರು ಅಧ್ಯಯನ ನಡೆಸಿದ್ದಾರೆ. ಹೇಗೆ ವಸ್ತುಗಳು ಮಾನಸಿಕ ಬಿಂಬಗಳಾಗಿ ರೂಪುಗೊಳ್ಳುತ್ತವೆ, ಹೇಗೆ ಅವುಗಳ ರೂಪಕಾತ್ಮಕ ವಿಸ್ತರಣೆ ನಡೆಯುತ್ತದೆ ಮುಂತಾದ ವಿಷಯಗಳ ಕುರಿತು ಮನಃಶಾಸ್ತ್ರಜ್ಞರ ಜೊತೆಗೆ ಪುರಾತತ್ವಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರೂ ಕೂಡಿ ಚಿಂತನೆ ನಡೆಸಿದ್ದಾರೆ.

ವಸ್ತುಗಳ ಜೊತೆಗಿನ ಜನರ ಸಂಬಂಧ ಮತ್ತು ಅವರು ವಸ್ತುಗಳನ್ನು ಅವರು ಗ್ರಹಿಸುವ ರೀತಿ ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗುತ್ತದೆ. ಹೀಗಾಗಿ ಸಂಸ್ಕೃತಿಯ ಅನನ್ಯತೆಯನ್ನು, ರಚನೆಯನ್ನು ಗುರುತಿಸುವಲ್ಲಿ ಭೌತಿಕ ಸಂಸ್ಕೃತಿಯ ಅಧ್ಯಯನಕ್ಕೆ ವಿಶೇಷ ಸ್ಥಾನವಿದೆ. ಸಂಸ್ಕೃತಿ ಎನ್ನುವುದು 'ರಚಿತ'[3]ವಾದದ್ದು ಮತ್ತು ವಸ್ತುಗಳ ಮೂಲಕ ಹೇಗೆ ಜೀವಂತವಾಗಿರುವಂಥದ್ದು ಎಂದು ಅಧ್ಯಯನ ಮಾಡುವುದರ ಮೂಲಕ ಸಾಮಾಜಿಕ ರಚನೆ ಮಾತ್ರವಲ್ಲ ಅಸಮಾನತೆ, ಸಾಮಾಜಿಕ ತಾರತಮ್ಯ, ಮಾನವ ಚಟುವಟಿಕೆಗಳು, ಭಾವನೆಗಳು ಮತ್ತು ಅರ್ಥೈಸುವಿಕೆ ಮುಂತಾದ ವಿಸ್ತೃತ ಆಯಾಮಗಳನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು (Woodword Ian; 2007;p:4).

೩.೨. ಭೌತಿಕ ಸಂಸ್ಕೃತಿ ಮತ್ತು ಭಾಷೆ

ಭೌತಿಕ ವಸ್ತುಗಳನ್ನು ಪ್ರಜ್ಞೆಯ ಮೂಲಕ ಗ್ರಹಿಸಿ ಸಮುದಾಯಗಳು ಅವುಗಳನ್ನು ಭಾಷೆಯ ಮೂಲಕ ಗುರುತಿಸುತ್ತವೆ. ಹೆಸರಿಸುವ ಪ್ರಕ್ರಿಯೆ ನಡೆಯುವುದೇ ಭಾಷೆ ಮೂಲಕ. ಸಮುದಾಯಗಳು ವಸ್ತುಗಳನ್ನು ಹೆಸರಿಸುವ ಬಗೆ ಹೇಗೆ, ಹೆಸರಿಸುವ ಪ್ರಕ್ರಿಯೆಯನ್ನು ಗಮನಿಸುವ ಮೂಲಕ ಸಮುದಾಯಗಳ ಅನನ್ಯತೆ ಮತ್ತು ಚಲನೆಯನ್ನು ಹೇಗೆ ಗ್ರಹಿಸಲು ಸಾಧ್ಯ ಎಂಬುದು ಭಾಷೆ ಮತ್ತು ಭೌತಿಕ ಸಂಸ್ಕೃತಿಗೆ ಸಂಬಂಧಿಸಿದಂತೆ ಇಡಬಹುದಾದ ಮೊದಲ ಹೆಜ್ಜೆ. ಹೀಗೆ ಹೆಸರಿಸುವಾಗಲೂ ಅವು ಬಿಡಿಯಾಗಲ್ಲದೆ ಸಂಕೀರ್ಣವಾಗಿ, ಒಂದು ನಿಗದಿತ ವಿನ್ಯಾಸದಲ್ಲಿ ಕ್ರಮಬದ್ಧವಾಗಿ ಹೇಗೆ ಜೋಡಣೆಗೊಂಡಿವೆ ಎಂಬುದೂ ಮುಖ್ಯ.

ಆರಂಭದ ಹಂತದಲ್ಲಿ ವಿವರಿಸಿದ ಹಾಗೆ ಭಾಷೆ ಮತ್ತು ಮಾತು ಇವುಗಳ ನಡುವೆ ವ್ಯತ್ಯಾಸಗಳಿವೆ. ಭಾಷೆ ಪೂರ್ಣವಾಗಿ ಶಾಬ್ದಿಕ ರೂಪದಲ್ಲಿ ಇರಬೇಕಾಗಿಲ್ಲ. ಸಂಕೇತ, ಸಂಜ್ಞೆ ಎಲ್ಲವೂ ಭಾಷೆಯ ಪರಿಧಿಯಲ್ಲಿ ಬರುತ್ತದೆ. ಈ ನೆಲೆಯಲ್ಲಿ ಭೌತಿಕ ಸಂಸ್ಕೃತಿಯಡಿಯಲ್ಲಿ

ಬರುವ ವಸ್ತುಗಳು ಸಂಕೇತಗಳಾಗಿ ಸಂವಹನ ನಡೆಸುತ್ತವೆ. ಇವನ್ನು ಸಂಕೇತಗಳಾಗಿ ಅಥವಾ ರೂಪಕವಾಗಿ ಗ್ರಹಿಸುವಲ್ಲಿ ಭಾಷೆಯ ಪಾತ್ರವಿದೆ.

ಹೀಗಾಗಿ ಎರಡನೆಯದಾಗಿ, ಭೌತಿಕ ಸಂಸ್ಕೃತಿಯ ಪರಿಕರಗಳು ಸಾಮಾಜಿಕ ನಡವಳಿಕೆ, ಆಚರಣೆಗಳಲ್ಲಿ ಸೇರಿಹೋಗಿದ್ದು ಸಂವಹನ ಮಾಧ್ಯಮವಾಗಿಯೂ ಕೆಲಸ ಮಾಡುತ್ತವೆ. ಇವುಗಳನ್ನು ಸಾಮಾಜಿಕವಾದ ತಿಳಿವನ್ನು ಕಾಪಿಡಲು, ಪರಿವರ್ತಿಸಲು, ದಾಖಲು ಮಾಡಲು ಬಳಸಿಕೊಳ್ಳುತ್ತಾ ಬರಲಾಗಿದೆ. ಈ ನಿಟ್ಟಿನಲ್ಲಿ ಇವನ್ನು ಒಂದು ಬಗೆಯ ಪಠ್ಯವಾಗಿಯೂ ಕಾಣಬಹುದು. ಇವು ಬರಹ ಅಥವಾ ಸಂಕಥನದ ಶಬ್ದರಹಿತವಾದ ರೂಪ. ವಸ್ತುಮೂಲಕ ಅಭಿವ್ಯಕ್ತಿಗೆ ಒಂದು ದಾರಿ. ಭಾಷೆ ಎಂದರೆ ಸಂವಹನ ಸಾಧನ ಎಂಬ ವಿಶಾಲಾರ್ಥದಲ್ಲಿ ನೋಡಿದಾಗ ವಸ್ತುಗಳ ಸಂವಹನ ಗುಣವನ್ನು ಈ ನೆಲೆಯಲ್ಲಿ ಗಮನಿಸಬಹುದು.

ಮೂರನೆಯದಾಗಿ, ಭಾಷೆ ಹೇಗೆ ಒಂದು ಹಂತದಲ್ಲಿ ಜಗತ್ತಿನ ರೂಪಕಾತ್ಮಕ ಸಂರಚನೆಯೋ ಹಾಗೆಯೇ ಭೌತಿಕ ಸಂಸ್ಕೃತಿಯೂ. ವಸ್ತುಗಳು ತಮ್ಮಷ್ಟಕೆ ತಾವೇ 'ಭೌತಿಕ ರೂಪಕ'ಗಳಾಗಿವೆ. ಈ ಭೌತಿಕ ರೂಪಕಗಳನ್ನು ನಾವು 'ಭಾಷಿಕ ರೂಪಕ'ಗಳಾಗಿ ಪರಿವರ್ತಿಸುತ್ತೇವೆ. ಒಂದು ಚಿತ್ರ, ಕತೆ ಅಥವಾ ಮೂರ್ತ ವಸ್ತುಗಳನ್ನು ಅಮೂರ್ತ ಸಂಗತಿಗಳನ್ನು ಸೂಚಿಸಲು ಬಳಸುವಲ್ಲಿ ರೂಪಕಗಳ ಸೃಷ್ಟಿಯಾಗುತ್ತದೆ ಎಂಬುದು ತಿಳಿದಿರುವ ಸಂಗತಿ. ವಸ್ತುಗಳು ತಮ್ಮ ಮೂಲ ನೆಲೆಯನ್ನು ಹೊರತುಪಡಿಸಿ ಇನ್ನೇನನ್ನೋ ಸೂಚಿಸಲು ಬಳಕೆಯಾದಾಗ ಅವುಗಳ ಅರ್ಥ ವಿಸ್ತರಣೆಯಾಗುತ್ತದೆ. ಇವು ಪ್ರಕಟವಾಗುವುದು ಭಾಷೆಯ ಮೂಲಕ. ಉದಾಹರಣೆಗೆ, ಕಲ್ಲು ಹೃದಯ ಎಂದಾಗ ಮೂಲತಃ ಕಲ್ಲಿನ ಮೆದುವಾಗದ ಗಟ್ಟಿತನವನ್ನು ಮನಸ್ಸಿನ ಕಠೋರತೆಗೆ ಹೋಲಿಸಿ ಮೂಲ ವಸ್ತುವಿನ ಅರ್ಥವನ್ನು ಬೇರೇನೋ ಅಮೂರ್ತವಾದುದನ್ನು ಸೂಚಿಸುವಲ್ಲಿ ವಿಸ್ತರಿಸಲಾಗಿದೆ.

ಇದನ್ನು ಮನಃಶಾಸ್ತ್ರಜ್ಞರು ಹೀಗೆ ವಿವರಿಸಿದ್ದಾರೆ, "ಗುಣವನ್ನು ಇಂದ್ರಿಯ ಗ್ರಹಿಸಿ ಆ ಹಂತದಲ್ಲಿ ಅದಕ್ಕೊಂದು ಹೆಸರು ನೀಡಲಾಗುತ್ತದೆ. ಬಳಿಕ ಈ ಗುಣವನ್ನು ಇನ್ನೂ ಬೇರೆ ಇಂದ್ರಿಯಗಳ ಮೂಲಕ ಗ್ರಹಿಸುವ ಇನ್ನೂ ಅನೇಕ ಸಂಗತಿಗಳಲ್ಲಿ ಗುರುತಿಸಲಾಗುತ್ತದೆ. ಮೂಲ ಹೆಸರು ಈ ಗುಣವಿರುವ ಇತರ ಸಂಗತಿಗಳಿಗೂ ಅನ್ವಯಿಸುವ ಹಾಗೆ ವಿಸ್ತೃತವಾಗಿ ಬಳಕೆಯಾಗುತ್ತದೆ" (Brown Roger;1959;p:154) ಎಂಬ ಸಂಗತಿಯನ್ನು ಇಲ್ಲಿ ಗಮನಿಸಬೇಕು.

ಈ ಮೂರು ಹಂತಗಳಲ್ಲಿ ಕೋಟ ಭಾಷಿಕ ಸಮುದಾಯದ ಭೌತಿಕ ಸಂಸ್ಕೃತಿ ಮತ್ತು ಭಾಷೆಯ ನಡುವಣ ಸಂಬಂಧದ ಎಳೆಗಳನ್ನು ಶೋಧಿಸಲಾಗಿದೆ.

೩.೩. ಕೋಟ ಭಾಷಿಕ ಪರಿಸರದ ಭೌತಿಕ ಸಂಸ್ಕೃತಿ ಮತ್ತು ಭಾಷೆ

ದಿನನಿತ್ಯದ ಬದುಕಿನಲ್ಲಿ ಬಳಸುವ ವಸ್ತು, ಉಪಕರಣ, ಸಲಕರಣೆಗಳ ಭಾಷಿಕ ರೂಪ ಇಲ್ಲಿನ ಜನಸಮುದಾಯದ ಬದುಕಿನ ಕುರಿತು ಏನನ್ನು ಸೂಚಿಸುತ್ತದೆ ಎಂಬುದನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ.

೩.೩.೧. ಉಡುಗೆ-ತೊಡುಗೆ

ಕೃಷಿಯೇ ಮೂಲ ಕಸುಬಾಗಿದ್ದ ಈ ಜನಸಮುದಾಯದ ದಿನನಿತ್ಯದ ಉಡುಪು ತೀರಾ ಸರಳ. ಹೆಂಗಸರ ಉಡುಗೆ 'ಶ್ಯಾಲಿ'[೪], 'ಸೀರಿ', 'ರವ್ಕಿ' ಆದರೆ ಗಂಡಸರು 'ಪಂಜಿ'[೫], 'ಧೋತರ', 'ಮುಂಡಾಸು'ಗಳನ್ನು ಧರಿಸುತ್ತಿದ್ದರು. ದಿನನಿತ್ಯದ ಕೆಲಸದ ಸಂದರ್ಭದಲ್ಲಿ ಗಂಡಸರು ಅಂಗಿ ಧರಿಸುತ್ತಿದ್ದುದು ಕಡಿಮೆ. ಒಟ್ಟಾರೆಯಾಗಿ ಉಡುಗೆಗೆ ಇಲ್ಲಿನ ಜನರು ಬಳಸುತ್ತಿದ್ದ ಪದ 'ದುಸ್ತು'.

ಸಣ್ಣ ಪ್ರಾಯದ ಹೆಣ್ಣುಮಕ್ಕಳು ಧರಿಸುವ ಸೀರೆಗೆ 'ಕಿರಿಸೀರೆ' ಅಥವಾ 'ಕಿರಿಗಿ' ಎಂದು ಕರೆಯುತ್ತಾರೆ. ಇವರು ಲಂಗ ದಾವಣಿಯನ್ನೂ ಧರಿಸುತ್ತಿದ್ದರು. ಸಣ್ಣ ಪ್ರಾಯದ ಗಂಡು ಮಕ್ಕಳು ಧರಿಸುವ ವಸ್ತ್ರ 'ಪಂಜಿ' ಮತ್ತು 'ಅಂಗಿ', 'ಚಡ್ಡಿ'.

ವಿಶೇಷ ಸಂದರ್ಭಗಳಲ್ಲಿ 'ಪಟ್ಟೆ', 'ಪೀತಾಂಬರ', 'ಮುಂಡಾಸು', 'ಶಾಲು', 'ವಲ್ಲಿ', 'ಪಗಡಿ' ಇತ್ಯಾದಿಗಳನ್ನು ಧರಿಸುತ್ತಿದ್ದರು. ಮಾತಾಡುವ ಸಂದರ್ಭದಲ್ಲಿ ಮತ್ತು ಜನಪದ ಸಾಹಿತ್ಯದ ಸಂದರ್ಭದಲ್ಲಿ ವಿಶೇಷ ಸಂದರ್ಭಗಳ ಪ್ರಸ್ತಾಪ ಬಂದಾಗ ಒಂದು ಆವರಣ ನಿರ್ಮಿಸುವಲ್ಲಿ ವಿಶೇಷವಾದ ಉಡುಗೆ ತೊಡುಗೆಗಳ ಪ್ರಸ್ತಾಪ ಗಮನಿಸಬಹುದಾಗಿದೆ.

'ವಾಲಿ',[೬] 'ಕರಿಮಣಿ', 'ಮಣ್ಣಿನ ಬಳಿ', 'ಕಾಲುಂಗಿಲ', 'ಮೂಗುತಿ', 'ನತ್ತು' ಇವೇ ಹೆಂಗಸರ ಆಭರಣಗಳು. ಗಂಡಸರು ಕಿವಿಗೆ ಧರಿಸುವ ಚಿಕ್ಕ ಆಭರಣವನ್ನು 'ವಂಟಿ' ಅಥವಾ 'ಮುರು' ಎನ್ನುತ್ತಿದ್ದರು. ಮಕ್ಕಳೂ 'ಕೆಮಿವಂಟಿ', 'ಕುಡ್ಕ್', 'ಮುರು' ಮುಂತಾದವನ್ನು ಧರಿಸುತ್ತಿದ್ದರು. ಉಳ್ಳವರ ಮಕ್ಕಳ ಸೊಂಟಕ್ಕೆ 'ನ್ಯಾಗಾಳ'[೭] ಹಾಕುತ್ತಿದ್ದರು.

ವಿಶೇಷ ಸಂದರ್ಭಗಳ ಆಭರಣಗಳು, 'ಒಡ್ಯಾಣ', 'ವಂಕಿ', 'ಜಿಮ್ಕಿ', 'ಚಕ್ರ ಸರು', 'ಐರಾವ್ಳಿ ಸರು'[೮] ಮುಂತಾದವು.

ಗಂಡಸರಿಗಿಂತ ಹೆಂಗಸರು ಧರಿಸುವ ಆಭರಣಗಳು ಹೆಚ್ಚು ಎನ್ನುವ ಸಂಗತಿ ಹೆಂಗಸರ ಶೃಂಗಾರ, ರೂಪಕ್ಕೆ ಎಷ್ಟು ಪ್ರಾಮುಖ್ಯ ಇತ್ತು ಎಂಬುದನ್ನು ತಿಳಿಸುತ್ತದೆ. ಇದು ಅವರನ್ನು ಸೌಂದರ್ಯದ ನೆಲೆಯಲ್ಲೇ ನೋಡುವ ಬಗೆಯನ್ನು ತಿಳಿಸುತ್ತದೆ.

ಸಮುದಾಯದ ಮುಖ್ಯ ಉದ್ಯೋಗಕ್ಕೂ ಅಲ್ಲಿನ ಉಡುಗೆ ತೊಡುಗೆಗಳಿಗೂ ನೇರ ಸಂಬಂಧವಿದೆ. ದಿನನಿತ್ಯದಲ್ಲಿ ಶ್ರಮಿಕ ಸಮುದಾಯಗಳು ತೊಡುಗೆಗಳಿಗೆ ಅಂತಹ ಪ್ರಾಮುಖ್ಯ ವನ್ನು ಕೊಡುವುದು ಸಾಧ್ಯವಿಲ್ಲ. ವಿಶೇಷ ಉಡುಗೆ ತೊಡುಗೆಗಳು ಉಳ್ಳವರ ಸ್ವತ್ತು. ಇದನ್ನು ಸೂಚಿಸುವ ಅನೇಕ ಉದಾಹರಣೆಗಳು ಭಾಷಿಕವಾಗಿ ದೊರೆಯುತ್ತವೆ. ವಿಶೇಷ ಸಂದರ್ಭಗಳಲ್ಲಿ ಧರಿಸುವ ಆಭರಣಗಳು 'ಒಡೀರ' ಮನೆಯಿಂದ ತರುವಂಥವು. ಎರಡನೆಯದಾಗಿ, ಮೇಲ್ವರ್ಗ ದವರನ್ನು ಬಣ್ಣಿಸುವಾಗ ಇವುಗಳ ಪ್ರಸ್ತಾಪ ಬರುತ್ತದೆ. ಸೂಳೆಯರ ಬಗ್ಗೆ ಹೇಳುವಾಗಲೂ ಶೃಂಗಾರದ ಜೊತೆಗೆ ವಿಶೇಷ ಉಡುಗೆ ತೊಡುಗೆಗಳ ಪ್ರಸ್ತಾಪ ಬರುತ್ತದೆ.

ವಿಶೇಷವಾದ ಒಡವೆಗಳು ಎಲ್ಲರ ಮನೆಯಲ್ಲೂ ಇರುತ್ತಿರಲಿಲ್ಲ. ಅನುಕೂಲಸ್ಥ ಬ್ರಾಹ್ಮಣರು ಮತ್ತು ಬಂಟರ ಮನೆಗಳಲ್ಲಿ ಒಡವೆಗಳು ಇರುತ್ತಿದ್ದವು. ಒಕ್ಕಲಿನವರು ವಿಶೇಷ ಸಂದರ್ಭಗಳಲ್ಲಿ ಅಲ್ಲಿಂದ ಕೇಳಿ ತಂದು ಒಡವೆಗಳನ್ನು ಹಾಕುತ್ತಿದ್ದರು.

ಜನಪದ ಸಾಹಿತ್ಯದಲ್ಲಿ ನೋಡಿದಾಗ ಮೇಲ್ವರ್ಗದವರನ್ನು ಬಣ್ಣಿಸುವಾಗ ವಿಶೇಷವಾದ ಉಡುಗೆಗಳ ಪ್ರಸ್ತಾಪ ಬರುವುದನ್ನು ಗಮನಿಸಬಹುದು. ತೊಳಸಿ ಪೂಜೆಯ ಹಾಡಿನಲ್ಲಿ ಮನೆಯ ಯಜಮಾನ ದಣಿಯ ಮನೆಗೆ ಬರುವಾಗಿನ ಹಾಡು;

ಬಂಗಾರ್ ನಡು ಬಳ್ಕುತ್ತಾ
ಸರಿಗೀ್ ತೋಳೇ ಬೀಸುತ್ತಾ
ಉಂಗಿಲ್ ಬೆರಳೇ ಹೊಳ್ಸುತ್ತಾ
ವಂಟಿ ಕೆಮಿನೇ ಆಡ್ಸ್ತಾ
ಗಚ್ಚಿನ ರುಮಾಲಿ ಮೆರ್ಸುತ್ತಾ

ಅದೇ ಕೊರತಿ ಕಂಚಿಯ ಕತೆಯಲ್ಲಿ ಕೊರತಿ ಕೆಲಸಕ್ಕೆ ಹೊರಟ ವರ್ಣನೆ ಬರುವಾಗ

ಚಂಡಿ‌ಯಾದ್ರೂ ಸುತ್ತಿದಳೊ
ನೆತ್ತಿ ಮ್ಯಾಲೆ ಬೆಚ್ಚಿದಳೊ
ಮುಟ್ಟೆ ಕುಕ್ಕಿ ಹೊತ್ತಳೋ

ಎಂಬ ವಿವರಣೆ ಬರುತ್ತದೆ

ಆಧುನಿಕ ಸಂದರ್ಭದಲ್ಲಿ 'ಚೂಡಿದಾರ್', 'ಪ್ಯಾಂಟು', 'ಶರ್ಟು'ಗಳು ಇಂದು ಹಳೆಯ ಉಡುಗೆಗಳ ಜಾಗಕ್ಕೆ ಬಂದಿವೆ. ಹಾಗೆಯೇ ಹಳೆಯ ಒಡವೆಗಳ ಜಾಗದಲ್ಲಿ ಆಧುನಿಕ ಒಡವೆಗಳು ಬಂದಿವೆ. ಇಂದು ಯಾರು ಆರ್ಥಿಕವಾಗಿ ಸಬಲರಾಗಿದ್ದಾರೋ ಅಂಥವರ ಮನೆಯಲ್ಲಿ ವಿವಿಧ ಬಗೆಯ ಒಡವೆಗಳನ್ನು ಕಾಣಬಹುದು.

ಉಡುಗೆ-ತೊಡುಗೆಗಳ ಹೆಸರುಗಳು ಕೇವಲ ಆ ವಸ್ತುಗಳನ್ನು ಸೂಚಿಸಲು ಇರುವ ಪದಗಳು ಮಾತ್ರವಲ್ಲ, ಅವು ಇನ್ನಿತರ ಅನೇಕ ಆಯಾಮಗಳಲ್ಲಿ ಅರ್ಥಗಳನ್ನು ಹೊರಡಿಸುತ್ತವೆ. ಈ ಪದಗಳಿಗಿರುವ ವಿಶಾಲ ಅರ್ಥಸಾಧ್ಯತೆಗಳ ಪಟ್ಟಿಯಲ್ಲಿ ಪ್ರಮುಖವಾದವನ್ನು ಇಲ್ಲಿ ಗುರುತಿಸಲಾಗಿದೆ.

ಸೌಂದರ್ಯ: ಕೆಲವು ತೊಡಿಗೆಗಳನ್ನು ಸೌಂದರ್ಯಕ್ಕೆ ರೂಪಕವಾಗಿ ಬಳಸಲಾಗುವುದನ್ನು ಆಡುಮಾತಿನಲ್ಲಿ ಮತ್ತು ಜನಪದ ಸಾಹಿತ್ಯದಲ್ಲಿ ಕಾಣಬಹುದು. ಉದಾಹರಣೆಗೆ, ವ್ಯಕ್ತಿಯ ಸೌಂದರ್ಯವನ್ನು ಹೆಚ್ಚುಗೊಳಿಸಲು ಉಡುಗೆ ತೊಡುಗೆಗಳನ್ನು ಬಳಸಲಾಗುತ್ತದೆ. 'ಮುತ್ತಿನ್ವಾಲಿ', 'ಕಾಡಿಗಿ', 'ಅರಶಿನ' ಇವೆಲ್ಲ ಶೃಂಗಾರ ಸಾಮಗ್ರಿಗಳು. ಇವು ಬಂದಾಗ ಅಲಂಕಾರ, ಸೌಂದರ್ಯದ ಕಲ್ಪನೆ ನಮ್ಮ ಮುಂದೆ ಮೂಡುತ್ತದೆ.

ವಿಶೇಷ ಸಂದರ್ಭ: ಈ ವಿಶೇಷ ಉಡುಗೆ ತೊಡುಗೆಗಳ ಪ್ರಸ್ತಾಪ ಬಂದಾಗ ವಿಶೇಷ ಸಂದರ್ಭದ ಕಲ್ಪನೆ ಮನಸ್ಸಲ್ಲಿ ಮೂಡುತ್ತದೆ. 'ಪಟ್ಟೆ ಸೀರೆ', 'ಕಾಲೆಜ್ಜೆ', 'ಒಡ್ಯಾಣ' ಮುಂತಾದ ಪದಗಳು ಸಾಮಾನ್ಯ ಸಂದರ್ಭಕ್ಕಿಂತ ವಿಶೇಷವಾದ ಸಂದರ್ಭದ ಚಿತ್ರವನ್ನು ನಮ್ಮ ಮುಂದೆ ಕಟ್ಟಿಕೊಡುತ್ತವೆ.

ಶ್ರೀಮಂತಿಕೆ ಮತ್ತು ಪ್ರತಿಷ್ಠೆ: ಕೆಲವು ವಿಶೇಷ ತೊಡಿಗೆಗಳು ಪ್ರತಿಷ್ಠೆಯ ದ್ಯೋತಕವಾಗಿ ಬಳಕೆಯಾಗುತ್ತವೆ ಮತ್ತು ಅವು ಅವನ್ನು ಧರಿಸಿದ ವ್ಯಕ್ತಿಯ ಮಹತ್ವವನ್ನು ಸಾರುತ್ತವೆ. ಉದಾಹರಣೆಗೆ, 'ರುಮಾಲು', 'ಚಿನ್ನದ ಸರಪಣಿ', 'ಮುಂಡಾಸ್' ಇತ್ಯಾದಿ. ಮುಂಡಾಸು ಎಂಬ ಪದ ಬಂದಾಗ ಅದನ್ನು ಧರಿಸಿದ ವ್ಯಕ್ತಿಯ ಸಾಮಾಜಿಕ ಮಹತ್ವ ಮನಸ್ಸಿನಲ್ಲಿ ಮೂಡುತ್ತದೆ. ಇದಕ್ಕೆ ಉದಾಹರಣೆಯಾಗಿ ಚೇಂಪಿಯ ಹೇರಳೆ ಮನೆತನದ ಯಜಮಾನನನ್ನು 'ಮುಂಡಾಸ್ ಹೇರಳೆಯವರು' ಎಂದೇ ಕರೆಯುತ್ತಾ ಬಂದಿರುವುದನ್ನು ಗಮನಿಸಬಹುದು. ಹಾಗೆಯೇ 'ಮುಂಡಾಸ್ ಕಾರಂತ್ರು' ಎಂದು ಕರೆಯುವ ರೀತಿ ಇತ್ತು. ಇದು ಸಾಮಾಜಿಕವಾಗಿ ಅವರಿಗಿರುವ ಸ್ಥಾನಮಾನವನ್ನು ಹೇಳಿದರೆ ಬೆಲೆಬಾಳುವ ಆಭರಣಗಳು ವ್ಯಕ್ತಿಯ ಶ್ರೀಮಂತಿಕೆ ಯನ್ನು ಸಾರುತ್ತವೆ.

ಸಾಂಸ್ಕೃತಿಕ ಮಹತ್ವ: ಕೆಲವು ಉಡುಗೆ ತೊಡುಗೆಗಳು ಕೇವಲ ಅನುಕೂಲಕ್ಕಾಗಿ ಅಥವಾ ಚೆನ್ನಾಗಿ ಕಾಣಲು ತೊಡುವಂಥವಲ್ಲ, ಅವಕ್ಕೆ ಸಂಸ್ಕೃತಿಯಲ್ಲಿ ವಿಶೇಷ ಮಹತ್ವ ಇರುತ್ತದೆ. ಉದಾಹರಣೆಗೆ, 'ಮೂಗುತಿ', 'ಕರಿಮಣಿ', 'ತಾಳಿ', 'ಕಾಲುಂಗಿಲ' ಇವೆಲ್ಲ ಮದುವೆಯಾದ ಹೆಣ್ಣು ತನ್ನ ಪತಿ ಇದ್ದಾಗ ಧರಿಸುವ ಒಡವೆಗಳು. ಆಕೆ ಸದಾ ಇವನ್ನು ಧರಿಸಬೇಕಾಗುತ್ತದೆ. ಆ ಭಾಷೆಯಲ್ಲಿ ಇವು ಮಂಗಳ ಸೂಚಕ ಪದಗಳು. ಕರಿಮಣಿ ತುಂಡಾದರೆ ಅದನ್ನು

ಹೇಳುವುದೂ ಅಪಶಕುನ ಎಂದು ಅವರು ಭಾವಿಸುತ್ತಾರೆ. ಧರಿಸದಿದ್ದರೆ ಅಮಂಗಳ ಎಂದು ಭಾವಿಸಲಾಗುತ್ತದೆ. 'ನಿನ್ ವಾಲಿ ಕಳಿಯ' ಎಂಬ ಬೈಗುಳ ಇರುವುದನ್ನು ಗಮನಿಸಬಹುದು. ಅಂದರೆ ನೀನು ಗಂಡನನ್ನು ಕಳೆದುಕೊಂಡು ಮುಂಡೆಯಾಗು ಎಂಬ ಶಾಪದ ರೂಪದಲ್ಲಿ ಈ ಬೈಗುಳ ಪ್ರಯೋಗವಾಗುತ್ತದೆ.

ಅನನ್ಯತೆ: ಉಡುಗೆ ತೊಡುಗೆಗಳಲ್ಲಿ ಕೆಲವು ಅನನ್ಯತೆಯ ಸೂಚಕಗಳಾಗಿರುತ್ತವೆ. ಉದಾಹರಣೆಗೆ, 'ಜನ್ಯಾರ'[೧೨] ಎಂದ ತಕ್ಷಣ ಆತ ಬ್ರಾಹ್ಮಣ ಎಂಬುದು ತಿಳಿಯುತ್ತದೆ. ಹಾಗೆಯೇ 'ಕರಿಮಣಿ' ಮುತ್ತೈದೆಯ ಲಕ್ಷಣವಾದರೆ, ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆಗೆ ಬ್ರಾಹ್ಮಣರು 'ಅಂಗೋಸ್ತ್ರ'[೧೩] ಎನ್ನುತ್ತಾರೆ. ಇವು ಅನನ್ಯತೆಯ ಸೂಚಕಗಳಾಗಿವೆ.

ಸ್ಥಿತ್ಯಂತರ: ಆಧುನಿಕತೆಯ ಮೂಲಕ ಬಂದ 'ಪ್ಯಾಂಟು', 'ಚೂಡಿದಾರ್', 'ಮಿಡಿ', 'ಡಿಸ್ಕೋ ಚೈನು' ಮುಂತಾದವುಗಳು ಸ್ಥಿತ್ಯಂತರ ಸೂಚಕ ಪದಗಳಾಗಿವೆ. ಆಧುನಿಕತೆಯ ಮೂಲಕ ಬಂದ ಬಹುತೇಕ ಉಡುಗೆ ತೊಡುಗೆಗಳಿಗೆ ಇಲ್ಲಿನ ಭಾಷೆ ಸಮಾನಾಂತರವಾದ ಪದವನ್ನೇನೂ ಸೃಷ್ಟಿಸಿಲ್ಲ. ಜೊತೆಗೆ ಇವು ಅನನ್ಯತೆಯ ಸೂಚಕಗಳಾಗಿಲ್ಲ ಎನ್ನುವುದನ್ನೂ ಇಲ್ಲಿ ಗಮನಿಸಬಹುದಾಗಿದೆ.

೩.೩.೨. ಗೃಹೋಪಯೋಗಿ ಪರಿಕರಗಳು ಮತ್ತು ಸಲಕರಣೆಗಳು

ಆಹಾರ ಸಂಸ್ಕೃತಿಯ ಪರಿಕರಗಳು: ಅಡುಗೆ ಮನೆಯಲ್ಲಿ ದಿನನಿತ್ಯ ಅಡುಗೆಗೆ ಬಳಸುವ ಪರಿಕರಗಳ ವಿಚಾರಕ್ಕೆ ಬಂದಾಗ ಹಿಂದೆ ಮರದ ಮತ್ತು ಮಣ್ಣಿನ ಪಾತ್ರೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. 'ಅಳಗಿ',[೧೪] 'ಮಡಿಕಿ', 'ಕ್ವಾರ್ಕಿ'[೧೫] ಮುಂತಾದವುಗಳು. ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು ತುಸು ಅನುಕೂಲಸ್ಥರ ಮನೆಗಳಲ್ಲಿದ್ದವು. ಇನ್ನು ವಿಶೇಷ, ಗೌರವ ಮತ್ತು ಪ್ರತಿಷ್ಠೆಯ ಸಂಕೇತವಾಗಿ ಚಿನ್ನ, ಬೆಳ್ಳಿಯ ಪಾತ್ರೆಗಳನ್ನು ಕಾಣಬಹುದು.

ಮರದ ಮತ್ತು ಮಣ್ಣಿನ ಪಾತ್ರೆಗಳು ತಳಸಮುದಾಯದವರ ಜೊತೆ ಹೆಚ್ಚು ಬೆಸೆದುಕೊಂಡಿದೆ. ಬ್ರಾಹ್ಮಣರು ಮತ್ತು ಆರ್ಥಿಕವಾಗಿ ಮೇಲಿರುವ ಇತರ ಜಾತಿಗಳವರ, ವಿಶೇಷವಾಗಿ ಬಂಟರ ಮನೆಗಳಲ್ಲಿ ತಾಮ್ರ, ಹಿತ್ತಾಳೆ ಪಾತ್ರೆಗಳನ್ನು ಕಾಣುತ್ತೇವೆ. ಇಲ್ಲೂ ಅವಲಂಬಿಸಿರುವ ಉದ್ಯೋಗ ಪ್ರಮುಖವಾದ ಸಂಗತಿಯಾಗುತ್ತದೆ. ಆದರೆ ಇಲ್ಲೂ ಕೃಷಿಯಲ್ಲಿ ತೊಡಗಿಕೊಂಡ ಬ್ರಾಹ್ಮಣರು ಮತ್ತು ಇತರ ಸಮುದಾಯದವರು ಬಳಸುವ ಪಾತ್ರೆಗಳು ಮತ್ತು ಅವರ ಪದಬಳಕೆಗೆ ಅಂತಹ ವ್ಯತ್ಯಾಸವಿರುವುದಿಲ್ಲ. ಅದೇ ಇತರ ಉದ್ಯೋಗಗಳನ್ನಾಯ್ದುಕೊಂಡ ಸಮುದಾಯಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ.

ಇಂದು ಮಣ್ಣು ಮತ್ತು ಮರದ ಪಾತ್ರೆಗಳ ಜಾಗಗಳನ್ನು ಅಲ್ಯುಮಿನಿಯಂ ಮತ್ತು ಸ್ಟೀಲ್ ಪಾತ್ರೆಗಳು ಆವರಿಸಿವೆ. ಹಾಗೆಯೇ ಅಡುಗೆಯ ಸಂದರ್ಭದಲ್ಲಿ ಬಳಸುತ್ತಿದ್ದ 'ಅರುಕಲ್ಲ್',[೧೬] 'ಒನ್ಕಿ', 'ಬೀಸುಕಲ್ಲ್', 'ಒರ್ಲ್'[೧೭]ಗಳ ಜಾಗದಲ್ಲಿ 'ಮಿಕ್ಸರ್', 'ಗ್ರೈಂಡರ್', 'ಮಿಲ್'ಗಳು ಬಂದಿವೆ. ಕಟ್ಟಿಗೆ ಒಲೆಯ ಜಾಗದಲ್ಲಿ 'ಗ್ಯಾಸೊಲೆ', 'ಸೀಮೆ ಎಣ್ಣೆ ಸ್ಟವ್'ಗಳು ಬಂದಿವೆ. ಇವುಗಳ ಜೊತೆಗೆ ಆ ಪದಗಳೂ ಭಾಷಾಕೋಶದಲ್ಲಿ ಸೇರಿ ಹೋಗಿವೆ. ಹಿಂದೆ ಇದ್ದ ಹಲವು ಬಗೆಯ ಪಾತ್ರೆಗಳು ಈಗ ಬಳಕೆಯಲ್ಲಿ ಇಲ್ಲ, ಅವುಗಳನ್ನು ಹೆಸರಿಸುವ ಪದಗಳೂ ಜನ ಮಾನಸದಲ್ಲಿ ಇಲ್ಲ.

ಶ್ರೀಮಂತಿಕೆ ಮತ್ತು ಪ್ರತಿಷ್ಠೆ: ಹಿತ್ತಾಳೆ, ತಾಮ್ರದ ಪಾತ್ರೆಗಳು ಉಳ್ಳವರ ಮನೆಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಇನ್ನೂ ಶ್ರೀಮಂತರಲ್ಲಿ ಚಿನ್ನದ, ಬೆಳ್ಳಿಯ ಪಾತ್ರೆಗಳನ್ನು ಕಾಣಬಹುದು. ಉದಾ, 'ಚಿನ್ನದ ಹರುವಣ' ಎಂಬ ಪದ ಶ್ರೀಮಂತಿಕೆಯನ್ನು ಸೂಚಿಸುವ ಸಂದರ್ಭದಲ್ಲಿ ಬಳಕೆಯಾಗಿರುವುದನ್ನು ಜನಪದ ಹಾಡುಗಳಲ್ಲಿ ಗಮನಿಸಬಹುದು.

ಅನನ್ಯತೆ: ಇಲ್ಲಿ ಜಾತಿ ಭಿನ್ನತೆಗಿಂತ ಹೆಚ್ಚಾಗಿ ಉದ್ಯೋಗವನ್ನವಲಂಬಿಸಿ ವ್ಯತ್ಯಾಸಗಳು ಕಾಣುತ್ತವೆ. ಕೃಷಿಕರ ಮನೆ ಅಂಗಳದಲ್ಲಿ ಭತ್ತ ಕುಟ್ಟುವ 'ಒರ್ಲ್', ಕೃಷಿ ಸಂದರ್ಭದಲ್ಲಿ ಬಳಸುವ ಹೆಡಿಗೆ ಮುಂತಾದವುಗಳಿರುತ್ತವೆ. ಬ್ರಾಹ್ಮಣೇತರರ ಮನೆಗಳಲ್ಲಿ ಮಾಂಸದಡುಗೆ ಮಾಡಲು ಬಳಸುವ ಪ್ರತ್ಯೇಕ 'ಗೌಲ್ ಮಡ್ಕೆ'[೧೮] ಕಾಣುತ್ತದೆ.

ಸಾಂಸ್ಕೃತಿಕ ಸಂದರ್ಭ: ಸಾಂಸ್ಕೃತಿಕ ಸಂದರ್ಭಗಳಲ್ಲಿ ಈ ಪರಿಕರಗಳಿಗೆ ವಿಶೇಷ ಸ್ಥಾನವಿದೆ. ಎಲ್ಲ ಶುಭಕಾರ್ಯಗಳಲ್ಲೂ ನೀರು ತುಂಬಿದ 'ಮಗಿ'[೧೯]ಬೇಕಾಗುತ್ತದೆ. ಹಾಗೆಯೇ 'ಹರುವಾಣ'ದಲ್ಲಿ 'ಸ್ಯಾಸಿ'[೨೦], 'ಹಣ್ಣುಗಳು' ಮತ್ತಿತರ ವಸ್ತುಗಳನ್ನು ಇಡಲಾಗುವುದನ್ನು ನೋಡುತ್ತೇವೆ.

ಸ್ಥಿತ್ಯಂತರ: ಆಧುನಿಕ ಸಂದರ್ಭದಲ್ಲಿ ಮರದ, ಮಣ್ಣಿನ ಪಾತ್ರೆಗಳ ಬಳಕೆ ತೀರಾ ಇಲ್ಲವೆನ್ನುವಷ್ಟು ಕಡಿಮೆಯಾಗುತ್ತಿದೆ. ಅಲ್ಯುಮಿನಿಯಂ, ಅದಕ್ಕಿಂತಲೂ ಹೆಚ್ಚಾಗಿ ಸ್ಟೀಲ್‌ನ ಪಾತ್ರೆಗಳು ಇಂದು ಅಡುಗೆ ಮನೆಯನ್ನು ಅಲಂಕರಿಸಿವೆ. 'ಪ್ಲೇಟ್', 'ಕುಕ್ಕರ್' ಮುಂತಾದವುಗಳ ಜೊತೆ ಆ ಪದಗಳೂ ಭಾಷೆಯಲ್ಲಿ ಜಾಗ ಪಡೆದಿವೆ. 'ಅರುಕಲ್', 'ಕಡುಕಲ್', 'ಬೀಸುಕಲ್', ಒಲೆಗಳ ಜಾಗದಲ್ಲಿ 'ಮಿಕ್ಸರ್', 'ಗ್ರೈಂಡರ್', 'ಗ್ಯಾಸ್ ಸ್ಟವ್'ಗಳು ಶಬ್ದಕೋಶವನ್ನು ಸೇರಿವೆ.

೩.೩.೩. ಅಳೆಯುವ ಸಾಧನಗಳು

'ಪಾವು', 'ಸೇರ್', 'ಕಳಸಿಗೆ'[೨೧] ಇವು ಹಿಂದೆ ಭತ್ತ ಮತ್ತು ಅಕ್ಕಿ ಅಳೆಯಲು ಬಳಸುತ್ತಿದ್ದ ಮರದ ಸಾಧನಗಳು. ಹಾಗೆಯೇ ದ್ರವ ಪದಾರ್ಥಗಳನ್ನು, ಅದರಲ್ಲೂ ವಿಶೇಷವಾಗಿ

ಎಣ್ಣೆಯನ್ನು ಅಳೆಯಲು 'ಸೇರ್', 'ಸಿದ್ದೆ', 'ಸೊಲಿಗೆ', 'ಹಾಡ' ಮುಂತಾದವುಗಳನ್ನು ಬಳಸುತ್ತಿದ್ದರು. ಈಗ ಆಧುನಿಕ ಅಳತೆಯ ಮಾನಗಳು ಬಂದ ಬಳಿಕ ಈ ಬಗೆಯ ಸಲಕರಣೆಗಳ ಬಳಕೆ ಇಲ್ಲವಾಗಿದೆ.

ಸಾಂಸ್ಕೃತಿಕ ಸಂದರ್ಭ: ಕಳಸಿಗಿ, ಸೇರುಗಳನ್ನು ಕೃಷಿಸಂಬಂಧಿ ಆಚರಣೆಗಳಲ್ಲಿ ಸಮೃದ್ಧಿಯ ಸಂಕೇತ ಎಂದು ಭಾವಿಸುತ್ತಾ ಬರಲಾಗಿದೆ. 'ಹೊಸ್ತ್'[೨೨]ನ ಸಂದರ್ಭದಲ್ಲಿ 'ಕಳಸಿಗಿ ಬರುದ್' ಆಚರಣೆಯ ಭಾಗವಾಗಿದೆ. ಇಲ್ಲಿ ಕಳಸಿಗಿಯನ್ನು ಶೇಡಿಯ ಮೂಲಕ ಚಿತ್ತಾರ ಬರೆದು ಅಲಂಕರಿಸಲಾಗುತ್ತದೆ. ಈ ಸಂದರ್ಭದಲ್ಲಿ 'ಹಡಿಗೆ'[೨೩] 'ಕುಕ್ಕೆ',[೨೪] 'ಗೆರಸೆ'[೨೫] ಮುಂತಾದವುಗಳಿಗೆ ಆಚರಣಾತ್ಮಕ ಮಹತ್ವವಿದೆ. ಹೊಸ್ತಿನ ಸಂದರ್ಭದಲ್ಲಿ 'ಕೇಲ್'[೨೬] 'ಪತ್ತಾಸ್'[೨೭]ಗಳ ಮೇಲೆ ಶೇಡಿಯಲ್ಲಿ ಬೊಟ್ಟುಗಳನ್ನಿಡುತ್ತಾರೆ.

ಅನನ್ಯತೆ: ಕೃಷಿಗೂ ಈ ಅಳತೆಯ ಪರಿಕರಗಳಿಗೂ ವಿಶೇಷ ಸಂಬಂಧವಿದೆ. ಇವು ಪ್ರಮುಖವಾಗಿ ಬತ್ತ ಮತ್ತು ಅಕ್ಕಿ ಅಳೆಯುವ ಸಾಧನಗಳು. ಕೃಷಿ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲೂ ಇವುಗಳಿಗೆ ಸ್ಥಾನವಿದೆ.

ಸ್ಥಿತ್ಯಂತರ: ಕಿಲೋಗ್ರಾಮ್ ಅಳತೆ, ಲೀಟರ್ ಲೆಕ್ಕದಲ್ಲಿ ಅಳೆಯುವ ಪದ್ಧತಿ ಬಂದ ಬಳಿಕ ತೂಕದ ಬಟ್ಟ್, ಲೀಟರ್ ಲೆಕ್ಕದ ಪಾತ್ರೆಗಳನ್ನು ಜನರು ಬಳಸಲು ಆರಂಭಿಸಿದ್ದಾರೆ. ಈಗ ಇವುಗಳಿಗೆ ಉಳಿದಿರುವುದು ಆಚರಣಾತ್ಮಕ ಮಹತ್ವ ಮಾತ್ರ.

೩.೩.೪. ಮನೆ ಮತ್ತು ಕಟ್ಟಡಕ್ಕೆ ಸಂಬಂಧಿಸಿದ ವಸ್ತುಗಳು

ಕೋಟ ಭಾಷಿಕ ಸಮುದಾಯದಲ್ಲಿ ಹಿಂದೆ ಮೇಲುವರ್ಗದವರ, ಉಳ್ಳವರ ವಾಸಸ್ಥಾನಕ್ಕೆ ಮಾತ್ರ ಮನೆ ಎಂಬ ಹೆಸರಿಟ್ಟು ಕರೆಯುವುದನ್ನು ಕಾಣಬಹುದು. ಮನೆಯ ವಿಸ್ತಾರ, ವೈಭವ, ಆಯ ನೊಡಿ 'ಅರಮನಿ', 'ಹೆಬ್ಬಾಗ್ಲ್ ಮನಿ', 'ಬಂಡಸಾಲಿ ಮನಿ'[೨೮] 'ಹನ್ನೆಯ್ಡಂಕಣದ ಮನಿ' ಎಂಬ ಪದಗಳು ಕಾಣಸಿಗುತ್ತವೆ. 'ಉಪ್ಪರ್ಗಿ ಮನಿ' ಎಂದರೆ ಅದು ಸಂಪತ್ತಿನ ಸೂಚಕ. ತಳಸಮುದಾಯದವರ ಮನೆಗೆ ಈ ವೈಭವವಿಲ್ಲ.

ಕೂಸಾಳು ಜಾತಿಗೆ ಸೇರಿದವರ ಮನೆಗಳಿಗೆ 'ಗುಡಿ' ಎಂದು ಕರೆಯುತ್ತಿದ್ದರು. ಕೊರಗರ ಮನೆ ಸಾಲುಗಳಿಗೆ 'ಕ್ವಾರ್ರ ಕೊಪ್ಪ' ಎಂದು ಕರೆಯುತ್ತಿದ್ದರು. ಇನ್ನು ತಾತ್ಕಾಲಿಕ ವಾಸಸ್ಥಾನಕ್ಕೆ 'ಬಿಡಾರ' ಎಂಬ ಪದ ಬಳಕೆಯೂ ಕಾಣಿಸುತ್ತದೆ. ಇದೇ ಭಾಷಿಕ ಪರಿಸರದಲ್ಲೇ ನೆಲೆಸಿದ ಬೆಳಾರಿ ಸಮುದಾಯದವರ ಮನೆಗೆ 'ಬಚ್ಚಡಿ' ಎನ್ನುವುದನ್ನು ಕಾಣುತ್ತೇವೆ.

‘ಅಂಗ್ಳೊ’, ‘ಚಿಟ್ಟಿ’[೨೯], ‘ಚಾವ್ಡಿ’, ‘ಪಡಸಾಲಿ’, ‘ಗಯ್ಡಿ’,[೩೦] ‘ತೊಲಿಕಂಬ’,[೩೧] ‘ಮೇಟಿಕಂಬ’,[೩೨] ‘ಹೆಬ್ಬಾಗ್ಲ್’, ‘ಹಟ್ಟಿ’, ‘ಉಪ್ಪರ್ಗಿ’,[೩೩] ಇವು ಮನೆಯ ವಿವಿಧ ಭಾಗಗಳು. ಇವುಗಳ ಸುದೀರ್ಘ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಭಿನ್ನ ಭಾಷಿಕ ವಲಯಗಳು: ಮನೆಯ ಈ ಭಾಗಗಳಿಗೆ ಭಾಷಿಕ ನೆಲೆಯಲ್ಲಿಯೂ ಮಹತ್ವವಿದೆ. ಮನೆಯೊಳಗೆ ಹಲವು ಭಾಷಿಕ ವಲಯಗಳಿರುತ್ತವೆ. ಪಡಸಾಲಿಯ ಆವರಣದಲ್ಲಿ ಹೆಂಗಸರು ಬಂದು ಮಾತಾಡುವಂತಿಲ್ಲ. ಅವರ ಮಾತುಕತೆ ಏನಿದ್ದರೂ ಬಾಹ್ಯ ವಲಯದಾಚೆಗೆ. ಹೆಣ್ಣು ಮಕ್ಕಳು ಆಡಿದ ಮಾತು ‘ಕೊಗಳಿ’[೩೪]ಗೆ ಕೇಳಬಾರದು ಎಂಬ ಮಾತು ಪ್ರಚಲಿತದಲ್ಲಿದೆ. ಅದು ಹೆಂಗಸರು ಅಷ್ಟು ಮೆದುವಾಗಿ ಮಾತಾಡಬೇಕು ಎಂಬುದನ್ನು ಸೂಚಿಸುತ್ತದೆ. ಹಾಗೆಯೇ ಹಿಂದೆ ವರ್ತಕರ ಮನೆಗಳನ್ನು ‘ಬಂಡಸಾಲೆ’ಮನೆ ಎಂದು ಕರೆಯುತ್ತಿದ್ದರು. ಈ ಮನೆಗಳಲ್ಲಿ ನಿರಂತರ ವ್ಯಾಪಾರ ವಹಿವಾಟು ನಡೆಯುತ್ತಿದ್ದುದರಿಂದ ಹೆಂಗಸರಿಗೆ ಓಡಾಡುವುದಕ್ಕೆ ಪ್ರತ್ಯೇಕ ಬಾಗಿಲು ಇರುವುದೂ ಇದನ್ನು ದೃಢಪಡಿಸುತ್ತದೆ.

ಸ್ಪೃಶ್ಯ ಸಮುದಾಯಗಳಿಗೆ ಬ್ರಾಹ್ಮಣರ ಮನೆಯ ಜಗುಲಿಯವರೆಗೆ ಪ್ರವೇಶವಿದೆ. ಒಡೆಯರು ಮತ್ತು ಒಕ್ಕಲ ಸಂಭಾಷಣೆ ಏನಿದ್ದರೂ ಅಲ್ಲೇ ನಡೆಯಬೇಕು. ಇನ್ನು ಅಸ್ಪೃಶ್ಯ ಸಮುದಾಯಗಳು ಮುಖ್ಯದ್ವಾರದಿಂದ ಪ್ರವೇಶಿಸುವುದಿಲ್ಲ. ಮನೆಯಿಮದ ವ್ಯವಸಾಯದ ಭೂಮಿ ಇರುವ ದಿಕ್ಕಿನಲ್ಲಿ ಇನ್ನೊಂದು ಪ್ರತ್ಯೇಕ ಬಾಗಿಲಿರುತ್ತದೆ. ಇದನ್ನು ‘ದಿಡ್ಡಿ ಬಾಗಿಲು’[೩೫] ಎಂದು ಕರೆಯುತ್ತಾರೆ. ಅದರ ಮೂಲಕ ಅವರು ಪ್ರವೇಶಿಸುತ್ತಾರೆ. ಅವರು ಕುಳಿತುಕೊಳ್ಳುವುದು ಅಂಗಳದಲ್ಲಿ. ಅವರ ಜೊತೆ ಮಾತುಕತೆ ನಡೆಯುವುದು ಹೊರ ಸ್ತರದಲ್ಲಿ.

ಹಿಂದೆ ನ್ಯಾಯ ವಿತರಣೆಗೆ ಸಂಬಂಧಿಸಿದ ಪಂಚಾಯಿತಿ ನಡೆಯುತ್ತಿದ್ದುದು, ನವರಾತ್ರಿ ಸಂದರ್ಭದಲ್ಲಿ ‘ಹೂವಿನ ಕೂಲಿ’[೩೬]ನವರು ಬಂದರೆ ಅವರ ಹಾಡು ನಡೆಯುತ್ತಿದ್ದುದು ಹೆಬ್ಬಾಗಿಲಲ್ಲಿ.

ಅನನ್ಯತೆ: ಬ್ರಾಹ್ಮಣರ ಮನೆಗೂ ಬ್ರಾಹ್ಮಣೇತರರ ಮನೆಗೂ ರಚನೆಯಲ್ಲಿ ವ್ಯತ್ಯಾಸವನ್ನು ಗುರುತಿಸಬಹುದು. ಜೊತೆಗೆ ವೈಶ್ಯ ಸಮುದಾಯಕ್ಕೆ ಸೇರಿದವರ ಮನೆಗೆ ‘ಬಂಡ ಸಾಲಿ ಮನಿ’ ಎನ್ನುತ್ತಾರೆ. ಇಂತಹ ಮನೆಗಳು ವ್ಯಾಪಾರ ಕೇಂದ್ರಗಳಾದ ಬಸರೂರು ಮುಂತಾದ ಕಡೆಗಳಲ್ಲಿವೆ. ಕೃಷಿಕರ ಮನೆಗಳಲ್ಲಿ ಸಾಮಾನು ತುಂಬಿಡಲು ‘ಗಯ್ಡಿ’ ಎಂಬ ಕೋಣೆಯಿರುತ್ತದೆ. ಮನೆಯ ಅಂಗಳದಲ್ಲಿ ‘ಮೇಟಿ ಕಂಬ’ವಿರುತ್ತದೆ.

ಶ್ರೀಮಂತಿಕೆ ಮತ್ತು ಪ್ರತಿಷ್ಠೆ: ‘ಅರಮನಿ’, ‘ಹನ್ನೆಯ್ಡಂಕಣದ ಮನಿ’[೩೭], ‘ಹೆಬ್ಬಾಗ್ಲ್ ಮನಿ’[೩೮] ಮುಂತಾದವು ಪ್ರತಿಷ್ಠೆ ಮತ್ತು ಶ್ರೀಮಂತಿಕೆಯ ಸಂಕೇತಗಳಾಗಿವೆ. ಮನೆಯ ಅಂಕಣ ಹೆಚ್ಚಾದಷ್ಟೂ ಅವರ ಶ್ರೀಮಂತಿಕೆಯನ್ನು ಗುರುತಿಸಬಹುದು.

ಸಾಂಸ್ಕೃತಿಕ ಸಂದರ್ಭ: ಮನೆ ಮತ್ತು ಸುತ್ತಲಿನ ಆವರಣಕ್ಕೆ ಆಚರಣೆಯ ದೃಷ್ಟಿಯಿಂದಲೂ ಮಹತ್ವವಿದೆ. ಉದಾಹರಣೆಗೆ, ಹೆಣ್ಣು ಮೈನರೆದ ಸಂದರ್ಭದಲ್ಲಿ 'ತಲ್‌ನೀರ್ ಮದಿ'[೩೯] ನಡೆಯುವುದು ಅಂಗಳದಲ್ಲಿ. ಬ್ರಾಹ್ಮಣರ ಮನೆಗಳಲ್ಲಿ ಪ್ರತ್ಯೇಕ ದೇವರ ಮನಿ ಇರುತ್ತದೆ. ಬಿಲ್ಲವರಲ್ಲಿ ತುಳಸಿ ಕಟ್ಟೆಗೆ ವಿಶೇಷ ಮಹತ್ವವಿದೆ. ದೈವಗಳಿಗಾಗಿ ಕಟ್ಟಿದ ಪ್ರತ್ಯೇಕ ಮನೆಯನ್ನು 'ಗಯ್ಡಿ' ಅಥವಾ 'ದೈಯ್ಯದ ಮನಿ' ಎಂದು ಕರೆಯುವುದನ್ನು ಕಾಣಬಹುದು.

೩.೩.೫.೧ ವೃತ್ತಿ ಸಂಬಂಧಿ ಸಲಕರಣೆಗಳು

ಅಮೆರಿಕದ ಮಾನವಭಾಷಾಶಾಸ್ತ್ರಜ್ಞ ಫ್ರಾನ್ಜ್ ಬೋಸ್ ಎಸ್ಕಿಮೋ ಜನರ ಕುರಿತು ನಡೆಸಿದ ಅಧ್ಯಯನದಲ್ಲಿ ಅವರ ಭಾಷೆಯಲ್ಲಿ ಹಿಮವನ್ನು ಸೂಚಿಸುವ ಪದಗಳು ಇತರ ಭಾಷೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿವೆ ಎಂಬುದನ್ನು ಗುರುತಿಸುತ್ತಾರೆ(೧೯೧೧). ಇದೇ ಸಂಗತಿಯನ್ನು ವೃತ್ತಿಗೆ ಸಂಬಂಧಿಸಿ ಅನ್ವಯಿಸುವುದಾದರೆ ಪ್ರತಿಯೊಂದು ಸಮುದಾಯದ ಪದಕೋಶವೂ ಅದು ಅನುಸರಿಸುವ ಪ್ರಧಾನ ವೃತ್ತಿಗೆ ಸಂಬಂಧಿಸಿದಂತೆ ಶ್ರೀಮಂತವಾಗಿರುತ್ತದೆ. ಇಲ್ಲಿನ ಜನರ ಪ್ರಧಾನ ಕಸುಬು ಕೃಷಿ, ಜೊತೆಗೆ ಮೀನುಗಾರಿಕೆ. ಇದರ ಜೊತೆಗೆ ಹೆಂಡ ಇಳಿಸುವುದು, ಕೋಳಿ ಸಾಕಣೆ, ಬುಟ್ಟಿ ಹೆಣೆಯುವುದು ಪೌರೋಹಿತ್ಯ ಇತ್ಯಾದಿಗಳು ಇದ್ದರೂ ಇಲ್ಲಿನ ಆರ್ಥಿಕತೆಯನ್ನು ಪ್ರಧಾನವಾಗಿ ಪ್ರಭಾವಿಸಿರುವುದು ಈ ಎರಡು ಉದ್ಯೋಗಗಳು. ಇವುಗಳಿಗೆ ಸಂಬಂಧಿಸಿದಂತೆ ಪದಗಳ ವಿವೇಚನೆಯನ್ನು ಇಲ್ಲಿ ನಡೆಸಲಾಗಿದೆ.

೩.೩೫.೧. ಕೃಷಿ

ಕೃಷಿ ಈ ಪ್ರದೇಶದ ಜನರ ಮುಖ್ಯ ಜೀವನೋಪಾಯ. ಇದರ ಮೂಲಕವೇ ಅವರು ಬದುಕು ಕಟ್ಟಿಕೊಂಡವರು. ಹೀಗಾಗಿ ಈ ನೆಲೆಯಲ್ಲಿ ಭೂಮಿಯ ವಿಂಗಡಣೆ, ಕೃಷಿಯ ವಿಧಾನಗಳು, ಸಲಕರಣೆಗಳು ಬದುಕಿನಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಭೌತಿಕ ಸಂಸ್ಕೃತಿ ಅಸ್ಮಿತೆ, ಅಧಿಕಾರ ರಾಜಕಾರಣದ ಪ್ರಶ್ನೆಗಳನ್ನು ಮುಖಾಮುಖಿಯಾಗುತ್ತದೆ. ಭೌತಿಕ ಸಂಸ್ಕೃತಿಯಡಿಯಲ್ಲಿ ಕೃಷಿಸಂಬಂಧಿತ ಸಲಕರಣೆಗಳನ್ನು ಗಮನಿಸಬಹುದಾಗಿದೆ.

ನೇಲ್',[೪೦] ಅದರ ವಿವಿಧ ಭಾಗಗಳು, 'ನೊಗ', 'ಓಜಿನ ಕೋಲು',[೪೧] 'ಹಡಿಮಂಚ',[೪೨] ಮುಂತಾದವು, ನೀರೆತ್ತುವಲ್ಲಿ, ನೀರು ಹಾಯಿಸುವಲ್ಲಿ ಭಿನ್ನ ಬಗೆಯ ಏತಗಳು, 'ದೊಟ್ಟೆ ಮರಿಗೆ',[೪೩] 'ಸಂಬಳಿಗೆ',[೪೪] ಮುಂತಾದ ಸಾಧನಗಳು ಕೋಟ ಭಾಷಿಕ ಪರಿಸರದಲ್ಲಿ ಕಾಣುತ್ತವೆ.

ಒಂದು ಕಾಲದಲ್ಲಿ ಕೃಷಿಯೇ ಪ್ರಧಾನ ಉದ್ಯೋಗವಾಗಿದ್ದ ಈ ಪ್ರದೇಶ ಇಂದು ನಿಧಾನವಾಗಿ ಪಲ್ಲಟಕ್ಕೊಳಗಾಗುತ್ತಿದೆ. ಭೂಮಸೂದೆಯಿಂದಾಗಿ ಮತ್ತು ಅವಿಭಕ್ತ ಕುಟುಂಬ ಪದ್ಧತಿ ಕಡಿಮೆಯಾದುದರಿಂದಾಗಿ ದೊಡ್ಡ ಹಿಡುವಳಿಗಳು ಸಣ್ಣ ಸಣ್ಣ ತುಂಡುಗಳಾಗಿವೆ. ಹೋಟೆಲ್ ಉದ್ಯಮ, ವ್ಯಾಪಾರ ಮುಂತಾದವುಗಳು ಲಾಭದಾಯಕ ಅನಿಸಿ ಕೃಷಿ ಮೇಲೆ

ಅವಲಂಬನೆ ಕಡಿಮೆಯಾಗಿದೆ. ವಿದ್ಯಾವಂತ ಯುವಕರು ನಗರ ಸೇರುತ್ತಿದ್ದಾರೆ. ಕೃಷಿಯಲ್ಲಿ ತೊಡಗಿಕೊಂಡವರ ಪ್ರಮಾಣ ಕಡಿಮೆಯಾಗಿದೆ. ಹೀಗಾಗಿ ಬಳಕೆಯಿಲ್ಲದೆ ಪದಗಳು ನಿಧಾನವಾಗಿ ಮರೆಗೆ ಸರಿಯುತ್ತಿವೆ.

ಕೃಷಿ ಭೂಮಿಯುಳ್ಳವರೂ ಬೇಸಾಯ ಮಾಡಲಾಗದೆ 'ಗುತ್ತಿಗೆ' ಕೊಡಲಾರಂಭಿಸಿದ್ದಾರೆ. ಈ ಸ್ಥಿತ್ಯಂತರದಲ್ಲಿ ಹಳೆಯ ಸಲಕರಣೆಗಳ ಬದಲಿಗೆ ಆಧುನಿಕ ಸಲಕರಣೆಗಳು ಬಂದು ಆ ಮೂಲಕ ಇಂಗ್ಲಿಷ್ ಪದಗಳು ಬಂದಿವೆ.

ಉದಾಹರಣೆಗೆ, ಅಕ್ಕಿ ಮಾಡುವಲ್ಲಿ 'ಒರ್ಲ್'ನ ಬದಲಿಗೆ 'ಮಿಲ್' ಬಂದಿದೆ.

ಕೃಷಿ ಪ್ರಕ್ರಿಯೆಯಲ್ಲಿ ಬಳಸುವ ಪದಗಳ ದೀರ್ಘ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

೩.೩.೫.೨. ಮೀನುಗಾರಿಕೆ

ಹಿಂದೆ ಪ್ರಾದೇಶಿಕವಾಗಿ ಸೀಮಿತ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಮೀನುಗಾರಿಕೆಯ ವಲಯ ವಿಸ್ತಾರಗೊಂಡು ಮೀನುಗಾರಿಕೆ ಇಂದು ಅಂತಾರಾಷ್ಟ್ರೀಕರಣಗೊಂಡಿದೆ. ವ್ಯಾಪಾರ ವಹಿವಾಟು ಅಂತಾರಾಷ್ಟ್ರೀಯ ನೆಲೆಯಲ್ಲಿ ನಡೆಯುವುದರಿಂದ ಪ್ರಾದೇಶಿಕ ಪದಗಳ ಜಾಗದಲ್ಲಿ ಇಂಗ್ಲಿಷ್ ಪದಗಳು ಬಂದು ಸೇರಿವೆ. ಹಿಂದೆ ಬಳಸುತ್ತಿದ್ದ ಬಲೆಗಳ ಜಾಗದಲ್ಲಿ ಆಧುನಿಕ ಪ್ಲಾಸ್ಟಿಕ್ ನೂಲಿನ 'ಬೀಣಿ' ಬಲೆಗಳು ಬಂದಿವೆ. ದೋಣಿಗಳ ಬದಲಾಗಿ ವಿವಿಧ ಬಗೆಯ ಯಾಂತ್ರೀಕೃತ ಬೋಟ್‌ಗಳು ಬಂದಿವೆ.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮಾತಾಡಿಸಿದ ಹಲವರು ಮೀನುಗಳ ಹೆಸರನ್ನು ಇಂಗ್ಲಿಷ್‌ನಲ್ಲಿ ಹೇಳುತ್ತಾರೆ. ಪಾಪ್ಲೆಟ್, ಸ್ಕ್ವಿಡ್ ಇತ್ಯಾದಿ. ಹಿಂದೆ ಬಳಕೆಯಲ್ಲಿದ್ದ ದೋಣಿಗಳೂ ಬಲೆಗಳೂ ಈಗ ಬಳಕೆಯಲ್ಲಿ ಇಲ್ಲ. ಯುವಕರನ್ನು ಮಾತನಾಡಿಸಿದಾಗ ಅವರಿಗೆ ಹಿಂದಿನ ಹೆಸರುಗಳೂ ತಿಳಿದಿಲ್ಲ. ಉದಾಹರಣೆಗೆ, ಜೂಲಿ ಬಲೆ, ಎರಣಿ ಬಲೆ, ಪಾತಿ ದೋಣಿ, ವಾಡ ಇತ್ಯಾದಿ. ಆದರೆ ಮೀನುಗಾರಿಕೆಯ ವಲಯ ವಿಸ್ತಾರಗೊಂಡಿದೆ. ಯಾಂತ್ರೀಕೃತ ಮೀನುಗಾರಿಕೆಯ ಭಾಗವಾಗಿ ಆಧುನಿಕ ಸಲಕರಣೆಗಳು ಬಂದಿವೆ. ಹೀಗಾಗಿ ಹೊಸ ಬಗೆಯ ವಸ್ತುಗಳೊಂದಿಗೆ ಬೇರೆ ಭಾಷೆಯ ಪದಗಳೂ ಸೇರಿಕೊಂಡಿರುವುದನ್ನು ಕಾಣಬಹುದು. ಕೃಷಿ ಸಂದರ್ಭಕ್ಕಿಂತ ಹೆಚ್ಚು ಇಂಗ್ಲಿಷ್ ಪದಗಳು ಮೀನುಗಾರಿಕೆಯ ವಲಯದಲ್ಲಿ ಕಾಣಿಸುತ್ತದೆ. ಅನುಬಂಧದಲ್ಲಿ ಮೀನುಗಾರಿಕೆಗೆ ಸಂಬಂಧಿಸಿದ ಸಾಧನ ಸಲಕರಣೆಗಳ ಪಟ್ಟಿ ನೀಡಲಾಗಿದೆ.

೩.೩.೬ ವಾಹನಗಳು

ಹಿಂದೆ ಇದ್ದ ವಾಹನಗಳು ಬೆರಳೆಣಿಕೆಯವು. ಆಗ ಎತ್ತಿನ ಗಾಡಿಯೇ ಪ್ರಮುಖ ಸಾರಿಗೆಯಾಗಿತ್ತು. ಹೊಳೆ, ನದಿಗಳಲ್ಲಿ ದೋಣಿಗಳ ಮೂಲಕ ಸಂಚರಿಸುವುದೂ ಇತ್ತು. ಉಳ್ಳವರಲ್ಲಿ ಸಾರೋಟ್ ನಂತಹ ವೈಭವವನ್ನು ಕಾಣಬಹುದು. ನಿಧಾನವಾಗಿ ಬಸ್ಸು,

ಸೈಕಲ್, ಟೆಂಪೊ, ಬೈಕ್, ಲಾರಿ ಮುಂತಾದವುಗಳು ಅಡಿಯಿಟ್ಟವು. ಸಾರ್ವಜನಿಕ ಸಂಪರ್ಕ ಕಲ್ಪಿಸುವ ವಾಹನಗಳನ್ನು ಮೋಟ್ರ್ ಎಂಬ ಹೆಸರಿನಿಂದ ಕರೆದಿರುವುದು ಕಾಣುತ್ತದೆ. ಇವು ಇಲ್ಲಿನ ಜನಪದ ಸಾಹಿತ್ಯದಲ್ಲೂ ಮೂಡಿವೆ.

೩.೪. ವಿಶ್ಲೇಷಣೆ

ಸಮುದಾಯದ ಬದುಕಿನ ಭಾಗಗಳಾದ ವಸ್ತುಗಳನ್ನು ಗುರುತಿಸುವುದೇ ಅವುಗಳ ಭಾಷಿಕ ರೂಪದ ಮೂಲಕ. ಕೊಟ ಭಾಷಿಕ ಸಮುದಾಯದ ಭೌತಿಕ ಸಂಸ್ಕೃತಿ ಮತ್ತು ಭಾಷೆಯ ನಡುವಣ ನಂಟನ್ನು ಮೇಲಿನ ಪ್ರತ್ಯೇಕ ಭಾಗಗಳಲ್ಲಿ ಚರ್ಚಿಸಲಾಗಿದೆ. ಒಟ್ಟಿನಲ್ಲಿ ಇದರ ಮೂಲಕ ಕಂಡುಕೊಳ್ಳಬಹುದಾದ ಸಂಗತಿಗಳೇನು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ಭೌತಿಕ ವಸ್ತುಗಳು ಸಾಮಾಜಿಕ ಅರ್ಥವನ್ನು ರೂಪಿಸುವ ಶಕ್ತಿ ಹೊಂದಿವೆ. ಇವು ಸಾಂಸ್ಕೃತಿಕವಾಗಿ ಪ್ರಭಾವಶಾಲಿಯಾದವು ಏಕೆಂದರೆ ಉಪಯೋಗಿಸುವ ಪ್ರಕ್ರಿಯೆಯಲ್ಲಿ ಇವು ಭೌತಿಕ ಮತ್ತು ಮಾನಸಿಕ ಲೋಕವನ್ನು ಬೆಸೆಯುತ್ತವೆ. ಇವು ವ್ಯಕ್ತಿಯ, ಸಮುದಾಯದ ಸೌಂದರ್ಯ ಪ್ರಜ್ಞೆ, ಅಸ್ಮಿತೆ, ಜೀವನಶೈಲಿಯ ಸೂಚಕಗಳಾಗಿವೆ ಮಾತ್ರವಲ್ಲ ಸಮುದಾಯದ ಚಲನೆಯ ಸೂಚಕಗಳೂ ಆಗಿವೆ.

ಭಾಷಿಕವಾಗಿ ಈ ಪ್ರಕ್ರಿಯೆಯನ್ನು ಅರ್ಥೈಸಿಕೊಳ್ಳುವಲ್ಲಿ ಕೋಟ ಭಾಷಿಕ ಸಮುದಾಯದ ಹಿನ್ನೆಲೆಯಲ್ಲಿ ಕಂಡುಕೊಂಡ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ,

೧. **ಹೆಸರಿಸುವ ಪ್ರಕ್ರಿಯೆಯಲ್ಲಿ ಬಳಸಲಾದ ಭಾಷೆ:** ಒಂದು ವಸ್ತುವಿನ ಹೆಸರನ್ನು ಸೂಚಿಸುವ ಪದದ ಭಾಷೆ ಎನ್ನುವುದು ಅನನ್ಯತೆಯ ಸೂಚಕವಾಗಿರುತ್ತದೆ. ಅದು ಆ ವಸ್ತು ಬಳಕೆಯಾಗುತ್ತಿರುವ ಸಂದರ್ಭದ ಸೂಚಕವೂ ಹೌದು. ಹಾಗೆಯೇ ಪ್ರತಿಷ್ಠೆಯ ಮತ್ತು ಸಾಮಾಜಿಕ ದೂರದ ಸೂಚಕವಾಗಿಯೂ ಅದನ್ನು ಕಾಣಬಹುದಾಗಿದೆ.

ಉದಾಹರಣೆಗೆ, ಸಂಸ್ಕೃತ ಪದ ಪವಿತ್ರ ಆವರಣವನ್ನು ಕಟ್ಟಿಕೊಟ್ಟರೆ ಕನ್ನಡದ ಪದಗಳು ದೈನಂದಿನ, ಸಾಮಾನ್ಯವಾದ ಆವರಣವನ್ನು ಕಟ್ಟಿಕೊಡುತ್ತವೆ. ಜೊತೆಗೆ, ಇಲ್ಲಿ ಸಾಮಾಜಿಕ ದೂರ ಮತ್ತು ಪ್ರತಿಷ್ಠೆಯ ಅಂಶಗಳೂ ಸೂಚಿತವಾಗುತ್ತವೆ. ಆಧುನಿಕ ವಸ್ತುಗಳ ಮೂಲಕ ಬಂದ ಇಂಗ್ಲಿಷ್ ಪದಗಳು ಸ್ಥಿತ್ಯಂತರವನ್ನು, ಆಧುನಿಕತೆಯನ್ನು ಸಂಕೇತಿಸುತ್ತವೆ. ಉದಾಹರಣೆಗೆ, ಸಂಸ್ಕೃತ ಪದವಾದ 'ಕಲಶ' ಪವಿತ್ರ ಆವರಣವನ್ನು ಸಂಕೇತಿಸಿದರೆ 'ಚೊಂಬು' ದೈನಂದಿನ ಸಂದರ್ಭವನ್ನು ಸಂಕೇತಿಸುತ್ತದೆ. 'ಮೋಟ್ರ್' ಆಧುನಿಕತೆಯ ಭಾಗವಾಗಿ ಬಂದದ್ದು.

೨. **ವಸ್ತುವಿನ ಗುಣಗಳನ್ನು ಇರಿಸಿಕೊಂಡು ಭಾಷಿಕವಾಗಿ ರೂಪಕಾತ್ಮಕ ಬಳಕೆ:** ನಿತ್ಯದ ಬದುಕಿನಲ್ಲಿ ಒಂದು ವಸ್ತುವಿನ ಅಗತ್ಯ ಮತ್ತು ಪಾತ್ರವನ್ನು ಇರಿಸಿಕೊಂಡು ಅದರಷ್ಟೇ

ಮಹತ್ವವುಳ್ಳ ಇನ್ನೊಂದು ಸಂಗತಿಯನ್ನು ಸಂಕೇತಿಸುವ ಸಂದರ್ಭದಲ್ಲಿ ಈ ವಸ್ತುಗಳ ಹೆಸರಿನ ಅರ್ಥದ ವಿಸ್ತರಣೆ ನಡೆಯುವುದನ್ನು ಗಮನಿಸಬಹುದು. ಉದಾಹರಣೆಗೆ, 'ತೊಲಿಕಂಬ' ಮನೆಗೆ ಆಧಾರವಾಗಿ ಇರುವಂಥದ್ದು. ಹಾಗೆಯೇ ಮನೆಗೆ ಆಧಾರವಾಗಿ ಇರುವವನು ಗಂಡು ಮಗ, ಆದ್ದರಿಂದ ಅವನ ಸ್ಥಾನವನ್ನು ಸೂಚಿಸುವಾಗ ಈ ರೂಪಕ ಬಳಸಲಾಗಿದೆ. ಒಂದು ಸಂಸ್ಕೃತಿಯಲ್ಲಿ ವಸ್ತುವಿಗಿರುವ ಮಹತ್ವಕ್ಕೂ ಅದರ ರೂಪಕಾತ್ಮಕ ಬಳಕೆಗೂ ನೇರ ಸಂಬಂಧವಿದೆ. ಒಂದು ವಸ್ತುವಿನ ಗುಣವೇನು ಮತ್ತು ಅದನ್ನು ಯಾರು ಬಳಸುತ್ತಾರೆ ಅನ್ನುವುದರ ಮೇಲೆ ಅದರ ಮಹತ್ವ ನಿರ್ಧರಿತವಾಗುತ್ತದೆ.

ಉದಾಹರಣೆಗೆ, 'ಹಿತ್ತಾಳಿಗಿಂತ ಕಡಿಯಾದಿ' ಎನ್ನುವಲ್ಲಿ ಹಿತ್ತಾಳೆಗಿರುವ ಸ್ಥಾನಮಾನ ಕಡಿಮೆಯಾದುದರಿಂದ ಇದು ವ್ಯಕ್ತಿಯ ಸ್ಥಾನ ಅಷ್ಟು ಕೆಳಮಟ್ಟಕ್ಕೆ ಹೋಯಿತು ಎಂಬುದನ್ನು ತಿಳಿಸುತ್ತದೆ. ಅದೇ ಬಂಗಾರ ಎನ್ನುವಲ್ಲಿ ವಸ್ತುವಿನ ಉಪಯೋಗ ಮೌಲ್ಯ ಮತ್ತು ಶ್ರೇಷ್ಠತೆಯ ಗುಣವನ್ನು ಆರೋಪಿಸಿ ಹೋಲಿಕೆ ಮಾಡಲಾಗುತ್ತದೆ.

೩. ವಸ್ತು ಒಂದೇ ಆಗಿದ್ದರೂ ಸಂದರ್ಭಕ್ಕನುಸಾರವಾಗಿ ಅದರ ಹೆಸರು ಬದಲಾಗುವುದು: ಒಂದು ವಸ್ತುವನ್ನು ಬಳಸುತ್ತಿರುವವರು ಯಾರು ಮತ್ತು ಬಳಕೆಯ ಸಂದರ್ಭ ಯಾವುದು ಎಂಬುದರ ಮೇಲೆ ಅದನ್ನು ಸೂಚಿಸುವ ಹೆಸರು ಬದಲಾಗುತ್ತದೆ. ಸಾಮಾನ್ಯ ವಸ್ತುಗಳು ಆಚರಣೆಯ ಸಂದರ್ಭದಲ್ಲಿ ವಿಶೇಷ ವಸ್ತುಗಳಾಗುತ್ತವೆ. ಈ ಪ್ರಕ್ರಿಯೆಯಲ್ಲಿ ಹೆಸರು ಬದಲಾಗುವುದು ಪ್ರಮುಖವಾಗುತ್ತದೆ.

ಚೊಂಬು: ಕಲಶ, ಮಗಿ

ಮರದ ತುಂಡು: ಉರು[೪೫]

ಹಲಗೆ: ಅಮ್ನೋರ ಹಲಗೆ[೪೬]

೪. ಕೃಷಿ ಪ್ರಧಾನ ಜೀವನೋಪಾಯ

ಕೋಟ ಭಾಷಿಕ ಸಮುದಾಯ ಹಿಂದಿನಿಂದಲೂ ಕೃಷಿಯನ್ನು ಪ್ರಧಾನವಾಗಿ ನೆಚ್ಚಿಕೊಂಡದ್ದು. ಆದ್ದರಿಂದ ಕೃಷಿಗೆ ಸಂಬಂಧಿಸಿದ ವಸ್ತುಗಳಿಗೆ ಇಲ್ಲಿ ದೈನಂದಿನ ಬದುಕಿನಲ್ಲೂ ಮತ್ತು ಆಚರಣೆಯ ಸಂದರ್ಭದಲ್ಲೂ ವಿಶೇಷ ಸ್ಥಾನವಿದೆ. ಹೆಚ್ಚಿನಸಂಖ್ಯೆಯ ವಿಶಿಷ್ಟ ಪದಗಳು ಕೃಷಿಯ ಆವರಣದಲ್ಲಿ ದೊರೆಯುತ್ತವೆ. ಈ ಪದಗಳು ಅವರ ಗ್ರಹಿಕೆಯನ್ನು ಪ್ರಭಾವಿಸಿರುವ ಬಗೆ ದಿನನಿತ್ಯದ ಸಂಭಾಷಣೆಗಳಲ್ಲಿ ವ್ಯಕ್ತವಾಗುತ್ತದೆ.

೫. ವಿಶಿಷ್ಟತೆ ಮತ್ತು ಒಳಗೊಳ್ಳುವಿಕೆ

ಕೋಟ ಭಾಷಿಕ ಪದಗಳ ಮೂಲಕ ವಸ್ತುಗಳನ್ನು ಹೆಸರಿಸುವ ಬಗೆ ಪ್ರಾದೇಶಿಕ ವಿಶಿಷ್ಟತೆಯನ್ನು ಎತ್ತಿ ತೋರಿಸುವ ಸಂಗತಿಯಾಗಿದೆ. ಜೊತೆಗೆ ವಿಸ್ತೃತ ನೆಲೆಯಲ್ಲಿ ಒಂದೇ

ಪರಿಕರಕ್ಕಿಂತ ಭಿನ್ನ ಬಳಕೆಯ ಆಧಾರದಲ್ಲಿ ಅಲ್ಪ ವ್ಯತ್ಯಾಸವೂ ಮುಖ್ಯವಾಗುತ್ತದೆ. ಅವುಗಳಿಗೆ ಬೇರೆ ಬೇರೆ ಹೆಸರುಗಳನ್ನು ಆ ಭಾಷಿಕ ಸಮುದಾಯ ನೀಡಿರುತ್ತದೆ.

ಉದಾಹರಣೆಗೆ, ಕತ್ತಿ ಎಂಬ ಪದ 'ಹಲ್‌ಕತ್ತಿ'[೪೭], 'ಅರುಕತ್ತಿ'[೪೮], 'ಸೊಪ್ಪಿನಕತ್ತಿ'[೪೯] ಹುಲ್ಕತ್ತಿ[೫೦] ಇತ್ಯಾದಿ. ಹಾಗೆಯೇ ವಿವಿಧ ಬಗೆಯ ಗದ್ದೆಗಳನ್ನು ಹೆಸರಿಸಿರುವುದನ್ನು ಅನುಬಂಧದಲ್ಲಿ ಕೊಡಲಾಗಿದೆ.

ಒಳನುಡಿಯ ಪದಗಳು ಸಂಸ್ಕೃತಿ ನಿರ್ದಿಷ್ಟ ಪದಗಳಾಗಿವೆ. ಇವುಗಳ ಜಾಗಕ್ಕೆ ಬಂದ ಪ್ರಮಾಣ ಕನ್ನಡದ ಅಥವಾ ಇಂಗ್ಲಿಷ್‌ನ ಪದಗಳು ಈ ವಿಶಿಷ್ಟತೆಯನ್ನು ತೊಡೆದುಹಾಕಿವೆ. ವಿವಿಧ ಬಗೆಯ ದೋಣಿಗಳಿಗೆ ಬದಲಾಗಿ ಬಂದ 'ಬೋಟ್' ಪ್ರಾದೇಶಿಕವಾಗಿ ಅನನ್ಯತೆಯನ್ನು ತೋರುವುದಿಲ್ಲ.

೬. ಆಧುನಿಕತೆಯ ಮೂಲಕ ಬಂದ ಬಹುತೇಕ ಉಡುಗೆ–ತೊಡುಗೆಗಳಿಗೆ ಇಲ್ಲಿನ ಭಾಷೆ ಸಮಾನಾಂತರವಾದ ಪದವನ್ನೇನೂ ಸೃಷ್ಟಿಸಿಲ್ಲ. ಹೊಸ ವಸ್ತುಗಳು ಬಂದ ಹಾಗೆ ಪದಗಳು ಹೆಚ್ಚುತ್ತಾ ಹೋಗುವುದು, ಅಥವಾ ಇರುವ ಪದ ಹೊಸ ಅರ್ಥದಲ್ಲಿ ಬಳಕೆಯಾಗುತ್ತಾ ಬರುವುದು ಈ ಎರಡು ಪ್ರಕ್ರಿಯೆಗಳಲ್ಲಿ ಹೊಸ ಪದಗಳು ಹೆಚ್ಚಾಗಿ ಸೇರಿಕೊಂಡಿರುವುದು ಕಾಣುತ್ತದೆ. ಜೊತೆಗೆ ಹೀಗೆ ಸ್ವೀಕೃತಗೊಂಡ ಪದಗಳು ಅನನ್ಯತೆಯ ಸೂಚಕಗಳಾಗಿಲ್ಲ ಎನ್ನುವುದನ್ನೂ ಇಲ್ಲಿ ಗಮನಿಸಬಹುದಾಗಿದೆ.

೭. **ವಸ್ತುಗಳ ಉಪಯೋಗ ಮೌಲ್ಯ ಮತ್ತು ಪದಕೋಶ:** ಯಾವ ವಸ್ತು ಇನ್ನೂ ಬಳಕೆಯಲ್ಲಿದೆಯೋ ಆ ಪದವೂ ಜೀವಂತವಾಗಿರುತ್ತದೆ. ವಸ್ತುವಿನ, ಪರಿಕರದ ಬಳಕೆ ಇಲ್ಲವಾದಾಗ ಅದನ್ನು ಸೂಚಿಸಲು ಬಳಸುತ್ತಿದ್ದ ಪದಗಳು ಆಡುನುಡಿಗಳಲ್ಲಿ ನಿಧಾನವಾಗಿ ಜಾಗ ಕಳೆದುಕೊಳ್ಳುತ್ತವೆ. ಉದಾಹರಣೆಗೆ, 'ಸಿಕ್ಕ'[೫೧], 'ಸಂಬಳಿಗಿ'

ಆದರೆ ರೂಪಕಾತ್ಮಕ ವಿಸ್ತರಣೆ ಪಡೆದ ಪದಗಳು ಬಳಕೆಯಾಚೆಗಿನ ವಲಯದಲ್ಲಿ ಉಳಿದುಕೊಂಡಿರುವುದನ್ನು ಗಮನಿಸಬಹುದು. ಉದಾಹರಣೆಗೆ,

ಟಿಪ್ಪಣಿಗಳು

೧. People construct a universe of meaning through commodities they use, they use these objects to make visible and stable cultural categories, to deploy discriminating values and to mark aspects of their self and others.

೨. "Actant is a term developed from recent approaches in the sociology of science and technology which refers to entities both human and non-human which have the ability to 'act' socially"(Ian Woodword; 2007; p.15).

೩. Construct: ಇದು ತಾನಾಗಿಯೇ ಇರುವುದಕ್ಕಿಂತ ಭಿನ್ನವಾಗಿದ್ದು ಸಮುದಾಯದ ಸಾಮೂಹಿಕ ಒಪ್ಪಂದದೊಂದಿಗೆ ರೂಪಿತವಾದದ್ದು.

೪. ಸೀರೆಗೆ ಇಲ್ಲಿ ಸೀರಿ ಮತ್ತು ಶ್ಯಾಲಿ ಎಂದು ಎರಡು ಬಗೆಯಲ್ಲಿ ಕರೆಯುತ್ತಾರೆ.

೫. ಗಂಡಸರು, ಹುಡುಗರು ಸೊಂಟದ ಸುತ್ತ ಸುತ್ತಿಕೊಳ್ಳುವ ನೂಲಿನ ವಸ್ತ್ರ.

೬. ಕಿವಿಯ ಓಲೆ.

೭. ಸೊಂಟದ ಸುತ್ತ ಧರಿಸುವ ಉಡುದಾರ.

೮. ಐದು ಎಳೆಯ ಸರ.

೯. ಕೈಗೆ ಧರಿಸುವ ಬಳೆಯಂತಹ ಆಭರಣ.

೧೦. ಹೊರೆಯ ಭಾರ ತಲೆಗೆ ಒತ್ತದಂತೆ ತಲೆಮೇಲೆ ಸುರುಳಿ ಸುತ್ತಿ ಇಟ್ಟುಕೊಳ್ಳುವ ವಸ್ತ್ರ.

೧೧. ಬೆತ್ತದಿಂದ ಮಾಡಿದ ಬುಟ್ಟಿ.

೧೨. ಬ್ರಾಹ್ಮಣ ಗಂಡಸು ಉಪನಯನವಾದ ಬಳಿಕ ಧರಿಸುವ ಪವಿತ್ರವಾದ ನೂಲು.

೧೩. ಸೊಂಟಕ್ಕೆ ಸುತ್ತಿಕೊಳ್ಳುವ ಪಂಜಿಯನ್ನು ಬ್ರಾಹ್ಮಣರು ಅಂಗೋಸ್ತ್ರ ಎನ್ನುತ್ತಾರೆ.

೧೪. ಒಂದು ಬಗೆಯ ಮಣ್ಣಿನ ಪಾತ್ರೆ.

೧೫. ಮಣ್ಣಿನ ಬಟ್ಟಲು.

೧೬. ರುಬ್ಬುವ ಕಲ್ಲು.

೧೭. ಹಿಂದೆ ಬತ್ತ ಕುಟ್ಟಲು ಮನೆಯ ಮುಂದೆ ಇರುತ್ತಿದ್ದ ಭತ್ತ ಕುಟ್ಟುವ ಒರಳು.

೧೮. ಮಾಂಸದಡುಗೆ ಮಾಡುವ ಮಡಿಕೆ.

೧೯. ಮಣ್ಣಿನ ಕಲಶ.

೨೦. ಅಕ್ಷತೆ.

೨೧. ಬತ್ತ, ಅಕ್ಕಿ ಅಳೆಯುವ ಮರದ ಪಾತ್ರೆ.

೨೨. ಹೊಸ ಕದಿರಿನ ಸಂಭ್ರಮವನ್ನು ಆಚರಿಸುವ ಆಚರಣೆ.

೨೩. ಮರದ ಬಳ್ಳಿಯಿಂದ ಅಥವಾ ಬೆತ್ತದಿಂದ ಮಾಡಿದ ದೊಡ್ಡ ಬುಟ್ಟಿ.

೨೪. ಮರದ ಬೀಳಿನಿಂದ ಅಥವಾ ಬೆತ್ತದಿಂದ ಮಾಡಿದ ಒಂದು ಬಗೆಯ ಬುಟ್ಟಿ.

೨೫. ಮೊರ.

೨೬. ಮಣ್ಣಿನ ಗುಂಡಗಿನ ದೊಡ್ಡ ಪಾತ್ರೆ.

೨೭. ಮರದ ದೊಡ್ಡ ಪೆಟ್ಟಿಗೆ.

೨೮. ಹಿಂದೆ ವರ್ತಕರು ವಾಸಿಸುತ್ತಿದ್ದ ಮನೆಗಳು. ಇವು ವ್ಯಾಪಾರ ಚಟುವಟಿಕೆ ನಡೆಸಲು ಅನುವಾಗುವಂತೆ ದೊಡ್ಡದಾಗಿ ಇರುತ್ತಿದ್ದವು.

೨೯. ಮನೆ ಮುಂದಿನ ಜಗುಲಿ.

೩೦. ಕೃಷಿ ಇರುವ ಮನೆಗಳಲ್ಲಿ ಸಾಮಗ್ರಿಗಳನ್ನು ದಾಸ್ತಾನು ಮಾಡುತ್ತಿದ್ದ ಕೊಠಡಿ, ದೈವಸ್ಥಾನಕ್ಕೂ 'ಗಯ್ಡಿ' ಎನ್ನುತ್ತಾರೆ.

೩೧. ಮನೆಗೆ ಆಧಾರವಾಗಿರುವ ಕಂಬ.

೩೨. ಅಂಗಳದಲ್ಲಿರುವ ಕೃಷಿ ಚಟುವಟಿಕೆಯಲ್ಲಿ ಪ್ರಮುಖವಾಗಿರುವ ಕಂಬ.

೩೩. ಮಾಳಿಗೆ.

೩೪. ಅಡ್ಡ ತೊಲೆ.

೩೫. ಮನೆಯಿಂದ ವ್ಯವಸಾಯದ ಭೂಮಿ ಇರುವ ದಿಕ್ಕಿಗಿರುವ ಬಾಗಿಲು.

೩೬. ಹಿಂದೆ ನವರಾತ್ರಿಯಂದು ಹುಡುಗರು ಹೂವಿನ ಕೋಲು ಹಿಡಿದು ಮನೆಮನೆಗೆ 'ಆಶ್ವಯುಜ ಶುದ್ಧ ಮಾರ್ನವಮಿ ಬರಲೆಂದು' ಎಂದು ಹಾಡುತ್ತಾ ಹೋಗುತ್ತಿದ್ದ ಆಚರಣೆ ಇತ್ತು. ಅದನ್ನು 'ಹೂವಿನ ಕೋಲು' ಎಂದು ಕರೆಯುತ್ತಾರೆ.

೩೭. ಹನ್ನೆರಡು ಅಂಕಣದ ಮನೆ, ದೊಡ್ಡ ಮನೆ.

೩೮. ಹೆಬ್ಬಾಗಿಲು ಇರುವ ಮನೆ.

೩೯. ಹುಡುಗಿ ಮೈನರೆದ ಸಂದರ್ಭದ ಆಚರಣೆ.

೪೦. ನೇಗಿಲು.

೪೧. ನಟ್ಟಿ ಅಳೆಯುವ ಕೋಲು.

೪೨. ಬತ್ತ ಬಡಿಯುವ ಮಂಚ.

೪೩. ಮರದ ನೀರೆತ್ತುವ ಪಾತ್ರೆ.

೪೪. ನೀರು ಮೊಗೆವ ಸಾಧನ.

೪೫. ದೈವ ಭೂತದ ಮರದ ಆಕೃತಿಗೆ ಇರುವ ಹೆಸರು.

೪೬. ದೇವಿಯ ಸಂಕೇತವಾಗಿರುವ ಹಲಗೆ.

೪೭. ಕೆಯ್ ಕೊಯ್ಯುವ ಕತ್ತಿ

೪೮. ಹನೆ ಮರದ ಗೊನೆ ಕಡಿಯುವ ಕತ್ತಿ

೪೯. ಸೊಪ್ಪು ಕತ್ತರಿಸುವ ಕತ್ತಿ

೫೦. ಹುಲ್ಲು ಕತ್ತರಿಸುವ ಕತ್ತಿ

೫೧. ಮಜ್ಜಿಗೆ ಪಾತ್ರೆ ಮುಂತಾದುವನ್ನು ತೂಗು ಹಾಕಲು ಬಳಸುವ ಸಾಧನ

• • •

ಅಧ್ಯಾಯ : ನಾಲ್ಕು

ಭಾಷೆ ಮತ್ತು ಲೋಕಗ್ರಹಿಕೆ

ಅಧ್ಯಾಯ : ನಾಲ್ಕು

ಭಾಷೆ ಮತ್ತು ಲೋಕಗ್ರಹಿಕೆ

ಪ್ರತಿ ಜನಾಂಗ ಅಥವಾ ಸಮುದಾಯದ ಲೋಕಗ್ರಹಿಕೆಯೂ ತನ್ನದೇ ಆದ ನೆಲೆಯಲ್ಲಿ ವಿಶಿಷ್ಟವಾದುದಾಗಿರುತ್ತದೆ. ಇದು ತನ್ನ ಸುತ್ತಲಿನ ಇನ್ನಿತರ ಸಮುದಾಯಗಳ ಜೊತೆ ಕೆಲವನ್ನು ಸಮಾನವಾಗಿ ಹಂಚಿಕೊಂಡಿರಬಹುದು ಮತ್ತು ತನ್ನದೇ ಆದ ಕೆಲವು ವೈಶಿಷ್ಟ್ಯಗಳನ್ನು ಹೊಂದಿರಬಹುದು.

ಮನುಷ್ಯನ ಮೆದುಳು ಜಗತ್ತನ್ನು ಗ್ರಹಿಸಿ, ಮಾನಸಿಕವಾಗಿ ವಿಂಗಡನೆ ಮಾಡುತ್ತಾ ಗ್ರಹಿಕೆಯನ್ನು ರೂಪಿಸಿಕೊಳ್ಳುತ್ತದೆ. ತನ್ನ ಗ್ರಹಿಕೆ ಅಥವಾ ಮಾನಸಿಕ ಬಿಂಬ ಮತ್ತು ಭೌತಿಕ ಸಂಗತಿಗಳೊಡನೆ ಒಂದು ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತದೆ. ಅದನ್ನು ಗುರುತಿಸಲು ಭಾಷಿಕವಾಗಿ ಹೆಸರಿಸುವ ಕೆಲಸ ನಡೆಯುತ್ತದೆ. ಇದು ಆರಂಭಿಕ ಹಂತ. ಆದರೆ ನಂತರದಲ್ಲಿ ಆ ವಾಸ್ತವದ ಗೈರುಹಾಜರಿಯಲ್ಲೂ ಆ ಹೆಸರು ವಾಸ್ತವ ಸಂಗತಿಯೊಡನೆ ತಳುಕು ಹಾಕಿಕೊಂಡಿದ್ದ ಬಿಂಬವನ್ನು ಮುನ್ನೆಲೆಗೆ ತರುತ್ತದೆ. ಹೀಗೆ ಅದರ ರಚನೆಯಲ್ಲೋ, ಪರಿಕಲ್ಪನೆಯಲ್ಲೋ, ಗುಣದಲ್ಲೋ ಸಾಮ್ಯವಿರುವ ಇನ್ನೊಂದು ಸಂಗತಿಗೆ ಅನ್ವಯಿಸುವ ಕೆಲಸ ನಡೆಯುತ್ತದೆ. ಈ ಹಂತದಲ್ಲಿ ರೂಪಕಗಳು ಮೈದಾಳುತ್ತವೆ. ಈ ಸಂಗತಿಯನ್ನು ಕಳೆದ ಅಧ್ಯಾಯದಲ್ಲಿ ಭೌತಿಕ ಸಂಸ್ಕೃತಿಯ ಕುರಿತಾದ ಅಧ್ಯಯನದಲ್ಲಿ ಗಮನಿಸಲಾಗಿದೆ. ಈ ಅಧ್ಯಾಯದಲ್ಲಿ ಅದನ್ನು ಇನ್ನಷ್ಟು ವಿಸ್ತರಿಸಲಾಗಿದೆ.

ಒಂದು ಸಮುದಾಯ ತನ್ನದೇ ಆದ ಲೋಕಗ್ರಹಿಕೆಯನ್ನು ಹೊಂದಿರುತ್ತದೆ ಎಂಬ ಬಗ್ಗೆ ಜಾನಪದತಜ್ಞರು, ಮಾನವಶಾಸ್ತ್ರಜ್ಞರು, ಸಂಜ್ಞಾನಾತ್ಮಕ ಭಾಷಾವಿಜ್ಞಾನಿಗಳು ತಮ್ಮ ಅಧ್ಯಯನಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಪ್ರಜ್ಞೆಯ ನೆಲೆಯದ್ದಾದರೂ ಅದನ್ನು ಗುರುತಿಸುವುದು ಭಾಷಿಕವಾಗಿ. ಹೀಗಾಗಿ "ಸಮುದಾಯದ ಲೋಕಗ್ರಹಿಕೆಯನ್ನು ಅರ್ಥಮಾಡಿಕೊಳ್ಳುವ ದಾರಿಯನ್ನು ಭಾಷೆ ತೋರುತ್ತದೆ"(Crystal David; 2000;p:49) ಜೊತೆಗೆ ಭಾಷೆಯೂ ಗ್ರಹಿಕೆಯನ್ನು ರೂಪಿಸುವಲ್ಲಿ ಹೇಗೆ ಪ್ರಭಾವ ಬೀರುತ್ತದೆ ಎಂಬ ಬಗ್ಗೆ ಹಿಂದಿನ ಅಧ್ಯಾಯಗಳಲ್ಲಿ ತಾತ್ವಿಕವಾಗಿ ಚರ್ಚಿಸಲಾಗಿದೆ. "ಲೋಕಗ್ರಹಿಕೆಯ ಹಲವು ಸಾಧ್ಯತೆಗಳಿಗೆ ಭಾಷೆ ಅನುವು ಮಾಡಿಕೊಡುವಂತೆ ಕಾಣುತ್ತದೆ"(ನಾರಾಯಣ.ಕೆ.ವಿ(ಸಂ);೨೦೦೫;ಪು:೨೨). ಹೀಗಾಗಿ ಆಯಾ ಪ್ರದೇಶ ಮತ್ತು ಸಮಾಜಕ್ಕೆ ಅನುಗುಣವಾಗಿ ಸಮುದಾಯಗಳು ಭಿನ್ನ ಲೋಕಗ್ರಹಿಕೆಗಳನ್ನು ಭಾಷೆಯ ಮೂಲಕ ಕಟ್ಟಿಕೊಂಡಿರುವುದು ಕಾಣುತ್ತದೆ. ಈ ನೆಲೆಯಲ್ಲಿ ಭಾಷೆ ಕಟ್ಟಿಕೊಡುವ ಜಗತ್ತು ಸಮುದಾಯಗಳ ಗ್ರಹಿಕೆಯ ಅನನ್ಯತೆಯನ್ನು ತೆರೆದು ತೋರುತ್ತದೆ.

೪.೧. ಭಾಷೆ ಮತ್ತು ಚಿಂತನಾಕ್ರಮ

ಭಾಷೆ ಒಂದು ಮಾನಸಿಕ ಕ್ರಿಯೆ. ಚಿಂತನಾ ಪ್ರಕ್ರಿಯೆಯ ಮೂಲಕ ನಾವು ಭಾಷಿಕ ಸಂಜ್ಞೆ ಮತ್ತು ಮೂರ್ತ ಹಾಗೂ ಅಮೂರ್ತ ಸಂಗತಿಗಳೊಡನೆ ಸಂಬಂಧ ಸಾಧಿಸುತ್ತೇವೆ. ಪದ ಮತ್ತು ಮೂರ್ತ ಅಥವಾ ಅಮೂರ್ತ ಸಂಗತಿ ಮತ್ತು ಅರ್ಥ ಇವುಗಳ ನಡುವಣ ಸಂಬಂಧ ಸಾಮಾಜಿಕ ನೆಲೆಯಲ್ಲಿ ನಿರ್ಧರಿತವಾಗುವಂಥದ್ದು. ಭಾಷಾ ಸಮುದಾಯದಲ್ಲಿ ಮೂರ್ತ ಮತ್ತು ಅಮೂರ್ತ ಸಂಗತಿ ಮತ್ತು ಅವುಗಳ ಧ್ವನಿರೂಪ ಕುರಿತು ಒಂದು ಒಪ್ಪಂದವಿರುತ್ತದೆ. ಇದು ಅಲಿಖಿತ ಒಪ್ಪಂದ. ಜನರ ಜೀವನಕ್ರಮ, ಲೋಕ ಮತ್ತು ಭಾಷೆಯ ಬಗೆಗಿನ ಅವರ ಗ್ರಹಿಕೆ ಅವರು ತಮ್ಮ ಸುತ್ತಲಿನ ಜಗತ್ತನ್ನು ಗ್ರಹಿಸುವಲ್ಲಿ, ವಿಂಗಡಿಸಿ ನೋಡುವಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಇಲ್ಲಿ 'ಲೋಕದೃಷ್ಟಿ' ಎಂಬುದಕ್ಕೆ ಬದಲಾಗಿ 'ಲೋಕಗ್ರಹಿಕೆ' ಎಂಬ ಪದವನ್ನು ಬಳಸಲಾಗಿದೆ. 'ಲೋಕದೃಷ್ಟಿ' ಎಂಬ ಪದದ ಅರ್ಥವ್ಯಾಪ್ತಿ ದೊಡ್ಡದು. ಇವುಗಳ ನಡುವಣ ವ್ಯತ್ಯಾಸವನ್ನು ಜರ್ಮನ್ ಭಾಷಾಶಾಸ್ತ್ರಜ್ಞ ಹಂಬೋಲ್ಟ್ ವಿವರವಾಗಿ ಚರ್ಚಿಸಿದ್ದಾನೆ.

೪.೨. ಲೋಕಗ್ರಹಿಕೆ ಮತ್ತು ಲೋಕದೃಷ್ಟಿ

ನಾವು ಇಂದು 'ಲೋಕದೃಷ್ಟಿ' ಅಥವಾ ಇಂಗ್ಲಿಷಿನಲ್ಲಿ 'ವರ್ಲ್ಡ್‌ವ್ಯೂ' ಎಂದು ಬಳಸುವ ಪದವನ್ನು ಎರಡು ನೆಲೆಯಲ್ಲಿ ಅರ್ಥೈಸುತ್ತಾ ಬರಲಾಗಿದೆ. ನಾವು ಈ ಎರಡು ಪ್ರತ್ಯೇಕ ಕಲ್ಪನೆಗಳಿಗೆ ಒಂದೇ ಪದವನ್ನು ಬಳಸುತ್ತಾ ಬಂದಿದ್ದೇವೆ. ಆ ಎರಡು ಪ್ರತ್ಯೇಕ ಪರಿಕಲ್ಪನೆಗಳನ್ನು

ಜರ್ಮನ್ ಭಾಷೆಯಲ್ಲಿ 'weltanschauung'[೧] ಮತ್ತು 'weltansicht'[೨] ಎನ್ನಲಾಗಿದೆ. ಮೊದಲನೆಯದು ಭಾಷೆಯ ಮೂಲಕ ನಾವು ಜಗತ್ತನ್ನು ಗ್ರಹಿಸುವ ಮತ್ತು ಕಟ್ಟಿಕೊಳ್ಳುವ ಬಗೆಯನ್ನು ಹೇಳುತ್ತದೆ. ಎರಡನೆಯದು ಬದುಕಿನ ಬಗ್ಗೆ ಒಟ್ಟಾರೆಯಾಗಿ ಒಂದು ಸಮುದಾಯ ಕಟ್ಟಿಕೊಂಡ ನಂಬಿಕೆಯನ್ನು ಸೂಚಿಸುತ್ತದೆ. ಈ ಮೊದಲನೆಯದು ಒಟ್ಟಾರೆ ದೃಷ್ಟಿ ರೂಪಿಸಿಕೊಳ್ಳುವ ಮೊದಲು ನಡೆಯುವ ಕ್ರಿಯೆ. ಪ್ರಸ್ತುತ ಅಧ್ಯಯನದಲ್ಲಿ ಮೊದಲನೆಯ ಪರಿಕಲ್ಪನೆಯನ್ನು 'ಲೋಕಗ್ರಹಿಕೆ' ಎಂದೂ ಎರಡನೆಯ ಪರಿಕಲ್ಪನೆಯನ್ನು 'ಲೋಕದೃಷ್ಟಿ' ಎಂದೂ ಕರೆಯಲಾಗಿದೆ. ಎರಡನೆಯ ಪರಿಕಲ್ಪನೆ 'ಲೋಕದೃಷ್ಟಿ' ಕುರಿತಂತೆ ಬುಡಕಟ್ಟು ಮತ್ತು ಜನಪದ ಕ್ಷೇತ್ರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಇಲ್ಲಿ ಚರ್ಚಿಸಲಾಗುವ 'ಲೋಕ ಗ್ರಹಿಕೆ' ಅದರಲ್ಲೊಂದು ಭಾಗ ಮಾತ್ರ.

"ಒಂದು ಸಮುದಾಯದ ವಿಶಿಷ್ಟ ನಂಬಿಕೆಗಳು ಮತ್ತು ಆ ನಂಬಿಕೆಯ ಪಾತಳಿಯಲ್ಲಿ ರೂಪುಗೊಂಡ ಸೃಜನಶೀಲ ಸೃಷ್ಟಿಗಳು ಲೋಕದೃಷ್ಟಿಯ ಪ್ರಮುಖ ಅಂಶಗಳು, ಸುತ್ತಲ ಜಗತ್ತನ್ನು ಕುರಿತು ಆ ಸಮುದಾಯ ಕಂಡುಕೊಂಡ ದರ್ಶನವೇ ಅವರ ಲೋಕದೃಷ್ಟಿ; ಅವರು ನಂಬಿ ಕಾಪಾಡಿಕೊಂಡು ಬಂದ ಮೌಲ್ಯಗಳೇ ಅವರ ಲೋಕದೃಷ್ಟಿ; ಅವರ ವಿವೇಕ ಮತ್ತು ಸಕಾರಣವಾಗಿ ರೂಪಿಸಿಕೊಂಡ ನೀತಿ-ನಿಯಮಗಳೇ ಅವರ ಲೋಕದೃಷ್ಟಿ; ಸುತ್ತಲ ಒತ್ತಡಗಳನ್ನು ಮೀರಿ ತನ್ನದನ್ನು ಅನನ್ಯ ಶ್ರದ್ಧೆಯಿಂದ ಕಾಪಾಡಿಕೊಂಡು ಬಂದ ಗುಣವೇ ಲೋಕದೃಷ್ಟಿ; ಹೊಸದರ ಜೊತೆಗೆ ಬೆರೆತೂ ಅದರಲ್ಲಿ ತನ್ನತನವನ್ನು ಉಳಿಸಿಕೊಂಡ ವಿಶೇಷ ಪ್ರಕ್ರಿಯೆಯೇ ಲೋಕದೃಷ್ಟಿ"(ಬೋರಲಿಂಗಯ್ಯ.ಹಿ.ಚಿ;೨೦೦೧;ಪು:೧೪). ಹೀಗೆ ನೋಡಿದಾಗ ಲೋಕದೃಷ್ಟಿ ಒಟ್ಟು ಒಂದು ಸಮುದಾಯ ಬದುಕಿನ ಬಗೆಗೆ ಹೊಂದಿರುವ ದೃಷ್ಟಿ ಎಂಬ ವಿಸ್ತೃತ ನೆಲೆಗೆ ಬರಬೇಕಾಗುತ್ತದೆ. ಆದರೆ ಪ್ರಸ್ತುತ ಅಧ್ಯಯನ ಹಲವು ಜಾತಿ, ವರ್ಗಗಳಿಗೆ ಸೇರಿರುವ ಜನರ ಗುಂಪಾಗಿರುವುದರಿಂದ ಒಟ್ಟಾರೆಯಾಗಿ ಈ ಭಾಷಿಕ ಸಮುದಾಯದ ಲೋಕದೃಷ್ಟಿಯನ್ನು ಗುರುತಿಸುವ ನಿಟ್ಟಿನಲ್ಲಿ ಗಮನ ಹರಿಸಲಾಗಿಲ್ಲ. ಇಲ್ಲಿನ ಗಮನ ಒಂದು ಭಾಷಿಕ ಸಮುದಾಯದ ಲೋಕದೃಷ್ಟಿಯೆಡೆಗೆ. ಒಂದು ಭಾಷಿಕ ಸಮುದಾಯ ತನ್ನ ಸುತ್ತಲಿನ ಲೋಕವನ್ನು ಗ್ರಹಿಸಿ ವಿಂಗಡಿಸುವ ಕುರಿತು ಮಾನವಶಾಸ್ತ್ರೀಯ ಭಾಷಾವಿಜ್ಞಾನದಲ್ಲಿ ವಿವಿಧ ಅಧ್ಯಯನಗಳು ನಡೆದಿವೆ. ಈ ನೆಲೆಯಲ್ಲಿ ಒಂದು ಭಾಷಿಕ ಸಮುದಾಯ ಲೋಕವನ್ನು ಹೇಗೆ ಗ್ರಹಿಸುತ್ತದೆ, ಅಲ್ಲಿ ಭಾಷೆಯ ಪಾತ್ರ ಎಂಥದ್ದು ಎಂಬ ಬಗ್ಗೆ ಚಿಂತನೆ ನಡೆಸಲಾಗಿದೆ. ಜರ್ಮನ್ ಚಿಂತಕ ಹಂಬೋಲ್ಟ್ ಲೋಕಗ್ರಹಿಕೆಯನ್ನು "ಜಗತ್ತನ್ನು ಭಾಷಿಕ ಪರಿಕರಗಳ ಮೂಲಕ ಕಟ್ಟಿಕೊಳ್ಳುವ ಬಗೆ"ಯಾಗಿ ಗ್ರಹಿಸುತ್ತಾರೆ.[೩]

ಭಾಷೆ ಮತ್ತು ಚಿಂತನೆ ನಡುವಣ ಸಂಬಂಧದ ನೆಲೆಯಲ್ಲಿ ಸಪೀರ್ ವೂರ್ಫ್ ಪ್ರಮೇಯ ಬಹಳ ಮುಖ್ಯವಾದದ್ದು. ಎರಡನೇ ಅಧ್ಯಾಯದಲ್ಲಿ ಸಪೀರ್ ವೂರ್ಫ್ ಪ್ರಮೇಯವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಭಾಷೆ ನಮ್ಮ ಚಿಂತನೆಯನ್ನು ನಿರ್ದೇಶಿಸುತ್ತದೆ ಎಂಬುದು ಮೊದಲನೆಯ ನಿರ್ಣಯವಾದರೆ ಎರಡನೆಯದು ಭಾಷೆ ನಮ್ಮ ಚಿಂತನೆಯನ್ನು ಪ್ರಭಾವಿಸುತ್ತದೆ ಎಂಬುದು. ವೂರ್ಫ್ ವಿಸ್ತರಿಸಿ ಹೇಳಿದ ಮಾತುಗಳನ್ನು ಗಮನಿಸುವುದಾದರೆ,

> "ವೂರ್ಫ್ ಹೇಳುವಂತೆ ನಮ್ಮ ಸುತ್ತಣ ಲೋಕವನ್ನು ನಾವು ನಮ್ಮ ಭಾಷೆಯು ಸೂಚಿಸುವ ಗೆರೆಗಳಿಗೆ ಅನುಗುಣವಾಗಿ ವಿಭಜಿಸಿ ಗ್ರಹಿಸುತ್ತೇವೆ. ಲೋಕದಲ್ಲಿ ಬಗೆಗಳು, ಮಾದರಿಗಳು, ಆಕಾರಗಳು ಅಂತರ್ಗತವಾಗಿರುವುದಿಲ್ಲ. ನೋಡುವವರಿಗೆ ತಂತಾನೇ ಗೋಚರಿಸುವಂತೆ ವಿಭಜಿತವಾಗಿರುವುದಿಲ್ಲ. ಕೆಲಿಡಿಯೋ ಸ್ಕೋಪನ್ನು ತಿರುಗಿಸಿದಂತೆಲ್ಲ ಒಳಗಿನ ಚಿತ್ರದ ಆಕಾರ ಪಲ್ಲಟಗೊಳ್ಳುವಂತೆ ಲೋಕಗ್ರಹಿಕೆಯ ಹಲವು ಸಾಧ್ಯತೆಗಳಿಗೆ ಭಾಷೆ ಅನುವು ಮಾಡಿಕೊಡುವಂತೆ ಕಾಣುತ್ತದೆ. ನಮ್ಮ ಮನಸ್ಸಿನಲ್ಲಿರುವ ಭಾಷಾ ವ್ಯವಸ್ಥೆಯ ಸೂಚನೆಗಳಿಗೆ ಅನುಗುಣವಾಗಿ ನಾವು ಲೋಕದ ತೋರಿಕೆಯ ಆಕಾರಗಳನ್ನು ಗ್ರಹಿಸುತ್ತೇವೆ. ಈ ನಿಯಮಗಳೆಲ್ಲವನ್ನು ನಮ್ಮ ಭಾಷಾ ಸಮುದಾಯ ಒಪ್ಪಿಕೊಂಡಿರುತ್ತದೆ" (ಉದ್ಧೃತ; ನಾರಾಯಣ.ಕೆ.ವಿ(ಸಂ);೨೦೦೫;ಪು:೨೨).

ವೂರ್ಫ್‌ನ ಈ ಪ್ರಮೇಯವನ್ನು ಹಾಗೆಯೇ ಒಪ್ಪುವುದಾದರೆ ಭಾಷೆಯೇ ನಮ್ಮ ಗ್ರಹಿಕೆಯನ್ನು ಮುನ್ನಡೆಸುತ್ತದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಭಾಷೆಯ ಈ ಹೆಚ್ಚುಗಾರಿಕೆಯನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಭಾಷೆ ಮಾನವ ನಿರ್ಮಿತ ಎಂಬುದನ್ನು ಒಪ್ಪುವುದಾದರೆ ಭಾಷೆಯ ಸೃಷ್ಟಿಕ್ರಿಯೆಯಲ್ಲಿ ಚಿಂತನೆಯೇ ಕೆಲಸ ಮಾಡಿದೆ. ಹೀಗಾಗಿ ನಾವು ಇಂದ್ರಿಯಗಳ ಮೂಲಕ ಗ್ರಹಿಸಿದ ಸಂಗತಿಗಳು ನಮ್ಮ ಮೆದುಳಿನಲ್ಲಿ ಬಿಂಬಗಳಾಗಿ ದಾಖಲಾಗುತ್ತವೆ, ಇವಕ್ಕೆ ನಾವು ಭಾಷೆಯ ಮೂಲಕ ಹೆಸರು ಕೊಡುತ್ತೇವೆ. ಹೀಗಾಗಿ ಭಾಷೆಯ ಮೂಲಕ ಒಂದು ಸಮುದಾಯದ ಲೋಕಗ್ರಹಿಕೆಯನ್ನು ಅರಿಯಬಹುದು. ನಂತರದ ಹಂತದಲ್ಲಿ ಈ ವಿಂಗಡಣೆಗೆ ಕಾರಣವಾದ ಮೂಲ ಅಸ್ತಿತ್ವದ ಗೈರುಹಾಜರಿಯಲ್ಲೂ ಪದ ಇವುಗಳಲ್ಲಿ ಯಾವುದಾದರೊಂದು ಲಕ್ಷಣ ಹೊಂದಿರುವ ಬೇರೆ ಸಂಗತಿಯನ್ನು ಸೂಚಿಸುವಲ್ಲಿ ಬಳಕೆಯಾಗುವುದರ ಮೂಲಕ ಅರ್ಥವಿಸ್ತರಣೆ ಪಡೆಯುವುದನ್ನು ಗಮನಿಸಬಹುದು.

ಲೋಕಗ್ರಹಿಕೆಯನ್ನು ಭಾಷೆಯ ರಚನೆಯನ್ನು ಅಧ್ಯಯನ ಮಾಡುವ ಮೂಲಕ, ಜಗತ್ತನ್ನು ಭಾಷಿಕವಾಗಿ ವಿಂಗಡಿಸಿ ವ್ಯವಸ್ಥಿತಗೊಳಿಸಿಕೊಂಡಿರುವ ಬಗೆಯನ್ನು ವಿಶ್ಲೇಷಿಸುವ ಮೂಲಕ ಚರ್ಚೆ ಮಾಡಲಾಗುತ್ತದೆ. ಬಿಡಿಯಾದ ಮಾನವ ನಿರ್ಮಿತ ವಸ್ತುಗಳನ್ನು ಭೌತಿಕ ಸಂಸ್ಕೃತಿ ಯಡಿಯಲ್ಲಿ ಹಿಂದಿನ ಅಧ್ಯಾಯದಲ್ಲಿ ಗಮನಿಸಲಾಗಿದೆ. ಇಲ್ಲಿ ಕೋಟ ಭಾಷಿಕ ಸಮುದಾಯದ

ಕಾಲ ದೇಶ ಕುರಿತ ಕಲ್ಪನೆ, ಪ್ರಕೃತಿಯನ್ನು ಗ್ರಹಿಸಿರುವ ಬಗೆ ಮತ್ತು ತಾನು ಮತ್ತು ಅನ್ಯವನ್ನು ನಿರ್ವಚಿಸಿಕೊಂಡಿರುವ ಬಗೆ ಇವುಗಳನ್ನು ಮುಖ್ಯವಾಗಿ ಚರ್ಚಿಸಲಾಗಿದೆ.

೪.೩. ಕೋಟ ಭಾಷಿಕ ಸಮುದಾಯದ ಲೋಕಗ್ರಹಿಕೆ

ಕೋಟ ಭಾಷಿಕ ಸಮುದಾಯ ರಾಚನಿಕವಾಗಿ ಅನನ್ಯತೆಯನ್ನು ಹೊಂದಿರುವ ಕಾರಣದಿಂದಲೇ ಅದನ್ನು ಪ್ರತ್ಯೇಕ ಭಾಷಾ ಪ್ರಭೇದವಾಗಿ ಗುರುತಿಸಲಾಗಿದೆ. ಆದರೆ ಈ ಅನನ್ಯತೆ ಅವರ ಲೋಕಗ್ರಹಿಕೆಯ ಮೂಲಕ ಹೇಗೆ ವ್ಯಕ್ತವಾಗುತ್ತದೆ ಎಂಬುದನ್ನು ಗ್ರಹಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೪.೩.೧. ಸುತ್ತಲಿನ ಜಗತ್ತು[೪]

ಪ್ರಕೃತಿಯ ಮಡಿಲಲ್ಲಿ ಹುಟ್ಟಿ ಬೆಳೆದಿರುವ ಸಂಸ್ಕೃತಿಗಳು ಮೊತ್ತಮೊದಲು ಸಂಬಂಧ ಸ್ಥಾಪಿಸಿಕೊಳ್ಳುವುದು ಸುತ್ತಲಿನ ಪ್ರಾಕೃತಿಕ ಜಗತ್ತಿನೊಂದಿಗೆ. ಈ ನೆಲೆಯಲ್ಲಿ ಕೋಟ ಭಾಷಿಕ ಸಮುದಾಯ ಸುತ್ತಲಿನ ಭೂಮಿ ಮತ್ತು ಸಮುದ್ರದ ಜೊತೆ ನಿಕಟವಾದ ಸಂಬಂಧ ಬೆಳೆಸಿಕೊಂಡಿದೆ. ಕೃಷಿಯೇ ಪ್ರಧಾನ ಉದ್ಯೋಗವಾಗಿರುವ ಕಾರಣ ಭೂಮಿ ಅಥವಾ ನೆಲ ಭೌಗೋಳಿಕ ವಾಸ್ತವವಾಗಿ ಮಾತ್ರ ಅವರ ಕೋಶದಲ್ಲಿ ದಾಖಲಾಗದೆ ಸಂಪತ್ತಿನ ಸಂಕೇತ, ಫಲವಂತಿಕೆ, ಸಮೃದ್ಧಿಯ ಸಂಕೇತವಾಗಿ ದಾಖಲಾಗಿರುವುದು ಕಾಣುತ್ತದೆ. ಜೊತೆಗೆ ಭೂಮಿಯನ್ನು ವರ್ಗೀಕರಿಸಿರುವ ಬಗೆಯನ್ನು ಗಮನಿಸಿದಾಗ ಭೂಮಿಯ ತೇವಾಂಶ, ಕೃಷಿಯೋಗ್ಯ ಗುಣ ಇವು ಮುಖ್ಯವಾಗುವುದನ್ನು ಗಮನಿಸಬಹುದು. ಉದಾಹರಣೆಗೆ, ಗದ್ದೆ, ಬೈಲ್, ಬೆಟ್ಟ್, ಮಕ್ಕಿ, ಬಾನ್‌ನೀರ್‌ಮಕ್ಕಿ, ಮಕ್ಕಿತಾರ್ ಇತ್ಯಾದಿ. ಜಗತ್ತಿನ ಹೆಚ್ಚಿನ ಸಂಸ್ಕೃತಿಗಳು ಸಮೃದ್ಧಿಯ ಸಂಕೇತವಾಗಿರುವುದನ್ನು ಹೆಣ್ಣು ಎಂದು ಸಂಕೇತಿಸಿರುವುದು ಕಂಡುಬರುತ್ತದೆ. ಇಲ್ಲೆಲ್ಲ ಭೂಮಿಯನ್ನು ಹೆಣ್ಣು ಎಂದು ಕಾಣುತ್ತಾ ಬರಲಾಗಿದೆ. ಸಮುದ್ರವನ್ನೂ ಹೆಣ್ಣಾಗೇ ಇಲ್ಲಿನ ಸಂಸ್ಕೃತಿ ಪರಿಭಾವಿಸಿದೆ. ಮೀನುಗಾರಿಕೆಯನ್ನೇ ನೆಚ್ಚಿಕೊಂಡಿರುವ ಮೊಗವೀರರು ಸಮುದ್ರವನ್ನು 'ಗಂಗಾಮಣಿ' ಎಂದು ಕರೆದು ಸಮುದ್ರಕ್ಕಿಳಿಯುವ ಮುನ್ನ ಪೂಜಿಸುತ್ತಾರೆ.

ಆದಿಮ ಸಂಸ್ಕೃತಿಗಳ ಆಚರಣೆಯಲ್ಲಿ ನೀರಿಗೆ ವಿಶೇಷ ಮಹತ್ವವಿತ್ತು. ಕೋಟ ಸಮುದಾಯದ ಬದುಕಿನಲ್ಲಿ ಮತ್ತು ಆಚರಣೆಗಳಲ್ಲಿ ನೀರು ಅತಿ ಮುಖ್ಯವಾಗಿದೆ. ಇಲ್ಲಿನ ಪ್ರಧಾನ ಜೀವನೋಪಾಯಗಳಾದ ಕೃಷಿ ಮತ್ತು ಮೀನುಗಾರಿಕೆ ಎರಡೂ ನೀರನ್ನೇ ಅವಲಂಬಿಸಿವೆ. ನೀರಿನ ಅವಲಂಬನೆಯನ್ನು ಅನುಸರಿಸಿ ಗುರುತಿಸುವ ಬಾನ್‌ನೀರ್ ಮಕ್ಕಿ, ಹಾಡಿನೀರ್‌ಮಕ್ಕಿ, ಕೊಜೆ ಮಣ್ಣ್, ಒಜ್ಜ್ರ ಮುಂತಾದ ಪದಗಳು ಕೃಷಿ ಮತ್ತು ನೀರಿನ ಲಭ್ಯತೆಯನ್ನು ಜೊತೆಗೆ ಕಾಣುವ ಬಗೆಯಾಗಿದೆ.

ಮಳೆಗಾಲದಲ್ಲಿ ಸಮುದ್ರ ರುದ್ರವಾಗಿರುವುದರಿಂದ ಈ ಅವಧಿಯಲ್ಲಿ ಎರಡು ಮೂರು ತಿಂಗಳು ಅವರು ಕಡಲಿಗೆ ಹೋಗುವುದಿಲ್ಲ. ಈ ಅವಧಿಯ ಕಡಲನ್ನು ಅವರು 'ಮಕ್ಕಳ ಕೂಳು' ಎಂದು ಕರೆಯುತ್ತಾರೆ. ಮಳೆಗಾಲ ಕಳೆದ ಬಳಿಕ ಸಮುದ್ರದ ರೌದ್ರತೆ ಕಡಿಮೆಯಾಗುತ್ತದೆ. ಇದನ್ನು ಅವರು 'ಗಂಡನ ಕೂಳು' ಎಂದು ಕರೆಯುತ್ತಾರೆ. ಅಂದರೆ ಇಲ್ಲಿ ಹೆಣ್ಣಿಗೆ ಮಕ್ಕಳು ಹಾಕುವ ಅನ್ನ ಯಾವಾಗಲೂ ಹಂಗಿನದೇ, ಅಲ್ಲಿ ಶಾಂತಿ ಇರುವುದಿಲ್ಲ, ಅದೇ ಗಂಡ ಹಾಕುವ ಕೂಳು ನೆಮ್ಮದಿಯದ್ದು ಎಂಬ ತಿಳುವಳಿಕೆ ಇಲ್ಲಿ ಕೆಲಸ ಮಾಡಿದೆ.

ಕೃಷಿಯೇ ಜೀವನಾಧಾರವಾಗಿರುವಲ್ಲಿ ಕೃಷಿ ಚಟುವಟಿಕೆಗಳು ಮಳೆಯನ್ನು ಅವಲಂಬಿಸಿ ರುತ್ತವೆ. ಅಶ್ವಿನಿ, ಭರಣಿ ಹೀಗೆ ನಕ್ಷತ್ರಗಳಿಗನುಸಾರವಾಗಿ ಹುಯ್ಯುವ ಮಳೆಯನ್ನು ಅದರ ತೀವ್ರತೆ ಮತ್ತು ವಿರಳತೆಯನ್ನು ನಕ್ಷತ್ರದ ಹೆಸರಿಟ್ಟೇ ಕರೆಯುವುದನ್ನು ಗಮನಿಸಬಹುದು.

ಉದಾ: ಆರ್ದ್ರೆ ಮಳೆ, ಮಘ ಮಳೆ, ಹುಬ್ಬೆ ಮಳೆ

ಪಂಚಭೂತಗಳಲ್ಲಿ ಎರಡಾದ ಭೂಮಿ ಮತ್ತು ನೀರನ್ನು ಇಲ್ಲಿನ ಜನ ನೋಡುವ ಬಗೆಯನ್ನು ಮೇಲೆ ಚರ್ಚಿಸಲಾಗಿದೆ. ಇನ್ನು ಮೂರನೆಯದಾಗಿ, ಬೆಂಕಿ ಅಥವಾ ಅಗ್ನಿಗೆ ಬ್ರಾಹ್ಮಣರ ಆಚರಣೆಗಳಲ್ಲಿ ವಿಶೇಷ ಮಹತ್ವವಿದೆ. ಆದರೆ ಬ್ರಾಹ್ಮಣೇತರರ ಆಚರಣೆಗಳಲ್ಲಿ ನೀರಿಗೆ ವಿಶೇಷ ಮಹತ್ವವಿದೆ. ಇಲ್ಲಿ ಬೆಂಕಿ 'ಗೆಂಡ'ದ ರೂಪದಲ್ಲಿ ಲೋಭನದ ಹೊಗೆ ಹಾಕುವಾಗ ಮಾತ್ರ ಆಚರಣೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇವು ಸಾಂಸ್ಕೃತಿಕ ವಿಶಿಷ್ಟತೆಯನ್ನು ಸಾರುವ ಸಂಗತಿಗಳಾಗಿವೆ. ಅಗ್ನಿಯ ಇನ್ನೊಂದು ರೂಪವಾದ ಬೆಳಕನ್ನೂ ದೇವರಾಗಿ ಬಾಹ್ಯ ಪ್ರಪಂಚದ ಸಂಕೇತವಾಗಿ ಇಲ್ಲಿನ ಜನ ಭಾವಿಸುತ್ತಾ ಬಂದಿದ್ದಾರೆ. ಹುಟ್ಟಿದ ಮಕ್ಕಳಿಗೆ ೧೧ ಅಥವಾ ೧೨ನೇ ದಿನದ ಶುದ್ಧದ ಬಳಿಕ ಮೊದಲು ಹೊರಗೆ ಕರೆತಂದು ಬೆಳಕು ಅಂದರೆ ಸೂರ್ಯನನ್ನು ತೋರಿಸುವ ಆಚರಣೆ ಇದೆ. ಸೂರ್ಯನನ್ನು 'ಸೂರ್ಯಮ್ಮ'[೨] ಎಂದು ಕರೆದಿರುವುದು ಇಲ್ಲಿನ ಜನಪದ ಹಾಡುಗಳಲ್ಲಿ ಕಾಣಿಸುತ್ತದೆ.

ಕರಾವಳಿಯ ಜನರಿಗೆ ಅದರಲ್ಲೂ ಮೀನುಗಾರರಿಗೆ ಗಾಳಿ ಬೀಸುವ ದಿಕ್ಕು ಅನುಕೂಲ ಕರವಾಗಿದ್ದರೆ ಮಾತ್ರ ಬದುಕು ನಿರಾತಂಕವಾಗಿ ಸಾಗಲು ಸಾಧ್ಯ. ಸಮುದ್ರದಲ್ಲಿ ಬೀಸುವ ಬಿರುಗಾಳಿಯನ್ನು ಇವರು 'ತುಫ್ಫಾನ್' ಎಂದು ಕರೆಯುತ್ತಾರೆ. ದೇವಿ 'ಗಂಗಾಮಣಿ'ಯೇ ಇದನ್ನು ನಿಯಂತ್ರಿಸುವವಳು ಎಂದು ನಂಬಿ 'ಕಡ್ಲ್' ಪೂಜೆ ಮಾಡುವಾಗ ಗಾಳಿ, 'ಬರ್ತ' 'ಇಳ್ತ'ಗಳು ಪ್ರತಿಕೂಲಕರವಾಗದಿರಲಿ ಎಂದು ಬೇಡಿಕೊಳ್ಳುವಲ್ಲಿ ಪ್ರಾಕೃತಿಕ ವಿದ್ಯಮಾನಗಳು ಕಾಣದ ಕೈಯ ನಿಯಂತ್ರಣದಲ್ಲಿವೆ ಎಂಬ ತಿಳುವಳಿಕೆ ಕಾಣಿಸುತ್ತದೆ.

ಇಲ್ಲಿ ಮೀನುಗಾರಿಕೆ, ಮಳೆ, ಬೆಳೆ, ಬದುಕು ಎಲ್ಲವನ್ನೂ ಆಕಾಶದಲ್ಲಾಗುವ ಬದಲಾವಣೆಗಳು ನಿರ್ಧರಿಸುವುದನ್ನು ಕಾಣುತ್ತೇವೆ. ಆಕಾಶ ನೋಡಿ ಈ ಬಾರಿಯ ಮಳೆ ಅನುಕೂಲಕರವಾಗಿದೆಯೇ ಇಲ್ಲವೇ ಎಂದು ತಿಳಿಯುತ್ತಾರೆ. ಬೆಳೆ ಇದರ ಮೇಲೆ ನಿರ್ಧರಿತವಾಗುತ್ತದೆ. ಪಶ್ಚಿಮದಲ್ಲಿ ಆಕಾಶ ಹಳದಿ ಮಿಶ್ರಿತ ಕೆಂಪು ಬಣ್ಣದಲ್ಲಿ ಕಾಣಿಸಿಕೊಂಡರೆ 'ಹಾಂಗಾರ್ ಇವತ್ತ್ ಶಾಡಿ ಬೀಳತ್ತ್' ಎಂದು ಮೀನು ಹೆಚ್ಚಿನ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತವೆ ಎಂಬುದನ್ನು ಮುಂಗಾಣುತ್ತಾರೆ.

ಅಲ್ಲದೆ, ಕೃಷಿ ಸಂಸ್ಕೃತಿಯಾದ್ದರಿಂದ ಸಸ್ಯ ಮತ್ತು ಪ್ರಾಣಿ ಜಗತ್ತಿನೊಂದಿಗೆ ಹತ್ತಿರದ ಒಡನಾಟವಿದ್ದುದು ಕಂಡುಬರುತ್ತದೆ. ಆದರೆ ಆಧುನಿಕತೆಯ ಆಗಮನದಿಂದಾಗಿ ನಿಧಾನವಾಗಿ ಈ ಸಂಬಂಧ ದೂರವಾಗುತ್ತಿರುವುದನ್ನು ಗಮನಿಸಬಹುದು.

ಆಧುನಿಕಪೂರ್ವ ಸಂದರ್ಭದಲ್ಲಿ ದೇಶದ ಪರಿಕಲ್ಪನೆ ಪ್ರಾಕೃತಿಕ ಸಂಗತಿಗಳಾದ ಹೊಳೆ, ಬೆಟ್ಟಗಳು, ಸಮುದ್ರ ಮೊದಲಾದವುಗಳಿಂದ ಬದ್ಧವಾಗಿತ್ತು. ಹೀಗಾಗಿ ಪ್ರಾಕೃತಿಕ ಮತ್ತು ಭೌಗೋಳಿಕ ಅಂಶಗಳು ಸಂಸ್ಕೃತಿಯ ರೂಪಣೆಯಲ್ಲಿ ನಿರ್ಣಾಯಕ ಸಂಗತಿಗಳಾಗಿದ್ದವು. ಇದನ್ನು ಅವರ ಭಾಷಿಕ ಅಭಿವ್ಯಕ್ತಿಯ ಮೂಲಕ ಗುರುತಿಸಬಹುದಾಗಿದೆ. ಭಾಷಿಕವಾಗಿ ಹೆಸರಿಸುವಲ್ಲಿನ ಭಿನ್ನತೆ, ಭಾಷಾಬಳಕೆಯ ಭಿನ್ನತೆ, ಅವುಗಳ ರೂಪಕಾತ್ಮಕ ಅಭಿವ್ಯಕ್ತಿ ಇವೆಲ್ಲವೂ ಸಂಸ್ಕೃತಿಯ ವಿಶಿಷ್ಟತೆಯನ್ನು ನಿರ್ದೇಶಿಸುವ ಸಂಗತಿಗಳಾಗಿರುವುದು ಕಂಡುಬರುತ್ತದೆ. ಇಲ್ಲಿ ಕೋಟ ಕನ್ನಡವನ್ನು ಪ್ರಮಾಣದ ಜೊತೆಗೆ ಹೋಲಿಸಿದಾಗ ಗ್ರಹಿಕೆಯಲ್ಲಿನ ಸ್ಪಷ್ಟ ವ್ಯತ್ಯಾಸಗಳು ಗೋಚರಿಸುತ್ತವೆ. ಅನುಬಂಧದಲ್ಲಿ ನೀಡಲಾಗಿರುವ ಸಾಂಸ್ಕೃತಿಕ ಪದಕೋಶವನ್ನು ಗಮನಿಸಿದಾಗ ಗ್ರಹಿಕೆಯ ವೈಶಿಷ್ಟ್ಯ ಸ್ಪಷ್ಟವಾಗುತ್ತದೆ.

೪.೩.೨. ಕಾಲ ವಿಂಗಡಣೆ

ಸೂರ್ಯನ ಚಲನೆಯನ್ನು ಅನುಸರಿಸಿ ವರ್ಷವನ್ನು ತಿಂಗಳುಗಳಾಗಿ ವಿಂಗಡಿಸಿರುವುದು ದ್ರಾವಿಡ ಸಂಸ್ಕೃತಿಯ ವಿಶೇಷತೆ. ಇಲ್ಲಿ ವರ್ಷದ ಆರಂಭ ಸಂಕ್ರಾಂತಿಯಂದು. ಕೋಟ ಕನ್ನಡ ಭಾಷಿಕ ಪರಿಸರವನ್ನು ಹೊರತುಪಡಿಸಿ ತುಳುನಾಡು, ಕೇರಳ, ತಮಿಳುನಾಡುಗಳಲ್ಲಿ ಈ ಬಗೆಯ ಕಾಲವಿಂಗಡಣೆ ಕಂಡುಬರುತ್ತದೆ. ಇಲ್ಲಿ ಕೃಷಿ ಚಟುವಟಿಕೆಗಳು, ಜೀವನಾವರ್ತನ, ವಾರ್ಷಿಕಾವರ್ತನದ ಆಚರಣೆಗಳು ಈ ವಿಂಗಡನೆಯನ್ನು ಆಧಾರವಾಗಿಟ್ಟುಕೊಂಡೇ ನಡೆಯುತ್ತವೆ. ಶುಭಾಶುಭಗಳು ಇದರ ಮೇಲೆ ನಿರ್ಧರಿತವಾಗಿರುತ್ತವೆ.

ಇವರ ಪ್ರಕಾರ ತಿಂಗಳ ಕೊನೆ ಸಂಕ್ರಾಂತಿ. ಅದರ ಮರುದಿನಕ್ಕೆ 'ತಿಂಗೋಡು' ಎಂದು ಹೆಸರು. ಆಂಗ್ಲ ಪದ್ಧತಿಯ ಕ್ಯಾಲೆಂಡರ್‌ನೊಂದಿಗೆ ಹೋಲಿಸಿದರೆ ಹೆಚ್ಚು ಕಡಿಮೆ

ಈ ತಿಂಗಳ ವಿಭಜನೆ ಹೀಗಿರುತ್ತದೆ. ತಿಂಗಳು ಹೆಚ್ಚು ಕಡಿಮೆ ಆಂಗ್ಲ ಕ್ಯಾಲೆಂಡರ್‌ನ ೧೪, ೧೫ರಂದು ಆರಂಭವಾಗುತ್ತವೆ. ಅವು ಸಂಕ್ರಾಂತಿ ಮತ್ತು ತಿಂಗೋಡಿನ ಮೇಲೆ ನಿರ್ಧರಿತ ವಾಗಿರುತ್ತವೆ,

ಎಪ್ರಿಲ್ ತಿಂಗೋಡಿನಿಂದ ಮೇ ಸಂಕ್ರಾಂತಿಯವರೆಗೆ – ಹಗ್ಗ್

ಮೇ ತಿಂಗೋಡಿನಿಂದ ಜೂನ್ ಸಂಕ್ರಾಂತಿಯವರೆಗೆ – ಬ್ಯಾಸ್ಗಿ

ಜೂನ್ ತಿಂಗೋಡಿನಿಂದ ಜುಲೈ ಸಂಕ್ರಾಂತಿಯವರೆಗೆ – ಕಾರ್

ಜುಲೈ ತಿಂಗೋಡಿನಿಂದ ಆಗಸ್ಟ್ ಸಂಕ್ರಾಂತಿಯವರೆಗೆ – ಆಸಾಡಿ

ಆಗಸ್ಟ್ ತಿಂಗೋಡಿನಿಂದ ಸೆಪ್ಟೆಂಬರ್ ಸಂಕ್ರಾಂತಿಯವರೆಗೆ – ಸ್ವಾಣಿ

ಸೆಪ್ಟೆಂಬರ್ ತಿಂಗೋಡಿನಿಂದ ಅಕ್ಟೋಬರ್‌ಯವರೆಗೆ –ಕನ್ನಿ

ಅಕ್ಟೋಬರ್ ತಿಂಗೋಡಿನಿಂದ ನವೆಂಬರ್ ಸಂಕ್ರಾಂತಿಯವರೆಗೆ – ದಿವಾಳಿ

ನವೆಂಬರ್ ತಿಂಗೋಡಿನಿಂದ ಡಿಸೆಂಬರ್ ಸಂಕ್ರಾಂತಿಯವರೆಗೆ – ಕೊಡಿ

ಡಿಸೆಂಬರ್ ತಿಂಗೋಡಿನಿಂದ ಜನವರಿ ಸಂಕ್ರಾಂತಿಯವರೆಗೆ – ಹಂಚೆಸಿ

ಜನವರಿ ತಿಂಗೋಡಿನಿಂದ ಫೆಬ್ರವರಿ ಸಂಕ್ರಾಂತಿಯವರೆಗೆ – ಬಾರತ್

ಫೆಬ್ರವರಿ ತಿಂಗೋಡಿನಿಂದ ಮಾರ್ಚ್ ಸಂಕ್ರಾಂತಿಯವರೆಗೆ – ಕಿರ್ ಸುಗ್ಗಿ

ಮಾರ್ಚ್ ತಿಂಗೋಡಿನಿಂದ ಎಪ್ರಿಲ್ ಸಂಕ್ರಾಂತಿಯವರೆಗೆ – ಹೆರ್ ಸುಗ್ಗಿ

ಇವರ ಇಡೀ ಬೇಸಾಯ ಕ್ರಮ ಈ ತಿಂಗಳುಗಳನ್ನೆ ಅವಲಂಬಿಸಿರುತ್ತದೆ. ಆಂಗ್ಲ ಕ್ಯಾಲೆಂಡರಿನ ಅವಲಂಬನೆ ಬಂದ ಮೇಲೂ ಅದು ಹೊರ ವ್ಯವಹಾರಗಳಲ್ಲಿ ಮಾತ್ರ ಬಳಕೆ ಯಾಗಿ ಕೃಷಿಯಲ್ಲಿ ಮತ್ತು ಜೀವನಾವರ್ತನ ಮತ್ತು ವಾರ್ಷಿಕಾವರ್ತನಕ್ಕೆ ಸಂಬಂಧಿಸಿದ ಆಚರಣೆಗಳಲ್ಲಿ ಈ ಮೇಲಿನ ತಿಂಗಳ ವಿಭಜನೆಯನ್ನೇ ಆಧಾರವಾಗಿಟ್ಟುಕೊಂಡು ಇವರು ಕೆಲಸ ನಿರ್ವಹಿಸುತ್ತಾರೆ.

ಈ ಬಗೆಯ ವರ್ಷ ವಿಂಗಡನೆ ಇರುವ ತುಳು ಮತ್ತು ಕೋಟ ಭಾಷಿಕ ಪರಿಸರಗಳಲ್ಲಿ ತಿಂಗಳುಗಳನ್ನು ಹೆಸರಿಸಿದ ಬಗೆಯಲ್ಲಿ ಸಾಮ್ಯ ಇದೆ. ಉದಾಹರಣೆಗೆ, ತುಳುವಿನಲ್ಲಿ ಪಗ್ಗು, ಬೇಸ್ಯ ಎಂದಿದ್ದರೆ ಕೋಟ ಒಳನುಡಿಯಲ್ಲಿ ಇದು ಹಗ್ಗ್, ಬ್ಯಾಸ್ಗಿ ಎಂದಾಗಿದೆ. ಈ ಹೆಸರು ಬಂದಿರುವುದಕ್ಕೂ ಕಾರಣಗಳನ್ನು ಅವರು ನೀಡುತ್ತಾರೆ. ಇಲ್ಲಿನ ಹಲವು ಪದಗಳು ಈಗಾಗಲೇ ಇದ್ದ ಪದಗಳ ವಿಸ್ತೃತ ಬಳಕೆಗಳಾಗಿವೆ. ಉದಾಹರಣೆಗೆ, ಕೊಡಿ ತಿಂಗಳಿಗೆ ಹಾಗೆ ಕರೆಯಲು

ಕಾರಣ ಕಬ್ಬಿನ ಕೊಡಿ ಹಾಕಿ ದ್ವಾದಶಿ ಪೂಜೆ ಮಾಡುವುದು ಒಂದಾದರೆ, ಕೋಟೇಶ್ವರ ದೇವಸ್ಥಾನದ 'ಕೊಡಿ ಹಬ್ಬ' ಕೂಡಾ ಅದೇ ತಿಂಗಳಲ್ಲಿ ಬರುವುದರಿಂದ ಆ ಹೆಸರು ಬಂದಿದೆ ಎಂದು ಹೇಳುತ್ತಾರೆ. ಹಂಚೆಸಿ ತಿಂಗಳಿಗೆ ಹಾಗೆ ಕರೆಯಲು ಕಾರಣ 'ಆ ತಿಂಗ್ಳಗೆ ಉರಿ ಬಿಸ್ಲ. ಏನ್ ಮಾಡ್ರೂ ಕಾದ್ ಹಂಚಿಗೆ ನೀರ್ ಹೊಯ್ದಂಗೇ ಸೈ' ಎನ್ನುತ್ತಾರೆ.

ಕಾಲವನ್ನು ಗುರುತಿಸುವ ಬಗೆಯೂ ಭಿನ್ನವಾಗಿದ್ದು ಅದೂ ಲೋಕಗ್ರಹಿಕೆಯ ವಿಶಿಷ್ಟತೆಯನ್ನು ಸಾರುತ್ತದೆ. ಇಲ್ಲಿನ ಹಿರಿಯರಲ್ಲಿ ನೀವು ಹುಟ್ಟಿದ್ದು ಯಾವಾಗ ಎಂದು ಕೇಳಿದರೆ 'ನಾಹುಟ್ಟಿದ್ ವರ್ಷಕ್ಕೇ ಬಿದ್ದಕ್ಕಿ ಆಯಿತ್ತಂಬ್ರ್', 'ಮಾರ್ಣಕಟ್ಟೆ ಹಬ್ಬ ಸುರೀಗೆ ನಾ ಹುಟ್ಟಿದ್ದಂಬ್ರ್' ಈ ರೀತಿ ಅವರು ಹುಟ್ಟಿದ ಸಂದರ್ಭದಲ್ಲಿ ಘಟಿಸಿದ್ದ ವಿಶೇಷ ಸಂಗತಿಗಳನ್ನು ಹೇಳುವುದರ ಮೂಲಕ ನೆನಪಿಸಿಕೊಳ್ಳುತ್ತಾರೆ. ಆಧುನಿಕ ಕ್ಯಾಲೆಂಡರ್ ಮೂಲಕ ದಿನಾಂಕ ಗುರುತಿಸುವ ಪದ್ಧತಿಗಿಂತ ಇದು ವಿಶಿಷ್ಟವಾಗಿದೆ.

ಕೋಟ ಭಾಷಿಕ ಸಮುದಾಯದಲ್ಲಿ ಬಹುಪಾಲು ಜನ ಕೃಷಿ ಮತ್ತು ಕೃಷಿ ಆಧಾರಿತ ಜೀವನೋಪಾಯ ನಡೆಸುತ್ತಿದ್ದುದರಿಂದ ಇಂದು ಕೃಷಿ ಹಿಂದಿನಷ್ಟು ಪ್ರಾಮುಖ್ಯತೆ ಪಡೆದಿಲ್ಲವಾದರೂ ಅವರ ಭಾಷೆ ಆ ಕುರುಹುಗಳನ್ನು ಉಳಿಸಿಕೊಂಡಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಇಲ್ಲಿನ ಗಾದೆಗಳಲ್ಲಿ ದೃಷ್ಟಾಂತಕ್ಕೆ ಕೃಷಿಯ ಹೋಲಿಕೆ, ರೂಪಕಗಳನ್ನೇ ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ. ಉದಾ: 'ಮಲ್ಲಿಗೆ ಹೂವಿನ ದೆಸಿಂದ ಬಾಳೆ ಪಟ್ಟಿಗೆ ಗಿರಾಕಿ' 'ಇಡಿಯಕ್ಕಿ ಮಾರಿ ಹಣಕಟ್ಟಿ' ಮನೆ ಮಾಡು, 'ಕುಪ್ಪ ಹಾರಿ ಹೋಯ್ತು, ಕೊಳ್ಳಿಗೆದ್ದಿ ಉರ್ದ್ ಹೋಯ್ತು' 'ಹರ್ಕೋ ಕಾಯಿ ಕೊಯಿಕೋ ಬೀಳ್' ಎಂಬ ಗಾದೆಗಳಲ್ಲಿ ಇವನ್ನು ಕಾಣಬಹುದು.

೪.೩.೩. ಸಾಮುದಾಯಿಕ ನೆಲೆಯಲ್ಲಿ ತಾನು ಮತ್ತು ಅನ್ಯದ ನಿರ್ವಚನ

ಭಾಷಿಕ ಸಮುದಾಯ ಸಾಮಾಜಿಕ ಮತ್ತು ಸಾಮುದಾಯಿಕ ನೆಲೆಯಲ್ಲಿ ತಾನು ಮತ್ತು ಅನ್ಯವನ್ನು ಹೇಗೆ ಗುರುತಿಸಿಕೊಳ್ಳುತ್ತದೆ ಎಂಬುದು ಲೋಕಗ್ರಹಿಕೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ. ಜಾತಿ, ವರ್ಗ, ಪ್ರದೇಶ, ಲಿಂಗ, ಧಾರ್ಮಿಕ ನಂಬಿಕೆ, ವೃತ್ತಿ, ಕುಟುಂಬ ಮುಂತಾದವುಗಳು ತಾನು ಮತ್ತು ಅನ್ಯದ ನಿರ್ವಚನದಲ್ಲಿ ನಿರ್ಧಾರಕ ಸಂಗತಿಗಳಾಗಿವೆ.

ಜಾತಿ: ಜಾತಿ ಎಂಬುದು ವೃತ್ತಿ ವಿಭಜನೆಯ ಆಧಾರದಲ್ಲಿ ರಚಿತವಾದದ್ದು. ಕೋಟ ಭಾಷಿಕ ಪರಿಸರದಲ್ಲಿಯೂ ವೃತ್ತಿ ಆಧಾರಿತವಾಗಿ ಜಾತಿ ವಿಂಗಡಣೆಯಾಗಿರುವುದು ಕಂಡು ಬರುತ್ತದೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರ, ಬ್ರಾಹ್ಮಣೇತರರದಲ್ಲಿ ಶೂದ್ರ ಮತ್ತು ಶೂದ್ರೇತರ ಅನ್ನುವ ವಿಂಗಡಣೆ ಹಾಗೆಯೇ ಬ್ರಾಹ್ಮಣೇತರರಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂಬ ವಿಂಗಡಣೆ

ಇದೆ. 'ಮುಟ್ಟಿನವರು' ಮತ್ತು 'ದೂರಿನವರು' ಎಂಬ ಪದಗಳು ಸ್ಪೃಶ್ಯ ಮತ್ತು ಅಸ್ಪೃಶ್ಯ ಸಮುದಾಯದವರನ್ನು ಸಂಕೇತಿಸುತ್ತದೆ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ಭಾಷೆಯಲ್ಲಿ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಬಹುದು. ಅದನ್ನು ಆರನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಬ್ರಾಹ್ಮಣರು, ಬಂಟರು, ಮೊಗವೀರರು, ಬಿಲ್ಲವರು, ಆಚಾರಿಗಳು, ದೇವಾಡಿಗರು, ಸಾಲೆಗಾರರು ಹೀಗೆ ಬಹುತೇಕ ಜಾತಿ ಸೂಚಕ ಹೆಸರುಗಳೊಳಗೆ ವೃತ್ತಿಸೂಚಕ ಪದಗಳಿರುವುದನ್ನು ಗಮನಿಸಿದಾಗ ಜಾತಿ ಸಮುದಾಯ ರಚನೆಗೊಂಡ ಬಗೆಯನ್ನು ಗಮನಿಸಬಹುದು.

ಬಂಧುತ್ವದ ನೆಲೆ: ಜಾತಿಗಳೊಳಗೆ ಕುಟುಂಬ ಎಂಬ ಘಟಕವಿದೆ. ಇಲ್ಲಿ ಬಂಧುತ್ವ ಕುಟುಂಬದ ಸದಸ್ಯರನ್ನು ಬೆಸೆಯುತ್ತದೆ. ಎರಡು ಬಗೆಯ ಕುಟುಂಬ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಮೊದಲನೆಯದು 'ಅಳಿಯ ಸಂತಾನ', ಎರಡನೆಯದು 'ಮಕ್ಕಳ ಸಂತಾನ'. ಇಲ್ಲಿನ ಹೆಚ್ಚಿನ ಪ್ರಧಾನ ಜಾತಿ ಸಮುದಾಯಗಳು ಅಳಿಯ ಸಂತಾನವನ್ನು ಅನುಸರಿಸುತ್ತಾ ಬಂದಿವೆ. ಅಳಿಯ ಸಂತಾನದಲ್ಲಿ ಕುಟುಂಬದ ಯಜಮಾನಿ ಹೆಣ್ಣು ಮತ್ತು ಗುರುತು, ಬಂಧುತ್ವದ ರಚನೆ ಹೆಣ್ಣನ್ನು ಪ್ರಮಾಣವಾಗಿರಿಸಿಕೊಂಡು ನಿರೂಪಿತಗೊಳ್ಳುತ್ತವೆ. ಮಕ್ಕಳ ಸಂತಾನದಲ್ಲಿ ಗಂಡು ಕುಟುಂಬದ ಕೇಂದ್ರ. ಬ್ರಿಟಿಶ್ ಕಾನೂನು ಹಾಗೂ ನಂತರದಲ್ಲಿ ಹಿಂದೂ ಕೋಡ್ ಬಿಲ್[೬] ಅಳಿಯ ಸಂತಾನ ಪದ್ಧತಿಯನ್ನು ಅಮಾನ್ಯ ಮಾಡಿದ ಬಳಿಕ ಇಂದು ದೈವಿಕ ಧಾರ್ಮಿಕ ವಿಚಾರಗಳಲ್ಲಿ ಅಳಿಯ ಸಂತಾನವೂ ಕಾನೂನು ಮತ್ತಿತರ ವಿಚಾರಗಳಲ್ಲಿ ಮಕ್ಕಳ ಸಂತಾನದ ರೀತಿಯಂತೆ ಗುರುತಿಸುವ ಪದ್ಧತಿಯೂ ಬೆಳೆದು ಬಂದು ಸಾಕಷ್ಟು ಪಲ್ಲಟಗಳಾಗಿವೆ.

ವರ್ಗ: ವರ್ಗ ಆರ್ಥಿಕತೆಯ ಆಧಾರದಲ್ಲಿ ನಿರ್ಧರಿತವಾಗುವಂಥದ್ದು. ಇಲ್ಲಿ ಜಾತಿಗೂ ವರ್ಗಕ್ಕೂ ಹತ್ತಿರದ ಸಂಬಂಧ ಇರುವುದು ಕಂಡುಬರುತ್ತದೆ. ಜಾತಿಯ ಏಣಿಯಲ್ಲಿ ಮೇಲಿನ ಹಂತದಲ್ಲಿ ಇರುವವರು ಆರ್ಥಿಕವಾಗಿ ಸದೃಢರಾಗಿರುವುದು ಸಾಮಾನ್ಯವಾಗಿ ಕಾಣುತ್ತದೆ. ಆದರೆ ಇದಕ್ಕೆ ಬಂಟರ ಉದಾಹರಣೆ ಅಪವಾದವಾಗಿ ಕಾಣುತ್ತದೆ. ಭೂಮಿಯ ಒಡೆಯರಾಗಿದ್ದ ಬಂಟರು ಆರ್ಥಿಕವಾಗಿ ಕೆಲವು ಸಂದರ್ಭಗಳಲ್ಲಿ ಜಾತಿಶ್ರೇಣೀಕರಣದಲ್ಲಿ ಮೊದಲ ಸ್ಥಾನದಲ್ಲಿರುವ ಬ್ರಾಹ್ಮಣರಿಗಿಂತ ಸಬಲರಾಗಿರುವುದು ಕಂಡುಬರುತ್ತದೆ. ಆದರೆ ಭೂ ಮಸೂದೆ ಕಾನೂನು ಜಾರಿಯಾದ ಬಳಿಕ ಮತ್ತು ಇಲ್ಲಿನ ಸಮುದಾಯಗಳು ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಪರಿಸ್ಥಿತಿ ಬದಲಾಗಿದೆ. ಆರ್ಥಿಕತೆಗೂ ಜಾತಿಗೂ ಇರುವ ಸಂಬಂಧ ಬೇರ್ಪಟ್ಟಿದೆ.

ಲಿಂಗ: ಲಿಂಗ ಎನ್ನುವುದು ಗಂಡು ಹೆಣ್ಣಿನ ಜೈವಿಕ ವ್ಯತ್ಯಾಸದ ಸೂಚಕ ಮಾತ್ರವಾಗಿರದೆ ಇದು ಸಾಮಾಜಿಕವಾಗಿ ಶ್ರೇಣೀಕೃತ ನೆಲೆಯಲ್ಲಿ ಮರುನಿರ್ವಚನಗೊಳ್ಳುತ್ತದೆ. ಅಳಿಯ ಸಂತಾನದಲ್ಲಿ

ಹೆಣ್ಣಿನ ಮೂಲಕವಾಗಿಯೇ ಕುಟುಂಬವನ್ನು ಮಕ್ಕಳನ್ನು ಗುರುತಿಸಲಾಗುತ್ತದೆ. ಆದರೆ 'ಅಳಿಯ ಸಂತಾನ' ಎಂಬ ಪದವೇ ಸ್ತ್ರೀವಾಚಿಯಾಗಿಲ್ಲ; ಮತ್ತು ಭಾಷೆಯನ್ನು ಗಮನಿಸಿದಾಗ ಹೆಣ್ಣಿಗೆ ಪ್ರಾಧಾನ್ಯವಿರುವುದು ಕಂಡುಬರುವುದಿಲ್ಲ. ಸಂಕಥನದ ನೆಲೆಯಲ್ಲಿ ನೋಡುವಾಗ ಕೇಂದ್ರದಲ್ಲಿ ಹೆಣ್ಣು ಇಲ್ಲದಿರುವುದು ಕಂಡುಬರುತ್ತದೆ. ಇಲ್ಲಿ ಲೋಕವನ್ನು ಗ್ರಹಿಸಿ ವಿಂಗಡಿಸಿರುವ ಬಗೆ ನಮ್ಮ ಗ್ರಹಿಕೆಯನ್ನು ಪ್ರಭಾವಿಸುತ್ತದೆ ಎಂಬ ಅಭಿಪ್ರಾಯಕ್ಕೆ ಸಮರ್ಥನೆ ದೊರೆಯುವುದಿಲ್ಲ.

ಪ್ರದೇಶ: ತಾನು ಮತ್ತು ಅನ್ಯವನ್ನು ನಿರ್ವಚಿಸುವಲ್ಲಿ ಪ್ರಾದೇಶಿಕ ವಿಂಗಡಣೆಯೂ ಒಂದು ಮಾನದಂಡವಾಗುತ್ತದೆ. ಭೌಗೋಳಿಕ ಲಕ್ಷಣಗಳಿಗನುಗುಣವಾಗಿ, ಭಾಷಿಕವಾಗಿ, ರಾಜಕೀಯವಾಗಿ ಪ್ರದೇಶಗಳ ವಿಭಜನೆ ನಡೆದಿರುವುದು ಕಂಡುಬರುತ್ತದೆ. ಉದಾಹರಣೆಗೆ, ಕಲ್ಯಾಣಪುರ ಹೊಳೆಯಾಚೆಗಿನ ಪ್ರದೇಶದಲ್ಲಿ ತುಳುಭಾಷೆ ಪ್ರಧಾನವಾಗಿರುವುದರಿಂದ ಅದನ್ನು 'ತುಳುನಾಡು', 'ತುಳು ಜಿಲ್ಲೆ' ಎಂದೂ ಈಚೆಗೆ ಕನ್ನಡ ಪ್ರಧಾನವಾಗಿರುವುದರಿಂದ ಅದನ್ನು 'ಕನ್ನಡ ಜಿಲ್ಲೆ' ಎಂದೂ ಕರೆಯುತ್ತಾ ಬಂದಿರುವುದನ್ನು ಕಾಣುತ್ತೇವೆ. ಇನ್ನು ಪಶ್ಚಿಮ ಘಟ್ಟಗಳ ಮೇಲೆ ಇರುವವರನ್ನು 'ಘಟ್ಟದ ಬರಿ'ಯವರು ಎಂದೂ ಘಟ್ಟದಾಚೆಗಿರುವ ಪ್ರದೇಶವನ್ನು 'ಮೈಸೂರು ಜಿಲ್ಲೆ' ಎಂದೂ ಹಿಂದೆ ಕರೆಯುತ್ತಿದ್ದರು. ಈಗ ಭಾಷಿಕವಾದ, ಪ್ರಾದೇಶಿಕವಾದ ವಿಂಗಡಣೆ ಬದಿಗೆ ಸರಿದು ರಾಜಕೀಯ ವಿಗಂಡಣೆ ಪ್ರಮುಖವಾಗಿದೆ. ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆ ಈ ಬಗೆಯಿಂದ ಗುರುತಿಸಲಾಗುತ್ತದೆ.

ಭಾಷೆ: ಭಾಷೆಯೂ ಜನರು ಸಮುದಾಯವಾಗಿ ಸಂಘಟಿತರಾಗುವಲ್ಲಿ ಪ್ರಮುಖ ಅಂಶವಾಗಿ ಕೆಲಸ ಮಾಡುತ್ತದೆ. ಈ ಭಾಷಿಕ ಪರಿಸರವನ್ನು 'ಕನ್ನಡ ಜಿಲ್ಲೆ' ಎಂದು ಗುರುತಿಸುವಲ್ಲಿ ಕೆಲಸ ಮಾಡಿರುವುದು ಅದೇ. ಇಲ್ಲಿ ಒಂದೇ ಭಾಷೆಯನ್ನಾಡುವ ಜನರು ಒಂದು ಸಮುದಾಯವಾಗಿ ಗುರುತಿಸಿಕೊಂಡು ಭಿನ್ನ ಭಾಷಿಕರನ್ನು ಅನ್ಯರು ಎಂದು ಗುರುತಿಸುತ್ತಾರೆ.

ಧಾರ್ಮಿಕ ನಂಬಿಕೆ: ಧಾರ್ಮಿಕ ನಂಬಿಕೆ ತಾನು ಮತ್ತು ಅನ್ಯವನ್ನು ಗುರುತಿಸುವಲ್ಲಿ ಪ್ರಧಾನ ನಿರ್ಣಾಯಕ ಸಂಗತಿಯಾಗಿದೆ. ಹಿಂದು ಮತ್ತು ಹಿಂದುಗಳಲ್ಲದವರು ಎಂಬ ದೊಡ್ಡ ವಿಂಗಡಣೆ ಧಾರ್ಮಿಕ ನಂಬಿಕೆಯ ಆಧಾರದಲ್ಲಿ ನೆಲೆಗೊಂಡಿದೆ. ಇಲ್ಲಿ ಹಿಂದು ಗಳಲ್ಲದವರು ಎಂದಾಗ ಮುಖ್ಯವಾಗಿ ಮುಸ್ಲಿಮರು ಮತ್ತು ಕ್ರೈಸ್ತರು. ಭಾಷಿಕವಾಗಿಯೂ ಇವರ ಮನೆ ಮಾತು ಬೇರೆ. ಆಹಾರ ಪದ್ಧತಿಯಲ್ಲಿಯೂ ಭಿನ್ನತೆ ಇದೆ. ಮುಸ್ಲಿಮರನ್ನು ಸೂಚಿಸುವಾಗ 'ದನ ತಿಂಬರ್' ಎಂಬ ಮಾತು ಕೇಳಿಬರುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಸಾಮಾಜಿಕ ಅಂತರ ಹೆಚ್ಚುತ್ತಾ ಹೋಗುತ್ತಿರುವುದು ಗಮನಕ್ಕೆ ಬರುತ್ತದೆ.

೪.೪. ಕೋಟ ಒಳನುಡಿ ಮತ್ತು ಅಲ್ಲಿನ ಜನರ ಲೋಕಗ್ರಹಿಕೆಗೂ ಇರುವ ಸಂಬಂಧದ ನೆಲೆಗಳು

ಮಾನವ ಸಂಸ್ಕೃತಿಯ ವಿಕಾಸದ ಜಾಡನ್ನು ಶೋಧಿಸುತ್ತಾ ಬಂದಾಗ ಅದು ಆಹಾರ ಸಂಗ್ರಹಣೆಯ ಹಂತದಿಂದ ಆಧುನಿಕ ಯಂತ್ರಯುಗದವರೆಗೆ ಬೆಳೆದು ಬಂದಿರುವ ಬಗೆಯನ್ನು ಈ ರೀತಿ ಗುರುತಿಸಬಹುದಾಗಿದೆ. "ಪ್ರಸ್ತುತ ಮನುಷ್ಯ ಸಂಸ್ಕೃತಿಯ ವಿಕಾಸದ ಚರಿತ್ರೆಯಲ್ಲಿ ಪ್ರಮುಖವಾಗಿ ಐದು ಹಂತಗಳನ್ನು ಗುರುತಿಸಬಹುದು ಎಂದು ನನಗನ್ನಿಸುತ್ತದೆ. ೧.ಆಹಾರ ಸಂಗ್ರಹಣೆ, ೨. ಬೇಟೆ, ೩. ಪಶುಸಂಗೋಪನೆ, ೪. ಕೃಷಿ, ೫. ಯಂತ್ರಯುಗ. ಮನುಕುಲದ ನಾಗರಿಕತೆಯ ವಿವಿಧ ಮಜಲುಗಳನ್ನು ಅವಲೋಕಿಸಿದಾಗ ಪರಿವರ್ತನೆಯ ನಾನಾ ಕಾರಣಗಳಿಗಾಗಿ ಈ ಐದು ಹಂತಗಳಲ್ಲಿ ಕೆಲವು ಪ್ರದೇಶಗಳು ಶೀಘ್ರ ಚಲನಶೀಲತೆಯನ್ನು ಪಡೆದು ನವನಾಗರಿಕತೆಗೆ ಮುಟ್ಟಿದ್ದರೆ ಮತ್ತೆ ಕೆಲವು ಭಾಗಗಳಲ್ಲಿ ಇನ್ನೂ ಹಿಂದಿನ ಹಂತಗಳಲ್ಲಿಯೇ ಇವೆ"(ಬೋರಲಿಂಗಯ್ಯ.ಹಿ.ಚಿ;೨೦೦೧;ಪು:೬೯). ಎಲ್ಲ ಸಂಸ್ಕೃತಿಗಳೂ ಅನುಕ್ರಮವಾಗಿ ಈ ಹಂತವನ್ನು ದಾಟಿ ಬಂದಿವೆ ಎನ್ನುವುದು ಸಾಧ್ಯವಿಲ್ಲ. ವಿಕಾಸದ ಹಾದಿಯಲ್ಲಿ ಒಂದು ಹಂತದಿಂದ ಮುಂದಿನ ಹಂತಕ್ಕೆ ಜಿಗಿತ ಸಾಧಿಸಿರಬಹುದು. ಕೋಟ ಸಮುದಾಯ ಕೃಷಿಯಿಂದ ಆಧುನಿಕತೆಯ ಯಂತ್ರಯುಗಕ್ಕೆ ಹೊರಳಿಕೊಳ್ಳುವ ಹಂತದಲ್ಲಿದೆ. ಲೋಕಗ್ರಹಿಕೆಯಲ್ಲಾಗುತ್ತಿರುವ ಪಲ್ಲಟ ಇದನ್ನು ಸಂಕೇತಿಸುತ್ತದೆ.

ಈ ನಿಟ್ಟಿನಲ್ಲಿ ಕೋಟ ಭಾಷಿಕ ಸಮುದಾಯದ ಹಾದಿಯನ್ನು ನೋಡುವುದಾದರೆ ಕೃಷಿ ಪ್ರಧಾನ ಜೀವನೋಪಾಯವಾದ್ದರಿಂದ ಲೋಕಗ್ರಹಿಕೆಯನ್ನು ಕೃಷಿ ಪ್ರಭಾವಿಸಿರುವುದನ್ನು ಕಾಣುತ್ತೇವೆ. ಅದರ ಸೂಚನೆಗಳು ನಮಗೆ ಭಾಷೆಯ ಮೂಲಕ ದೊರೆಯುತ್ತವೆ. ಆದರೆ ಇಂದು ಸ್ಥಿತ್ಯಂತರದಲ್ಲಿರುವ ಸಂದರ್ಭದಲ್ಲಿ ಸುತ್ತಲಿನ ಭೂಪ್ರದೇಶವನ್ನು ಗುರುತಿಸುವಲ್ಲಿ ಇಂದು ರಸ್ತೆ, ಸಂಪರ್ಕ, ಭೂಮಿಯ ವಾಣಿಜ್ಯ ಮೌಲ್ಯ ಮುತಾದ ಸಂಗತಿಗಳು ಮುಖ್ಯವಾಗುತ್ತಿವೆ. ಪಾಶ್ಚಾತ್ಯ ಕ್ಯಾಲೆಂಡರ್ ಕಾಲದ ಕಲ್ಪನೆಯನ್ನು ಪ್ರಭಾವಿಸುತ್ತಿದೆ. ನಗರ, ಹಳ್ಳಿಗಳೆಂಬ ಗೆರೆಗಳು ಕಾಣಿಸಿಕೊಳ್ಳುತ್ತಿವೆ. ಅದರ ಸ್ಪಷ್ಟ ಉದಾಹರಣೆಗಳು ಭಾಷೆಯಲ್ಲಿ ದೊರೆಯುತ್ತವೆ. ಹಾಗೆಯೇ ಆಧುನಿಕತೆ ಮತ್ತು ಪ್ರಮಾಣ ಭಾಷೆಯ ಹಾಜರಿ ಹೆಚ್ಚಾಗಿ ಪ್ರಾದೇಶಿಕ ಅನನ್ಯತೆ ಇಲ್ಲವಾಗುತ್ತಿರುವುದು ಕೂಡಾ ಲೋಕಗ್ರಹಿಕೆಯ ನೆಲೆಯಲ್ಲಾದ ಪಲ್ಲಟವನ್ನು ಸಂಕೇತಿಸುತ್ತದೆ. ಪ್ರಮಾಣ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡೂ ಗ್ರಹಿಕೆ ಮತ್ತು ಭಾಷಿಕ ರೂಪ ಇವೆರಡರ ಅನನ್ಯತೆಯನ್ನೂ ನಿಧಾನವಾಗಿ ಅಳಿಸಿ ಹಾಕುತ್ತಿವೆ.

ಟಿಪ್ಪಣಿಗಳು

೧. A weltanschauung constitutes an individuals or a community's interpretation of the world or the interpretative framework which he or she invokes to help understand the world.(Underhill James W; 2009;p:151)

೨. The weltansicht inherent in a language offers the world up to us for interpretation by allowing us to form concepts and exchange ideas about those concepts and the relationship between them.(Underhill James W ; 2009;p:151)

೩. Fundamental and necessary processing of the world by the mind through the faculty of language(Underhill James.W; 2009; p:16)

೪. 'ಜಗತ್ತು' ಎಂಬ ಪರಿಕಲ್ಪನೆ ಸಂಕೀರ್ಣವಾದುದು. ಇಲ್ಲಿ ಸುತ್ತಲಿನ ಜಗತ್ತು ಎಂದಾಗ ಸಮುದಾಯಕ್ಕೆ ಹತ್ತಿರವಾದ ವಾಸ್ತವ ಎಂಬ ಅರ್ಥದಲ್ಲಿ ಬಳಸಲಾಗಿದೆ.

೫. ಮೂಡಿನ ಸೂರ್ಯಮ್ಮ ಮೂಡುವರು ನಾ ಬಲ್ಲಿ
ಮೂಡಿನ ಬೆದರ ಕಣಿಯಡ್ಡೆ । ಸೂರ್ಯಮ್ಮ
ಮುಳುಗುವರು ಕಡಲ ತೆರಿಯಡ್ಡೆ

ಊರಿನ ಹೆಣ್ಮಕ್ಕೆ ಬೆರಗಾಪೂದ್ ಯಾಕೆ
ಸೂರ್ಯಮ್ನ ಲೋಕ ಎಯ್ದುಂಟಾ। ನಿಮ್ಮಂಥ
ನಾರಿಯರುಂಟಾ ಜಗದಲ್ಲಿ

• • •

ಅಧ್ಯಾಯ : ಐದು

ಭಾಷೆ ಮತ್ತು ಸಂದರ್ಭ

ಅಧ್ಯಾಯ : ಐದು

ಭಾಷೆ ಮತ್ತು ಸಂದರ್ಭ

ಆಡುನುಡಿಗಳ ಅಧ್ಯಯನದಲ್ಲಿ ಭಾಷೆಯನ್ನು ಸಂದರ್ಭದಿಂದ ಪ್ರತ್ಯೇಕಿಸಿ ನೋಡುವುದು ಸಾಧ್ಯವಾಗುವುದಿಲ್ಲ. ಒಂದು ಭಾಷೆಯನ್ನು ಆ ಭಾಷಿಕ ಸಮುದಾಯದ ಸಂಸ್ಕೃತಿಯ ಸಂದರ್ಭದಲ್ಲೇ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಕೋಟ ಭಾಷಿಕ ಸಮುದಾಯ ಶ್ರೇಣೀಕೃತವಾಗಿ ನೆಲೆಗೊಂಡಿದೆ ಮತ್ತು ವೇಗವಾಗಿ ಆಧುನಿಕತೆಗೆ ತೆರೆದುಕೊಳ್ಳುತ್ತಿದೆ. ಈ ಸ್ಥಿತ್ಯಂತರದಲ್ಲಿ ಸಂಸ್ಕೃತಿಯ ಸಂದರ್ಭ ಹೇಗೆ ಮರುರಚನೆಗೊಂಡಿದೆ ಎಂಬುದಕ್ಕೆ ಪ್ರಸ್ತುತ ಅಧ್ಯಾಯದಲ್ಲಿ ಒತ್ತು ನೀಡಲಾಗಿದೆ.

ಭಾಷೆಯೊಳಗೇ ಎಲ್ಲ ಅರ್ಥಗಳೂ ನಿಹಿತವಾಗಿರುವುದಿಲ್ಲ ಮತ್ತು ಭಾಷೆ ಅದನ್ನಾಡುವ ಭಾಷಿಕ ಸಮುದಾಯದ ಎಲ್ಲರಲ್ಲಿ ತಿಳುವಳಿಕೆಯ ರೂಪದಲ್ಲಿ ಇದ್ದರೂ ಬಳಕೆಯ ಸಂದರ್ಭದಲ್ಲಿ ಅದು ಸದಾ ಒಂದೇ ರೂಪದಲ್ಲಿರುವುದಿಲ್ಲ. ಮಾತನಾಡುತ್ತಿರುವವರು ಯಾರು, ಸಮಾಜದಲ್ಲಿ ಅವರ ಸ್ಥಾನವೇನು ಎಂಬುದರ ಜೊತೆಗೆ, ದೈನಂದಿನ ಚಟುವಟಿಕೆಗಳಲ್ಲಿ ಸಂದರ್ಭವೇ ಸಂಭಾಷಣೆಯಲ್ಲಿ ಭಾಗವಹಿಸುವವನ ಪಾತ್ರ, ಸ್ಥಾನವನ್ನು ನಿರ್ಧರಿಸುತ್ತದೆ. ಹೀಗಾಗಿ ಭಾಷೆಯನ್ನು ದೇಶ, ಕಾಲ, ಸಂದರ್ಭಗಳಿಂದ ಬೇರ್ಪಡಿಸಿ ನೋಡುವುದು ಸಾಧ್ಯವಾಗುವುದಿಲ್ಲ.

ದೈನಂದಿನ ವ್ಯವಹಾರಗಳಲ್ಲಿ ಬಳಸಲಾಗುವ ಭಾಷೆಯ ಸ್ವರೂಪ ಒಂದು ಬಗೆಯದಾಗಿದ್ದರೆ, ವಿಶೇಷ ಸಂದರ್ಭಗಳಲ್ಲಿ, ಆಚರಣೆಗಳಲ್ಲಿ ಬಳಸುವ ಭಾಷೆಯ ಬಗೆಯೇ ಬೇರೆ ಸ್ವರೂಪದ್ದಾಗಿರುತ್ತದೆ. ಇಲ್ಲಿ ಮಂತ್ರ, ಹಾಡು, ಉದ್ಘೋಷಗಳು, ಉದ್ಗಾರ ಎಲ್ಲವೂ ಸಂವಹನದ

ಭಾಗವಾಗಿರುತ್ತದೆ. ಅಲ್ಲದೆ, ಸಂವಹನದಲ್ಲಿ ಭಾಗವಹಿಸುವವರ ಪಾತ್ರಗಳು ಮತ್ತು ಸ್ಥಾನವೂ ವಿಶಿಷ್ಟವಾದುದಾಗಿರುತ್ತದೆ. ಹೀಗಾಗಿ ಪ್ರತಿ ಸಂವಹನ ಸಂದರ್ಭವೂ ಭಾಷೆ ಮತ್ತು ಸಂಸ್ಕೃತಿಯ ನಂಟಿನ ಸೂಚಕವಾಗಿದೆ.

ಸಂಸ್ಕೃತಿ ಜನರ ತಿಳುವಳಿಕೆಯ ಒಟ್ಟು ಮೊತ್ತ ಎಂದು ಭಾವಿಸಿಕೊಂಡಾಗ ವಿಭಿನ್ನ ಸಂದರ್ಭಗಳಲ್ಲಿ ಭಿನ್ನ ಗುಂಪಿಗೆ ಸೇರಿದ ಜನರ ಪಾತ್ರ ಏನು ಎಂಬುದು ಬಹುತೇಕ ಸಂದರ್ಭಗಳಲ್ಲಿ ಪೂರ್ವನಿರ್ಧರಿತವಾಗಿರುತ್ತದೆ. ಆಚರಣೆಗಳ ಸಂದರ್ಭಗಳಲ್ಲಂತೂ ಅದು ತುಂಬಾ ವ್ಯವಸ್ಥಿತವಾಗಿ ಯೋಜಿತಗೊಂಡಿರುತ್ತದೆ. ಮಾತುಕತೆಗಳ ಸಂದರ್ಭದ ನಿಯಮಗಳನ್ನು ಅರಿತಿದ್ದು ಜನ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಈ ನೆಲೆಯಲ್ಲಿ ಇದನ್ನು 'ಆಟ'ಕ್ಕೆ ಹೋಲಿಸಬಹುದು ಎಂದು ವಿಟ್‌ಗೆನ್‌ಸ್ಟೈನ್(Wittgenstein Ludwig;1974;p:60) ಪ್ರತಿಪಾದಿಸುತ್ತಾನೆ. ಮಾನವ ಭಾಷಾವಿಜ್ಞಾನಿಗಳ ಆಸಕ್ತಿ ಇರುವುದು ಈ 'ಆಟ'ದ ನಿಯಮಗಳನ್ನು ಶೋಧಿಸುವ ಕಡೆಗೆ.

ಸಂಸ್ಕೃತಿಯ ಸಂದರ್ಭ

ಸಮುದಾಯದ ಜನರಿಗೆ ಒಟ್ಟಾಗಿ ಇರುವ ತಿಳುವಳಿಕೆ ಸಂಸ್ಕೃತಿ ಎಂದಾದರೆ ಇವರೆಲ್ಲರೂ ಒಟ್ಟಾಗಿ ಕೆಲವು ಅಘೋಷಿತ ನಿಯಮಗಳನ್ನು ಸಂಭಾಷಣೆಯ ಸಂದರ್ಭದಲ್ಲಿ ಪಾಲಿಸುತ್ತಾರೆ. ಈ ನಿಯಮಗಳು ಅಲ್ಲಿನ ಸಾಮಾಜಿಕ ರಚನೆಗೆ ಅನುಸಾರವಾಗಿ ಇರುತ್ತದೆ. ಒಂದು ಸಂಸ್ಕೃತಿಯ ಹಿನ್ನೆಲೆಯಿಂದ ತನ್ನ ಸಂಸ್ಕೃತಿಗಿಂತ ಭಿನ್ನ ಸಂಸ್ಕೃತಿಯೊಡನೆ ಮುಖಾಮುಖಿ ಯಾದವನಿಗೆ ಇದನ್ನು ಬಹುಬೇಗ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಆಚರಣೆಗಳಲ್ಲಿ ಯಾವ ಸಂದರ್ಭದಲ್ಲಿ ಏನನ್ನು ಹೇಳಬೇಕು ಎಂಬುದು, ಗಂಡಸರ ಗುಂಪಿನಲ್ಲಿ ಹೆಣ್ಣು ಮಾತಾಡದಿರುವುದು, ಮೇಲುಜಾತಿಯವರೊಡನೆ ಮಾತಾಡುವಾಗ ಕೈಕಟ್ಟಿ ನಿಲ್ಲುವುದು ಇತ್ಯಾದಿ.

ಮಾತುಕತೆಯ ಸಂದರ್ಭ ಅಥವಾ ಸನ್ನಿವೇಶದ ಸಂದರ್ಭ

ಸಂಸ್ಕೃತಿಯ ಸಂದರ್ಭದೊಳಗೇ ಮಾತುಕತೆಯ ಸಂದರ್ಭವೂ ಬರುತ್ತದೆ. ಒಂದು ಸನ್ನಿವೇಶದಲ್ಲಿ ಮಾತುಕತೆ ನಡೆಯುತ್ತಿರುವ ಸಂದರ್ಭದಲ್ಲಿ ಅಲ್ಲಿ ಪದಗಳು, ವಾಕ್ಯಗಳು ಬಳಕೆಯಾಗುತ್ತಿರುವ ಬಗೆ, ಒಬ್ಬರಾದ ಬಳಿಕ ಒಬ್ಬರು ಮಾತಾಡುವ ಬಗೆ ಇವುಗಳು ಆ ಅಭಿವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತದೆ. ಸಾಮಾಜಿಕ ಭಾಷಾವಿಜ್ಞಾನ ಮತ್ತು ಸಂಕಥನ ವಿಶ್ಲೇಷಣೆ(Discourse Analysis) ಕ್ಷೇತ್ರದಲ್ಲಿ ಮಾತುಕತೆಯ ಸಂದರ್ಭ ಕುರಿತು ಹೆಚ್ಚಿನ ಅಧ್ಯಯನಗಳು ನಡೆದಿವೆ.

ಈ ಎಲ್ಲ ಅಂಶಗಳು ದೈನಂದಿನ ಮತ್ತು ವಿಶೇಷ ಸಂದರ್ಭಗಳಲ್ಲಿ ಹೇಗೆ ವ್ಯಕ್ತವಾಗುತ್ತದೆ ಎಂಬ ಬಗ್ಗೆ ಸಾಮಾಜಿಕ ಭಾಷಾವಿಜ್ಞಾನಿಗಳು ಮತ್ತು ಮಾನವಶಾಸ್ತ್ರೀಯ ಭಾಷಾವಿಜ್ಞಾನಿಗಳು ಆಸಕ್ತಿ ಹೊಂದಿದ್ದರೂ ಮಾನವಶಾಸ್ತ್ರೀಯ ಭಾಷಾವಿಜ್ಞಾನದ ದೃಷ್ಟಿಯಿಂದ ಅಧ್ಯಯನ ಮಾಡಲು ಹೊರಡುವವರು ಸಂಸ್ಕೃತಿಯ ಸಂದರ್ಭಕ್ಕೆ ಮತ್ತು ಹೇಗೆ ಆಚರಣೆಗಳಲ್ಲಿ ಭಾಷೆ ಬಳಕೆಯಾಗುತ್ತದೆ ಎಂಬ ಬಗ್ಗೆ ಹೆಚ್ಚಿನ ಆಸಕ್ತಿ ತೋರುತ್ತಾರೆ. ಪ್ರಸ್ತುತ ಅಧ್ಯಾಯದಲ್ಲಿ ಸಂಸ್ಕೃತಿಯ ಸಂದರ್ಭಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಕೋಟ ಭಾಷಿಕ ಸಮುದಾಯ ದೈನಂದಿನ ಸಂದರ್ಭ ಮತ್ತು ವಿಶೇಷ ಸಂದರ್ಭಗಳಲ್ಲಿ ಬಳಸುವ ಭಾಷೆ, ಭಾಷೆ ಮತ್ತು ಸಂಸ್ಕೃತಿಗಳ ಸಂಬಂಧ ಕುರಿತಂತೆ ಏನನ್ನು ಸೂಚಿಸುತ್ತದೆ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೫.೧. ದಿನನಿತ್ಯದ ಸಂದರ್ಭ

ಕೋಟ ಭಾಷಿಕ ಸಮುದಾಯ ಶ್ರೇಣೀಕೃತವಾಗಿ ವಿಂಗಡಣೆಗೊಂಡಿದೆ ಮತ್ತು ಈ ಶ್ರೇಣೀಕರಣ ಜನರ ನಡುವಣ ಭಾಷಿಕ ವರ್ತನೆಯಲ್ಲಿ ಕಾಣುತ್ತದೆ. ಜಾತಿ, ವರ್ಗ, ಲಿಂಗ, ವಯಸ್ಸು, ಪರಿಚಿತರೇ, ಅಪರಿಚಿತರೇ ಈ ಮುಂತಾದ ಸಂಸ್ಕೃತಿ ಬದ್ಧ ಸಂಗತಿಗಳು ಸಂಭಾಷಣೆಯ ಸ್ವರೂಪವನ್ನು ನಿರ್ಧರಿಸುತ್ತವೆ. 'ದೈನಂದಿನ ಭಾಷಿಕ ಕೊಡುಕೊಳೆಗಳೂ ಸಾಂಕೇತಿಕ ಅಧಿಕಾರ ಸಂಬಂಧಗಳನ್ನು ಸ್ಥಾಪಿಸುತ್ತವೆ' ಎಂದು ಫ್ರೆಂಚ್ ಸಮಾಜಶಾಸ್ತ್ರಜ್ಞ ಪಿಯರೆ ಬೋರ್ದೋ ಹೇಳುತ್ತಾನೆ. ಕೋಟ ಭಾಷಿಕ ಪರಿಸರದಲ್ಲಿ ಈ ದೈನಂದಿನ ಭಾಷಿಕ ಕೊಡುಕೊಳೆಗಳ ಸ್ವರೂಪವನ್ನು ಗಮನಿಸುವ ನಿಟ್ಟಿನಲ್ಲಿ ಇಲ್ಲಿ ದಿನನಿತ್ಯದ ಸಂದರ್ಭಗಳನ್ನು ಸಾಂಪ್ರದಾಯಿಕ ಸಂದರ್ಭ ಮತ್ತು ಆಧುನಿಕತೆಯ ಸಂದರ್ಭ ಎಂಬುದಾಗಿ ವಿಂಗಡಿಸಲಾಗಿದೆ.

೫.೧.೧. ಸಾಂಪ್ರದಾಯಿಕ[೨] ಸಂದರ್ಭ

ಹಿಂದಿನಿಂದಲೂ ಸಮಾಜ ವಿನ್ಯಾಸಗೊಂಡಿರುವ ಆಧಾರದಲ್ಲಿ ಬೆಳೆದು ಬಂದ, ವೃತ್ತಿ, ಕುಟುಂಬ ಮತ್ತು ಇನ್ನಿತರ ಸಾರ್ವಜನಿಕ ಸಂದರ್ಭಗಳನ್ನು ಸಾಂಪ್ರದಾಯಿಕ ಸಂದರ್ಭಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ. ಇಲ್ಲಿ ಗಡಿಗಳು ಬಹಳ ಸ್ಪಷ್ಟವಾಗಿವೆ ಮತ್ತು ಭಾಷೆಯನ್ನಾಡುವ ಎಲ್ಲರಲ್ಲಿ ಈ ಬಗ್ಗೆ ತಿಳುವಳಿಕೆ ಇರುತ್ತದೆ.

೫.೧.೧.೧. ಸಾಂಪ್ರದಾಯಿಕ ಸಂದರ್ಭವನ್ನು ನಿಯಂತ್ರಿಸುವ ಸಂಗತಿಗಳು

ಸಾಂಪ್ರದಾಯಿಕ ಸಂದರ್ಭದಲ್ಲಿ ಸಮಾಜ ರಚನೆಗೊಂಡಿರುವ ಬಗೆ ಸಂವಹನದ ಸ್ವರೂಪ ವನ್ನು ನಿರ್ದೇಶಿಸುವುದನ್ನು ಗಮನಿಸುತ್ತೇವೆ. ಕೋಟ ಭಾಷಿಕ ಸಮುದಾಯ ವೃತ್ತಿಯ ಆಧಾರದ ಮೇಲೆ ವಿವಿಧ ಜಾತಿಗಳಾಗಿ ವಿಂಗಡನೆಗೊಂಡಿದೆ. ಇದರೊಂದಿಗೆ, ಲಿಂಗ ಮತ್ತು ವಯಸ್ಸು ಮಾತುಕತೆಯ ಚೌಕಟ್ಟನ್ನು ನಿರ್ಧರಿಸುವ ಇತರ ಸಂಗತಿಗಳಾಗಿವೆ. ಸಾಮಾಜಿಕ ದೂರ ಮತ್ತು ನಿಕಟತೆ ಇವುಗಳ ಆಧಾರದಲ್ಲಿ ನಿರ್ಧರಿತವಾಗುತ್ತದೆ.

೫.೧.೧.೧.೧. ವೃತ್ತಿ ಮತ್ತು ಜಾತಿ: ಮೊದಲನೆಯದಾಗಿ, ವ್ಯಕ್ತಿಗಳ ನಡುವಣ ಸಾಮಾಜಿಕ ದೂರವನ್ನು ನಿರ್ಧರಿಸುವ ಸಂಗತಿಗಳಲ್ಲಿ ಕೋಟ ಭಾಷಿಕ ಸಮುದಾಯದಲ್ಲಿ ಜಾತಿ ಪ್ರಮುಖವಾದದ್ದು. ಇದು ಬಹಳ ಸ್ಪಷ್ಟವಾಗಿ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಪೂರ್ವನಿರ್ಧರಿತವಾದ ರೀತಿಯಲ್ಲಿ ವ್ಯಕ್ತವಾಗುತ್ತದೆ. ಉದಾಹರಣೆಗೆ, ಕೃಷಿಯೇ ಪ್ರಧಾನ ಜೀವನೋಪಾಯವಾಗಿರುವ ಇಲ್ಲಿ ದಿನನಿತ್ಯದ ಬದುಕಲ್ಲಿ ಕೃಷಿ ಚಟುವಟಿಕೆಗಳ ಸಂದರ್ಭಗಳಲ್ಲಿ ಸಂಭಾಷಣೆಯಲ್ಲಿನ ಪಾತ್ರಗಳು ನಿಗದಿಯಾಗಿರುತ್ತವೆ. ಕೃಷಿಸಂಬಂಧಿ ಚಟುವಟಿಕೆಗಳಲ್ಲಿ ಭಿನ್ನ ಸಮುದಾಯಗಳ ಜನರ ಭಾಗವಹಿಸುವಿಕೆ ಇದೆ. ಇಲ್ಲಿ ಬ್ರಾಹ್ಮಣರು ಬಹುತೇಕ ಸಂದರ್ಭಗಳಲ್ಲಿ ಯಜಮಾನರಾಗಿರುತ್ತಾರೆ. ಶೆಟ್ಟರೂ ಜಮೀನಿನ ಒಡೆಯರಾಗಿದ್ದಾರೆ. ಅವರನ್ನು 'ಒಡೀರ್' ಎಂದು ಸಂಬೋಧಿಸುವ ಮೂಲಕ ಅವರ ಸ್ಥಾನ ಸಂಭಾಷಣೆಯ ಸಂದರ್ಭದಲ್ಲಿ ಸದಾ ಉನ್ನತ ಸ್ಥಾನದಲ್ಲೇ ಇರುತ್ತದೆ. ಇಲ್ಲಿನ ಸಂಬಂಧ 'ದನಿ'–'ಒಕ್ಲ್' ಸಂಬಂಧ. ಇದು ತಂದೆ ಮಕ್ಕಳ, ಗಂಡಹೆಂಡಿರ ಸಂಬಂಧದಂತೆ ಎಂಬಲ್ಲಿ ನಿಕಟತೆ, ಮಮತೆ ಸೂಚಿತವಾಗುತ್ತದೆ ಎಂದರೂ ಇವು ಅಧಿಕಾರದ ಸಂಬಂಧಗಳೇ ಆಗಿವೆ. ಇಲ್ಲಿ ಸೂಚನೆಗಳು, ಆದೇಶಗಳು ಅವರ ಕಡೆಯಿಂದ ಬರುತ್ತವೆ, ಈ ಬಗ್ಗೆ ದುಡಿಯುವ ವರ್ಗದವರು ಹೇಳುವಂಥದ್ದು ಹೆಚ್ಚೇನೂ ಇರುವುದಿಲ್ಲ. ಇಲ್ಲಿ ಸಲಿಗೆ, ಹಾಸ್ಯದ ಮಾತುಗಳಿದ್ದರೂ ಅವು 'ಏಕಮುಖಿ'ಯಾಗಿರುತ್ತವೆ. 'ಒಡೀರ್' ಅನಿಸಿಕೊಂಡವರು ತಮ್ಮ ಮನೆಯ ಕೆಲಸಗಾರರನ್ನು ಹೆಸರು ಹೇಳಿ ಕರೆಯುತ್ತಾರೆ. ಮಾತುಕತೆಯ ಸಂದರ್ಭದಲ್ಲಿ ಇವರಿಬ್ಬರ ನಡುವಣ ಅಂತರ ಹೆಚ್ಚು ಇರುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಸಮುದಾಯಗಳಲ್ಲಿ ಬಂಟರು ಮತ್ತು ಮೊಗವೀರರು 'ಮುಟ್ಟಾಳುಗಳು'[೩], ಉಳಿದವರು 'ದೂರಿನವರು'[೪]. ಬಂಟರು ಮತ್ತು ಮೊಗವೀರರು ಸ್ಪೃಶ್ಯರಾದರೂ ಮನೆಯ ಒಳ ಆವರಣಕ್ಕೆ ಅವರಿಗೆ ಪ್ರವೇಶವಿಲ್ಲ. ಹೀಗಾಗಿ ಸಂಭಾಷಣೆ ನಡೆಯುವುದು ಪಡಸಾಲೆ, ಚಾವ್ಡಿ, ಚಿಟ್ಟಿ ಮುಂತಾದ ಬಾಹ್ಯ ವಲಯದಲ್ಲೇ. ಅಸ್ಪೃಶ್ಯ ಸಮುದಾಯಗಳ ನಡುವಣ ಭಾಷಿಕ ಕೊಡುಕೊಳೆಗಳು ನಡೆಯುವುದು ಅಂಗಳ ಮತ್ತು ಕೆಲಸಕ್ಕೆ ಸಂಬಂಧಿಸಿದ ವಲಯಗಳಲ್ಲಿ. ಅಸ್ಪೃಶ್ಯರೆನಿಸಿಕೊಂಡ ಕೂಸಾಳು, ಕೊರಗರು ಮುಂತಾದವರು ಮುಖ್ಯ ದ್ವಾರದಿಂದ ಪ್ರವೇಶಿಸುವಂತಿರಲಿಲ್ಲ. ಅವರ ಪ್ರವೇಶ ಮತ್ತು ನಿರ್ಗಮನ ದಿಡ್ಡಿಬಾಗಿಲುಗಳ ಮೂಲಕ. ಅವರ ಪ್ರವೇಶ ಮತ್ತು ನಿರ್ಗಮನ ಅಲ್ಲಿಂದಲೇ.

ಕೆಲಸದ ಸಂದರ್ಭದಲ್ಲಿ ಅಂದರೆ ಒಡೆಯರ ಮನೆಯಿಂದಾಚೆ ಹೊಲಗದ್ದೆಗಳಲ್ಲಿ ಸಮಾನ ಸ್ತರದವರು ಕಲೆತಾಗ ನಗು, ಮಾತು, ಚೇಷ್ಟೆಗಳು, ಹಾಡುಗಳು ಕೇಳಿಬರುತ್ತವೆ. 'ಬತ್ತ ತೊಳು ಹಾಡ್'ಗಳು, ಬೀಸುವಾಗಿನ ಹಾಡುಗಳು, 'ಆರ್ ಹೂಡು'ವಾಗಲಿನ ಉದ್ಗಾರ (ಒಳಲ್

ಹಾಕುದ್) ಇವೆಲ್ಲ ಶ್ರಮಪರಿಹಾರಕ್ಕೆಂದು ಹುಟ್ಟಿಕೊಂಡವುಗಳು. ಆದರೆ ಇವುಗಳ ರೂಪಕಶಕ್ತಿ, ಸೃಜನಶೀಲತೆ ಅಚ್ಚರಿಹುಟ್ಟಿಸುತ್ತದೆ. ಈ ಹಾಡುಗಳು ಪ್ರತಿ ಸಂದರ್ಭದಲ್ಲಿಯೂ ಮರುಸೃಷ್ಟಿ ಯಾಗುತ್ತಿರುತ್ತವೆ. ಇವು ಯಾರೋ ಒಬ್ಬರು ಹೇಳುವುದು, ಉಳಿದವರು ನಿಷ್ಕ್ರಿಯರಾಗಿ ಕೇಳುವುದು ಎಂಬ ರೀತಿಯವಲ್ಲ. ಇವು ಜೊತೆಗಿರುವವರನ್ನು ಮಾತುಕತೆಗೆ ಎಳೆಯುತ್ತಾ, ಎದುರಿಗಿರುವವರನ್ನು ಸೇರಿಸಿಕೊಳ್ಳುತ್ತಾ, ಸಾಂದರ್ಭಿಕ ಸಂಗತಿಗಳನ್ನು ಒಳಗು ಮಾಡಿಕೊಳ್ಳುತ್ತಾ ಹುಟ್ಟಿಕೊಳ್ಳುತ್ತವೆ. ಆ ಸಂದರ್ಭದಲ್ಲಿ ಸೃಷ್ಟಿಯಾಗುತ್ತದೆ.

ಉದಾಹರಣೆಗೆ,

ಕಲ್ಲಲಿ ಕುಕ್ಕುವದಲ್ಲ ನೀರಲಿ ಒಗೆಯುವುದಲ್ಲ

ಯಾವಾಗ ನೋಡಿದರೂ ಹೊಸಮಡಿ। **'ಬಾರತ್ಯಮ್ಮ'**

ಜಾಣೆ ಕನ್ನಡದ ಅರತೇಳು

ಈ ಹಾಡು ಒಗಟಿನ ರೂಪದಲ್ಲಿದೆ. ಇದರ ಉತ್ತರ 'ಕೊಕ್ಕಾನಕ್ಕಿ'. ಇಲ್ಲಿ ಸಂದರ್ಭಾನುಸಾರ ವಾಗಿ 'ಬಾರತ್ಯಮ್ಮ' ಎಂದಿದ್ದುದು ಸುಶೀಲ ಎದುರಿಗಿದ್ದರೆ 'ಸುಶೀಲಮ್ಮ' ಎಂದೂ ಗಂಗಾ ಇದ್ದರೆ 'ಗಂಗಮ್ಮ' ಎಂದೂ ಬದಲಾಗುತ್ತದೆ. ಈ ಬಗೆಯ ಇನ್ನಷ್ಟು ಹಾಡುಗಳನ್ನು ಕೊನೆಟಿಪ್ಪಣಿಯಲ್ಲಿ ನೀಡಲಾಗಿದೆ.[೫]

ಮೀನುಗಾರಿಕೆಯಲ್ಲಿ ಶ್ರೇಣೀಕರಣ ಕೃಷಿಗಿಂತ ಭಿನ್ನ ಬಗೆಯಲ್ಲಿ ವ್ಯವಸ್ಥಿತಗೊಂಡಿದೆ. ಹಿಂದಿನಿಂದಲೂ ಮೊಗವೀರರೇ ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರಿಕೆಯ ಕೆಲಸ ಮಾಡುತ್ತಾ ಬಂದವರು. ಅವರ ನೆರವಿಗೆ ಇತರ ಸಮುದಾಯದವರು ಬಂದರೂ ಅವರು ಶ್ರೇಣೀಕರಣದಲ್ಲಿ ಇವರಿಗಿಂತ ಮೇಲು ಮಟ್ಟದವರಾಗಿರಲಿಲ್ಲ. ಜೊತೆಗೆ ಮೀನುಗಾರಿಕೆಯಲ್ಲಿ 'ಕಡ್ಲ್ ಕೆಲ್ಸ'ಕ್ಕೆ ಹೋಗುವವರು ಗಂಡಸರೇ. ಹೆಂಗಸರು ಏನಿದ್ದರೂ 'ದಕ್ಕೆ'ಯ ಮೇಲೆ, ವಿಶೇಷವಾಗಿ ಮೀನು ಮಾರುವ ಕೆಲಸ ಮಾಡುವುದನ್ನು ಗಮನಿಸಬಹುದು.

ಮೀನು ಮಾರುವ ಹೆಂಗಸರು 'ಜೋರು'. ವ್ಯಾಪಾರದ ಸಂದರ್ಭದಲ್ಲಿ ನಷ್ಟವಾಗದಂತೆ, ತಮ್ಮ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಅವರು ದೊಡ್ಡ ದನಿಯಲ್ಲಿ ಮಾತಾಡುವುದು ಅನಿವಾರ್ಯವಾಗುತ್ತದೆ. ಈ ಸಂಗತಿ ಕೋಟ ಕನ್ನಡದಲ್ಲಿ ಜೋರಾಗಿ ಮಾತಾಡುವ ಹೆಂಗಸರನ್ನು ಸೂಚಿಸಲು ಬಳಕೆಯಾಗುವುದನ್ನು ಕಾಣಬಹುದು. ಹೀಗೆ ಜೋರಾಗಿ ಮಾತನಾಡುವವರನ್ನು 'ಮಗೇರ್ರ್ ಕಣಂಗೆ ಕೆಂಚ್ ಮಾಡ್ತ್ಲೆ' ಎಂದು ಟೀಕಿಸುತ್ತಾರೆ.

ದೋಣಿ ನಡೆಸಲು ಹುಟ್ಟು ಹಾಕುವುದನ್ನು 'ಅಂಬ್ ಹಾಕುದ್' ಎಂದು ಇವರು ಕರೆಯುತ್ತಾರೆ. ಹುಟ್ಟು ಹಾಕುವ ಸಂದರ್ಭದಲ್ಲಿ ಶ್ರಮ ಪರಿಹಾರಕ್ಕಾಗಿ ಹಾಡುವ ಹಾಡು ಆ ಸಂದರ್ಭದಲ್ಲೇ ಹುಟ್ಟಿಕೊಳ್ಳುವಂಥದ್ದು. ಪ್ರಧಾನವಾಗಿ ಹುಟ್ಟುಹಾಕುವವನು ಹಾಡನ್ನು ಎತ್ತಿಕೊಳ್ಳುತ್ತಾನೆ, ಉಳಿದವರು ಆತನೊಂದಿಗೆ ದನಿಗೂಡಿಸುತ್ತಾರೆ. ಶ್ರಮ ಪರಿಹಾರಕ್ಕೂ ಹಾಡುಗಳಿಗೂ ಇರುವ ಸಂಬಂಧವನ್ನು ಇಲ್ಲಿ ಗಮನಿಸಬಹುದು.

೫.೧.೧.೧.೨. ಲಿಂಗ: ಕುಟುಂಬದೊಳಗೇ ಸಂವಹನ ನಡೆಯುವ ಸಂದರ್ಭವೂ ಸಾಂಪ್ರದಾಯಿಕ ಸಂದರ್ಭವೇ ಆಗಿದೆ. ಕುಟುಂಬದೊಳಗೆ ಹಿರಿಯರು ಕಿರಿಯರು, ಹೆಂಗಸರು ಮತ್ತು ಗಂಡಸರು ಎಂಬ ವಿಂಗಡಣೆ ಮುಖ್ಯವಾಗುತ್ತದೆ. ಮೇಲಿನ ಎಲ್ಲ ಸಂದರ್ಭಗಳಲ್ಲಿ ಮಾತುಕತೆಯಲ್ಲಿ ಭಾಗವಹಿಸುವಿಕೆಯಲ್ಲಿ ಲಿಂಗ[೬] ನಿರ್ಧಾರಕ ಸಂಗತಿಯಾಗಿದೆ. ದೈನಂದಿನ ವ್ಯವಹಾರಗಳಲ್ಲಿ ಹೆಂಗಸರ ಭಾಷಿಕ ವಲಯ ಮತ್ತು ಗಂಡಸರ ಭಾಷಿಕ ವಲಯ ಸ್ಪಷ್ಟವಾಗಿ ನಿಗದಿಯಾಗಿರುವುದು ಕಂಡುಬರುತ್ತದೆ. ಅವರ ಸೂಚನೆಯನ್ನು ಪಾಲಿಸುವುದಷ್ಟೆ ಹೆಂಗಸರ ಕೆಲಸ. ಅವರ ಹಾಡು, ಹರಟೆ ಬಿಚ್ಚಿಕೊಳ್ಳುವುದು ಒಳ ಸ್ತರದಲ್ಲಿ ಮತ್ತು ಕೆಲಸದ ವಲಯದಲ್ಲಿ. ವ್ಯವಹಾರಕ್ಕೆ ಸಂಬಂಧಿಸಿದ ಸಂಗತಿಗಳಲ್ಲಿ ಹೆಂಗಸರ ಭಾಗವಹಿಸುವಿಕೆ 'ಅಧಿಕ ಪ್ರಸಂಗ' ಎನಿಸಿಕೊಳ್ಳುವುದು ಸಾಮಾನ್ಯವಾಗಿ ಕಾಣಿಸುವ ಸಂಗತಿ. ಓದಿರುವ ಹೆಂಗಸು ಗಂಡಸರೊಡನೆ ಕೂತು ಮಾತಾಡುವುದು ಹೆಂಗಸು ಇರಬೇಕಾದ ರೀತಿಗೆ ವಿರುದ್ಧ ಎನ್ನುವ ಸಂಗತಿಯನ್ನು ಕಾಣಬಹುದು. ಪತಿಪತ್ನಿ ಹಿರಿಯರು ಇರುವ ಸಂದರ್ಭದಲ್ಲಿ ಒಬ್ಬರೊಡನೆ ಒಬ್ಬರು ಸಲಿಗೆಯಿಂದ ಮಾತಾಡುವಂತಿಲ್ಲ.

೫.೧.೧.೧.೩. ವಯಸ್ಸು: ಲಿಂಗ ಮತ್ತು ಜಾತಿಯ ಹಾಗೆ ದಿನನಿತ್ಯದ ಸಂದರ್ಭಗಳಲ್ಲಿ ವಯಸ್ಸು ನಿರ್ಧಾರಕ ಸಂಗತಿಯಾಗಿದೆ. ಹಿರಿಯರೆದುರಿಗೆ ಸರಿಸಮನಾಗಿ ನಿಂತು ಮಾತಾಡುವುದು ಈ ಸಂಸ್ಕೃತಿಯಲ್ಲಿ ಉದ್ಧಟತನದ ಸಂಕೇತವಾಗಿದೆ. ಅವಿಭಕ್ತ ಕುಟುಂಬಗಳಲ್ಲಿ ಮನೆಯ ಯಜಮಾನನ ಮಾತಿಗೇ ಮಾನ್ಯತೆ. ಯಜಮಾನನ ಎದುರು ತಲೆಯೆತ್ತಿ ಗಟ್ಟಿಯಾಗಿ ಮಾತಾಡುವುದಾಗಲೀ, ಸಲಿಗೆಯಿಂದ ವರ್ತಿಸುವುದಾಗಲೀ ಸರಿಯಾದ ನಡತೆಯಲ್ಲ ಎಂದು ಭಾವಿಸಲಾಗಿತ್ತು. ಅವನ ಮಾತು ಮೀರಿ ನಡೆಯುವುದು, ಮಾತಿಗೆ ಪ್ರತಿಯಾಡುವುದು ಇವು ಆಕ್ಷೇಪಾರ್ಹ ನಡವಳಿಕೆಗಳಾಗಿದ್ದವು.

೫.೧.೧.೧.೪. ಭಾಷಿಕ ವರ್ತನೆ ಕುರಿತ ಸಾಮಾನ್ಯ ತಿಳುವಳಿಕೆಗಳು: ದೈನಂದಿನ ಸಂದರ್ಭದಲ್ಲಿ ಭಾಷೆಯ ಬಳಕೆಯ ಜೊತೆಗೆ ಭಾಷಿಕ ವರ್ತನೆಯ ಬಗೆಗೂ ನಿರ್ದಿಷ್ಟ ನಿಯಮಗಳಿರುವುದು

ಕಂಡುಬರುತ್ತದೆ. ಭಾಷಿಕ ವರ್ತನೆಗಳನ್ನು ಬೇರೆ ಬೇರೆ ಸಂಸ್ಕೃತಿಗಳಲ್ಲಿ ಬೇರೆ ಬೇರೆ ಬಗೆಯಲ್ಲಿ ಅರ್ಥೈಸಲಾಗುತ್ತದೆ. ಕೋಟ ಭಾಷಿಕ ಪರಿಸರದಲ್ಲಿ ವಿವಿಧ ಭಾಷಿಕ ವರ್ತನೆಗಳಿಗಿರುವ ಸಂಸ್ಕೃತಿಬದ್ಧ ಅರ್ಥಗಳನ್ನು ಇಲ್ಲಿ ಗಮನಿಸಬಹುದು.

ಕೈ ತೋರ್ಸಿ ಮಾತಾಡುದ್: ಇದು ಉದ್ಧಟತನದ ಸಂಕೇತ. ಹಿರಿಯರೆದುರಿಗೆ ಮತ್ತು ನಮ್ಮಿಂದ ಮೇಲೆ ಇರುವವರೆದುರಿಗೆ ಕೈತೋರಿಸಿ ಮಾತಾಡುವುದು ಸಭ್ಯತೆಯ ಲಕ್ಷಣ ಅಲ್ಲ ಎಂಬ ತಿಳುವಳಿಕೆ ಮನೆಮಾಡಿದೆ.

ನೆಲ ನೋಡಿ ಮಾತಾಡುದ್: ನೆಲ ನೋಡಿ ಮಾತಾಡುವುದು ಹೆಣ್ಣುಮಕ್ಕಳ ವಿಷಯದಲ್ಲಿ ಲಜ್ಜೆಯ ಸಂಕೇತವಾದರೆ ಗಂಡಸರು ಹಾಗೆ ಮಾತಾಡಿದರೆ ಅದು ಅಪ್ರಾಮಾಣಿಕತೆಯ ಸಂಕೇತ. ಮುಖ ನೋಡಿ ಎದುರಿಸಲು ಧೈರ್ಯವಿಲ್ಲದವ ನೆಲ ನೋಡಿ ಮಾತಾಡುತ್ತಾನೆ ಎಂಬುದು ಸಮುದಾಯದಲ್ಲಿ ಬೇರೂರಿರುವ ನಂಬಿಕೆ.

ಮುಖ ಕಂಡ್‌ಕಂಡ್ ಮಾತಾಡುದ್: ಪ್ರಾಮಾಣಿಕತೆ ಮತ್ತು ಧೈರ್ಯದ ಸಂಕೇತ. ಯಾವುದೇ ಭಯ, ಹಿಂಜರಿಕೆ ಇಲ್ಲದವರು ಮಾತ್ರ ಮುಖ ನೋಡಿ ದೃಷ್ಟಿ ಸಂಧಿಸಿ ಮಾತಾಡಲು ಸಾಧ್ಯ.

ಕೈಬಾಯಿ ಹಾರ್ಸಿ ಮಾತಾಡುವುದು: ಉದ್ಧಟತನ, ಅಹಂಕಾರ, ವಾಚಾಳಿತನದ ಸಂಕೇತ. ಎದುರು ಹಿರಿಯರು ಕುಳಿತಾಗಲೂ ಪರಿವೆ ಇಲ್ಲದೆ, ಅತಿಯಾದ ಆಂಗಿಕ ಅಭಿನಯದ ಮೂಲಕ ತನಗೆ ಎಲ್ಲ ತಿಳಿದಿದೆ ಎಂಬ ಹಮ್ಮಿನಿಂದ ಮಾತಾಡುವುದನ್ನು ಇದು ಸಂಕೇತಿಸುತ್ತದೆ.

ಕೆಪ್ಪೆ ಹಾರ್ಸಿ ಮಾತಾಡುದ್: ಇದೂ ಅಹಂಕಾರದ ಸಂಕೇತ. ಎದುರಿಗಿರುವವನ ಮಾತನ್ನು ಧಿಕ್ಕರಿಸುವ, ಪ್ರಶ್ನಿಸುವ ಬಗೆಯಾಗಿ ಇದನ್ನು ಪರಿಭಾವಿಸಲಾಗುತ್ತದೆ.

ಮುಟ್ಟಿ ಮಾತಾಡುದ್: ಸ್ಪೃಶ್ಯ ಅಸ್ಪೃಶ್ಯ ತಾರತಮ್ಯವಿರುವ ಸಮುದಾಯದಲ್ಲಿ ಭಾಷಿಕ ವರ್ತನೆಗಳಲ್ಲಿ ಸ್ಪರ್ಶ ಸಹಜವಲ್ಲ. ಮುಟ್ಟಿ ಮಾತಾಡುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿಯಲ್ಲ. ಅದನ್ನು ಸಭ್ಯ ವರ್ತನೆ ಎಂದು ಪರಿಗಣಿಸಲಾಗುವುದಿಲ್ಲ. ಇನ್ನು ಹೆಣ್ಣುಮಕ್ಕಳ ವಿಚಾರದಲ್ಲಂತೂ ಅದು ಅಸಭ್ಯತೆಯ ಪರಮಾವಧಿ ಎಂದೇ ಭಾವಿಸಲಾಗುತ್ತದೆ.

ನಿಷೇಧೋಕ್ತಿ ಮತ್ತು ಸೌಮ್ಯೋಕ್ತಿ:

ಯಾರಾದರೂ ಸತ್ತು ಹೋದರು ಎನ್ನುವುದಕ್ಕೆ 'ಸಾಕ್ ಅನ್ಸ್‌ಕಂಡ್ರ್', 'ಗುಡ್ಡಿ ಸೇರ್ಕಂಡ್ರ್', 'ದೇವ್ರ ಪಾದ ಸೇರ್ಕಂಡ್ರ್' ಎಂದು ಸೌಮ್ಯವಾಗಿ ಹೇಳುವ ಬಗೆ ಇಲ್ಲಿದೆ. ಏನಾದರೂ ಅಪಶಕುನ ನುಡಿದರೆ ಶಿರೂರು ಕಡೆಯ ಬ್ರಾಹ್ಮಣರಲ್ಲಿ 'ಒಳ್ತು' ಎನ್ನುವ ಪದ ಹೇಳುವ

ಕ್ರಮವಿದೆ. ಮೈಸೂರು ಬೆಂಗಳೂರು ಭಾಷೆಗಳಲ್ಲಿ 'ಬಿಡ್ತು' ಎನ್ನುವ ಪದಕ್ಕೆ ಸಮಾನಾಂತರವಾಗಿ ಈ ಪದದ ಬಳಕೆ ಇರುವುದನ್ನು ಗಮನಿಸಬಹುದು.

ಹಾಗೆಯೇ ಹೊರಡುವಾಗ 'ಹ್ವಾತೆ' ಎನ್ನುವ ಬದಲು 'ಬತ್ತೆ' ಎನ್ನುವುದು, ಹೊರಡುವಾಗ 'ಎಲ್ಲಿಗೆ' ಎಂದು ಕೇಳುವ ಬದಲಿಗೆ 'ದೂರ' ಎಂದು ಕೇಳುವುದು, ಸದ್ಯಕ್ಕೆ ಮಗು ಬೇಡವೇ ಎಂಬುದಕ್ಕೆ 'ಮಕ್ಳ್ ದೂರ ಮಾಡ್ಕಂಡದ್ದಾ' ಎನ್ನುವುದು, ದನದ ಬೆಲೆ ಹೇಳಿ ಎನ್ನುವುದಕ್ಕೆ 'ದನಕ್ಕೆ ಹೆಸರಿಡಿ' ನಿಷೇಧೋಕ್ತಿಗೆ ಉದಾಹರಣೆಗಳಾಗಿವೆ.

ಕರ್ತೃತ್ವ ನಿರಾಕರಣೆ:

ಇನ್ನೊಂದು ವಿಶಿಷ್ಟವಾದ ಭಾಷಿಕ ವಿದ್ಯಮಾನವಿದು. ಯಾವುದಾದರೂ ಕೆಲಸ ಮಾಡಬೇಕಾದಾಗ, ಎಲ್ಲಿಗಾದರೂ ಹೋಗಬೇಕಾಗಿ ಬಂದಾಗ 'ನಾ ಮಾಡ್ತೆ', 'ನಾ ಹ್ವಾತೆ' ಎಂಬ ರೂಪಗಳ ಬದಲಿಗೆ 'ಮಾಡ್ಕಂದ್ ಇತ್ತ್', 'ಹ್ವಾಯ್ಕ್', 'ಕಾಣ್ಕ್' ಅಂದರೆ ಮಾಡಬೇಕೆಂದಿದೆ, ಹೋಗಬೇಕು, ನೋಡಬೇಕು ಎಂಬ ರೂಪಗಳನ್ನು ಬಳಸುತ್ತಾರೆ. ನಾನು ಮಾಡುತ್ತೇನೆ ಎಂಬುದಕ್ಕಿಂತ ಅದು ನನ್ನಿಂದ ಆಗುತ್ತದೆ ಎಂಬ ಈ ಅಭಿವ್ಯಕ್ತಿಯಲ್ಲಿ ಕರ್ತೃತ್ವ ನಿರಾಕರಣೆ ಕಂಡುಬರುತ್ತದೆ. ಇಲ್ಲಿ ನಾನು ಮಾಡುತ್ತೇನೆ ಎಂದ ಮೇಲೆ ಎಲ್ಲಿ ನನ್ನಿಂದ ಆಗದೇ ಹೋಗುತ್ತದೋ ಎಂಬ ಭೀತಿ, ಅಹಂನ ನಿರಾಕರಣೆ ಕಾಣುತ್ತದೆ.

ಮೇಲೆ ಹೇಳಲಾದ ಸಾಂಪ್ರದಾಯಿಕ ಸಂದರ್ಭಗಳಲ್ಲೆಲ್ಲ ಭಾಷಿಕ ಕೊಡುಕೊಳೆಗಳಲ್ಲಿ ಸೂಕ್ಷ್ಮವಾಗಿ ಸ್ಪೃಶ್ಯ ಅಸ್ಪೃಶ್ಯ ಗೆರೆಯ ಹಾಜರಿಯನ್ನು ಕಾಣಬಹುದು.

೫.೧.೧.೨. ಸಾಂಪ್ರದಾಯಿಕ ಸಂದರ್ಭದಲ್ಲಿ ಆಧುನಿಕತೆಯಿಂದಾದ ಪಲ್ಲಟಗಳು

ಆಧುನಿಕ ಸಂದರ್ಭದಲ್ಲಿ ಮಾತುಕತೆ ಆ ಸಮುದಾಯ ಪಾಲಿಸುತ್ತಾ ಬಂದ ಸಂಸ್ಕೃತಿಬದ್ಧ ನಿಯಮಗಳಿಂದ ಬಿಡಿಸಿಕೊಳ್ಳುತ್ತಿದೆ. ಭೂ ಮಸೂದೆ, ಸಾಮಾಜಿಕ ಸಮಾನತೆಯ ಪರಿಕಲ್ಪನೆ, ಪ್ರತಿಷ್ಠೆ, ಆಧುನಿಕತೆ, ಶಿಕ್ಷಣಗಳಿಂದಾಗಿ ನಿಧಾನವಾದ ಬದಲಾವಣೆ ಕಂಡುಬರುತ್ತಿದೆ. ಭೂ ಮಸೂದೆಯಿಂದ ಒಕ್ಕಲಾಗಿದ್ದವರು ಭೂಮಿಯನ್ನು ಪಡೆಯುವಂತಾಗಿ ಸಂಕಥನದ ಕೇಂದ್ರ ಮತ್ತು ರಚನೆಯಲ್ಲಿ ಪಲ್ಲಟಗಳಾಗಿವೆ. ಕೃಷಿ ಸಂದರ್ಭದಲ್ಲಿ ಹಿಂದೆ ಬಳಸುತ್ತಿದ್ದ ಅನೇಕ ವಸ್ತುಗಳು ಮತ್ತು ಅವುಗಳ ಜೊತೆ ಶಬ್ದಗಳೂ ಇಂದು ಇಲ್ಲವಾಗಿವೆ. ಉದಾಹರಣೆಗೆ, ಸಂಬಳಿಗಿ, ಗೊರಬು ಇತ್ಯಾದಿ.

ಸಮಾಜದಲ್ಲಾದ ಬದಲಾವಣೆಯಿಂದಾಗಿ ಕೆಲಸದ ಸಂದರ್ಭದಲ್ಲಿ ಹಾಡುತ್ತಿದ್ದ ಹಾಡುಗಳು ಸಂದರ್ಭದಿಂದ ಕಳಚಿಕೊಂಡಿವೆ. ಒರ್ಲ್ ಹೋಗಿ ಮಿಲ್‌ಗಳು ಬಂದಿವೆ. ಹೀಗಾಗಿ ಭತ್ತ

ತೊಳೆಯುವುದು ತಪ್ಪಿ ಹೋಗಿ ಹಾಡುಗಳಿಗೆ ಜಾಗ ಇಲ್ಲವಾಗಿದೆ. ಗುಂಡ್ಮಿ ಚಂದ್ರಶೇಖರ ಐತಾಳರು ತಮ್ಮ ಜನಪದ ಗೀತೆಗಳ ಸಂಗ್ರಹದಲ್ಲಿ ಪ್ರಸ್ತಾವನೆಯಲ್ಲಿ ಹೇಳುತ್ತಾರೆ, "ಇಲ್ಲಿಯ ಹೆಚ್ಚಿನ ತ್ರಿಪದಿಗಳು ಬತ್ತಕುಟ್ಟುವ ಹಾಡುಗಳು. ಇವೆಲ್ಲ ಇಂದು ನಶಿಸಿ ಹೋಗುತ್ತಿವೆ. ಒರಳಿನ ಬದಲು 'ಹಲ್ಲರ್' ಬಂದಿದೆ. ಬತ್ತ ಕುಟ್ಟುವ ಕೊಟ್ಟಿಗೆಯ ಬದಲು ರೈಸ್ ಮಿಲ್ಲುಗಳು ರೆಯ್ಸ್ ಆಗಿವೆ. ಈ ಗೀತಗಳ ಶ್ರುತಿಯ ಸುಮಧುರ ಸಂಗೀತ ಮಾಯವಾಗಿ ಕರ್ಕಶ ಧ್ವನಿ ಮೊಳಗುತ್ತಿದೆ"(ಗುಂಡ್ಮಿ ಚಂದ್ರಶೇಖರ ಐತಾಳ;೧೯೭೩;ಪು:೭).

ಆದರೆ ಭತ್ತ ತೊಳೆಯುವ ಕೆಲಸ ತಪ್ಪಿದ ನಂತರ ಹಾಡುಗಳು ಸಂಪೂರ್ಣವಾಗಿ ಅಳಿದಿಲ್ಲ. ಅವುಗಳನ್ನು ಹೆಂಗಸರು ನೇಜಿ ನೆಡುವಾಗ, ಭತ್ತ ಕೊಯ್ಯುವಾಗ ಹಾಡುತ್ತಾ ಕುಟುಕು ಜೀವವನ್ನು ಉಳಿಸಿದ್ದಾರೆ. ಜೊತೆಗೆ ಈ ಹಾಡುಗಳಲ್ಲಿ ವ್ಯಕ್ತವಾಗುವ ಜೀವಪರತೆ, ರೂಪಕಶಕ್ತಿ, ಭಾಷಾ ಸೌಂದರ್ಯ ಮುಂತಾದವನ್ನು ಮನಗಂಡ ಇಲ್ಲಿನ ವಿದ್ಯಾವಂತರು ಅವುಗಳನ್ನು ಉಳಿಸಿಕೊಳ್ಳಬೇಕು ಎಂದು ಸಂಗ್ರಹಿಸಿ ಪ್ರಕಟಿಸುವ ಕೆಲಸವನ್ನು ಮಾಡಿದರು. ಯುವಕ ಮಂಡಲ, ಶಾಲೆ, ಯುವತಿ ಮಂಡಲದವರು, ಸ್ವಸಹಾಯ ಸಂಘಗಳಲ್ಲಿ ಈ ಹಾಡುಗಳಿಗೆ ವೇದಿಕೆ ಕಲ್ಪಿಸಿದ್ದಾರೆ. ಸುತ್ತಲಿನ ಶಾಲೆಗಳ ಮಕ್ಕಳು ಇವನ್ನು ತಮ್ಮ ಹಿರಿಯರಿಂದ ಸಂಗ್ರಹಿಸುವಂತೆ ಶಿಕ್ಷಕರು ಪ್ರೇರಣೆ ನೀಡುತ್ತಿದ್ದಾರೆ. ಆಕಾಶವಾಣಿಯಲ್ಲೂ ಈ ಹಾಡುಗಳು ಪ್ರಸಾರವಾಗುತ್ತವೆ.

ಮೀನುಗಾರಿಕೆ ಸಂಪೂರ್ಣವಾಗಿ ಯಾಂತ್ರೀಕರಣಗೊಂಡಿದೆ ಮತ್ತು ಇಂದು ಅದು ಸ್ಥಳೀಯತೆಯಿಂದ ಬಿಡಿಸಿಕೊಂಡು ಅಂತಾರಾಷ್ಟ್ರೀಯ ಮಾರುಕಟ್ಟೆಯ ಭಾಗವಾಗಿದೆ. ಹೀಗಾಗಿ ಇಂದಿನ ಮೀನುಗಾರರ ವೃತ್ತಿ ಪದಕೋಶದಲ್ಲಿ ಹಿಂದಿನ ಪದಗಳ ಜಾಗದಲ್ಲಿ ಇಂಗ್ಲಿಷ್ ಪದಗಳು ಬಂದಿವೆ. ದೋಣಿ ಬೋಟ್ ಆಗಿದೆ. ಆರ್ಬರ್, ಆಂಗ್ಲರ್, ಪಾಪ್ಲೆಟ್, ಬೋರ್ಡ್ ಹೀಗೆ ಇವುಗಳನ್ನೇ ಬಳಸಿದಾಗ ಪ್ರದೇಶದಾಚೆಗೆ ವ್ಯವಹರಿಸುವುದೂ ಸುಲಭವಾಗುತ್ತದೆ.

'ಅಂಬ್' ಹಾಕುವುದು ಹೋಗಿ ಯಾಂತ್ರೀಕೃತ ದೋಣಿಗಳು (ಬೋಟ್) ಬಂದಿವೆ. ಹೀಗಾಗಿ ಅಂಬ್ ಹಾಕುವಾಗ ಶ್ರಮಪರಿಹಾರಕ್ಕಾಗಿ ಹಾಡುವ ಹಾಡು ಪ್ರಸ್ತುತತೆಯನ್ನು ಕಳೆದುಕೊಂಡಿದೆ. ಹೀಗಾಗಿ ಇದು ಹಿಂದೆ ಮೀನುಹಿಡಿಯಲು ಹೋಗುತ್ತಿದ್ದ ಕೆಲವೇ ಕೆಲವು ಹಿರಿಯರ ಬಾಯಲ್ಲಿ ಮಾತ್ರ ಉಳಿದುಕೊಂಡಿದೆ.

"ಆಯಿಲ್ ಇಂಜಿನ್ ಮತ್ತು ಪಂಪ್‌ಸೆಟ್‌ಗಳಿಂದ ನೀರು ಮೊಗೆಯುವ ಹಾಡು ಈಗ ಇಲ್ಲ. ಸೇತುವೆ ನಿರ್ಮಾಣದಿಂದ ದೋಣಿ ಒತ್ತುವ ಹಾಡು ಇಲ್ಲವಾಗಿದೆ. ಸಾರಿಗೆ ಸೌಲಭ್ಯ

ಹೆಚ್ಚಿರುವುದರಿಂದ ಗಾಡಿ ಹೊಡೆಯುವ ಸಂದರ್ಭದ ಹಾಡು ಇಲ್ಲವಾಗಿದೆ. ಪವರ್ ಟಿಲ್ಲರ್‌ನ ಶಬ್ದದಿಂದ ಹೂಟೆಯ ಪದಗಳು ಕಾಣೆಯಾಗಿವೆ. ಹೀಗೆ ಕೆಲಸದ ಸಂದರ್ಭದ ಹಾಡುಗಳು ನಿರ್ದಿಷ್ಟ ಕೆಲಸದ ಅಸ್ತಿತ್ವದೊಂದಿಗೆ ಪ್ರಕಟಗೊಳ್ಳುತ್ತವೆ. ಆ ಕೆಲಸಗಳು ಇಲ್ಲವಾದಾಗ ಅದನ್ನವಲಂಬಿಸಿಕೊಂಡ ಹಾಡುಗಳೂ ಇಲ್ಲವಾಗುತ್ತವೆ"(ಮಯ್ಯ.ಪಾ.ನ;೧೯೯೫; ಪು:೨೧೯) ಎಂಬುದು ಆಧುನಿಕತೆಯಿಂದಾದ ಸ್ಥಿತ್ಯಂತರವನ್ನು ಸೂಚಿಸುತ್ತದೆ.

ಆಧುನಿಕತೆಯ ಪ್ರಭಾವ ಮತ್ತು ಆಧುನಿಕ ಶಿಕ್ಷಣದಿಂದಾಗಿ ಸಾಂಪ್ರದಾಯಿಕ ಸಂದರ್ಭಗಳಲ್ಲಿ ಮಹಿಳೆಯ ಭಾಗವಹಿಸುವಿಕೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ. ಇಂದು ಮನೆಗಳಲ್ಲಿ ಗಂಡಸರ ನಡುವೆ ಮಾತುಕತೆಗಳಲ್ಲಿ ಹೆಂಗಸರು ಪಾಲ್ಗೊಳ್ಳುತ್ತಾರೆ. ಭೂಮಸೂದೆಯಿಂದ ಭಿನ್ನ ಸಮುದಾಯಗಳವರೂ ಭೂಮಿ ಪಡೆಯುವಂತಾಗಿದೆ. ಅವಿಭಕ್ತ ಕುಟುಂಬಗಳು ಇಲ್ಲವಾಗಿರುವುದರಿಂದ ಮನೆಯ ಯಜಮಾನ ಮತ್ತು ಇತರರು ಎನ್ನುವ ಅಂತರ ಇಲ್ಲವಾಗಿದೆ.

೫.೧.೨. ಆಧುನಿಕತೆಯ ಭಾಗವಾಗಿ ಬಂದ ಸಂದರ್ಭ

ಆಧುನಿಕತೆಯ ಮೂಲಕ ಬಂದ ಸಂದರ್ಭಗಳು ಎಂದರೆ ಸಾಂಪ್ರದಾಯಿಕ ವೃತ್ತಿ, ಆಚರಣೆ ಸಂದರ್ಭಗಳಿಂದ ಹೊರತಾಗಿ ಈಚಿನ ವರ್ಷಗಳಲ್ಲಿ ಸಮಾಜದಲ್ಲಿ ಜಾಗ ಪಡೆದು ಕೊಂಡವು. ಇಲ್ಲಿ ಕಚೇರಿ, ಹೋಟೆಲ್, ಬಸ್‌ನಿಲ್ದಾಣ, ಫೋನು, ಶಾಲೆ ಮುಂತಾದವುಗಳು ಬರುತ್ತವೆ. ಈ ಎಲ್ಲ ಸಂದರ್ಭಗಳು ಸಾಂಪ್ರದಾಯಿಕ ಸಂದರ್ಭಗಳಿಂದ ಭಿನ್ನವಾಗಿವೆ. ಈ ಸಂದರ್ಭಗಳಲ್ಲಿ ಭಾಷೆ ತನ್ನ ಪ್ರಾದೇಶಿಕತೆಯಿಂದ ಬಿಡಿಸಿಕೊಳ್ಳುವ ಬಗೆಯನ್ನು ಗುರುತಿಸಬಹುದು. ಈ ಸಂದರ್ಭಗಳಲ್ಲಿನ ಭಾಷಿಕ ಕೊಡುಕೊಳೆಗಳಲ್ಲಿ ಸ್ಪೃಶ್ಯ ಅಸ್ಪೃಶ್ಯ ಗೆರೆಗಳು ಅಳಿಸಿಹೋಗಿವೆ.

ಸಾಂಪ್ರದಾಯಿಕ ಸಂದರ್ಭಗಳಲ್ಲಿ ಗೆರೆಕೊರೆದಂತೆ ಕಾಣುವ ಗಡಿಗಳು ಇಲ್ಲಿ ನಮನೀಯ ವಾಗಿವೆ. ಸಾಮಾಜಿಕ ದೂರ ಎನ್ನುವುದು ಅಲ್ಲಿ ತುಂಬಾ ಮುಖ್ಯವಾಗುತ್ತದೆ. ಆದರೆ ಆಧುನಿಕತೆಯ ಭಾಗವಾಗಿ ಬಂದ, ಮೇಲೆ ಹೇಳಲಾದ ಸಂದರ್ಭಗಳಲ್ಲಿ ಇದು ಎದ್ದು ಕಾಣುವ ಸಂಗತಿಯಾಗಿ ಕಾಣಿಸಿಕೊಳ್ಳುವುದಿಲ್ಲ.

ಇಲ್ಲಿನ ಬಹುತೇಕ ಸಂದರ್ಭಗಳಲ್ಲಿ ಜಾತಿ ಒಂದು ನಿರ್ಧಾರಕ ಸಂಗತಿಯಾಗದೆ ಗುರುತಿಸುವ ಚಿಹ್ನೆಯಾಗಿ ಕಾಣುತ್ತದೆ. ಲಿಂಗಭೇದವೂ ಇಲ್ಲಿ ನಿರ್ಣಾಯಕವಾದುದಲ್ಲ. ಆದರೆ ಇಲ್ಲಿ ವ್ಯವಹರಿಸುವಾಗಲೂ ಸಂಸ್ಕೃತಿಬದ್ಧ ಸಂಗತಿಗಳು ನಿರ್ಣಾಯಕವಾಗಿ ಅಲ್ಲದಿದ್ದರೂ ಒಬ್ಬರನ್ನು ಇನ್ನೊಬ್ಬರು ನೋಡುವ ಬಗೆಯನ್ನು ಪ್ರಭಾವಿಸುವುದನ್ನು ಗಮನಿಸಬಹುದು. ಪ್ರಮಾಣ ಕನ್ನಡದ ಹಾಜರಿ ಈ ಸಂದರ್ಭಗಳಲ್ಲಿ ಎದ್ದು ಕಾಣುತ್ತದೆ. ಸಾಂಪ್ರದಾಯಿಕ ಸಂದರ್ಭಗಳಿಗಿಂತ ಹೆಚ್ಚಾಗಿ ಇಲ್ಲಿ ಪ್ರಮಾಣ ಕನ್ನಡ ಮತ್ತು ಇಂಗ್ಲಿಷ್‌ನ ಹಾಜರಿಯನ್ನು ಗಮನಿಸಬಹುದು.

೫.೨. ವಿಶೇಷ ಸಂದರ್ಭಗಳು

ಇಲ್ಲಿ ವಿಶೇಷ ಸಂದರ್ಭಗಳಡಿಯಲ್ಲಿ ಜೀವನಾವರ್ತನ, ವಾರ್ಷಿಕಾವರ್ತನಗಳನ್ನು ಮತ್ತು ದೈನಂದಿನ ಬದುಕಿನಿಂದ ಹೊರತಾದ ವಿಶೇಷ ಸಂದರ್ಭಗಳನ್ನು ಗಮನಿಸಲಾಗಿದೆ. ಜೀವನಾ ವರ್ತನದಲ್ಲಿ ಸಮುದಾಯದೊಳಗಣ ಭಾಗವಹಿಸುವಿಕೆ ಹೆಚ್ಚು ವಾರ್ಷಿಕಾವರ್ತನದಲ್ಲಿ ಸಮುದಾಯಗಳ ನಡುವಣ ಭಾಗವಹಿಸುವಿಕೆ ಹೆಚ್ಚು. ವಿಶೇಷ ಸಂದರ್ಭಗಳು ಸಾಂಪ್ರದಾಯಿಕ ಸಂದರ್ಭಗಳೇ ಆಗಿರುವುದರಿಂದ ಸ್ಪಷ್ಟವಾದ ಭಾಷಿಕ ಪಾತ್ರ ಮತ್ತು ಗಡಿಗಳು ಪೂರ್ವ ನಿರ್ಧರಿತವಾಗಿ ಇರುವುದನ್ನು ಇಲ್ಲಿ ಗಮನಿಸಬಹುದು.ಈ ಭಾಗದಲ್ಲಿ ಆಚರಣೆಯ ಸಂದರ್ಭದಲ್ಲಿ ಸಮುದಾಯಗಳ ಭಾಗವಹಿಸುವಿಕೆ, ಅಲ್ಲಿ ಬಳಕೆಯಾಗುವ ಭಾಷೆ ಇವುಗಳನ್ನು ಗಮನಿಸಲಾಗಿದೆ.

ಈ ಸಂದರ್ಭಗಳಲ್ಲಿ ಬಳಸುವ ಭಾಷೆ ದೈನಂದಿನ ಭಾಷೆಗಿಂತ ಬೇರೆಯಾಗಿರುತ್ತದೆ. "ದೈನಂದಿನ ಬದುಕಿಂದ ಬೇರೆಯಾದ ಕಾಲ(ವಿಶಿಷ್ಟ ಮುಹೂರ್ತ), ವ್ಯಕ್ತಿ(ಮದುಮಗ, ಮದುಮಗಳು), ಸ್ಥಳ (ಮದುವೆಯ ಅಲಂಕೃತ ಚಪ್ಪರ, ಮಂಟಪ, ಬಟ್ಟೆ ಹಾಸಿದ ವಿಶಿಷ್ಟ ಆಸನ ಇತ್ಯಾದಿ)ಗಳಲ್ಲಿ ನಿತ್ಯ ಮನೆಯೊಳಗೆ ಮಾತನಾಡುವ ಭಾಷೆಗಿಂತ ಬೇರೆಯಾದ ಭಾಷೆಯನ್ನು ಅಳವಡಿಸುವುದು ಅನಿವಾರ್ಯವಾಗಿರಬೇಕು"(ಗಾಯತ್ರೀ ನಾವಡ;೧೯೯೧; ಪು:೪೬) ಎಂಬ ಮಾತನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಮಾತಿಗಿರುವ ಆಚರಣಾತ್ಮಕ ಮಹತ್ವ

ಎಲ್ಲ ಆಚರಣೆಗಳಲ್ಲೂ ಹಾಡು, ಸಾಂದರ್ಭಿಕ ಪದಬಳಕೆಯಾಚೆಗೆ ಕಷ್ಟಸುಖಗಳಲ್ಲಿ ಮಾತಾಡಿಸುವುದು ಕೂಡಾ ಆಚರಣೆಯ ಭಾಗವಾಗಿದೆ. ಹುಟ್ಟಿನ ಸಂದರ್ಭದಲ್ಲಿ 'ಮಗು ಮಾತಾಡ್ಸುದ್', ಬಯ್ಕಿ ಮದಿ ಸಂದರ್ಭದಲ್ಲಿ 'ಬಸ್ರಿ ಮಾತಾಡ್ಸುದ್' ಮತ್ತು ಸಾವಿನ ಸಂದರ್ಭದಲ್ಲಿ ಸತ್ತ ವ್ಯಕ್ತಿಯ ಮನೆಯವರನ್ನು ಸಂತೈಸುವ ಪ್ರಕ್ರಿಯೆಯಾಗಿ 'ಸಾವು ಮಾತಾಡ್ಸುದ್' ಇಲ್ಲೆಲ್ಲ ಮಾತಿಗೆ ವಿಶೇಷ ಸ್ಥಾನವಿದೆ. ಈ ಮೂಲಕ ತಮ್ಮ ಸುತ್ತಲಿನವರ ಕಷ್ಟಸುಖಗಳಲ್ಲಿ ಭಾಗಿಯಾಗುವ ಬಗೆ ಇಲ್ಲಿ ಕಾಣುತ್ತದೆ.

ಇನ್ನು ಮಗು ಔಪಚಾರಿಕ ಶಿಕ್ಷಣಕ್ಕೆ ಸಿದ್ಧವಾದ ಸಂದರ್ಭದಲ್ಲಿ ಬ್ರಾಹ್ಮಣರಲ್ಲಿ 'ಬರ ಹಿಡ್ಸುದ್' ಎಂಬ ಆಚರಣೆ ಕಾಣುತ್ತದೆ. ಇದು ಬೇರೆ ಸಮುದಾಯಗಳಲ್ಲಿ ಕಾಣುವುದಿಲ್ಲ. ಜೊತೆಗೆ, ವಟುವಿಗೆ ಬ್ರಹ್ಮೋಪದೇಶ ಮಾಡುವ ಸಂದರ್ಭದಲ್ಲಿ ಮಾಡುವ 'ಗಾಯತ್ರಿ ಮಂತ್ರೋಪದೇಶ' ಕೂಡಾ ಆತನನ್ನು ಈಗಿರುವ ಬಾಲಾವಸ್ಥೆಯಿಂದ ಜ್ಞಾನಾರ್ಥಿಯಾಗಿಸುವ ದೀಕ್ಷಾ ರೂಪದ್ದಾಗಿದೆ. ಹೀಗೆ ತಿಳಿವಿಗೆ ಪ್ರವೇಶ ಅಕ್ಷರದ ಮೂಲಕವೇ ಎಂಬುದು ಸಮುದಾಯ ಭಾಷೆಯ ಮಹತ್ವವನ್ನು ಮನಗಂಡಿರುವ ಪರಿಯನ್ನು ತಿಳಿಸುತ್ತದೆ.

ಜೀವನಾವರ್ತನ ವಾರ್ಷಿಕಾವರ್ತನದ ಆಚರಣೆಗಳಲ್ಲಿ ವಿಶಿಷ್ಟ ಪದಬಳಕೆ, ಮಂತ್ರ, ಹಾಡು ಎಲ್ಲವೂ ಸಂದರ್ಭಕ್ಕನುಗುಣವಾಗಿ ಹೊರಹೊಮ್ಮುತ್ತವೆ.

೫.೨.೧. ಸಾಂದರ್ಭಿಕ ಪದಬಳಕೆ[೬]

ವಿಶೇಷ ಸಂದರ್ಭಗಳಲ್ಲಿ ಮತ್ತು ಆಚರಣೆಗಳ ಸಂದರ್ಭದಲ್ಲಿ ಬಳಸುವ ಪದಗಳು ದೈನಂದಿನ ಸನ್ನಿವೇಶಗಳಲ್ಲಿ ಬಳಸುವ ಪದಗಳಿಗಿಂತ ವಿಶಿಷ್ಟವಾದವಾಗಿರುತ್ತವೆ. ಅವು ಏಕಕಾಲದಲ್ಲಿ ಸಂವಹನದ ಭಾಗವಾಗಿಯೂ ಸಂದರ್ಭಕ್ಕೆ ವಿಶಿಷ್ಟ ಆವರಣವನ್ನು ನಿರ್ಮಿಸುವ ಸಂಗತಿಗಳಾಗಿಯೂ ಕೆಲಸ ಮಾಡುತ್ತವೆ. ಕೆಳಗೆ ಈ ಬಗೆಯ ಪದಗಳನ್ನು ಉದಾಹರಣೆಯಾಗಿ ನೀಡಲಾಗಿದೆ. ಅನುಬಂಧದಲ್ಲಿ ಸುದೀರ್ಘವಾದ ಪಟ್ಟಿ ನೀಡಲಾಗಿದೆ.

'ಅಮೆ ಹೊಂಡ'[೭], 'ಹೊಸ್ತ್ಲಜ್ಜಿ'[೮], 'ಎರ್ತ'[೯], 'ಕೋಲ್ ಹೊಯ್ಯುದ್'[೧೦], 'ಸುಣ್ಣ ಹೊಯ್ಯುದ್'[೧೧], 'ಹೊಸ್ತ್'[೧೨], 'ಅಟ್ಟ್ ಬಳ್ಸುದ್'[೧೩], 'ಮಧುಪರ್ಕ'[೧೪], 'ಸಮಾವರ್ತನೆ'[೧೫] ಇತ್ಯಾದಿ.

ಬ್ರಾಹ್ಮಣರ ಆಚರಣೆಗಳಲ್ಲಿ ಸಾಂದರ್ಭಿಕ ಪದಬಳಕೆಯನ್ನು ಗಮನಿಸಿದರೆ ಸಂಸ್ಕೃತ ಪದಗಳ ಹಾಜರಿ ಎದ್ದು ಕಾಣುತ್ತದೆ. ಉದಾಹರಣೆಗೆ, 'ಕನ್ಯಾವರ್ಣನೆ'[೧೬], 'ಸಮಾವರ್ತನ', 'ನಾಂದಿ'[೧೭], 'ಮಧುಪರ್ಕ', 'ಸಪಿಂಡೀಕರಣ'[೧೮], 'ಶ್ರಾದ್ಧ'[೧೯]ಇತ್ಯಾದಿ. ಆದರೆ ಈ ಪ್ರವೃತ್ತಿ ಬ್ರಾಹ್ಮಣೇತರರ ಆಚರಣೆಗಳಲ್ಲಿ ಕಾಣಿಸುವುದಿಲ್ಲ. ಈ ವ್ಯತ್ಯಾಸವನ್ನು ಕೆಳಗಿನ ಉದಾಹರಣೆಯಿಂದ ಗಮನಿಸಬಹುದು

ಕಲಶ–ಮಗಿ

ಪ್ರೋಕ್ಷಣೆ–ತಳುದ್

ಅಕ್ಷತೆ–ಸ್ಯಾಸಿ

ಬ್ರಾಹ್ಮಣರೂ ಕನ್ನಡದ ಪದಗಳನ್ನು ಆಗಾಗ ಬಳಸಿದರೂ ಅವರ ಆದ್ಯತೆ ಸಂಸ್ಕೃತ ಪದಗಳತ್ತ.

೫.೨.೨. ಮಂತ್ರಗಳು, ಹಾಡುಗಳು, ಹೇಳಿಕೆಗಳು, ಉದ್ಘೋಷಗಳು

ಆಚರಣೆಗಳ ಸಂದರ್ಭದಲ್ಲಿ ಅದೃಶ್ಯ ಶಕ್ತಿಯೊಡನೆ ಮತ್ತು ಸಮೂಹ ಸಂವಹನ ಸಾಧಿಸುವಲ್ಲಿ, ಗುಂಪಿನಲ್ಲಿ ಏಕತೆ ಸಾಧಿಸುವಲ್ಲಿ ದಿನನಿತ್ಯದ ಮಾತಿಗಿಂತ ಭಿನ್ನವಾದ ಭಾಷಿಕ ರೂಪಗಳು ಬಳಕೆಯಾಗುತ್ತವೆ. ಮಂತ್ರಗಳು, ಹಾಡುಗಳು, ಸಂಧಿ, ಹೇಳಿಕೆಗಳು, ಉದ್ಗಾರಗಳು ಮುಂತಾದವನ್ನು ಇಲ್ಲಿ ಗಮನಿಸಲಾಗುತ್ತದೆ.

ಮಂತ್ರ: ಬ್ರಾಹ್ಮಣರ ಆಚರಣೆಗಳಲ್ಲಿ, ದೇವಸ್ಥಾನಗಳಲ್ಲಿ ಮಂತ್ರ ಆಚರಣೆಯ ಭಾಗವಾಗಿದೆ. ಮಂತ್ರಗಳನ್ನು ಹೇಳಿ ವಿಧಿಗಳನ್ನು ಮಾಡುವವರು ಬ್ರಾಹ್ಮಣರೇ. ಇಲ್ಲಿನ ಭಾಷೆ ಸಂಸ್ಕೃತ. ಸಾಮಾನ್ಯಕ್ಕಿಂತ ಬೇರೆಯದೇ ಆದ ಆವರಣವನ್ನು ಇವು ಸೃಷ್ಟಿಸುತ್ತವೆ. ಅದೃಶ್ಯ ಶಕ್ತಿ ಮತ್ತು ಮನುಷ್ಯರ ನಡುವೆ ಅಂತರವನ್ನು ಇವು ಸೃಷ್ಟಿಸುತ್ತವೆ. ಇವುಗಳ ನಡುವಣ ಸಂವಹನ ಸಾಧಕರಾಗಿ ಬ್ರಾಹ್ಮಣರು ಕಾಣಿಸುತ್ತಾರೆ.

ಹಾಡು: ಆಗಮಿಕ ವಿಧಿಗಳಾಚೆಗೆ ಆಚರಣೆಯ ಭಾಗವನ್ನು, ಸಾಮೂಹಿಕ ಭಾಗವಹಿಸುವಿಕೆಯನ್ನು ಪ್ರತಿನಿಧಿಸುವುದು ಹಾಡುಗಳು. "ನಿರ್ದಿಷ್ಟ ಜನಾಂಗವೊಂದರ ಹುಟ್ಟಿನಿಂದ ಸಾವಿನವರೆಗಿನ ಅನೇಕ ಜೀವನಾವರ್ತನ ಆಚರಣೆಗಳಲ್ಲಿ ಮೌಖಿಕ ಸಾಹಿತ್ಯದ ಘಟಕಗಳು ಪಾಲ್ಗೊಳ್ಳುವುದನ್ನು ಕಾಣಬಹುದು. ಆ ಜನಾಂಗದ ಹಾಡು, ಕಥೆಗಳು ಜೀವನಾವರ್ತನದ ವಿಧಿಗಳ ಸಾಂದರ್ಭಿಕ ಉತ್ಪನ್ನಗಳಾಗಿಯೇ ಪ್ರಕಟಗೊಳ್ಳುತ್ತವೆ"(ಮಯ್ಯ.ಪಾ.ನ;ಕೋಟದವರು;ಪು:೫೪).

ಆಚರಣೆಗಳಲ್ಲಿ ಹಾಡಿನ ಸ್ಥಾನ: "ಆಚರಣೆಯ ಸವಿವರ ಈ ಹಾಡುಗಳಲ್ಲಿ ದೊರೆಯುತ್ತದೆ ಹಾಗೂ ದೀರ್ಘಕಾಲದ ಏಕತಾನತೆಯನ್ನು ಹೋಗಲಾಡಿಸುವಲ್ಲಿ ಮನರಂಜನೆಯನ್ನು ಒದಗಿಸುವಲ್ಲಿ ಮತ್ತು ಸಮಾರಂಭದ ಸಂಭ್ರಮವನ್ನು ಕಾಯ್ದುಕೊಳ್ಳುವಲ್ಲಿ ಇಂಥ ಹಾಡುಗಳು ಹುಟ್ಟಿಕೊಂಡವು"(ಗಾಯತ್ರೀ ನಾವಡ;೧೯೯೧;ಪು:೪) ಎನ್ನುವ ಮಾತು ಆಚರಣೆಯಲ್ಲಿ ಹಾಡುಗಳ ಸ್ಥಾನವನ್ನು ತಿಳಿಸುತ್ತದೆ.

ಬ್ರಾಹ್ಮಣರಲ್ಲಿ "ಶುಭ-ಶೋಭನಾದಿಗಳಲ್ಲಿ ಆಗಮಶಾಸ್ತ್ರ ಕ್ರಿಯಾವಿಧಿವಿಧಾನಗಳು ಜರಗುವುದಕ್ಕೆ ಸಮಾನಾಂತರವಾಗಿ ಅಲ್ಲಿನ ಆಚರಣೆ ಸಂಪ್ರದಾಯಗಳ ಚೆಲುವನ್ನು ಜನಪದ ಹೆಂಗಸರು ಹಾಡಿನ ರೂಪದಲ್ಲಿ ಹಿಡಿದಿರಿಸಿದ್ದಾರೆ"(ಗಾಯತ್ರೀ ನಾವಡ;೧೯೯೧;ಪು:೩-೪) ಎಂಬುದನ್ನು ಗಮನಿಸಬೇಕು. ಬ್ರಾಹ್ಮಣರಲ್ಲಿ ಮಂತ್ರ, ಹಾಡುಗಳು ಸಮಾಂತರ ಸ್ತರದಲ್ಲಿದ್ದರೆ ತಳಸಮುದಾಯದ ಆಚರಣೆಗಳಲ್ಲಿ ಹಾಡುಗಳೇ ಪ್ರಮುಖ ಪಾತ್ರವಹಿಸಿವೆ. ಇವರಲ್ಲಿ ಹಾಡುವಿಕೆಯಲ್ಲಿ ಹೆಂಗಸರದ್ದೇ ಪ್ರಾಧಾನ್ಯವಾದರೂ ಗಂಡಸರೂ ಹಾಡುವ ಪ್ರಕ್ರಿಯೆಯಲ್ಲಿ ಸೇರಿಕೊಳ್ಳುವುದನ್ನು ಗಮನಿಸಬಹುದು. ಜೊತೆಗೆ, ಬ್ರಾಹ್ಮಣರ ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳ ಭಾಷೆಗೂ ಉಳಿದವರು ಹಾಡುವ ಹಾಡುಗಳ ಭಾಷೆಗೂ ವ್ಯತ್ಯಾಸವಿದೆ. ಬ್ರಾಹ್ಮಣರ ಭಾಷೆ 'ಶಿಷ್ಟ'ದೆಡೆಗೆ ಒಲೆಯುವುದನ್ನು ಗಮನಿಸಬಹುದು.

ಹೇಳಿಕೆ, ಸಂಧಿ ಇತ್ಯಾದಿ: ಮಂತ್ರ ಹಾಡುಗಳಲ್ಲದೆ, ದೈನಂದಿನ ಮಾತಿಗಿಂತ ಭಿನ್ನವಾದ ಇನ್ನಿತರ ರೂಪಗಳೆಂದರೆ, ಸಂಧಿ, ಹೇಳಿಕೆಗಳು, ಚೂರ್ಣಿಕೆ, ಉದ್ಘೋಷಗಳು. ತೊಳಸಿಪೂಜೆ ಕುಣಿತ, ಪಾಣಾರಾಟ ಸಂದರ್ಭಗಳಲ್ಲಿ ಹಾಡಿನಂತಿರುವ ರಚನೆಯನ್ನು ಒಂದೇ ಧಾಟಿಯಲ್ಲಿ

ಹೇಳುತ್ತಾ ಹೋಗುವುದನ್ನು ಸಂಧಿ ಎನ್ನುತ್ತಾರೆ. ಸಂಧಿ ಎನ್ನುವುದು ಅಧ್ಯಾಯದಂತೆ ಹಾಡುಗಳನ್ನು ವಿಷಯಕ್ಕನುಗುಣವಾಗಿ ವಿಂಗಡಿಸುವ ಬಗೆಯೂ ಆಗಿದೆ. ಉದಾಹರಣೆಗೆ, ತೊಳಸಿ ಪೂಜೆ ಹಾಡಿನಲ್ಲಿ ಬರುವ ಹೊಗಳಿಕೆ ಸಂಧಿ, ಕ್ವಾಡಂಗಿ ಸಂಧಿ ಇತ್ಯಾದಿ. ನಂಬ್ಗಿ, ಮದುವೆ, ಪೂಜೆ ಮುಂತಾದ ಸಂದರ್ಭಗಳಲ್ಲಿ ಗುರ್ಕಾರ ಇಡೀ ಗುಂಪಿಗೆ ಕೇಳುವಂತೆ ಘೋಷಿಸುವುದು, ದೇವರಲ್ಲಿ ಪ್ರಾರ್ಥನೆ ನಿವೇದಿಸಿಕೊಳ್ಳುವುದು, ಗೋವಿಂದ ಎನ್ನುವಾಗ ಎಲ್ಲರೂ ಒಟ್ಟಾಗಿ ಉದ್ಘೋಷ ಮಾಡುವುದು ಎಲ್ಲವೂ ಆಚರಣೆಯ ಸಂದರ್ಭದಲ್ಲಿ ಜೀವ ಪಡೆಯುತ್ತವೆ. ಇನ್ನು, ಬ್ರಾಹ್ಮಣರ ಭೋಜನ ಸಮಯದಲ್ಲಿ ದೇವರ ಸ್ಮರಣೆ ಮತ್ತು ರಂಜನೆಗಾಗಿ 'ಚೂರ್ಣಿಕೆ' ಹಾಡುವ ಕ್ರಮವಿದೆ. ಯಾವುದಾದರೂ ಶ್ಲೋಕವನ್ನಾಗಲೀ, ಹಾಡಿನ ಒಂದು ಭಾಗವನ್ನಾಗಲೀ ರಾಗವಾಗಿ ಹಾಡುವ ರೀತಿ ಇದು. ಕೊನೆಯಲ್ಲಿ 'ಭೋಜನ ಕಾಲೇ ಗೋವಿಂದನಾಮ ಸಂಕೀರ್ತನ ಗೋವಿಂದಾ' ಎಂದಾಗ ಎಲ್ಲರೂ 'ಗೋವಿಂದಾ' ಎಂದು ದನಿಗೂಡಿಸುತ್ತಾರೆ.

೫.೨.೩. ಅದೃಶ್ಯದೊಂದಿಗಿನ ಸಂವಹನ

ಆಚರಣೆಗಳ ಸಂದರ್ಭದಲ್ಲಿ ಕೇವಲ ವ್ಯಕ್ತಿಗಳ ನಡುವೆ ಮಾತ್ರ ಸಂವಹನ ನಡೆಯುವುದಲ್ಲ, ಸಸ್ಯ, ಪ್ರಾಣಿ, ಜಡವಸ್ತು, ಅದೃಶ್ಯ ವಸ್ತುಗಳೊಡನೆ ಸಮುದಾಯಗಳು ಸಂವಹನ ನಡೆಸುತ್ತವೆ. ಸಾಮಾನ್ಯ ಸಂದರ್ಭಗಳಲ್ಲಿರುವುದಕ್ಕಿಂತ ಭಿನ್ನವಾಗಿ ಇವು ಸಂದರ್ಭದ ವಿಶಿಷ್ಟತೆಯಿಂದಾಗಿ ವಿಶೇಷ ಶಕ್ತಿಯನ್ನು ಪಡೆಯುತ್ತವೆ. ಉದಾಹರಣೆಗೆ, ಮರದ ಹಲಗೆ 'ಅಮ್ನೋರ ಹಲಗೆ' ಆಗುವುದು, ತೆಂಗಿನ ಮರಕ್ಕೆ ಫಲವಂತಿಕೆಯ ಸಂಕೇತ ಆಗುವುದು. ಸಮುದ್ರ 'ಗಂಗಾಮಣಿ' ಆಗುವುದು.

ಆಚರಣೆ ಅಥವಾ ವಿಶೇಷ ಸಂದರ್ಭಗಳಲ್ಲಿ ದೇವರು ಮತ್ತು ಸತ್ತು ಹೋದ ವ್ಯಕ್ತಿಗಳು ಮನುಷ್ಯರ ಮುಖಾಂತರ ಸಂವಹನ ಸಾಧಿಸುವುದನ್ನು ಕಾಣುತ್ತೇವೆ. ಈ ಮೂಲಕ ಅವು ತಾವು ಜೊತೆಗಿದ್ದೇವೆ ಎಂಬುದನ್ನು ತಿಳಿಯಪಡಿಸುವ ರೀತಿ ಇದು ಎಂದು ಸಮುದಾಯಗಳು ನಂಬುತ್ತವೆ. ದೇವರು ದೈವಗಳಿಗೆ ಕಾಲಕಾಲಕ್ಕೆ ಸರಿಯಾಗಿ ಸಲ್ಲಬೇಕಾದದ್ದನ್ನು ಸಲ್ಲಿಸಬೇಕಾಗುತ್ತದೆ. ಇಲ್ಲದಿದ್ದರೆ ಅವು ತಮ್ಮ ಅಸಮಾಧಾನವನ್ನು ಈ ಮೂಲಕ ವ್ಯಕ್ತಪಡಿಸುತ್ತವೆ. ಜೊತೆಗೆ ಇನ್ನು ಕೆಲವು ಸಂದರ್ಭಗಳಲ್ಲಿ ತನ್ನ ಪತಿ ಸತ್ತು ಹೋದ ಬಳಿಕ ಅಸಹಾಯಕಳಾದ ಹೆಂಡತಿಯ ಮೈಮೇಲೆ ಆಕೆಯ ಪತಿ ಬರುವುದು ಅವಳ ಬಯಕೆಗಳನ್ನು ಈಡೇರಿಸಿಕೊಳ್ಳುವ, ಭಯವನ್ನು ನೀಗಿಕೊಳ್ಳುವ ತಂತ್ರವಾಗಿಯೂ ಕಾಣುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ವ್ಯಕ್ತಿ ಇತರ ಸಂದರ್ಭಗಳಲ್ಲಿ ಬಳಸುವ ಭಾಷೆಗೂ ಮೈಮೇಲೆ ಆವಾಹನೆಗೊಂಡಾಗ ಆಡುವ ಮಾತಿಗೂ ವ್ಯತ್ಯಾಸವಿರುತ್ತದೆ. ದೇವರ ಮಾತು 'ಶಿಷ್ಟ'ವಾಗಿದ್ದರೆ ದೈವಗಳು ಮಾತಾಡುವ

ಬಗೆ ಜನಸಾಮಾನ್ಯರ ನೆಲೆಯದ್ದಾಗಿರುತ್ತದೆ. ಇನ್ನು ಸತ್ತು ಹೋದವರು ಮೈಮೇಲೆ ಬಂದಾಗ ಅವರು ಮಾತಾಡುತ್ತಿದ್ದ ರೀತಿಯಲ್ಲೇ ಆವಾಹಿಸಿಕೊಂಡವರು ಮಾತಾಡುವುದು ಕಂಡುಬರುತ್ತದೆ.

ಆಚರಣೆಗಳಲ್ಲಿ ಬ್ರಾಹ್ಮಣ ಗಂಡಸರನ್ನು ಮಂತ್ರ, ಸಂಸ್ಕೃತದ ಮೂಲಕ ಗುರುತಿಸಿದರೆ ಹೆಂಗಸರು ಮತ್ತು ತಳಸಮುದಾಯದವರು ಕನ್ನಡ ಮತ್ತು ಹಾಡುಗಳ ಮೂಲಕ ಗುರುತಿಸಿಕೊಳ್ಳುತ್ತಾರೆ.

ದೇವರು ಮತ್ತು ದೈವಗಳು ಮನುಷ್ಯರ ದೇಹದ ಮೂಲಕ ಆವಾಹನೆಗೊಂಡು ಜನರೊಂದಿಗೆ ಸಂವಹನ ನಡೆಸುವುದಾದರೂ ಇಲ್ಲೂ ಭಾಷಾ ಬಳಕೆಯಲ್ಲಿ ವ್ಯತ್ಯಾಸವನ್ನು ಗಮನಿಸಬಹುದಾಗಿದೆ. ದೇವರ ಮಾತು ಸಂಸ್ಕೃತ ಭೂಯಿಷ್ಠ ಕನ್ನಡವಾದರೆ ದೈವಗಳ ಮಾತು ಹೆಚ್ಚು ಸ್ಥಳೀಯ ಸೊಗಡನ್ನು ಹೊಂದಿರುವಂಥದ್ದು. ಇನ್ನು ದೈವಗಳ ಶ್ರೇಣಿಯಲ್ಲಿ ಕೆಳಹಂತದಲ್ಲಿರುವ 'ಕೀಳ್' ಅಥವಾ 'ನೀಚ' ದೈವಗಳು ಇನ್ನೂ ಗ್ರಾಮ್ಯ ಅನ್ನಬಹುದಾದ ಪ್ರಭೇದವನ್ನು ಆಡುತ್ತವೆ.

ದೇವಸ್ಥಾನ ಮತ್ತು ದೈವಸ್ಥಾನಗಳ ಆಚರಣೆಗಳು

ದೇವಸ್ಥಾನದ ವಾರ್ಷಿಕಾವರ್ತನಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳು ಭಿನ್ನ ಜಾತಿಯ ಜನರಸ್ತರಗಳಲ್ಲಿ ಹಂಚಿಕೆಯಾಗಿದೆ. ದೇವಸ್ಥಾನಕ್ಕೆ ಯಾವ ಹಂತದವರೆಗೆ ಪ್ರವೇಶಕ್ಕೆ ಅವಕಾಶ ಇದೆ ಎಂಬುದೂ ಆಯಾ ಜಾತಿಯ ಮೇಲೆ ನಿರ್ಧಾರಿತವಾಗುತ್ತದೆ. ಈ ಆಧಾರದಲ್ಲಿ ಭಿನ್ನ ಭಾಷಿಕ ವಲಯಗಳು ಹುಟ್ಟಿಕೊಳ್ಳುತ್ತವೆ. ಗರ್ಭಗುಡಿಯಲ್ಲಿನ ಚಟುವಟಿಕೆಗಳನ್ನು ನಡೆಸುವವರು ಬ್ರಾಹ್ಮಣರು. ಇಲ್ಲಿ ಅರ್ಚನೆ ಮತ್ತು ಸ್ತುತಿಗಳ ಭಾಗ ಸಂಸ್ಕೃತ ಭಾಷೆಯಲ್ಲಿರುತ್ತದೆ. ದೇವರೊಂದಿಗೆ ಸಂವಹನ ನಡೆಸುವ ಭಾಷೆ ಸಂಸ್ಕೃತ, ಜನರ ನಡುವಣ ಮಾತುಕತೆಯ ಭಾಷೆ ಕನ್ನಡ.

ದೈವಸ್ಥಾನ, ತಾನದ ಮನಿ, ಗಯ್ಡಿಯ ರಚನೆ ದೇವಸ್ಥಾನಕ್ಕಿಂತ ಭಿನ್ನವಾಗಿರುತ್ತದೆ. ಇಲ್ಲಿ ಪ್ರತಿಯೊಬ್ಬರಿಗೂ ನೇರವಾಗಿ ಪೂಜೆಯ ಕೆಲಸದಲ್ಲಿ ಭಾಗವಹಿಸುವ ಅವಕಾಶವಿದೆ. ಈ ಕಾರ್ಯಕ್ರಮಗಳಲ್ಲಿ ಬಹುತೇಕ ಸಂದರ್ಭಗಳಲ್ಲಿ ಆಯಾ ಸಮುದಾಯದವರ ಭಾಗವಹಿಸುವಿಕೆ ಹೆಚ್ಚಾಗಿ ಇರುತ್ತದೆ. ಇಲ್ಲಿ ದೈವಕ್ಕೂ ಮನುಷ್ಯರಿಗೂ ಇರುವ ಸಂಬಂಧ ಹೆಚ್ಚು ನಿಕಟವಾಗಿದೆ. ಸಂವಹನ ಒಳನುಡಿಯಲ್ಲೇ ನಡೆಯುತ್ತದೆ. ಒಂದು ಬಗೆಯ ಆಪ್ತ ಸಂವಾದದ ರೂಪದಲ್ಲಿ ಸಂವಹನ ನಡೆಯುವುದು ಕಾಣುತ್ತದೆ.

೫.೩. ಭಾಷಿಕ ಪಲ್ಲಟದ ನೆಲೆಗಳು

ಸಂಸ್ಕೃತೀಕರಣ ಮತ್ತು ಆಧುನಿಕತೆಯ ಪ್ರಭಾವದಿಂದ ಕೋಟ ಭಾಷಿಕ ಸಮುದಾಯದ ದೈನಂದಿನ ಮತ್ತು ವಿಶೇಷ ಸಂದರ್ಭಗಳ ಭಾಷಿಕ ರೂಪ ಮತ್ತು ವರ್ತನೆಗಳಲ್ಲಿ ಸಾಕಷ್ಟು ಬದಲಾವಣೆಗಳು ಕಾಣುತ್ತವೆ.

- ಆಧುನಿಕತೆಯ ಪ್ರಭಾವದಿಂದಾಗಿ ದೈನಂದಿನ ಮಾತುಕತೆಯ ಸಂದರ್ಭಗಳಲ್ಲಿ ಬದಲಾವಣೆ ಕಂಡುಬರುತ್ತದೆ. ಇದು ಪೂರ್ಣವಾಗಿ ಸಾಂಪ್ರದಾಯಿಕ ಶ್ರೇಣೀಕರಣದಿಂದ ಬಿಡಿಸಿಕೊಂಡಿಲ್ಲವಾದರೂ ಅಷ್ಟು ಕಟ್ಟುನಿಟ್ಟಾಗಿಲ್ಲ. ಜೊತೆಗೆ ಭಿನ್ನ ಬಗೆಯಲ್ಲಿ ಶ್ರೇಣೀಕರಣ ವ್ಯವಸ್ಥಿತಗೊಂಡಿದೆ. ಅದನ್ನು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

  ಜನರು ಸಂದರ್ಭಕ್ಕನುಗುಣವಾಗಿ ಅಲ್ಲಿಗೆ ಸೂಕ್ತವೆನಿಸಿದ ಪ್ರಭೇದ ಬಳಸುವಂತೆ ಸಂಸ್ಕೃತಿಯ ಆವರಣವನ್ನು ಮರುರಚಿಸಿಕೊಂಡಿದ್ದಾರೆ. ವೈದಿಕ ಆವರಣ ಬಂದರೆ ಸಂಸ್ಕೃತ ಪ್ರಧಾನವಾಗುತ್ತದೆ. ತಿಂಗಳುಗಳ ಎಣಿಕೆ ಮೇಷ, ವೃಷಭ ಎಂದಾಗುತ್ತದೆ. ಅದೇ ಕೃಷಿ ಮತ್ತು ವೈದಿಕೇತರ ಆಚರಣೆಗಳಲ್ಲಿ ಹಗ್ಗ್, ಬ್ಯಾಸ್ಗಿಗನುಗುಣವಾಗಿ ಎಲ್ಲವೂ ನಿರ್ಧರಿತವಾಗುತ್ತದೆ. ಆಧುನಿಕ ಸಂದರ್ಭಕ್ಕೆ ಬಂದರೆ ಅಲ್ಲಿ ಇವೆರಡೂ ಮಾನ್ಯವಾಗದೆ ಜನವರಿ, ಫೆಬ್ರವರಿ ಲೆಕ್ಕದಲ್ಲಿ ಎಲ್ಲವನ್ನೂ ನಿರ್ಧರಿಸಲಾಗುತ್ತದೆ.

- ಜನರ ಶೈಕ್ಷಣಿಕ ಮಟ್ಟ ಹೆಚ್ಚುತ್ತಿದ್ದಂತೆ ದೈನಂದಿನ ಮಾತುಕತೆಗಳಲ್ಲಿ, ಪಠ್ಯದಲ್ಲಿ ಪಲ್ಲಟ, ನುಡಿ ಜಿಗಿತ, ನುಡಿ ಮಿಶ್ರಣಗಳು ಕಂಡುಬರುತ್ತಿವೆ.

- ಮೇಲ್ಚಲನೆ ಸಂಸ್ಕೃತೀಕರಣದಿಂದ ಮಾತ್ರವಲ್ಲ, ಆಧುನಿಕತೆಯ ಮೂಲಕ ಸಾಧ್ಯವಾಗುತ್ತಿರುವುದನ್ನು ನೋಡುತ್ತೇವೆ. ಜನರು ಪ್ರಮಾಣ ಕನ್ನಡಕ್ಕೆ ಹೊರಳುವ ಮೂಲಕ ಸಮಾನತೆಯನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನ ಮಾಡುವುದನ್ನು ದೈನಂದಿನ ಸಂದರ್ಭಗಳಲ್ಲಿ ಗಮನಿಸಬಹುದಾಗಿದೆ.

- ಹಿಂದೆ ಗುರ್ಕಾರ್ರ್ ನಿಂತು ಜಾತಿ ಸಮುದಾಯದವರಷ್ಟೇ ಸೇರಿ ಮಾಡುತ್ತಿದ್ದ ಆಚರಣೆಗಳಲ್ಲಿ ಈಗ ಬ್ರಾಹ್ಮಣರ ಪ್ರವೇಶವಾಗಿದೆ. ಗುರ್ಕಾರರ ಘೋಷಣೆಗಳು ಮತ್ತು ಹಾಡುಗಳ ಜಾಗವನ್ನು ಮಂತ್ರ ಆವರಿಸಿಕೊಂಡಿದೆ.

- ಕುಟುಂಬ ಮತ್ತು ಆಚರಣೆಯ ವಲಯಗಳಲ್ಲಿ ಒಳನುಡಿಯಲ್ಲಿ ಮಾತಾಡುವುದು ಮತ್ತು ಸಾರ್ವಜನಿಕ ವಲಯದಲ್ಲಿ ಇಂಗ್ಲಿಷ್ ಮಿಶ್ರಿತ ಪ್ರಮಾಣ ಕನ್ನಡಕ್ಕೆ ಹೊರಳುವುದು ಸರ್ವೇಸಾಮಾನ್ಯವಾಗಿ ಈ ಭಾಷಿಕ ಪರಿಸರದಲ್ಲಿ ಕಾಣಿಸುತ್ತದೆ.

- ಕೃಷಿಸಂಬಂಧಿ ಪದಗಳಲ್ಲಿ ಹಲವು ಬಳಕೆಯಲ್ಲಿಲ್ಲದೆ ಅಳಿದಿರುವುದು ಕಂಡರೆ ಮೀನುಗಾರಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲಿಷ್ ಪದಗಳು ಸ್ವೀಕೃತವಾಗಿರುವುದು ಕಾಣಿಸುತ್ತದೆ.

- ವಿದ್ಯಾವಂತರು ಮಾತುಕತೆಯಲ್ಲಿ ತೊಡಗಿದಾಗ ಅಥವಾ ಅಪರಿಚಿತರು ಬಂದಾಗ ಮಾತಿನ ಸಂದರ್ಭದಲ್ಲಿ ಭಾಷೆ ಪ್ರಮಾಣಕ್ಕೆ ಹೊರಳುವುದನ್ನು ಗಮನಿಸಬಹುದು.

- ಇಂದು ಹೆಂಗಸರ ಮತ್ತು ತಳಸಮುದಾಯಗಳ ಹಾಡಿನ ಅವಕಾಶವನ್ನು ಮಂತ್ರಗಳು ಮತ್ತು ರೆಕಾರ್ಡ್ ಹಾಡುಗಳು ಆವರಿಸಿರುವುದು ಕಾಣುತ್ತದೆ.
- ಇಂದು ಬಹುತೇಕ ಜನಪದ ಹಾಡುಗಳು ತಮ್ಮ ಮೂಲ ಸಂದರ್ಭದಿಂದ ಕಳಚಿಕೊಂಡು ಬೇರೆ ಸಂದರ್ಭಗಳಲ್ಲಿ ಜಾಗ ಸೃಷ್ಟಿಸಿಕೊಳ್ಳುತ್ತಾ ಕುಟುಕು ಜೀವ ಉಳಿಸಿಕೊಂಡಿವೆ.

ಟಿಪ್ಪಣಿಗಳು

೧. "The link between language and culture is created in each new communicative event"(Risager Karen;2006;p:186).

೨. ಹಿಂದಿನಿಂದಲೂ ಬಿಡದೆ ನಡೆದುಕೊಂಡು ಬಂದ ಎಂಬ ಅರ್ಥದಲ್ಲಿ ಇಲ್ಲಿ 'ಸಾಂಪ್ರದಾಯಿಕ' ಎಂಬ ಪದ ಬಳಸಲಾಗಿದೆ. ಇದರರ್ಥ ಈಗಲೂ ಈ ಸನ್ನಿವೇಶ ಹಿಂದಿನಂತೆಯೇ ಇದೆ, ಬದಲಾಗಿಲ್ಲ ಎಂದಲ್ಲ. ಇದು ಆಧುನಿಕತೆಯ ಮೂಲಕ ಪರಿಚಿತವಾದ ಸನ್ನಿವೇಶವಲ್ಲ ಎಂಬುದನ್ನಷ್ಟೆ ಸೂಚಿಸಲಾಗಿದೆ.

೩. ಇವರು ಸ್ಪೃಶ್ಯರಾಗಿದ್ದು ಮೇಲ್ಜಾತಿಯವರ ಮನೆಯ ಹೊರ ಆವರಣದವರೆಗೆ ಇವರಿಗೆ ಪ್ರವೇಶವಿದೆ.

೪. ಇವರು ಅಸ್ಪೃಶ್ಯರು. ಮೇಲ್ಜಾತಿಯವರ ಮನೆಯೊಳಗೆ ಇವರಿಗೆ ಪ್ರವೇಶವಿಲ್ಲ. ಅಂಗಳದಲ್ಲೇ ಇವರು ಕುಳಿತುಕೊಳ್ಳುತ್ತಾರೆ. ಮೇಲ್‌ಜಾತಿಯವರು ಬಂದಾಗ ಇವರು ದೂರ ಸರಿದುಕೊಳ್ಳ ಬೇಕಾಗಿತ್ತು.

೫. ಇಷ್ಟಪ ಮಗುವಿಗೆ ಅಷ್ಟೇನೇ ಅವಸರು
ದಿಷ್ಟಿ ಕುರುಜಾತ ಸರಿಲಿಲ್ಲೆ**ಸುಸೀಲಮ್ಮ**
ಇಷ್ಟೇನವಸರ್ದ ಮದುವಿಯು

ಬೆಳಗಿನ ಮೋಟ್ರ್ ಹತ್ತಿ ಬೇಗ ಬಾ **ಸೋಮಯ್ಯ**
ನಾಳೆ ನಿನ್ನಳಿನ ಮದುವಿಗೆ।ಚಪ್ಪರದಲ್ಲಿ
ನಿಲ್ಲಬೇಕು ಸ್ವಾದ್ರ ಮಾವಯ್ಯ

ಬಿಳಿಯ ಹೆಣ್ಣನು ಕಂಡ್ ಬೇಗ ಬೈಕನು ಬಿಟ್ಟ
ಬಿದ್ದ ಮುಂಗಾಲ್‌ನ ಒಡಕಂಡ **ಶರತ**
ಇದ್ದ ಮರ್ಯಾದಿನೇ ಕಳಕಂಡ

೬. Register: 'When we observe language activity in the various contexts in which it takes place, we find differences in the type of language selected as appropriate to different types of situation(Halliday MAK et al; 1964;p:87)

೭. ಮಗುವಿನ ಕಸ, ಮಾಸುಬಳ್ಳಿ ಹುಗಿಯಲು ಮಾಡುವ ಹೊಂಡ.

೮. ಶ್ರಾವಣ ತಿಂಗಳಲ್ಲಿ ದರಿದ್ರವನ್ನು ಓಡಿಸುವ ಆಚರಣೆ.

೯. ಮಳೆಗಾಲ ಪೂರ್ತಿ ದುಡಿದ ಎತ್ತು ಕೋಣಗಳಿಗೆ ಮಾಡುವ ಔಷಧಿ ರೂಪದ ಉಪಚಾರ.

೧೦. ಕೂಸಾಳುಗಳು ಮನೆಮನೆಗೆ ಬಂದು 'ಕೋಲು ಕೋಲೆನ್ನಿರೋ' ಎಂದು ಹಾಡು ಹೇಳಿ ಕುಣಿಯುವ ಆಚರಣೆ.

೧೧. ಯುಗಾದಿ ಸಂದರ್ಭದಲ್ಲಿ ಬಾಕುಡರು ಬಂದು ತುಳಸಿ ಕಟ್ಟೆಗೆ ಹತ್ತಿರದಲ್ಲಿ ಸುಣ್ಣ ಹಾಕುವ ಆಚರಣೆ.

೧೨. ಹೊಸ ಬತ್ತದ ತೆನೆಯನ್ನು ಕೊಯ್ಯುವ ಆಚರಣೆ.

೧೩. ದೈವ, ಭೂತಗಳಿಗೆ ಆಹಾರ ಕೊಡುವ ಆಚರಣೆ.

೧೪. ಬ್ರಾಹ್ಮಣರ ಮದುವೆಯ ಸಂದರ್ಭದಲ್ಲಿ ಹುಡುಗಿಯ ಕಡೆಯವರು ಹುಡುಗನಿಗೆ ನೀಡುವ ಗೌರವರೂಪದ ಸಾಮಗ್ರಿಗಳು.

೧೫. ಬ್ರಾಹ್ಮಣರಲ್ಲಿ ಮದುವೆಯ ಹಿಂದಿನ ದಿನ ಹುಡುಗ ಕಾಶಿಯಾತ್ರೆಯನ್ನು ಅನುಕರಿಸುವ ಆಚರಣೆ.

೧೬. ಬ್ರಾಹ್ಮಣರಲ್ಲಿ ಮದುವೆಯ ಸಂದರ್ಭದಲ್ಲಿ ಹುಡುಗಿಯ ಗೋತ್ರ ಕಡಿಯುವ ಶಾಸ್ತ್ರ.

೧೭. ಮುಂದೊದಗುವ ಸೂತಕ ತಟ್ಟದಿರಲಿ ಎಂದು ಮದುವೆಗೆ ಮುನ್ನ ಮಾಡುವ ವಿಧಿ.

೧೮. ಸತ್ತ ವ್ಯಕ್ತಿಯನ್ನು ಪಿತೃಗಳೊಂದಿಗೆ ಸೇರಿಸುವ ವಿಧಿ.

೧೯. ವ್ಯಕ್ತಿ ಸತ್ತ ತಿಥಿಯಂದು ಪ್ರತಿವರ್ಷ ನೆನಪಿಸಿಕೊಳ್ಳುವ ಆಚರಣೆ.

• • •

ಅಧ್ಯಾಯ : ಆರು

ಭಾಷಿಕ ಅಸ್ಮಿತೆ ಮತ್ತು ಯಾಜಮಾನ್ಯ

ಅಧ್ಯಾಯ : ಆರು

ಭಾಷಿಕ ಅಸ್ಮಿತೆ ಮತ್ತು ಯಾಜಮಾನ್ಯ

ವ್ಯಕ್ತಿ ಮತ್ತು ಸಮುದಾಯ ತನ್ನನ್ನು ಅನೇಕ ಬಗೆಗಳಲ್ಲಿ ಸುತ್ತಲಿನವರೊಂದಿಗೆ ಗುರುತಿಸಿಕೊಳ್ಳುತ್ತದೆ. ಸಮಾಜದ ಘಟಕವಾದ ವ್ಯಕ್ತಿಗೆ ಮತ್ತು ಸಮುದಾಯಗಳಿಗೆ ಹಲವು ಬಗೆಯ ಅಸ್ಮಿತೆಗಳಿರುತ್ತವೆ. ಈ ರೀತಿಯಾಗಿ ಗುರುತಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಭಾಷೆಯ ಪಾತ್ರ ಎಂಥದ್ದು ಎಂಬುದನ್ನು ಪ್ರಸ್ತುತ ಬರಹದಲ್ಲಿ ಗಮನಿಸಲಾಗಿದೆ. ಭಾಷಿಕ ಅಸ್ಮಿತೆ ಒಂದು ಭಾಷೆಯನ್ನಾಡುವ ಒಟ್ಟಾರೆ ಗುಂಪು ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ಸಾಮುದಾಯಿಕ ಅಸ್ಮಿತೆಗಳಲ್ಲಿ ಒಂದು. ಇದು ಇನ್ನಿತರ ಅಸ್ಮಿತೆಗಳ ಜೊತೆ ಸ್ಥಾಪಿಸಿಕೊಳ್ಳುವ ಸಂಬಂಧ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗುತ್ತವೆ.

ಕೋಟ ಒಳನುಡಿ ಮತ್ತು ಇತರ ಭಾಷೆಗಳೊಂದಿಗಿನ ಸಂಬಂಧ ಕುರಿತು ಗಮನಿಸುವಾಗ ಪ್ರಮಾಣ ಕನ್ನಡ, ಇಂಗ್ಲಿಷ್ ಮತ್ತು ಪರಿಸರದ ಇತರ ಭಾಷೆಗಳೊಂದಿಗಿನ ಸಂಬಂಧದ ಸ್ವರೂಪ, ಇದರ ಜೊತೆಗೆ ತಳುಕು ಹಾಕಿಕೊಂಡಿರುವ ಅಧಿಕಾರ ಸಂಬಂಧ ಇವುಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚೆ ನಡೆಸಲಾಗಿದೆ.

೬.೧. ಭಾಷೆ ಮತ್ತು ಅಸ್ಮಿತೆ

ಒಂದು ಸಮುದಾಯ ತನ್ನ ಅಸ್ಮಿತೆಯನ್ನು ನಿರ್ವಚಿಸಿಕೊಳ್ಳುವ ಮತ್ತು ಹೀಗೆ ನಿರ್ವಚಿಸಿಕೊಳ್ಳುವಲ್ಲಿ ನೆಲೆಗಟ್ಟಾಗಿ ಪರಿಭಾಷಿಸುವ ಸಂಗತಿಗಳಲ್ಲಿ ಭಾಷೆಯೂ ಒಂದು ಮತ್ತು

ಪ್ರಮುಖವಾದುದು. ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ಕೋಟ ಒಳನುಡಿಯನ್ನು ಆಡುವ ಸಮುದಾಯ ಜಾತಿ, ಉಪಜಾತಿ, ಕಸುಬು, ವರ್ಗ ಮುಂತಾದ ನೆಲೆಗಳಲ್ಲಿ ಸ್ಥಾಪಿಸಿಕೊಂಡಿರುವ ಅಸ್ಮಿತೆಯೂ ಭಾಷಿಕವಾದ ಅಸ್ಮಿತೆಯೂ ಭಿನ್ನವಾದವು, ಆದರೆ ಒಂದರೊಡನೊಂದು ಸಂಬಂಧ ಹೊಂದಿರುವಂಥವು. ಕೋಟ ಒಳನುಡಿಯ ಸಂದರ್ಭದಲ್ಲಿ ಈ ರೀತಿಯ ಬಹುರೂಪಿ ಆಕೃತಿಯ ಸಮುದಾಯವನ್ನು ಭಾಷೆಯ ಆಧಾರದಲ್ಲಿ ಒಂದು ಸಮುದಾಯವಾಗಿ ಕಾಣುವ ಪ್ರಯತ್ನ ಎಂದು ಆರಂಭವಾಯಿತು ಎಂದು ಖಚಿತವಾಗಿ ಹೇಳಲು ಬರುವುದಿಲ್ಲ.

ಈ ಭಾಷಾ ಪ್ರಭೇದವನ್ನು ಕೋಟ ಕನ್ನಡ, ಕುಂದಾಪ್ರ ಕನ್ನಡ ಎಂಬ ಹೆಸರುಗಳಿಂದ ಕರೆಯುತ್ತಾ ಬಂದಿರುವುದನ್ನು ಆರಂಭದ ಅಧ್ಯಾಯದಲ್ಲಿ ಗಮನಿಸಲಾಗಿದೆ. ಈ ಭಾಷಾ ಪ್ರಭೇದವನ್ನು ಈ ಎಲ್ಲ ಹೆಸರುಗಳಿಂದ ಕರೆಯುವ ಹಿನ್ನೆಲೆಯಲ್ಲಿ ಕೆಲಸ ಮಾಡಿದ ಅಂಶ ಗಳಾವುವು ಎಂಬುದನ್ನು ವಿವೇಚಿಸುವ ಪ್ರಯತ್ನವನ್ನು ಇಲ್ಲಿ ನಡೆಸಲಾಗಿದೆ.

ಆರಂಭಿಕ ಲಿಖಿತ ದಾಖಲೆಗಳು ಕೋಟವನ್ನು ಪ್ರದೇಶವಾಚಿಯಾಗಿ ಬಳಸಿವೆ. ಕೆಲವೊಮ್ಮೆ ಕೋಟದ ಜನರು ಎಂಬುದು ಇಲ್ಲಿನ ಬ್ರಾಹ್ಮಣರನ್ನು ಉಲ್ಲೇಖಿಸಿ ಬಳಕೆಯಾಗಿರುವುದನ್ನು ಕಾಣಬಹುದು. ಹೀಗೆ ನೋಡಿದಾಗ ತಾವು 'ಕೋಟ ಕನ್ನಡ'ವನ್ನು ಆಡುವವರು ಎಂದು ಬಹಳ ಸ್ಪಷ್ಟವಾಗಿ ತಮ್ಮನ್ನು ಗುರುತಿಸಿಕೊಳ್ಳುವವರು ಬ್ರಾಹ್ಮಣರು ಮಾತ್ರ. ಇದನ್ನು ಮೊದಲಿಗೆ ಕೋಟ ಕನ್ನಡ ಎಂದು ಕರೆದವರು ಯಾರು ಎಂದು ಗಮನಿಸಬೇಕಾಗುತ್ತದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಜನರನ್ನು ಮಾತನಾಡಿಸಿದಾಗ ನೀವು ಆಡುವ ಮಾತು ಯಾವುದು ಎಂಬ ಪ್ರಶ್ನೆಯನ್ನೊಡ್ಡಿದಾಗ ಬಂದ ಉತ್ತರ ಬಹುಪಾಲು 'ಕನ್ನಡ' ಎಂಬುದು. ಮತ್ತೆ ಮುಂದುವರೆಸಿದಾಗ ಅವರು ಆಡುವ ಮಾತು 'ಕುಂದಾಪ್ರ ಕನ್ನಡ' ಎನ್ನುವುದು ಕಾಣುತ್ತದೆ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ತಮ್ಮ ಆಡುನುಡಿಯನ್ನು ಗುರುತಿಸಿಕೊಳ್ಳುವ ಬಗೆ ಭಿನ್ನವಾಗಿರುವುದು ಕೋಟ ಪರಿಸರದಲ್ಲಿ ಮಾತ್ರ ಕಂಡುಬರುತ್ತದೆ. ಗುಂಡ್ಮಿ ಚಂದ್ರಶೇಖರ ಐತಾಳರು ಹೇಳುವ ಹಾಗೆ ಕಲ್ಯಾಣಪುರ ಹೊಳೆಯಿಂದ ಉತ್ತರಕ್ಕೆ ಶಿರೂರಿನವರೆಗಿರುವ ಈ ಪ್ರದೇಶದ ಜನರ ನುಡಿಯನ್ನು ಕೋಟ ಕನ್ನಡ, ಕುಂದಾಪ್ರ ಕನ್ನಡ ಎಂದು ಹೇಗೆ ಗುರುತಿಸಲಾಯಿತು, ಅದಕ್ಕೆ ಕಾರಣಗಳೇನು ಎಂಬುದು ಇಲ್ಲಿ ಗಮನಾರ್ಹವಾಗುತ್ತದೆ.

೬.೨. ಕೇಂದ್ರದ ಕಲ್ಪನೆ ಮತ್ತು ಪ್ರತಿರೋಧ

ಈ ಚರ್ಚೆಯನ್ನು ಮುಂದುವರೆಸಿದಾಗ ಮೇಲೆ ಉಲ್ಲೇಖಿಸಿದ ಭೌಗೋಳಿಕ ವ್ಯಾಪ್ತಿಯೊಳಗೆ ಬರುವ ಬಹುಸಂಖ್ಯಾತ ಜನರಾಡುವ ಭಾಷೆಯನ್ನು ಕೋಟ ಅಥವಾ ಕುಂದಾಪುರ

ಅಥವಾ ಬಾರಕೂರು ಕನ್ನಡ ಎನ್ನುವ ಹೆಸರಿನಿಂದ ಯಾಕೆ ಕರೆಯಲಾಯಿತು ಎಂದು ತಿಳಿಯಬೇಕಾಗುತ್ತದೆ. ಇದನ್ನು ಹಂತ ಹಂತವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ನಡೆಸಲಾಗಿದೆ,

ಈ ಒಳನುಡಿಯ ಸಾರವತ್ತಾದ ಪ್ರಭೇದ ಕೋಟದಲ್ಲಿ ಇದೆ, ಹೀಗಾಗಿ ಇದನ್ನು ಕೋಟ ಕನ್ನಡ ಎಂದು ಕರೆಯಲಾಯಿತು ಎಂಬ ಉಲ್ಲೇಖ ದೂರೆಯುತ್ತದೆ. ಹೀಗೆ ಕರೆಯಲಾಗಿರುವುದಕ್ಕೆ ಕಾರಣಗಳೇನು ಎಂಬ ಉಲ್ಲೇಖ ಆರಂಭದಲ್ಲಿ ಮಾಡಿರುವುದರಿಂದ ಅದರ ಮುಂದುವರೆದ ಭಾಗವಾಗಿ ಹೀಗೆ ಭಾವಿಸುವುದರ ಹಿಂದೆ ಕೆಲಸ ಮಾಡಿರುವ ಯೋಚನೆಗಳೇನು ಎಂಬ ನೆಲೆಯಲ್ಲಿ ವಿಶ್ಲೇಷಣೆ ನಡೆಸಬೇಕಾಗುತ್ತದೆ. ಈ ಭಾಷೆಯ ಬಗ್ಗೆ ಆರಂಭದಲ್ಲಿ ಕೆಲಸ ಮಾಡಿದವರೆಲ್ಲ ಕೋಟ ಮತ್ತು ಸುತ್ತಮುತ್ತಲಿನ ಪ್ರದೇಶದವರು. ಈ ಭಾಷಿಕ ಪರಿಸರದಲ್ಲಿ ಕೋಟ ಸುತ್ತಮುತ್ತಲಿನ ಪರಿಸರದ ಭಾಷೆಯೇ ಸಾರವತ್ತಾದುದು ಎಂಬ ಭಾವನೆ ಅವರಲ್ಲಿದ್ದುದು ಕಾಣುತ್ತದೆ. ಗುಂಡ್ಮಿ ಚಂದ್ರಶೇಖರ ಐತಾಳರ ಮಾತು "ಕೋಟ ಹದಿನಾಲ್ಕು ಗ್ರಾಮಗಳು ಭಾಷೆ ದಟ್ಟವಾಗಿರುವ ನಾಡು"(ಗುಂಡ್ಮಿ ಚಂದ್ರಶೇಖರ ಐತಾಳ;೧೯೭೩;ಪು:೩) ಈ ವಿಚಾರವನ್ನು ವಿಶ್ಲೇಷಿಸುವ ಯತ್ನ ಮಾಡಿದಾಗ ಹೀಗೆ ಗುರುತಿಸುವ ಮಾನದಂಡ ಯಾವುದು ಎಂಬ ಪ್ರಶ್ನೆಯನ್ನು ಇಲ್ಲಿ ಹಾಕಿಕೊಳ್ಳಬೇಕಾಗುತ್ತದೆ. ಒಂದು ಭಾಷೆ ಇನ್ನೊಂದು ಭಾಷೆಗಿಂತ, ಒಂದು ಪ್ರಭೇದ ಇನ್ನೊಂದು ಪ್ರಭೇದಕ್ಕಿಂತ ಶ್ರೇಷ್ಠವಾದುದು, ಶ್ರೀಮಂತವಾದುದು ಎಂಬ ಭಾವನೆ ಆಧಾರರಹಿತವಾದದ್ದು ಎಂಬ ನಿಲುವಿಗೆ ಇಂದು ಭಾಷಾವಿಜ್ಞಾನ ಬಂದು ನಿಂತಿದೆ. ಈ ನಿಲುವನ್ನು ಇಲ್ಲಿ ಎತ್ತಿಕೊಂಡು ವಿಶ್ಲೇಷಣೆ ನಡೆಸುವುದಾದರೆ ಮತ್ತೆ ಗ್ರಾಮ್ಷಿ ಹೇಳಿರುವ ಭಾಷಿಕ ಯಾಜಮಾನ್ಯದ ಚರ್ಚೆಯತ್ತ ಹೊರಳಬೇಕಾಗುತ್ತದೆ. ಒಂದು ಸಮುದಾಯದ ಒಳಗಿರುವ ಪ್ರಬಲವಾಗಿರುವ ಇನ್ನೊಂದು ಉಪಸಮುದಾಯ ಸಾಂಸ್ಕೃತಿಕವಾಗಿ ಮುನ್ನೆಲೆಯಲ್ಲಿ ಇರುವುದು ಇಂತಹ ನಿಲುವುಗಳಿಗೆ ಕಾರಣವಾಗಿರಬಹುದು ಎಂಬುದಕ್ಕೆ ನಿಚ್ಚಳ ಕಾರಣಗಳು ದೊರೆಯುತ್ತವೆ. ಇದಕ್ಕೆ ಪೂರಕವಾಗಿ ಉಪೇಂದ್ರ ಸೋಮಯಾಜಿ ಅವರ ವಿವರಣೆಯನ್ನು ಗಮನಿಸಬಹುದಾಗಿದೆ. ಇದನ್ನು ಮೊದಲಿಗೆ ಕೋಟ ಕನ್ನಡ ಎಂದು ಕರೆದವರು ಯಾರು ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸಿ.ಉಪೇಂದ್ರ ಸೋಮಯಾಜಿ ಅವರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಹೆಸರು ಬಂದುದರ ಬಗ್ಗೆ ಒಂದು ಕುತೂಹಲಕಾರಿ ಅಂಶವನ್ನು ಉಲ್ಲೇಖಿಸಿದರು. ಕೋಟ ಪ್ರದೇಶದಿಂದ ಜೀವನ ನಿರ್ವಹಣೆಗಾಗಿ ಬೇರೆಡೆಗೆ ಹೋದವರು ತಮ್ಮೊಳಗೇ ಮಾತಾಡಿಕೊಳ್ಳುವಾಗ ಈ ಪ್ರದೇಶದ ಭಾಷೆಯನ್ನೇ ಮಾತಾಡಿಕೊಳ್ಳುತ್ತಿದ್ದರು. ಇದು ಯಾವ ಭಾಷೆ ಎಂದು ಅಲ್ಲಿನವರು ಕೇಳಿದಾಗ

ತಾವು ಕೋಟ ಪ್ರದೇಶದವರಾದ್ದರಿಂದ ಕೋಟಭಾಷೆ ಎಂದು ಹೇಳಿದ್ದರಿಂದ ಈ ಭಾಷೆಗೆ ಕೋಟ ಕನ್ನಡ ಎಂಬ ಹೆಸರು ಬಂತು ಎನ್ನುತ್ತಾರೆ. ಜೊತೆಗೆ ಇದುವರೆಗೆ ಆ ಪ್ರದೇಶದಲ್ಲಿ ನಡೆದ ಅಧ್ಯಯನಗಳ ಮುಖ ಯಾವ ಕಡೆಗಿದೆ ಯಾವುದು ಎಂಬುದನ್ನು ಗಮನಿಸಿದಾಗ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ. ಆರಂಭದಲ್ಲಿ ಈ ಭಾಷಾ ಪ್ರಭೇದ ಕುರಿತು ಅಧ್ಯಯನ ನಡೆಸಿದವರು ಕೋಟ ಮತ್ತು ಸುತ್ತಮುತ್ತಲಿನ ಪ್ರದೇಶವರೇ ಆಗಿದ್ದಾರೆ.

ಇನ್ನು ಬಹುಪಾಲು ಜನ ತಾವಾಡುವ ನುಡಿಯನ್ನು ಕುಂದಾಪ್ರ ಕನ್ನಡ ಎಂದು ಗುರುತಿಸುತ್ತಾರೆ. ಇವರು ತಮ್ಮನ್ನು ಕೋಟದವರೆಂದು ಗುರುತಿಸಿಕೊಳ್ಳುವುದಿಲ್ಲ. ಬದಲಾಗಿ ಜಾತಿ ಅಥವಾ ಭೌಗೋಳಿಕ ಪ್ರದೇಶದ ಆಧಾರದಲ್ಲಿ ಗುರುತಿಸಿಕೊಳ್ಳುತ್ತಾರೆ. ಇಲ್ಲಿ 'ಕೋಟ' ಮತ್ತು 'ಕುಂದಾಪ್ರ' ಎರಡೂ ಪ್ರದೇಶವಾಚಿಗಳು. ಇವೆರಡೂ ಒಂದಕ್ಕೊಂದು ಪರ್ಯಾಯವಾಗಿ ಬಳಕೆಯಾಗುವ ಅಂಶ ಕುತೂಹಲಕಾರಿಯಾಗಿದೆ. ಕುಂದಾಪುರ ತಾಲೂಕು, ಉಡುಪಿ ತಾಲೂಕುಗಳೆರಡರಲ್ಲೂ ಈ ಭಾಷಿಕ ಸಮುದಾಯ ಹರಡಿಕೊಂಡಿದ್ದು ಹೀಗೆ ಕರೆದುಕೊಳ್ಳುವ ಯತ್ನದಲ್ಲಿ ಒಂದು ಕೇಂದ್ರವಿದೆಯೆಂದು ಭಾವಿಸುವ ಯೋಚನೆಗೊಂದು ಪರ್ಯಾಯವನ್ನು ಒಡ್ಡುವ ಪ್ರಯತ್ನ ಕಾಣುತ್ತದೆ.

ಡಾ. ಎ.ಎಸ್ ಆಚಾರ್ಯರು ಈ ಭಾಷಾ ಪ್ರಭೇದದ ಕುರಿತು 'ಬಾರಕೂರು' ಕನ್ನಡ ಎಂಬ ಹೆಸರಿನಲ್ಲಿ ಬರೆದಿದ್ದಾರೆ. ಒಂದು ಕಾಲದಲ್ಲಿ ರಾಜಕೀಯವಾಗಿ ಬಾರಕೂರು ಉಚ್ಛ್ರಾಯ ಸ್ಥಿತಿಯಲ್ಲಿದ್ದು ಆ ರಾಜಕೀಯ ಕೇಂದ್ರವನ್ನೇ ಭಾಷೆಯ ಕೇಂದ್ರವಾಗಿಸಿ ಗುರುತಿಸಿರುವುದನ್ನು ಇಲ್ಲಿ ಗಮನಿಸಬಹುದು. ಇದು ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ರಾಜಕಾರಣದ ಭಾಗವಾಗಿಯೇ ನಮಗೆ ಕಾಣುತ್ತದೆ. ಬಾರಕೂರು ಸಂಸ್ಥಾನವೂ ಸೇರಿದಂತೆ ಇವೆಲ್ಲವೂ ತುಳುನಾಡಿನ ವ್ಯಾಪ್ತಿಗೆ ಬರುವಂಥವು ಎಂಬ ವಾದ ಎದ್ದಾಗ ಅದು ಈ ಪ್ರದೇಶದ ಜನರಿಗೆ ತಮ್ಮ ಪ್ರತ್ಯೇಕ ಅಸ್ಮಿತೆಯನ್ನು ಅಲುಗಾಡಿಸುವ ಪ್ರಶ್ನೆಯಾಗಿ ಕಾಣಿಸಿತು. ಆಗ ಅವರು ತಮ್ಮ ಅಸ್ಮಿತೆಯನ್ನು ಭಾಷೆಯ ಮೂಲಕ ಸ್ಥಾಪಿಸುವ ಪ್ರಯತ್ನ ನಡೆಸಿರುವುದು ಕಂಡುಬರುತ್ತದೆ. 'ತುಳುನಾಡಿ'ನ ಕಲ್ಪನೆ ಸಂಪೂರ್ಣವಾಗಿ ಭಾಷಿಕವಲ್ಲದೇ ಇದ್ದಾಗಲೂ ಆ ಕಲ್ಪನೆಯನ್ನು ಒಪ್ಪದ ಸಮುದಾಯ ಅದಕ್ಕೆ ಪ್ರತಿರೋಧ ಒಡ್ಡಿದ್ದು ಭಾಷಿಕವಾಗಿ ಎಂಬ ವಿಚಾರ ಇಲ್ಲಿ ಗಮನಿಸಬೇಕಾಗಿದೆ. ಹಲವು ಅಸ್ಮಿತೆಗಳಿರುವ ಈ ಸಮುದಾಯ ರಾಜಕೀಯವಾಗಿ ತಾವು ತುಳುನಾಡಿನಿಂದ ಸ್ವತಂತ್ರರು ಎಂಬುದನ್ನು ತುಳುವಿನಿಂದ ಪ್ರತ್ಯೇಕವಾಗಿರುವ ತಮ್ಮ ಭಾಷೆಯ ಮೂಲಕ ಸಾಬೀತು ಪಡಿಸಲು ಹೊರಡುತ್ತಾರೆ.

ವಿಶ್ವಂಭರ ಉಪಾಧ್ಯಾಯ ಅವರು ಬರೆದ 'ಕುಂದಗನ್ನಡ' ಅಂತಹ ಪ್ರಯತ್ನಗಳಲ್ಲಿ ಒಂದು. ಇದನ್ನು ಅವರು ಬಹಳ ಪ್ರಜ್ಞಾಪೂರ್ವಕವಾಗಿ ಮಾಡುತ್ತಾರೆ. ಆದರೆ ಡಾ. ಎ.ಎಸ್. ಆಚಾರ್ಯ ಇದನ್ನು ಬಾರಕೂರು ಕನ್ನಡ ಎಂಬುದಾಗಿ ಆ ಪ್ರದೇಶದ ರಾಜಕೀಯ

ಕೇಂದ್ರದ ಹೆಸರಿಟ್ಟು ಕರೆದಿರುವುದನ್ನು ನೋಡಿದರೆ ಇದೂ ಕೂಡಾ ಅಸ್ಮಿತೆಯ ರಾಜಕಾರಣದ ಭಾಗವಾಗಿ ಇರುವ ಸಾಧ್ಯತೆ ಇದೆ ಎಂದು ಭಾವಿಸಬಹುದಾಗಿದೆ.

ಕೋಟ ಭಾಷಿಕ ಪರಿಸರದಲ್ಲಿ ತುಳು ಶಾಸನಗಳು ದೊರೆಯುವುದು ಮತ್ತು ತುಳು ಅರಸರಾದ ಆಳುಪರು ಇಲ್ಲಿ ಆಳುತ್ತಿದ್ದುದರಿಂದ ಇದನ್ನು 'ತುಳುನಾಡು' ಎಂದು ಇತಿಹಾಸಕಾರರು ಉಲ್ಲೇಖಿಸಿದಾಗ ಈ ಪ್ರದೇಶದ ಜನ ಪ್ರತಿರೋಧಿಸಿದ್ದರು. ಈ ಸಂಬಂಧ ಹಲವು ಗೋಷ್ಠಿಗಳು ನಡೆದಿದ್ದವು. ಇದು 'ಕನ್ನಡ ನಾಡು', ಇಲ್ಲಿನ ಭಾಷೆ ತನ್ನದೇ ಆದ ವೈಶಿಷ್ಟ್ಯ ಹೊಂದಿದೆ ಎಂಬುದನ್ನು ಸಾಬೀತುಪಡಿಸಲು ತಾವು 'ಕುಂದಗನ್ನಡ ಶಬ್ದನಿಧಿ' ಎಂಬ ಕೃತಿ ರಚಿಸಿರುವುದಾಗಿ ಕುಂಭಾಸಿಯ ವಿಶ್ವಂಭರ ಉಪಾಧ್ಯಾಯ ಹೇಳುತ್ತಾರೆ. " "ಕಾವೇರಿಯಿಂದ ಗೋದಾವರಿಯ ತನಕವೂ ಕರ್ನಾಟಕವೇ" ಎಂದು ನೃಪತುಂಗನು ಸಾರಿದ್ದನು. ಅಂಜಂತಾ ಎಲ್ಲೋರಾಗಳಲ್ಲಿ ಇದಕ್ಕೆ ಬೇಕಾದ ಪುರಾವೆಗಳೂ ಸಿಗುತ್ತವೆ ಅಲ್ಲದೆ ಮಹಾರಾಷ್ಟ್ರದಲ್ಲೆಲ್ಲಾ ಕನ್ನಡ ಶಾಸನಗಳೇ ಸಿಗುತ್ತವೆ. ಈ ಪುರಾವೆಗಳ ಆಧಾರದಿಂದ ಈಗ ಅದನ್ನು ಕರ್ನಾಟಕವೆಂದು ಹೇಳಲಿಕ್ಕೆ ಸಾಧ್ಯವೇ? ಹೇಳಿದರೆ ಅದೊಂದು ಒಣ ಜಂಬದ ಮಾತಾದೀತು. ತುಳುನಾಡಿನ ಪ್ರಸ್ತಾಪವಿದ್ದ ಶಾಸನ ಪ್ರದೇಶಗಳಲ್ಲೆಲ್ಲಾ ತುಳುವಿಲ್ಲ. ಬಾರಕೂರಿನ, ಬಸರೂರಿನ ಸುತ್ತಲೂ ಕನ್ನಡೇತರ ಭಾಷೆಯೇ ಇಲ್ಲ! ಆದುದರಿಂದ ಇದು ಕನ್ನಡ ನಾಡು! ಈ ವಿಷಯಗಳನ್ನು ಸಪ್ರಮಾಣವಾಗಿ ನಿರೂಪಿಸಲಿಕ್ಕಾಗಿ ಐತಿಹಾಸಿಕ ಮಹತ್ವದ ಬಾರಕೂರಿನಲ್ಲಿ ಒಂದು ಹಾಗೂ ಬಸರೂರಿನಲ್ಲಿ ಒಂದು ಕುಂದಗನ್ನಡ ಗೋಷ್ಠಿಗಳನ್ನು ನಡೆಸಲಾಯಿತು. ಅದರಲ್ಲಿ ವಿದ್ವಾಂಸರು ಕುಂದಗನ್ನಡ ಪ್ರದೇಶದ ವಿಸ್ತಾರ, ಭಾಷೆಯ ಸೊಗಸು, ಜೀವನ ಪದ್ಧತಿ ಮೊದಲಾದವುಗಳನ್ನು ಸಾಹಿತ್ಯದ ಉಲ್ಲೇಖದೊಂದಿಗೆ ನಿರೂಪಿಸಿದರು"(ವಿಶ್ವಂಭರ ಉಪಾಧ್ಯಾಯ;೨೦೦೦;ಪು:iv).

೬.೩. ಶ್ರೇಣೀಕರಣ ಮತ್ತು ಭಾಷೆ

ಸಮಾಜದ ರಚನೆ ಮತ್ತು ಭಾಷಿಕ ರಚನೆ ಒಂದನ್ನು ಬಿಟ್ಟು ಇನ್ನೊಂದು ಇರುವಂಥದ್ದಲ್ಲ ಎಂಬುದನ್ನು ಈವರೆಗಿನ ಅಧ್ಯಯನಗಳು ಸಾಬೀತುಪಡಿಸಿವೆ. ಸಾಮಾಜಿಕವಾಗಿ ಶ್ರೇಣೀಕೃತಗೊಂಡ ಸಮಾಜದಲ್ಲಿನ ಭಾಷಿಕ ಚಹರೆಗಳಲ್ಲಿಯೂ ಈ ಕುರುಹು ಕಾಣಿಸುತ್ತದೆ. ಅದನ್ನು ಈ ಕೆಳಗಿನ ನೆಲೆಗಳಲ್ಲಿ ಕಂಡುಕೊಳ್ಳಬಹುದಾಗಿದೆ.

೬.೩.೧. ಗುರುತಿಸಿಕೊಳ್ಳುವ ಬಗೆ

ಸಮಾಜದಲ್ಲಿನ ವಿವಿಧ ಸಮುದಾಯ ಅನೇಕ ವಿಧಗಳಲ್ಲಿ ತಮ್ಮ ಅನನ್ಯತೆಯನ್ನು ಕಾಯ್ದುಕೊಂಡು ಬರುತ್ತವೆ. ಇದರಲ್ಲಿ ತಮ್ಮನ್ನು ತಾವು ಯಾವ ನೆಲೆಯಲ್ಲಿ ನಿರ್ವಚಿಸಿಕೊಳ್ಳುತ್ತವೆ ಎಂಬುದು ಒಂದು. ಬ್ರಾಹ್ಮಣೇತರರಲ್ಲಿ ಬಳಿ ಸಂಪ್ರದಾಯವಾದರೆ ಬ್ರಾಹ್ಮಣರಲ್ಲಿ ಗೋತ್ರ ಸಂಪ್ರದಾಯ. ಬ್ರಾಹ್ಮಣರು ಋಷಿ ಪರಂಪರೆಯ ಹಿನ್ನೆಲೆಯಲ್ಲಿ ವಸಿಷ್ಠ, ವಿಶ್ವಾಮಿತ್ರ, ಕಾಶ್ಯಪ,

ಭಾರದ್ವಾಜ ಹೀಗೆ ಒಟ್ಟು ಎಂಟು ಋಷಿಗಳ ಹೆಸರಿನ ಗೋತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಬಂಟರಲ್ಲಿ ಸುಮಾರು ೬೦ಕ್ಕೂ ಹೆಚ್ಚು ಬಳಿಗಳಿವೆ. ಇವುಗಳನ್ನು ಸಪ್ತರ್ಷಿ ಮೂಲದ ಬಳಿಗಳು, ನೀರು ಬಳಿಗಳು, ಕೂಡು ಬಳಿಗಳು ಮೊದಲಾಗಿ ವಿಂಗಡಿಸಲಾಗಿದೆ. ಮುಖ್ಯವಾದ ಬಳಿಗಳೆಂದರೆ, ಸರ್ಪನ ಬಳಿ, ಹೊಳೆ ಬಳಿ, ಅಜ್ಜನ ಬಳಿ, ಬಾಳೆ ಬಳಿ ಕೇದಗೆ ಬಳಿ, ನಾರಾಯಣ ಬಳಿ ಮೊದಲಾದವುಗಳು. "ಸಾಮಾನ್ಯವಾಗಿ ವೈದಿಕರ ಗೋತ್ರಗಳು ಆಕಾಶದತ್ತ ಮುಖಮಾಡಿಕೊಂಡು ಋಷಿಮುನಿಗಳನ್ನು ಮೂಲಪುರುಷರನ್ನಾಗಿ ಹೊಂದಿದರೆ ಜನಪದರ ಬಳಿಗಳು ಭೂಮಿಯತ್ತ ಮುಖ ಮಾಡಿ ಬಳ್ಳಿ, ಬಿಳಲುಗಳನ್ನು ಹಕ್ಕಿ, ಪಕ್ಷಿ, ಪ್ರಾಣಿಗಳನ್ನು ಮೂಲವನ್ನಾಗಿ ಗುರುತಿಸುತ್ತವೆ"(ಜಯಪ್ರಕಾಶ ಶೆಟ್ಟಿ.ಎಚ್(ಸಂ);೨೦೦೬;ಪು:೨೨೨). ಈ ರೀತಿಯಲ್ಲಿ ಬ್ರಾಹ್ಮಣರು ವಿಶಾಲ ಭಿತ್ತಿಯಲ್ಲಿ, ವೈದಿಕ ಪರಂಪರೆಯೊಂದಿಗೆ ತಮ್ಮನ್ನು ಗುರುತಿಸಿ ಕೊಂಡರೆ ಸ್ಥಳೀಯ ಇತರ ಸಮುದಾಯಗಳು ತಮ್ಮ ಸುತ್ತಮುತ್ತಲಿನ ಪರಿಸರ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಂಗತಿಗಳ ಹಿನ್ನೆಲೆಯಲ್ಲಿ ತಮ್ಮನ್ನು ಗುರುತಿಸಿಕೊಂಡಿರುವುದು ಕಂಡು ಬರುತ್ತದೆ.

ಆದರೆ ಹೀಗೆ ಗುರುತಿಸಿಕೊಳ್ಳಲು ಬಳಿಗಳು ಹೇಗೆ ಬಂದವು ಎಂದು ಕೇಳಿದರೆ ಹಿಂದೆ ಒಡೆಯರಾಗಿದ್ದ ಬ್ರಾಹ್ಮಣರು ನೀಡಿದ್ದು ಎಂದು ಜನ ನಂಬಿದ್ದಾರೆ. ಹಿಂದೆ ತಮ್ಮ ಅಧೀನದಲ್ಲಿರುವ ಇತರ ಜಾತಿಗಳಿಗೆ ಗುರುತಿಸಿಕೊಳ್ಳಲು ಒಬ್ಬೊಬ್ಬರಿಗೆ ಒಂದೊಂದು ಬಳಿ ಹೆಸರು ನೀಡಲಾಯಿತು ಎಂಬುದು ಅವರ ನಂಬಿಕೆ.

ಬ್ರಾಹ್ಮಣೇತರರಲ್ಲಿ ಇದಲ್ಲದೆ ಒಂದೊಂದು ಬಳಿಗೆ ಒಂದೊಂದು ವೈಶಿಷ್ಟ್ಯವಿದೆ. ಹಾವಿನ ಬಳಿ, ಸರ್ಪನ ಬಳಿ, ನಾಗನ ಬಳಿ ಕುಟುಂಬದವರಿಗೆ ಸರ್ಪ ಅಥವಾ ಹಾವುಗಳಿಂದ ಮರಣ ಸಂಭವಿಸುವುದಿಲ್ಲವೆಂದು ಪ್ರತೀತಿ ಇದೆ. ಹೊಳೆ ಬಳಿಯವರು ನೀರಿನಲ್ಲಿ ಮುಳುಗಿ ಸಾಯುವುದಿಲ್ಲ ಎಂಬ ನಂಬಿಕೆಯಿದೆ.

ಹಾಗೆಯೇ ಮಕ್ಕಳಿಗೆ ಹೆಸರಿಡುವ ಕ್ರಮವೂ ಕೂಡಾ ಎಲ್ಲ ಸಮುದಾಯಗಳಲ್ಲೂ ಒಂದೇ ರೀತಿ ಇಲ್ಲ. ಬ್ರಾಹ್ಮಣರಲ್ಲಿ ನಕ್ಷತ್ರ ನಾಮ, ಮಾಸ ನಾಮ, ವ್ಯವಹಾರ ನಾಮ, ಕುಲದೇವರ ಹೆಸರು, ಗುಪ್ತ ನಾಮ ಹೀಗೆ ಐದು ಹೆಸರಿಡುವ ಪದ್ಧತಿ ಇದೆ. ಅದರಲ್ಲೂ ವ್ಯವಹಾರ ನಾಮ ಎಂದಾಗ ಬಹುತೇಕ ಮನೆಯ ಹಿರಿಯರ ಹೆಸರು ಇಡುವುದು ಸಂಪ್ರದಾಯ. ಅಜ್ಜನ ಹೆಸರು ಮೊಮ್ಮಗನಿಗೆ, ಅಜ್ಜಿಯ ಹೆಸರು ಮೊಮ್ಮಗಳಿಗೆ ಇಡುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿ. ಅದೇ ಹರಿಜನರು ಅಥವಾ ಕೂಸಾಳುಗಳಲ್ಲಿ ಇದು ಭಿನ್ನ. ಅವರಲ್ಲಿ ವಾರದ ಆಧಾರದ ಮೇಲೆ ಹೆಸರಿಡುವ ಪದ್ಧತಿ ಇದೆ. ಆದಿತ್ಯವಾರ ಹುಟ್ಟಿದರೆ ಐತ, ಸೋಮವಾರಕ್ಕೆ ಚೋಮ, ಶುಕ್ರವಾರ ಹುಟ್ಟಿದರೆ ಸುಕ್ರ ಇತ್ಯಾದಿ.

ಹುಟ್ಟಿದ ಮಕ್ಕಳಿಗೆ ಆರೋಗ್ಯದ ಸಮಸ್ಯೆ ಇದ್ದು ಅವು ಸಾವು ಬದುಕಿನ ಮಧ್ಯೆ ಇದ್ದಾಗ ಅಂತಹ ಮಕ್ಕಳಿಗೆ 'ಕೊರಗ' ಅಥವಾ 'ಕೊರತಿ' ಎಂದು ಹೆಸರಿಡುವ ಪದ್ಧತಿ ಈ ಸಮುದಾಯದಲ್ಲಿ ಕಂಡುಬರುತ್ತದೆ. ಸಮಾಜದಲ್ಲಿ ಕೊರಗಿರುವ ಸ್ಥಾನಮಾನ ಅತ್ಯಂತ ಕೆಳಸ್ತರದ್ದು. ಈ ಹೆಸರಿಡುವುದರಿಂದ ರೋಗವೂ ಅಂತಹವರನ್ನು ಮೆಟ್ಟಿಕೊಳ್ಳಲು ಹಿಂಜರಿದು ಮಕ್ಕಳು ಗುಣಮುಖರಾಗುತ್ತಾರೆ ಎಂಬ ನಂಬಿಕೆ ಇಲ್ಲಿ ಕೆಲಸ ಮಾಡಿದೆ. "ಮಗು ಸಾಯದಿರಲೆಂದು ಅದಕ್ಕೆ ಕ್ಷುಲ್ಲಕವಾದ ಹೆಸರನ್ನು ಇಡುತ್ತಾರೆ. ಆ ಹೆಸರು ಹೊತ್ತ ಮಗುವೂ ಕ್ಷುದ್ರವೆಂದು ಸಾವು ತಿಳಿದು, ಆಗ ಆ ಮಗುವನ್ನು ಬದುಕಲು ಬಿಡುವುದೆಂದು ತಿಳಿಯುತ್ತಾರೆ" (ನಾರಾಯಣ.ಕೆ.ವಿ(ಸಂ);೨೦೦೫;ಪು:೧೨).

ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಭಾಷೆಗಳಲ್ಲಿ ವ್ಯತ್ಯಾಸವನ್ನು ಗುರುತಿಸುವುದು ಸಾಧ್ಯ. ಆತನ ಭಾಷೆ ಕೇಳಿದೊಡನೆ ಆತ ಬ್ರಾಹ್ಮಣನೋ ಬ್ರಾಹ್ಮಣೇತರನೋ ಎಂಬುದು ತಿಳಿಯುತ್ತದೆ. ಆದರೆ ನಿಧಾನವಾಗಿ ಈ ವ್ಯತ್ಯಾಸಗಳು ಅಳಿಯುತ್ತಿವೆ. ಇವುಗಳನ್ನು ಧ್ವನಿಮಾತ್ಮಕವಾಗಿ ಮತ್ತು 'ಕಾಕು'ವಿನ ನೆಲೆಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಧ್ವನಿಮಾತ್ಮಕ ನೆಲೆಯಲ್ಲಿ, ಪ್ರತ್ಯಯಗಳ ಬಳಕೆಯಲ್ಲಿ, ಪದಗಳ ಬಳಕೆಯಲ್ಲಿ ಮತ್ತು ಮಾತಿನ ರಾಗದ ಆಧಾರದಲ್ಲಿ ವಿಶಿಷ್ಟತೆಯನ್ನು ಗುರುತಿಸಬಹುದು.

ಉದಾಹರಣೆಗೆ,

ಬತ್ಲ್-ಬರ್‍ತಾಳ್

ಮಾಣಿ-ಗಂಡ್

ಹೆಣ್ಣ್-ಹೆಣಾ

ತಪ್ಕೆ-ತಪ್ಪೂಕೆ

ಹೋಗ್ಲಿಲ್ಲೆ-ಹ್ವಾಯ್‌ಲ್ಲೆ

ಬಂದಿದ್ದಿ-ಬ್ಯೆಂದಿ

ಅನ್ನ-ಕೂಳ್

ಹ್ವಾತೆ-ಹ್ವಾತಿ

ಬ್ರಾಹ್ಮಣರಲ್ಲೂ ತಮ್ಮ ಉಪಸಮುದಾಯಗಳೊಳಗೆ ಭಾಷೆಯ ಆಧಾರದಲ್ಲಿ ಮೇಲು-ಕೀಳು ಭಾವ ಇದೆ. ಇಲ್ಲಿನ ಶಿವಳ್ಳಿ ಬ್ರಾಹ್ಮಣರು ಕೋಟ ಬ್ರಾಹ್ಮಣರ ಭಾಷೆಗಿಂತ ತಮ್ಮ ಭಾಷೆ ಶ್ರೇಷ್ಠ ಎಂದು ಭಾವಿಸುವ ಬಗೆ ಇದೆ. ಕೋಟ ಬ್ರಾಹ್ಮಣರ ಭಾಷೆ ಹೆಚ್ಚು

ಪ್ರಾದೇಶಿಕತೆಯತ್ತ ಒಲೆಯುತ್ತದೆ. ಶಿವಳ್ಳಿಯವರು 'ಮೇಲೆ ಬಾ' ಎಂದರೆ ಕೋಟದವರು 'ಬೆಟ್ಟ್ ಬಾ' ಎನ್ನುತ್ತಾರೆ. ಇದೇ ರೀತಿ ಕ್ರಮವಾಗಿ 'ಹಸೆ'–'ಚಾಪೆ', 'ನೆಲ ಒರ್ಸುದ್'–'ನೆಲ ಗೆಡ್ಸುದ್' 'ಸಂಜೆ'–'ಬೈಸಾರಿ' ಇಂತಹವುಗಳನ್ನು ಗಮನಿಸಿದಾಗ ಕೋಟ ಬ್ರಾಹ್ಮಣರ ಒಳನುಡಿ ತುಲನಾತ್ಮಕವಾಗಿ 'ಶಿಷ್ಟ' ಎಂದು ಭಾವಿಸಲಾದ ಮತ್ತು 'ಪ್ರಮಾಣ ಕನ್ನಡ'ದ ವಿಧಕ್ಕಿಂತ ಭಿನ್ನವಾಗಿದೆ. ಇದರ ಆಧಾರದಲ್ಲಿ ಶಿವಳ್ಳಿಯವರು ಕೋಟ ಬ್ರಾಹ್ಮಣರನ್ನು ಲೇವಡಿ ಮಾಡುವುದಿದೆ.

೬.೩.೨. ಮಿತವ್ಯಯಾಸಕ್ತಿ

ಶ್ರಮಸಂಸ್ಕೃತಿಯೇ ಸೋಪಾನವಾಗಿರುವ ಬ್ರಾಹ್ಮಣೇತರರ ಭಾಷೆಯಲ್ಲಿ ಮಿತವ್ಯಯಾಸಕ್ತಿ ಹೆಚ್ಚು ಇರುವುದು ಕಾಣುತ್ತದೆ. ಉದ್ದನೆಯ ಪದಗಳನ್ನು ಹ್ರಸ್ವ ಮಾಡಿಕೊಂಡು ಅವರು ಬಳಸುವುದು ಕಂಡುಬರುತ್ತದೆ.

ಉದಾಹರಣೆಗೆ, ಹೋಗ್ಬೇಕ್–ಹ್ವಾಯ್ಕ್

ಬರ್ಬೇಕ್–ಬರ್ಕ್

ನಾ ಮಗೀನ್ ಎತ್ಕಂಡ್ ಹ್ವಾತಿ–ನಾ ಮೈನೆಕ್ಕಹ್ವಾತಿ(ನಾನು ಮಗುವನ್ನು ಎತ್ತಿಕೊಂಡು ಹೋಗುತ್ತೇನೆ)

೬.೩.೩. ಸಂಬೋಧನೆ

ಸಮುದಾಯಗಳ ನಡುವೆ ಪರಸ್ಪರರನ್ನು ಸಂಬೋಧಿಸುವ ರೀತಿ ಶ್ರೇಣೀಕರಣದ ರಚನೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಹಿಂದೆ ಬ್ರಾಹ್ಮಣರಲ್ಲಿ ಗಂಡಸನ್ನು ಉಳಿದ ಜಾತಿ ಜನ 'ಒಡೀರ್' ಎಂದೂ ಮಹಿಳೆಯನ್ನು 'ಅಮ್ಮ' 'ಒಡ್ತ್ರಿ' ಎಂದೂ ಕರೆಯುತ್ತಿದ್ದರು. ಇಲ್ಲೂ ಬ್ರಾಹ್ಮಣೇತರರಲ್ಲಿ ಮೇಲು ಸ್ತರಕ್ಕೆ ಸೇರಿದವರು ಬ್ರಾಹ್ಮಣ ಮಹಿಳೆಯನ್ನು 'ಅಮ್ಮ' ಎಂದೂ ಕೆಳಗಿನ ಶ್ರೇಣಿಯವರು 'ಒಡ್ತ್ರಿ' ಎಂದೂ ಕರೆಯುತ್ತಿದ್ದುದು ಕಾಣುತ್ತದೆ. ಬ್ರಾಹ್ಮಣರು ಉಳಿದ ಜಾತಿಯವರನ್ನು ಹೆಸರು ಹೇಳಿ ಕರೆಯುತ್ತಿದ್ದರು. ಕೂಸಾಳು ಜಾತಿಗೆ ಸೇರಿದವರನ್ನು 'ಆಳೇ' ಎಂದೂ ಕರೆಯುತ್ತಿದ್ದರು.

ಒಳನುಡಿಗಳ ನಡುವೆ ಇರುವ ಈ ವ್ಯತ್ಯಾಸವನ್ನು ಸಮುದಾಯ ಮತ್ತೆ ಮೇಲು ಕೀಳು ಎಂಬ ಸ್ತರಗಳಲ್ಲಿ ಗ್ರಹಿಸುತ್ತದೆ. ಸಾಂಪ್ರದಾಯಿಕ ಸಂದರ್ಭಗಳಲ್ಲಿ ನಿಗದಿತ ಪಾತ್ರಗಳು, ಅದಕ್ಕನುಗುಣವಾದ ಭಾಷಿಕ ಪಾತ್ರ, ಇವುಗಳ ಮೂಲಕ ಸಮಾಜದಲ್ಲಿ ಆತನ ಸ್ಥಾನ ಏನು ಎಂಬುದನ್ನು ನಿರ್ಧರಿಸಬಹುದು. ಬಳಕೆಯ ಭಾಷೆ ಹೆಚ್ಚು ಪ್ರಾದೇಶಿಕತೆಯತ್ತ ಒಲೆದಷ್ಟೂ ಅವರು ಹಿಂದುಳಿದವರು, ಕೆಳಸ್ತರದವರು ಎಂಬ ಭಾವನೆ ಇಲ್ಲಿ ಮನೆಮಾಡಿದೆ. ಇದು

ದೈವ ದೇವರುಗಳು ಮನುಷ್ಯರ ಮೇಲೆ ಆವಾಹನೆಗೊಂಡಾಗ ಅಲ್ಲಿ ಕಂಡುಬರುವ ಭಾಷೆಯ ಬಳಕೆಯಲ್ಲೂ ಕಾಣುತ್ತದೆ. ದೇವರುಗಳ ಭಾಷೆ 'ಶಿಷ್ಟ'ದೆಡೆಗೆ ಒಲೆದರೆ ದೈವದ ಭಾಷೆ ಜನಸಾಮಾನ್ಯರ ಆಡುನುಡಿಗೆ ಹತ್ತಿರವಾಗಿರುತ್ತದೆ. ದೈವಗಳ ಸಾಲಿನಲ್ಲೇ ಕೆಳಸ್ತರದಲ್ಲಿರುವ 'ಕೀಳ್'ನ ಭಾಷೆ ಇನ್ನೂ ಹೆಚ್ಚು ಪ್ರಾದೇಶಿಕತೆಯನ್ನು ತೋರುತ್ತದೆ.

ಮಹಿಳೆ ಮತ್ತು ತಳಸಮುದಾಯದವರನ್ನು ಸೂಚಿಸುವಾಗ 'ಅದು', 'ಅವು' ಎನ್ನುವುದು ಅವರನ್ನು ಕೆಳದರ್ಜೆಗಿಳಿಸಿ ಮಾತಾಡುವ ಕ್ರಮವಾಗಿದೆ. ಸ್ವತಂತ್ರ ವಿಚಾರ ಹೊಂದಿರದವರು, ನಮ್ಮ ಸಮಕ್ಕೆ ನಿಲ್ಲರಾದವರು ಎಂಬರ್ಥ ಇಲ್ಲಿ ಹೊರಹೊಮ್ಮುವುದನ್ನು ಕಾಣಬಹುದು.

೬.೩.೪. ಪದಬಳಕೆಯಲ್ಲಿನ ವ್ಯತ್ಯಾಸ

ಉಪಭೋಕ್ತ ಯಾರು ಅನ್ನುವುದರ ಆಧಾರದ ಮೇಲೆ ವಸ್ತು ಅಥವಾ ಸಂಗತಿಗಿರುವ ಪದಬಳಕೆ ಸಂದರ್ಭಾನುಸಾರವಾಗಿ ಮಾತ್ರವಲ್ಲ, ಶ್ರೇಣೀಕೃತ ನೆಲೆಯಲ್ಲಿ ಬದಲಾಗುತ್ತದೆ. ಪದಬಳಕೆ ಮತ್ತು ಉಚ್ಚಾರಣೆಯಲ್ಲಿನ ವ್ಯತ್ಯಾಸ ಸಾಮಾಜಿಕ ವಿಭಜನೆಯ ಸೂಚಕಗಳಾಗಿವೆ. ನಿರ್ದಿಷ್ಟ ಜಾತಿ ಸಮುದಾಯದೊಳಗಷ್ಟೇ ಬಳಕೆಯಾಗುವ ವಿಶಿಷ್ಟ ಪದಗಳಿರುತ್ತವೆ. ಉದಾಹರಣೆಗೆ, ಅಕ್ಕಿ ಬೇಯಿಸಿ ಮಾಡಿದ ಅನ್ನ ದೇವರಿಗೆ ಅರ್ಪಿಸಿದಾಗ 'ನೈವೇದ್ಯ'ವಾಗುತ್ತದೆ, ಮೇಲ್ವರ್ಗದವರು ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರು 'ಅನ್ನ' ಉಣ್ಣುತ್ತಾರೆ, ಉಳಿದ ಸಮುದಾಯದವರು ಅದನ್ನು 'ಕೂಳ್' ಎನ್ನುತ್ತಾರೆ. ದೈವಕ್ಕೆ ಮತ್ತು ಜಕಣಿಗೆ ಮಾಂಸದ ಸಾರು ಹಾಕಿ ಇಟ್ಟಾಗ ಅದನ್ನೇ 'ಚರು' ಎನ್ನಲಾಗುತ್ತದೆ. ಬ್ರಾಹ್ಮಣರು ಶ್ರಾದ್ಧದಲ್ಲಿ ಪಿತೃಗಳಿಗೆ ಅರ್ಪಿಸುವ ಅನ್ನದ ಉಂಡೆಯ ರೂಪಕ್ಕೆ 'ಪಿಂಡ' ಎನ್ನುತ್ತಾರೆ. ನಾಯಿಗೆ ಅನ್ನ ಹಾಕಿದರೆ ಅದು 'ಗಂಜಿ' ಎನಿಸಿಕೊಳ್ಳುತ್ತದೆ. ಇಲ್ಲಿ ಶ್ರೇಣಿಗೆ ಅನುಸಾರವಾಗಿ ಗಮನಿಸಿದರೆ ನೈವೇದ್ಯ ಮೊದಲ ಸ್ಥಾನದಲ್ಲಿದ್ದರೆ ಕೂಳ್ ಅಥವಾ ಗಂಜಿ ಕೊನೆಯ ಸ್ಥಾನದಲ್ಲಿದೆ.

೬.೩.೫. ಬೈಗುಳಗಳು

ಬೈಗುಳಗಳ ಕುರಿತು ಪ್ರತ್ಯೇಕ ಅಧ್ಯಯನವನ್ನೇ ಮಾಡಬಹುದು. ಇಲ್ಲಿ ಶ್ರೇಣೀಕರಣ ಮತ್ತು ಭಾಷೆಯನ್ನು ಇಟ್ಟುಕೊಂಡು ಚರ್ಚೆ ಮಾಡುವಾಗ 'ಬೈಗುಳ'ಗಳು ಬಹಳ ಮುಖ್ಯವಾಗುತ್ತವೆ. ಬೈಗುಳಗಳು ಮತ್ತು ಹೆಣ್ಣನ್ನು ನೋಡುವ ಬಗೆಯನ್ನು ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಜಾತಿ ಆಧಾರಿತ ತರತಮಭಾವದ ನೆಲೆಯಿಂದಷ್ಟೆ ಗಮನಿಸಲಾಗಿದೆ. ಶ್ರೇಣಿಯಲ್ಲಿ ಮೇಲೆ ಇರುವ ಸಮುದಾಯಗಳು ತಮಗಿಂತ ಕೆಳಗಿರುವವರ ಹೆಸರನ್ನು ಕ್ಷುಲ್ಲಕವಾಗಿ ಪರಿಗಣಿಸುವುದು, ಬೈಯುವ ಸಂದರ್ಭದಲ್ಲಿ ಬಳಸುವುದು ಸಾಮಾನ್ಯ ಸಂಗತಿ. ಉದಾಹರಣೆ, 'ಕ್ವರ್‍ರ್ ಕಣಂಗೆ ಮಾಡ್ತ'

ಜೊತೆಗೆ, ಕ್ಷುದ್ರ ದೇವತೆಗಳ ಹೆಸರು ಎತ್ತಿ ಆಡುವ ಬೈಗುಳಗಳು. ಉದಾಹರಣೆಗೆ, ರಾಹು, ಬೊಬ್ಬರ್ಯ, ಉಮ್ಮಲ್ತಿ ಇತ್ಯಾದಿ ದೇವತೆಗಳ ಹೆಸರುಗಳನ್ನು, ಅವುಗಳ ಗುಣಗಳನ್ನು ಎತ್ತಿ ಆಡಿ ಆ ರೀತಿಯಲ್ಲಿರುವವರನ್ನು ಬೈಯುವ ಬಗೆಯನ್ನು ಕಾಣಬಹುದು. ಈ ದೈವಗಳೊಂದಿಗೆ ಬೆಸೆದುಕೊಂಡವರು ತಳಸಮುದಾಯದವರು.

೬.೩.೬. ಗೌರವ ಮತ್ತು ಆತ್ಮೀಯತೆಯ ಸೂಚಕಗಳು(Solidarity and Politeness)

ಗೌರವ ಸೂಚಕ ಮತ್ತು ಆತ್ಮೀಯತೆಯ ಸೂಚಕಗಳನ್ನು ಕುಟುಂಬದೊಳಗೆ, ಸಾಮಾಜಿಕ ವಾಗಿ ಹೀಗೆ ಎರಡು ನೆಲೆಗಳಲ್ಲಿ ಗಮನಿಸಬೇಕಾಗುತ್ತದೆ. ಕುಟುಂಬದೊಳಗೆ ನೋಡುವುದಾದರೆ ಸೋದರ ಸೋದರಿಯರು, ತಾಯಿ, ತಾಯಿಯ ಒಡಹುಟ್ಟಿದವರಿಗೆಲ್ಲ 'ನೀನು' ಎಂದು ಕರೆಯುವುದನ್ನು ಕಾಣುತ್ತೇವೆ. ಗಂಡ, ಭಾವ, ಮಾವ, ಅತ್ತೆ, ಭಾವ ಇವರನ್ನು 'ನೀವು' ಎಂದೇ ಹೇಳಬೇಕು ಎಂಬ ಕಟ್ಟಳೆಯಿದೆ. ಇನ್ನು ತಂದೆ, ದೊಡ್ಡಪ್ಪ, ದೊಡ್ಡಮ್ಮ, ಸೋದರ ಮಾವ ಮುಂತಾದವರಿಗೆ 'ನೀನು', 'ನೀವು' ಎರಡೂ ಬಗೆಯಲ್ಲಿ ಕರೆಯುವವರಿದ್ದಾರೆ. ಅಳಿಯ ಸಂತಾನದಲ್ಲಿ ತಂದೆಯ ಒಡಹುಟ್ಟಿದವರಿಗಿಂತ ತಾಯಿಯ ಒಡಹುಟ್ಟಿದವರು ಹತ್ತಿರದವರಾದರಿಂದ ಸಲಿಗೆಯಿಂದ ತಾಯಿಯ ಒಡಹುಟ್ಟಿದವರಿಗೆ 'ನೀನು' ಎನ್ನುವುದು, ತಂದೆಯ ಒಡಹುಟ್ಟಿದವರಿಗೆ 'ನೀವು' ಎನ್ನುವುದನ್ನು ಕಾಣುತ್ತೇವೆ. ಇಲ್ಲಿ ಗಂಡ, ಭಾವ, ಅತ್ತೆ, ಮಾವ ಇವರನ್ನು ಹೊರತುಪಡಿಸಿ ಉಳಿದವರನ್ನು ಸೂಚಿಸುವಾಗ ಅವರ ಜೊತೆಗಿನ ಸಂಬಂಧದ ನಿಕಟತೆ ಪ್ರಮುಖ ಸಂಗತಿಯಾಗಿದೆ. ಇಲ್ಲೂ ತಮಗಿಂತ ಹಿರಿಯರಾದ ಹೆಂಗಸರಿ ಗಿಂತ ಗಂಡಸರನ್ನು ಸೂಚಿಸುವಾಗ 'ನೀವು' ಎನ್ನವುದು ಹೆಚ್ಚಾಗಿರುವುದು ಕಂಡುಬರುತ್ತದೆ.

ಸಾಮಾಜಿಕ ನೆಲೆಯಲ್ಲಿ ನೋಡುವುದಾದರೆ ತಮಗಿಂತ ಮೇಲುಜಾತಿಯವರನ್ನು 'ನೀವು' ಎನ್ನುವುದು ಕಂಡುಬರುತ್ತದೆ. ಮೇಲುಜಾತಿಗೆ ಸೇರಿದವರು ತಮಗಿಂತ ಕೆಳಗಿರುವವರನ್ನು 'ನೀನು' ಎನ್ನುತ್ತಾರೆ. ಈ ಪ್ರವೃತ್ತಿ ಈಚಿನ ದಿನಗಳಲ್ಲಿ ನಿಧಾನವಾಗಿ ಬದಲಾಗುತ್ತಿರುವುದು ಕಂಡುಬರುತ್ತದೆ. ಬೇರೆ ಬೇರೆ ಜಾತಿಗಳಿಗೆ ಸೇರಿದವರು ಪರಸ್ಪರರನ್ನು ಗೌರವದಿಂದ 'ನೀವು' ಎನ್ನಲು ಆರಂಭಿಸಿದ್ದಾರೆ. ಈ 'ನೀವು' ಅಥವಾ 'ನೀನು'ಗಳಿಗೆ ಅನುಗುಣವಾಗಿ ಕ್ರಿಯಾಪದ ಪಡೆಯುವ ವಚನ ಪ್ರತ್ಯಯಗಳೂ ಬದಲಾಗುತ್ತವೆ.

೬.೩.೭. ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ದಾರಿಯಲ್ಲಿ ಮಿತ್‌ಗಳ ರಚನೆ

ಶ್ರೇಣೀಕರಣದ ಭಿನ್ನ ಹಂತಗಳಲ್ಲಿರುವ ಸಮುದಾಯಗಳು ಕತೆಗಳನ್ನು ಕಟ್ಟುವುದರ ಮೂಲಕ ತಮ್ಮ ಈಗಿನ ನೆಲೆಯನ್ನು ಸಮರ್ಥಿಸಿಕೊಳ್ಳುವುದರ ಜೊತೆಗೆ ಶ್ರೇಷ್ಠತೆಯನ್ನು ಸ್ಥಾಪಿಸಿಕೊಳ್ಳುತ್ತವೆ. ವಾಸ್ತವದಲ್ಲಿ ಇಲ್ಲದ ಸ್ಥಾನ ಮತ್ತು ನಿಕಟತೆಯನ್ನು ಇವರು ಭಾಷಿಕವಾಗಿ

ಕತೆಗಳ ಮೂಲಕ ಸ್ಥಾಪಿಸಿಕೊಳ್ಳುವ ಬಗೆ ಭಾಷೆ ಮತ್ತು ಸಂಸ್ಕೃತಿ ನಡುವಣ ಸಂಬಂಧದ ದೃಷ್ಟಿಯಿಂದ ಕುತೂಹಲಕರವಾದುದು. ಹೀಗೆ ಪ್ರತಿಯೊಂದು ಜಾತಿಗೂ ಈ ಬಗ್ಗೆ ಅದರದ್ದೇ ಆದ ನಂಬಿಕೆ ಇರುವುದನ್ನು ಗಮನಿಸಬಹುದು.

'ವಿರಾಟ್ ಪುರುಷ'ನ ಮುಖದಿಂದ ತಾವು ಹುಟ್ಟಿದವರು ಎನ್ನುವುದಕ್ಕೆ ಬ್ರಾಹ್ಮಣರು ಪುರುಷ ಸೂಕ್ತವನ್ನು ಉಲ್ಲೇಖಿಸುತ್ತಾರೆ. ಇತರ ಸಮುದಾಯದವರೂ ಬ್ರಾಹ್ಮಣರು ಭೂಮಿಯ ಮೇಲಿನ ದೇವತೆಗಳು ಎಂದು ಭಾವಿಸಿದ್ದರು. ಬ್ರಾಹ್ಮಣರ ಶಾಪ ತಟ್ಟುತ್ತದೆ, ಅವರಾಡಿದ ಮಾತು ನಿಜವಾಗುತ್ತದೆ ಎಂಬ ಭಾವನೆ ಜನರಲ್ಲಿದ್ದುದು ಕಾಣುತ್ತದೆ. ಮೊಗವೀರರು ತಾವು ವಿರಾಟನ ವಂಶದವರು ಎಂದು ಕತೆ ಹೇಳುತ್ತಾರೆ. ಬಿಲ್ಲವರು ಮಹಾಭಾರತದ ಕೀಚಕ ಪೂಜಾರಿ ಜಾತಿಗೆ ಸೇರಿದವ ಎನ್ನುತ್ತಾರೆ. ಆಯಾ ಜಾತಿಯವರಿಗೆ ಆಯಾ 'ಕುಲಕಸುಬು' ಏಕೆ ಬಂತು ಎಂಬುದರ ಬಗ್ಗೂ ಅವರು ಕೊಡುವ ಕಾರಣಗಳು ವಿಶಿಷ್ಟವಾಗಿವೆ. ಮೊಗವೀರರು ಮತ್ತು ಬಿಲ್ಲವರಿಗೆ ದೇವರು 'ಕಡ್ಲ್' ಬೇಕಾ 'ಮಡ್ಲ್' ಬೇಕಾ ಎಂದು ಕೇಳಿದಾಗ ಮೊಗವೀರರು 'ಕಡ್ಲ್'ಬೇಕು, ಬಿಲ್ಲವರು 'ಮಡ್ಲ್' ಬೇಕು ಎಂದ ಕಾರಣ ಕಡಲಿನ ಕೆಲಸ ಮೊಗವೀರರಿಗೂ, ಕಳ್ಳು ತೆಗೆಯುವ, ಹನೆ ಮರದ ರಸದಿಂದ ಬೆಲ್ಲ ಮಾಡುವ ಕೆಲಸ ಬಿಲ್ಲವರ ಪಾಲಿಗೆ ಬಂತು ಎಂದು ಹೇಳುತ್ತಾರೆ. ಹಾಗೆಯೇ ಬಂಟರು ಮತ್ತು ಮೊಗವೀರರಿಗೆ 'ಕಟ್ಟಪ್ಪ ಕಡ್ಲ್' ಬೇಕಾ 'ಕಟ್ಟಿಲ್ಲದ ಕಡ್ಲ್' ಬೇಕಾ ಎಂದಾಗ ಅವರ ಆಯ್ಕೆಯಿಂದ ಕೃಷಿ ಕೆಲಸ ಬಂಟರಿಗೆ ಕಡಲಿನ ಕೆಲಸ ಮೊಗವೀರರಿಗೆ ಎಂದಾಯಿತು ಎಂದು ಹೇಳುತ್ತಾರೆ.

ಬಂಟರು, ಬಿಲ್ಲವರು, ನಾಯಿರಿ ಸಮುದಾಯಗಳು ತಾವು ಕ್ಷತ್ರಿಯರಾಗಿದ್ದವರು ಎನ್ನುತ್ತಾರೆ. 'ಬಂಟರು' ಹೆಸರೇ ಹೇಳುವ ಹಾಗೆ ತಾವು ಆಳುವ ವರ್ಗಕ್ಕೆ ಬಂಟರಾಗಿದ್ದವರು ಎಂದರೆ, ನಾಯಿರಿಯವರಲ್ಲಿ ವಯಸ್ಸಿಗೆ ಬಂದ ಹುಡುಗರಿಗೆ ಕೈಯಕ್ಕಿ ಖಡ್ಗ ಹಿಡಿಸುವ 'ಕೈದ ಪ್ರಸ್ತ' ಎಂಬ ಆಚರಣೆ ಇದೆ. ಇವರು ತಮ್ಮ ಮೂಲವನ್ನು ಪಂಚಪಾಂಡವರಲ್ಲಿ ಹುಡುಕುತ್ತಾರೆ. ಬಿಲ್ಲವರು ತಮ್ಮ ಹೆಸರಿನಲ್ಲಿಯೇ 'ಬಿಲ್ಲು' ಇದೆ ಮತ್ತು ಅವರಿಗಿರುವ ಇನ್ನೊಂದು ಹೆಸರಾದ 'ಹಳೆ ಪೈದರು' ಎಂಬುದರ ಮೂಲ ರೂಪ 'ಹಳೆ ಪಾಯ್ದಳ' ಎಂದು ಅವರು ಹೇಳುತ್ತಾರೆ. ಇದರಲ್ಲಿ ಐತಿಹಾಸಿಕ ಸತ್ಯ ಒಂದಷ್ಟು ಇರುವ ಸಾಧ್ಯತೆ ಇದ್ದರೂ ಸಮುದಾಯಗಳು ತಾವು ಕ್ಷತ್ರಿಯರು ಎಂದು ಹೇಳಿಕೊಳ್ಳುವುದು ಅಖಿಲ ಭಾರತ ವ್ಯಾಪ್ತಿಯಲ್ಲಿ ಕಂಡುಬರುವ ವಿದ್ಯಮಾನ. ಇದನ್ನು ಗೌರಾಂಗ್ ಸಹಾಯ್ ತಮ್ಮ ಲೇಖನವೊಂದರಲ್ಲಿ ಚರ್ಚಿಸುತ್ತಾ "ಭಾರತದ ಬಹುತೇಕ ಜಾತಿಗಳು ಪರಿಶಿಷ್ಟ ಜಾತಿಗಳೂ ಸೇರಿದಂತೆ ತಮ್ಮನ್ನು ಶೂದ್ರರೆಂದು ಗುರುತಿಸಿಕೊಳ್ಳುವ ಬದಲಾಗಿ ಕ್ಷತ್ರಿಯರೆಂದು ಗುರುತಿಸಿಕೊಳ್ಳುತ್ತಾರೆ. ಇಂತಹ ವಿದ್ಯಮಾನವನ್ನು ಮಡಿ ಮೈಲಿಗೆ

ತತ್ವವನ್ನು ಆಧಾರವಾಗಿರಿಸಿಕೊಂಡ ಎಲ್ಲವನ್ನೂ ಒಳಗೊಳ್ಳುವ ಸಂಸ್ಕೃತೀಕರಣದ ಭಾಗವಾಗಿ ನೋಡುವುದು ಸಾಧ್ಯವಿಲ್ಲ. ಗ್ರಾಮಗಳ ಪ್ರತಿಯೊಂದು ಜಾತಿಯೂ ಅತ್ಯಂತ ತಳಸಮುದಾಯ ದವರೂ ಒಳಗೊಂಡಂತೆ ಪ್ರತಿ ಸಮುದಾಯವೂ ಧಾರ್ಮಿಕ ನೆಲೆಯಲ್ಲಿ ಪರಿಶುದ್ಧ ಎಂದೇ ಪರಿಭಾವಿಸುತ್ತದೆ"(Gupta Dipankar;2004;p:119-120).

ಪರಿಶಿಷ್ಟ ವರ್ಗಕ್ಕೆ ಸೇರಿದ ಬತ್ತಾಡರು ತಮ್ಮನ್ನು ಲಿಂಗಾಯಿತರೆಂದು ಕರೆದುಕೊಳ್ಳುತ್ತಾರೆ. ಕೋಟಿಲಿಂಗನ ದರ್ಶನಕ್ಕೆಂದು ಬಂದ ಘಟ್ಟದ ಕೆಳಗೆ ಪತಿಯೊಡಗೂಡಿ ಬಂದ ಅಕ್ಕತಂಗಿಯರಿಬ್ಬ ರಲ್ಲಿ ತಂಗಿ ಬಸಿರಾಗಿದ್ದಳು. ಮರಳಿ ಹೋಗುವಾಗ ಕೋಟೇಶ್ವರ ಕೆರೆಯಲ್ಲಿ ಮೀನು ನೋಡಿ ಗರ್ಭಿಣಿಗೆ ತಿನ್ನಲು ಆಸೆಯಾಯಿತಂತೆ. ಅವಳು ಹಾಗೆ ಮೀನು ತಿಂದ ಕಾರಣ ತಂಗಿಯ ಮಕ್ಕಳು ಬತ್ತಾಡರಾಗಿ ಘಟ್ಟದ ಕೆಳಗೇ ಉಳಿದುಕೊಂಡರು, ಅಕ್ಕನ ಮಕ್ಕಳು ಘಟ್ಟದ ಮೇಲೆ ಲಿಂಗಾಯತರಾಗಿ ಉಳಿದರು ಎಂದು ಅವರು ಹೇಳುತ್ತಾರೆ. ತಾವು 'ಬಗತರು' ಅಂದರೆ ಭಕ್ತರು, ಅದೇ ಪದ ಬತ್ತಾಡವಾಗಿ ನಂತರದಲ್ಲಿ ಪರಿವರ್ತನೆ ಹೊಂದಿತು ಎಂದೂ ಅವರು ನಿರೂಪಿಸುತ್ತಾರೆ.

ಇದರ ಜೊತೆಗೆ ತಮಗೂ ಬ್ರಾಹ್ಮಣರಿಗೂ ಹಿಂದೊಮ್ಮೆ ಇದ್ದ ನಿಕಟತೆಯನ್ನು ಸಾರುವ ಕತೆಗಳು ಪ್ರತಿ ಸಮುದಾಯದಲ್ಲೂ ಇವೆ. ಬಿಲ್ಲವರು ಮತ್ತು ಬಂಟರು 'ಬ್ರಾಹ್ಮಣರು ಮತ್ತು ತಾವು ಒಂದೇ ಬಾಳೆ ಎಲೆಯಲ್ಲಿ ಊಟ ಮಾಡಲು ಕುಳಿತದ್ದು, ಬ್ರಾಹ್ಮಣರು ಕೌಳಿಗೆ ಸೌಟಿನಿಂದ ಬಿಟ್ಟ ನೀರಿನಿಂದ ಬಾಳೆ ಎಲೆಯ ಮಧ್ಯೆ ಓಣಿಯಾದದ್ದು, ಬಳಿಕ ಆ ಸಂಬಂಧ ದೂರವಾದದ್ದು' ಎಂಬ ಕತೆ ಹೇಳುತ್ತಾರೆ. ಬ್ರಾಹ್ಮಣ ಹೆಣ್ಣಾದ ದೇಯಿಯನ್ನು ಬಿಲ್ಲವನಾದ ಕಾಂತನಬೈದ ಮದುವೆಯಾದ ಕಾರಣ ತಾವೂ ಬ್ರಾಹ್ಮಣರೂ ಹತ್ತಿರದವರು ಎಂದು ಬಿಲ್ಲವರು ಹೇಳುತ್ತಾರೆ. ಹಿಂದೆ ಬ್ರಾಹ್ಮಣರು ಕರಾವಳಿಗೆ ಬಂದಾಗ ತಮ್ಮ ಪರಿವಾರವನ್ನು ಕರೆತಂದಿರಲಿಲ್ಲವಂತೆ. ಅವರು ಇಲ್ಲೇ ನೆಲೆಸಿದ ಸಂದರ್ಭದಲ್ಲಿ ಇಲ್ಲಿನ ಮೊಗವೀರ ಹೆಣ್ಣುಗಳನ್ನು ಮದುವೆಯಾದರಂತೆ. ಅದಕ್ಕೆ ಇತ್ತೀಚಿನವರೆಗೂ ಬ್ರಾಹ್ಮಣರ ಮದುವೆಗಳಲ್ಲಿ ನಾಲ್ಕನೆಯ ದಿನ 'ನಾಗೋಲಿ ಪ್ರಸ್ತ'ದಂದು ಗಂಡು ಹೆಣ್ಣು ಮೀನು ಹಿಡಿಯುವುದನ್ನು ನಟಿಸುವ ಆಚರಣೆ ಇದೆ ಎನ್ನಲಾಗುತ್ತದೆ. ಮೊಗವೀರರು ಈ ಕತೆಯನ್ನು ಎತ್ತಿ ಹಿಡಿದು ತಮಗೂ ಬ್ರಾಹ್ಮಣರಿಗೂ ಇರುವ ನಿಕಟತೆಯನ್ನು ನಿರೂಪಿಸುತ್ತಾರೆ.

ಹೀಗೆ ಈ ಕತೆಗಳು ಹಿಂದೊಮ್ಮೆ ಇದ್ದ ಶ್ರೇಷ್ಠ ಸ್ಥಾನವನ್ನು ಹೇಳುತ್ತಲೇ ಇಂದು ಸಾಮಾಜಿಕವಾಗಿ ಅವರು ಕೆಳಗೆ ಬರುವುದಕ್ಕೆ ಕಾರಣವಾದ ಸಂಗತಿಗಳನ್ನೂ ತಮ್ಮೊಳಗೆ ಇಟ್ಟುಕೊಂಡಿರುತ್ತವೆ. ಇವು ಏಕಕಾಲಕ್ಕೆ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವ ಬಗೆಯಾಗಿಯೂ, ಈಗ ಇರುವ ಶ್ರೇಣೀಕರಣವನ್ನು ಸಮರ್ಥಿಸಿಕೊಳ್ಳುವ ಬಗೆಯಾಗಿಯೂ ಕಾಣುತ್ತವೆ. ಕತೆಗಳಲ್ಲಿನ ಈ ವೈರುದ್ಧ್ಯಗಳಿಂದಾಗಿ ಈ ಬಗ್ಗೆ ಸರಳ ತೀರ್ಮಾನಕ್ಕೆ ಬರುವುದು ಕಷ್ಟವಾಗುತ್ತದೆ.

ಉದಾಹರಣೆಗೆ, ಬಿಲ್ಲವರಿಗೆ ಹಿಂದೆ ಇದ್ದ ಶ್ರೇಷ್ಠ ಸ್ಥಾನಮಾನ ನಂತರ ಇಲ್ಲವಾದುದಕ್ಕೆ ಹೇಳುವ ಕತೆಗಳನ್ನು ಗಮನಿಸಿದರೆ ಇದನ್ನು ಚೆನ್ನಾಗಿ ಅರ್ಥೈಸಿಕೊಳ್ಳಬಹುದು.

"ಬಿಲ್ಲವರು ಸೇಂದಿ ತೆಗೆಯುವಾಗ ತೆಂಗಿನ ಮರದ ಹೊಸ ಕೊನೆಯೊಂದಕ್ಕೆ ಸತ್ತ ಹೋರಿಯ ಕೊಂಬಿನಲ್ಲಿ ಹೊಡೆದುದರಿಂದ ಶಿವನ ಅವಕೃಪೆಗೆ ಪಾತ್ರರಾಗಿ ದೂರಿನವರಾದರು. ಸತ್ತ ಹೋರಿಯ ಕೊಂಬಿನ ಬಳಕೆಯಾದುದರಿಂದ ಆ ಕಳ್ಳು ಕೂಡಾ ಅಶುದ್ಧವಾಗಿ ಬರೀ ಭೂತಗಳ ಪಾಲಾಯಿತಂತೆ"(ಮಯ್ಯ.ಪಾ.ನ; ೧೯೫೫; ಪು:೬೨)

ಅಂಥದ್ದೇ ಇನ್ನೊಂದು ಕತೆ ಬಿಲ್ಲವರು ತಿರುಪತಿಯ ಕಾವೇರಿ ದರ್ಶನಕ್ಕೆ ಹೋದದ್ದು. ಅಲ್ಲಿ ಇವರು ದೇವರ ದರ್ಶನಕ್ಕಾಗಿ ಕಾಯುತ್ತಿದ್ದಾಗ ಮಧ್ಯಾಹ್ನದ ಹೊತ್ತಾಯಿತಂತೆ. ಬಿಸಿಲು ನೋಡಿ ಬಿಲ್ಲವರು 'ಮರ ಹತ್ತುವ ಹೊತ್ತಾಯ್ತು' ಎಂದುಕೊಂಡರಂತೆ. ಇವರು ಈ ಹೊತ್ತಿನಲ್ಲೂ ತಮ್ಮ ಗುಣ ಬಿಟ್ಟುಕೊಡಲಿಲ್ಲ ಎಂದು ಕುಪಿತರಾದ ದೇವರು ಶಾಪಕೊಟ್ಟ ಕಾರಣ ಅವರು ಕೆಳಹಂತಕ್ಕೆ ಬಂದರಂತೆ.

ಇವು ಹಿಂದೆ ಆ ಜಾತಿಯವರಿಗಿದ್ದ ಉನ್ನತ ಸ್ಥಾನವನ್ನು ಸಾರುವ ಮೂಲಕ ವರ್ತಮಾನದಲ್ಲಿ ಅವರು ಸ್ವಾಭಿಮಾನ ಗಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ ಅದೇ ಸಂದರ್ಭದಲ್ಲಿ ಅವರು ಕೆಳಕ್ಕಿಳಿಯಲು ಕಾರಣವಾದ ಸಂಗತಿಯನ್ನು ಹೇಳುತ್ತಾ ಶ್ರೇಣೀಕರಣವನ್ನು ಬಲಗೊಳಿಸುತ್ತದೆ.

ಜೊತೆಗೆ, ಸೃಷ್ಟಿ ಕುರಿತಂತೆ ಇರುವ ಎರಡು ಪರ್ಯಾಯ ಕಥಾನಕಗಳೂ ಸಮಾಜವನ್ನು ಬೇರೆ ಬೇರೆ ನೆಲೆಗಳಿಂದ ನೋಡಲು ಹಚ್ಚುತ್ತವೆ. ಸೃಷ್ಟಿಪುರಾಣಗಳಲ್ಲಿ ಮೊದಲನೆಯದು ವೈದಿಕ ಪಠ್ಯಗಳಲ್ಲಿ ಬರುವ ಬ್ರಹ್ಮನಿಂದ ಜಗತ್ತು ಸೃಷ್ಟಿಯಾದ ಕಥೆ. ಇದಕ್ಕೆ ಪರ್ಯಾಯವಾಗಿ ಜಗತ್ತೆಲ್ಲ ಪ್ರಳಯದಿಂದ ಕೊಚ್ಚಿ ಹೋಗಿ ಒಂದು ಕೊರಗರ ಜೋಡಿ ಡೋಲೊಳಗೆ ಕುಳಿತು ಮತ್ತೆ ಅವರಿಂದ ವಿವಿಧ ಸಮುದಾಯಗಳು ಸೃಷ್ಟಿಯಾಯಿತು ಎಂದು ಹೇಳುತ್ತವೆ. ಈ ಎರಡನೇ ಕಥಾನಕವನ್ನು ಹೀಗೆ ವಿಶೇಷಿಸಲಾಗಿದೆ. "ಕೊರಗರ ಪುರಾಣದಲ್ಲಿ ಒಟ್ಟು ಏಳು ಆಶಯಗಳಿವೆ. ೧. ಭೂಮಿಗೆ ಮೊದಲು ಬರೀ ನೀರು ೨. ಬೆತ್ತಲೆ ಗಂಡು-ಹೆಣ್ಣು ೩. ನಾರಾಯಣ ದೇವರು ೪. ಅಣ್ಣ ತಂಗಿ ಗಂಡ ಹೆಂಡಿರಾಗುವುದು ೫. ಮುನ್ನೂರು ಮಕ್ಕಳು ೬. ನಾಲ್ಕು ವರ್ಣಗಳ ಸೃಷ್ಟಿ ೭. ಕಟ್ಟಕಡೆಯವರು ಕೊರಗರಾಗಿ ಪಾಲಕರನ್ನು ಆಶ್ರಯಿಸುವುದು ತಮ್ಮನ್ನು ಅಸ್ಪೃಶ್ಯರಲ್ಲಿ ಅಸ್ಪೃಶ್ಯರನ್ನಾಗಿಸಿ 'ಅಜಲು'ವಿನಂತ ನಿಕೃಷ್ಟ ಕೆಲಸಗಳಿಗೆ ನಿಯೋಜಿಸಿದ ಈ ನಾಲ್ಕು ವರ್ಣಗಳ ಜನರಿಗೆ ತೋರಿದ ತೀವ್ರ ಪ್ರತಿಕ್ರಿಯೆ ಇದು. ಎಲ್ಲ

ನಾಲ್ಕು ವರ್ಣದವರ ಆಶ್ರಯದಲ್ಲಿಯೇ ಬೆಳೆಯಬೇಕಾದ ದುಸ್ಥಿತಿಗೆ ತಂದ ಸಮಾಜಕ್ಕೆ ತಮ್ಮ ಸ್ಥಿತಿಯನ್ನು ಹೇಳಿಕೊಳ್ಳುತ್ತಿರುವ ರೀತಿ ಇದು"(ಬೋರಲಿಂಗಯ್ಯ.ಹಿ.ಚಿ;೨೦೦೧;ಪು.೭೬-೭೭).

ಈ ಸೃಷ್ಟಿ ಪುರಾಣವನ್ನು ಕೊರಗರು ಮಾತ್ರವಲ್ಲ, ಇತರ ಬ್ರಾಹ್ಮಣೇತರ ಸಮುದಾಯಗಳೂ ಹಂಚಿಕೊಳ್ಳುತ್ತವೆ. ಹೀಗೆ ನಾವು ಅವರ ಮಕ್ಕಳಾದುದರಿಂದ ನಮ್ಮ ಎಂಜಲು ಅವರು ತಿನ್ನಬಹುದು ಎಂದೂ ಅಲ್ಲಿನ ಜನ ಹೇಳುತ್ತಾರೆ. ಇದು ಕೊರಗರನ್ನು ವಾಸ್ತವದಲ್ಲಿರುವ ಅತ್ಯಂತ ಹೀನಾಯ ಸ್ಥಿತಿಯಿಂದ ಮೇಲೇರಿಸುವ ಆಶಯ ಹೊಂದಿರುವ ಕತೆ ಎಂದು ಕಂಡರೂ ಇತರ ಸಮುದಾಯಗಳು ಅದನ್ನು ನಿರೂಪಿಸುವ ರೀತಿ ಶ್ರೇಣೀಕರಣದ ಸಮರ್ಥನೆ ಯಂತೆ ಕಾಣುತ್ತದೆ.

೬.೩.೮. ಶ್ರೇಣೀಕೃತ ನೆಲೆಯಿಂದ ಅಸ್ಮಿತೆಯೆಡೆಗೆ

ಶ್ರೇಣೀಕರಣದ ಸೂಚಕವಾಗಿದ್ದ ಜಾತಿನಾಮಗಳು ಅಸ್ಮಿತೆಯ ಸೂಚಕಗಳಾಗಿ ಬದಲಾಗುತ್ತಿ ರುವುದನ್ನು ಆಧುನಿಕ ಸಂದರ್ಭದಲ್ಲಿ ಗಮನಿಸಬಹುದು. ದೀಪಾಂಕರ್ ಗುಪ್ತ ಸಂಪಾದಿಸಿದ 'Caste in Question: Identity of Hierarchy?' ಪುಸ್ತಕದ ಪ್ರಸ್ತಾವನೆಯಲ್ಲಿ ಬದಲಾಗುತ್ತಿರುವ ಜಾತಿಯ ಸ್ವರೂಪ ಕುರಿತು ಚರ್ಚಿಸುತ್ತಾ ಅವರು "ತಮ್ಮ ಜಾತಿ ಅಸ್ಮಿತೆಯ ಬಗೆಗಿನ ಅಭಿಮಾನ ಜಾತಿಯ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದುದು"(Gupta Dipankar;2004;p:vii) ಎನ್ನುತ್ತಾರೆ. ಶ್ರೇಣೀಕರಣಕ್ಕೆ ಮುಖಾಮುಖಿಯಾಗುತ್ತಲೇ ಸಮುದಾಯಗಳು ತೋರುವ ಪ್ರವೃತ್ತಿ ಇದು. ಬಳಿಗಳ ಮೂಲಕ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದ ಜಾತಿ ಸಮುದಾಯಗಳು ಬಳಿಯನ್ನು ಸೂಚಿಸುವ ಉಪನಾಮಗಳನ್ನು ತಮ್ಮ ಹೆಸರಿನ ಮುಂದೆ ಇತ್ತೀಚಿನ ದಿನಗಳಲ್ಲಿ ಹಾಕಿಕೊಳ್ಳಲು ಆರಂಭಿಸಿದ್ದಾರೆ. ಉದಾಹರಣೆಗೆ, ಮೊಗವೀರರು ತಮ್ಮ ಹೆಸರುಗಳ ಮುಂದೆ ಕಾಂಚನ್, ಕುಂದರ್, ಅಂಚನ್, ಚಂದರ್ ಎಂದು ಹಾಕಿಕೊಳ್ಳಲು ಆರಂಭಿಸಿದರೆ ಬಿಲ್ಲವರು ಸಾಲಿಯಾನ್, ಅಮೀನ್, ಸುವರ್ಣ ಎಂದು ಹೆಸರಿನ ಮುಂದೆ ಹಾಕಿಕೊಳ್ಳುತ್ತಾರೆ. ಪರಿಶಿಷ್ಟ ಜಾತಿಯಡಿಯಲ್ಲಿ ಬರುವ ಬತ್ತಾಡರು ತಾವು ಮೂಲತಃ ಲಿಂಗಾಯಿತರೆಂದು ಹೇಳಿಕೊಳ್ಳುತ್ತಾರೆ ಮತ್ತು ಇವರು ತಮ್ಮನ್ನು ಇಂದು ಆದಿದ್ರಾವಿಡರೆಂದು ಹೆಸರಿಸಿಕೊಳ್ಳುತ್ತಾರೆ.

ಸಂಶೋಧನೆಯ ಸಂದರ್ಭವನ್ನು ಹೊರತುಪಡಿಸಿ ಇತರ ಸಾಮಾಜಿಕ ಸಂದರ್ಭಗಳಲ್ಲಿ ಇಂದು 'ಕೂಸಾಳ್' ಮತ್ತು 'ಕೊರಗರು' ಎಂಬ ಪದವನ್ನು ಹೇಳುವಂತಿಲ್ಲ ಎಂದು ಕಾನೂನು ಇದೆ. ಜನರೂ ತಮ್ಮೊಳಗೆ ಮಾತಾಡಿಕೊಳ್ಳುವಾಗ ಹಿಂದಿನ ಪ್ರಭಾವದಿಂದ ಬಿಡಿಸಿಕೊಳ್ಳಲಾಗದೆ ಹಾಗೆ ಹೇಳುತ್ತಾರೆಯೇ ಹೊರತು ಸಾರ್ವಜನಿಕ ವಲಯದಲ್ಲಿ ಹಾಗೆ ಹೇಳುವುದು ಸರಿಯಲ್ಲ ಎಂಬ ತಿಳುವಳಿಕೆ ಮತ್ತು ಎಚ್ಚರ ಹೊಂದಿರುವುದು ಕಾಣುತ್ತದೆ.

ಅಲ್ಲದೆ, ಸಂಬೋಧನೆಯ ನೆಲೆಯಲ್ಲೂ ಬದಲಾವಣೆಗಳಾಗಿರುವುದನ್ನು ಗಮನಿಸಬಹುದು. ಇಂದು ಜಾತಿಯ ಆಧಾರದಲ್ಲಿ ಏಕವಚನ ಬಳಸುವುದು, ಹೆಸರು ಹೇಳಿ ಕರೆಯುವುದು ನಿಧಾನವಾಗಿ ಕಡಿಮೆಯಾಗುತ್ತಿದೆ. ವಿದ್ಯಾವಂತರು ಮತ್ತು ಆರ್ಥಿಕವಾಗಿ ಬಲಾಢ್ಯರಾಗಿರುವವರನ್ನು ಸರಿಸಮಾನವಾಗಿ ನೋಡುವ ಕ್ರಮ ಆರಂಭವಾಗಿದೆ. ಆರ್ಥಿಕವಾಗಿ ಒಂದೇ ಸ್ತರದಲ್ಲಿರುವವರು ಭಟ್ರೇ ಶೆಟ್ರೇ ಎಂದರೂ ಅದು ಗುರುತಿಸುವಿಕೆಯೇ ಹೊರತು ಶ್ರೇಣೀಕರಣ ಸೂಚಿಸುವ ಸಂಗತಿಯಲ್ಲ ಎಂಬುದನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಹಾಗೆಯೇ ಶ್ರೇಣೀಕರಣ ಸೂಚಕವಾಗಿದ್ದ ಸರ್ವನಾಮ ಮತ್ತು ಪ್ರತ್ಯಯಗಳು ಇಂದು ಗೌರವಸೂಚಕಗಳಾಗಿ ಬದಲಾಗಿವೆ.

೬.೩.೯. ಭಾಷೆ ಮತ್ತು ಪ್ರತಿಷ್ಠೆಯ ಪ್ರಶ್ನೆ

ಪ್ರತಿಯೊಂದು ಭಾಷಿಕ ಸಮುದಾಯಕ್ಕೂ ತನ್ನ ಭಾಷೆ ಮತ್ತು ಸುತ್ತಲಿನ ಇತರ ಭಾಷೆಗಳ ಬಗ್ಗೆ ಶ್ರೇಷ್ಠ–ಕನಿಷ್ಠ ಎಂಬ ತರತಮ ಭಾವ ಇರುತ್ತದೆ. ಆಡುನುಡಿಗಳ ಸಂದರ್ಭದಲ್ಲಿ 'ಶಿಷ್ಟ'ಭಾಷೆ, 'ಗ್ರಾಮ್ಯ' ಭಾಷೆಯ ಪರಿಕಲ್ಪನೆಯೇ ಈ ತರತಮ ಭಾವದ ಆಧಾರದಲ್ಲಿ ರೂಪಿತವಾಗಿದೆ. "ಕುಂದಾಪುರ ಕೋಟ ಪರಿಸರದ ಸಾಮಾನ್ಯವಾಗಿ ಎಲ್ಲ ವರ್ಗಗಳ ಜನರು ತಮ್ಮ ಆಡುಮಾತು ಕ್ಷುಲ್ಲಕವಾದುದೆಂದೂ ವಿದ್ಯಾವಂತರೆದುರು ಆಡತಕ್ಕದ್ದಲ್ಲವೆಂದೂ ಮನೆಯೊಳಗೆ, ಮನೆಹೊರಗೆ ಗ್ರಾಂಥಿಕ ಕನ್ನಡವನ್ನು ಆಡುವುದು ಗೌರವವೆಂದೂ ಭಾವಿಸುತ್ತಾರೆ" (ಗಾಯತ್ರೀ ನಾವಡ, ೧೯೯೧:೪೯) ಎಂಬುದು ಎಲ್ಲ ಒಳನುಡಿಗಳ ಸಂದರ್ಭದಲ್ಲಿ ಅನ್ವಯವಾಗುವ ಸಂಗತಿ. ಗುಂಡ್ಮಿ ಚಂದ್ರಶೇಖರ ಐತಾಳರೂ "ಜನಪದ ಗೀತೆಗಳನ್ನು ಹೇಳುವವರು ತಮ್ಮ ಗ್ರಾಮ್ಯ ರೂಪಗಳನ್ನು ಹೇಳಲು ಸಂಕೋಚಪಟ್ಟು ವಿದ್ಯಾವಂತರೊಡನೆ ತಮ್ಮಿಂದ ಸಾಧ್ಯವಾದಷ್ಟು ತಿದ್ದಿ ಗ್ರಾಂಥಿಕ ಕನ್ನಡ"(ಗುಂಡ್ಮಿ ಚಂದ್ರಶೇಖರ ಐತಾಳ; ೧೯೭೩; ಪು:೩೮)ದಲ್ಲಿ ಹೇಳುವುದನ್ನು ಗುರುತಿಸಿದ್ದಾರೆ. ಇದನ್ನು ಭಾಷಿಕ ಕೀಳರಿಮೆ ಅಥವಾ ಅಭದ್ರತೆ[3] ಎಂದು ಗುರುತಿಸಲಾಗುತ್ತದೆ. ಪ್ರಮಾಣ ಕನ್ನಡವೇ 'ಶುದ್ಧ' ಕನ್ನಡ ಎಂದು ಭಾವಿಸುವುದು ಕಾಣುತ್ತದೆ. ಪ್ರಮಾಣ ಕನ್ನಡವನ್ನು ಮಾನದಂಡವಾಗಿರಿಸಿಕೊಂಡು ಶುದ್ಧ ಅಶುದ್ಧ ಕಲ್ಪನೆಗಳು ಹುಟ್ಟಿಕೊಳ್ಳುತ್ತವೆ.

ಈ ಶುದ್ಧ ಅಶುದ್ಧ ಪ್ರಕೃತಿ ಮತ್ತು ಸಂಸ್ಕೃತಿ ಎಂಬ ಕಲ್ಪನೆ ಅಶುದ್ಧವಾದುದನ್ನು ಸಂಸ್ಕರಿಸಬೇಕು ಎಂಬ ನಿಲುವಿಗೆ ಕಾರಣವಾಗುತ್ತವೆ. ಈ ಭಾಗದ ಜನಪದ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿ ಭಾಷೆಯ ವೈಶಿಷ್ಟ್ಯವನ್ನು ಎಲ್ಲರೆದುರಿಟ್ಟ ಗುಂಡ್ಮಿ ಚಂದ್ರಶೇಖರ ಐತಾಳರು ಈ ಜನಪದ ಹಾಡುಗಳನ್ನು ಪರಿಷ್ಕರಿಸಲು ಹೊರಡುವ ಹಿಂದೆ ಈ ಮನೋಭಾವ ಕಾಣುತ್ತದೆ. ಈಗಿರುವುದು ಮಣ್ಣು ಮೆತ್ತಿಕೊಂಡ ಚಿನ್ನ, ಇದನ್ನು ಪರಿಷ್ಕರಿಸಿ ಅದನ್ನು ಹೊಳೆಯಿಸಬೇಕು ಎಂಬ ಕಳಕಳಿಯ ಹಿಂದಿನ ಪ್ರಾಮಾಣಿಕತೆಯನ್ನು ಪ್ರಶ್ನಿಸದಿದ್ದರೂ ಇದು

ಸಮುದಾಯದ ಜನರ ಮನೋಪ್ರವೃತ್ತಿಯ ಮೇಲೆ ಕನ್ನಡಿ ಹಿಡಿಯುತ್ತದೆ. ಇದು ಅಂದಿನ ಸಂದರ್ಭದಲ್ಲಿ ಸಾಕಷ್ಟು ವಾಗ್ವಾದಗಳಿಗೆ ಕಾರಣವಾಗಿತ್ತು.

ಈ ಶುದ್ಧ-ಅಶುದ್ಧ ಎನ್ನುವ ಭಾವನೆ ಒಳನುಡಿ ಆಡುವ ಎಲ್ಲರಲ್ಲೂ ಇರುವ ಭಾವನೆಯೇ ಆದರೂ ಮೇಲ್‌ಜಾತಿಯವರ ಭಾಷೆ ಪ್ರಮಾಣಕ್ಕೆ ಹೆಚ್ಚು ಹತ್ತಿರವಾಗಿರುತ್ತದೆ ಮತ್ತು ಸಮುದಾಯದೊಳಗೆ 'ಶಿಷ್ಟ' ಎನಿಸಿಕೊಂಡಿರುತ್ತದೆಯಾದ್ದರಿಂದ ಅವರಿಗಿಂತ ಕೆಳಹಂತದಲ್ಲಿರುವವರಿಗೆ ತಮ್ಮ ಮಾತಿನ ಬಗ್ಗೆ ಕೀಳರಿಮೆ ಹೆಚ್ಚಾಗಿರುತ್ತದೆ. ಸಮಾಜದಲ್ಲೂ, ಕೆಳಹಂತದಲ್ಲಿರುವವರ ಭಾಷೆಗೆ ಹೆಚ್ಚಿನ ಸ್ಥಾನಮಾನ ಇರುವುದಿಲ್ಲ. 'ಅದೆಂಥ ಶೂದ್ರ್ ಕಣಂಗೆ ಮಾತಾಡುದ್' ಎಂಬ ಮಾತಿನಲ್ಲಿ ಇದು ವ್ಯಕ್ತವಾಗುತ್ತದೆ. ಸಿ.ಪಿ. ನಾಗರಾಜ್ ಹೇಳುವ "ಜಾತಿಯಲ್ಲಿ ಉತ್ತಮರೆನಿಸಿಕೊಂಡವರು ಆಡುವ ಭಾಷೆಗಿರುವ ಮರ್ಯಾದೆ ಕೆಳಜಾತಿಯವರು ಆಡುವ ಭಾಷೆಗೆ ಇರುವುದಿಲ್ಲ. ಸಮಾಜದ ಜನಸಮುದಾಯದಲ್ಲಿ ವರ್ಗ ಮತ್ತು ಜಾತಿಗಳು ಪಡೆದಿರುವ ಸ್ಥಾನಮಾನಗಳನ್ನು ಸಾಮಾಜಿಕ ಉಪಭಾಷೆಗಳು ಹೊಂದಿರುತ್ತವೆ. ಈ ಉಪಭಾಷೆಗಳನ್ನು ಬಳಸುವ ವ್ಯಕ್ತಿಗಳ ಬಗ್ಗೆಯೂ ಮೇಲು ಕೀಳಿನ ಮಾನದಂಡಗಳನ್ನು ಬಳಸುವುದು ಮಾತಿನ ಸಮುದಾಯದಲ್ಲಿ ರೂಢಿಗತವಾಗಿದೆ"(ನಾರಾಯಣ.ಕೆ.ವಿ(ಸಂ);೨೦೦೫; ಪು:೩೬) ಎಂಬ ಮಾತು ಉಪಭಾಷೆಗಳ ಭಿನ್ನತೆಯಿರುವ ಸಂದರ್ಭದಲ್ಲಿ ಮಾತ್ರವಲ್ಲ ಒಳನುಡಿಯಲ್ಲೇ ಭಿನ್ನತೆ ಇರುವ ಸಂದರ್ಭಕ್ಕೂ ಅನ್ವಯಿಸುತ್ತದೆ. ಪರಿಸರದ ಇತರ ಭಾಷೆಗಳೊಂದಿಗೆ ಅನನ್ಯತೆಯನ್ನು ಉಳಿಸಿಕೊಳ್ಳುವಲ್ಲಿ ಕೋಟ ಒಳನುಡಿ ತೋರುವ ಪ್ರತಿರೋಧವನ್ನು ಪ್ರಮಾಣ ಕನ್ನಡ ಮತ್ತು ಇಂಗ್ಲಿಷ್‌ನೊಂದಿಗೆ ತೋರುವುದಿಲ್ಲ. ಅದಕ್ಕೆ ಕಾರಣವಾಗಿರುವ ಸಂಗತಿಗಳನ್ನು ಮುಂದೆ ಚರ್ಚಿಸಲಾಗಿದೆ.

ಒಟ್ಟಿನಲ್ಲಿ ಸಮುದಾಯದ ಜನರಿಗೆ ತಮ್ಮ ಒಳನುಡಿಯ ಬಗೆಗಿರುವ ಈ ಬಗೆಯ ಭಾವನೆಯಿಂದಾಗಿ ಖಾಸಗಿ ವಲಯಗಳಲ್ಲಿ ಒಳನುಡಿಯೂ, ಸಾರ್ವಜನಿಕ ವಲಯಗಳಲ್ಲಿ ಪ್ರಮಾಣ ಕನ್ನಡವೂ ಬಳಕೆಯಾಗುವಂತಹ ಸ್ಥಿತಿ ನಿರ್ಮಾಣವಾಗಿರುವುದನ್ನು ನೋಡುತ್ತೇವೆ. ಜೊತೆಗೆ ಸಾರ್ವಜನಿಕ ವಲಯಗಳಲ್ಲಿ ಒಳನುಡಿಗಳು ಮನರಂಜನೆಯ ಸರಕಾಗುತ್ತಿರುವ ವಿದ್ಯಮಾನವೂ ಇತ್ತೀಚಿನ ದಿನಗಳಲ್ಲಿ ಕಾಣುತ್ತಿವೆ. ಪ್ರಹಸನಗಳಲ್ಲಿ, ನಾಟಕಗಳಲ್ಲಿ ಪ್ರಾದೇಶಿಕವಾದ ನುಡಿ ನಗೆಯುಕ್ಕಿಸುವಲ್ಲಿ ಪ್ರಯೋಗವಾಗುತ್ತಿದೆ.

ಹಿಂದೆ ಅರಾಟೆ ಮಂಜುನಾಥ ಮತ್ತು ಬಳಗದವರು ಕುಂದಾಪ್ರ ಒಳನುಡಿಯಲ್ಲೇ ಯಕ್ಷಗಾನ ನಡೆಸುವ ಪ್ರಯತ್ನ ಮಾಡಿದ್ದ ಸಂಗತಿ ತಿಳಿದುಬರುತ್ತದೆ. ಅವರು ಆಡಿದ 'ಭೀಷ್ಮ ಪ್ರತಿಜ್ಞೆ' ಎಂಬ ಪ್ರಸಂಗದಲ್ಲಿ ಹಾಡುಗಳು ಗ್ರಾಂಥಿಕವಾಗಿದ್ದು ಸಂಭಾಷಣೆ ಒಳನುಡಿಯಲ್ಲಿತ್ತು.

ಒಳನುಡಿಯನ್ನೂ ಈ ಬಗೆಯ ವೇದಿಕೆಗೆ ತರುವ ಅರ್ಥಪೂರ್ಣ ಪ್ರಯತ್ನವಾಗಿ ಇದು ಕಾಣುತ್ತದೆ. ಜೊತೆಗೆ ಇದು ಇನ್ನೂ ಅನೇಕ ವಿಚಾರಗಳತ್ತ ನಮ್ಮ ಗಮನ ಸೆಳೆಯುತ್ತದೆ. ಇಲ್ಲಿ ಉಳಿದೆಲ್ಲ ಹಾಡುಗಳು ಗ್ರಾಂಥಿಕವಾಗಿದ್ದರೂ ಹಾಸ್ಯಗಾರನ ಹಾಡು ಒಳನುಡಿಯಲ್ಲಿತ್ತು

"ತಡವಿಲ್ಲದೆ ಬೇಗ ಹೋಯ್ಕ್
ಆಚೆ ದಡದಲ್ಲಿಪ್ಪವರನ್ನ ಕರ್ಕಂಡ್ ಬರ್ಕ್"

ಹೀಗೆ ರಂಜನೆಯ ಸಂದರ್ಭದಲ್ಲಿ ಒಳನುಡಿಗೆ ಹೊರಳುವುದನ್ನು ಗಮನಿಸಬೇಕಾಗುತ್ತದೆ. ಸಾಮಾಜಿಕವಾಗಿ ಅಧೀನ ಸ್ಥಿತಿಯಲ್ಲಿರುವವರು ತಮ್ಮ ಭಾಷೆ ಕೀಳೆಂದು ತಿಳಿಯುವುದು ಮತ್ತು ತಾವು ಸ್ಥಾನಮಾನ ತಂದುಕೊಡುತ್ತದೆ ಎಂದು ಭಾವಿಸಿದ ಭಾಷೆಯನ್ನು ತಮ್ಮದಾಗಿಸಿ ಕೊಳ್ಳುವುದನ್ನು ಕಾಣುತ್ತೇವೆ. ಇಲ್ಲೂ ತಮ್ಮ ಭಾಷೆ 'ಕೊಳ್ಕಟೆ ಬಾಸಿ', ಇದರಲ್ಲಿ ಮಾತಾಡುವುದು 'ಗಿರೇಡಿಗೆ ಕಮ್ಮಿ', ಜನ 'ನೆಗಿಯಾಡ್ತ್' ಎಂದು ಜನ ಭಾವಿಸಿರುವುದನ್ನು ಗಮನಿಸುತ್ತೇವೆ. ಹೀಗಾಗಿ ಅವರು ಬಹುಬೇಗ ಪ್ರಮಾಣ ಕನ್ನಡದತ್ತ ಒಲೆಯುತ್ತಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ 'ಪರವಾಗಿಲ್ಲ', 'ಕಣೆ', 'ಇಟ್ಟಿದೀನಿ', 'ಮಾಡ್‌ಬಿಟ್ಟು', 'ಮಾಡೋಣ' ಈ ಬಗೆಯ ಪದಗಳು ಮಧ್ಯ ವಯಸ್ಸಿನವರು, ಯುವಕರ ಭಾಷೆಯಲ್ಲಿ ಸೇರಿ ಹೋಗಿರುವುದು ಕಂಡುಬಂದಿದೆ.

೬.೩.೧೦. ಭಾಷೆ ಮತ್ತು ಮುಂಚಲನೆ

ಮೇಲ್ಚಲನೆ ಎಂಬ ಪದಕ್ಕೆ ಬದಲಾಗಿ 'ಮುಂಚಲನೆ' ಎಂಬ ಪದವನ್ನು ಬಳಸಲಾಗಿದೆ. ಮೇಲ್ಚಲನೆ ಎಂದು ಭಾವಿಸಿಕೊಂಡಾಗ ಮತ್ತೆ ಶ್ರೇಣಿಕರಣದ ಏಣಿಯಲ್ಲಿ ಮೇಲೆ ಹೋಗುವ ಪ್ರಕ್ರಿಯೆಯನ್ನು ತಿಳಿಸಿದರೆ ಮುಂಚಲನೆಯಲ್ಲಿ ಮೇಲಿನ ಸ್ಥಾನಕ್ಕೆ ಏರುವುದು ಮುಖ್ಯವಾಗದೆ ಪ್ರಗತಿಯ ದಾರಿಯಲ್ಲಿ ಸಾಗುವುದು ಮುಖ್ಯವಾಗುತ್ತದೆ. ಪ್ರಮಾಣ ಕನ್ನಡದ ಕಲಿಕೆಯ ಮೂಲಕ ಪಡೆಯುವ ಶಿಕ್ಷಣ ಮುಂಚಲನೆಗೆ ಒತ್ತು ನೀಡುವ ಪ್ರಮುಖ ಅಂಶವಾಗಿದೆ. ಹಿಂದೆ ಈ ಪ್ರದೇಶದಲ್ಲಿ ಶಾಲೆಗಳನ್ನು 'ಕನ್ನಡ ಶಾಲೆ' ಎಂದೇ ಕರೆಯುತ್ತಿದ್ದರು. ಈ ಹೆಸರೇ ಪ್ರಗತಿಗೆ ಕಾರಣವಾಗುವ ಭಾಷೆ ಮತ್ತು ತಿಳಿವು ಎರಡನ್ನೂ ಅಭಿನ್ನಗೊಳಿಸಿ ಹೇಳುವ ಕ್ರಮ ಕುತೂಹಲಕಾರಿಯಾಗಿದೆ. 'ಕನ್ನಡ ಶಾಲೆ'ಗೆ ಮೊದಲು ಇದ್ದ 'ಐನೋರ್ ಮಠ'ಗಳಲ್ಲಿ ಎಲ್ಲ ಸಮುದಾಯದವರಿಗೆ ಪ್ರವೇಶ ಇರಲಿಲ್ಲ. ಈ ನೆಲೆಯಲ್ಲಿ ಆಧುನಿಕ ಶಾಲೆಗಳು ಜಾತಿಯ ಗೆರೆಯನ್ನು ಮೀರುವ ಅವಕಾಶಗಳೂ ಆಗಿ ಬಂದಿರುವುದನ್ನು ಗಮನಿಸ ಬೇಕಾಗುತ್ತದೆ. ಈಗ ಇದರ ಜೊತೆಗೆ ಇಂಗ್ಲಿಷ್ ಕಲಿಕೆ ಕೂಡಾ ಮುಂಚಲನೆಗೆ ಪ್ರೇರೇಪಿಸುವ ಪ್ರಮುಖ ಸಂಗತಿಯಾಗಿದೆ. ಶಿಕ್ಷಣದ ಮೂಲಕ ದೊರೆತ ಸಮಾನಾವಕಾಶ ಎಲ್ಲರಿಗೂ ಈ ಅವಕಾಶ ಕಲ್ಪಿಸಿದೆ.

ಆದರೆ ಇದು ಶ್ರೇಣೀಕರಣದಿಂದ ಹೊರತಾಗಿಲ್ಲ. ಇಲ್ಲೂ ಯಾರು ಇವುಗಳಲ್ಲಿ ಪರಿಣತನಾಗುತ್ತಾನೋ ಆತ ವೇಗವಾಗಿ ಮುಂದುವರೆಯಲು ಸಾಧ್ಯ. ಆದರೆ ಇದು ಸುಲಭ ಸಾಧ್ಯವಾಗುವುದು ಮೇಲ್‌ಸ್ತರದಲ್ಲಿರುವವರಿಗೆ. ಏಕೆಂದರೆ, ಅವರ ಭಾಷೆ ಪ್ರಮಾಣಕ್ಕೆ ಹತ್ತಿರವಿರುತ್ತದೆ ಮತ್ತು ಈ ತಿಳಿವನ್ನು ಪಡೆಯುವ ಕೌಶಲ ಅವರಲ್ಲಿ ಮೊದಲೇ ಇರುತ್ತದೆ. ಇದನ್ನು ಫ್ರೆಂಚ್ ಸಮಾಜಶಾಸ್ತ್ರಜ್ಞ ಪಿಯರೆ ಬೋರ್ದೋ 'ಸಾಂಸ್ಕೃತಿಕ ಬಂಡವಾಳ'[೪] ಎಂದು ಕರೆಯುತ್ತಾನೆ. ಆದರೆ ಸಮಾಜದ ಕೆಳಸ್ತರದಲ್ಲಿರುವವರಿಗೆ ಇದು ಶ್ರಮದಿಂದ ತಮ್ಮದಾಗಿಸಿಕೊಳ್ಳಬೇಕಾದ ಸಂಗತಿಯಾಗಿದೆ. ಈ ಭಾಷಿಕ ಪರಿಸರದ ಶಾಲೆಗಳಲ್ಲಿನ ಮಕ್ಕಳ ಸಾಮರ್ಥ್ಯ ನೋಡಿದಾಗ ಈ ಸಂಗತಿ ಸ್ಪಷ್ಟವಾಗುತ್ತದೆ. ಸಮಾನಾವಕಾಶಗಳಿದ್ದಾಗಲೂ ಕಲಿಕೆಯಲ್ಲಿ ಮುಂಚೂಣಿಯಲ್ಲಿರುವ ಹೆಚ್ಚಿನ ಮಕ್ಕಳು ಮೇಲ್‌ಸ್ತರಕ್ಕೆ ಸೇರಿದವರಾಗಿರುವುದು ಈ ಭಾಷಿಕ ಪರಿಸರದ ಮಕ್ಕಳ ಕಲಿಕೆಯ ಮಟ್ಟವನ್ನು ಗಮನಿಸುವಾಗ ಕಂಡುಬರುತ್ತದೆ.

ಜೊತೆಗೆ ಕೆಳಸ್ತರದಿಂದ ಬಂದ ಮಕ್ಕಳಲ್ಲಿ 'ಭಾಷಿಕ ಅಸಾಮರ್ಥ್ಯ'[೫] ಇಲ್ಲದಿದ್ದರೂ 'ಸಂವಹನದ ಅಸಾಮರ್ಥ್ಯ'[೬] ಇರುವುದು ಕಾಣುತ್ತದೆ. ಆದರೆ ಈ ಸಂವಹನದ ಅಸಾಮರ್ಥ್ಯ ಔಪಚಾರಿಕ ಸನ್ನಿವೇಶಗಳಲ್ಲಷ್ಟೆ ಕಾಣುತ್ತದೆ, ಅನೌಪಚಾರಿಕ ಸನ್ನಿವೇಶಗಳಲ್ಲಿ ಅಲ್ಲ. ಇದನ್ನೇ 'ಭಾಷಿಕ ಅಭದ್ರತೆ' ಎಂದು ಕರೆಯಲಾಗುತ್ತದೆ.

೬.೩.೧೧. ಭಾಷೆಯ ಮೂಲಕ ಅನನ್ಯತೆ ಕಾಯ್ದುಕೊಳ್ಳುವಿಕೆ

"ಒಂದು ಸಾಮಾಜಿಕ ಗುಂಪಿನೊಂದಿಗೆ ವ್ಯಕ್ತಿಯ ಅನನ್ಯತೆ ಅಥವಾ ಅಂತರವನ್ನು ಗುರುತಿಸುವಲ್ಲಿ ಅವರು ಬಳಸುವ ಭಾಷಾರೂಪಗಳು ನೆರವಾಗುತ್ತವೆ"(ನಾರಾಯಣ.ಕೆ.ವಿ(ಸಂ); ೨೦೦೫; ಪು:೫೩). ಈ ಒಳನುಡಿಯನ್ನು ತಮ್ಮ ಅಸ್ಮಿತೆಯೊಂದಿಗೆ ಪ್ರಬಲವಾಗಿ ಬೆಸೆದುಕೊಂಡವರು ಬ್ರಾಹ್ಮಣೇತರರು. ಅವರ ಮಾತಿನ ರೀತಿ, ಅವರ ಆಚರಣೆಗಳಲ್ಲಿನ ಸಾಂದರ್ಭಿಕ ಪದಬಳಕೆ, ಅವರ ಹಾಡು ಕತೆಗಳನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ತಮ್ಮ ಜನಪದ ಹಾಡುಗಳ ಸಂಗ್ರಹ 'ಚಿತ್ತಾರ ಬರೆದ ಬದುಕು' ಕೃತಿಯ ಪ್ರಸ್ತಾವನೆಯಲ್ಲಿ ಇದನ್ನು ಗುರುತಿಸಿರುವುದನ್ನು ಗಮನಿಸಬಹುದು. "ಕುಂದಾಪುರ ಪರಿಸರದ ಹರಿಜನವರ್ಗ ಕೂಸಾಳು, ಕರಾವಳಿಯ ಬಿಲ್ಲವ, ಮೊಗವೀರ ಜನಾಂಗಗಳ ನಡುವೆ ಸಂಪ್ರದಾಯದ ಹಾಡುಗಳು ಅವರ ಆಡುಮಾತಿನಲ್ಲೇ ಇರುವುದನ್ನು ಗಮನಿಸಬೇಕು"(ಗಾಯತ್ರೀ ನಾವಡ;೧೯೯೧;ಪು.೫೯).

ಹುಡುಗಿ ಮೈನರೆದಾಗಿನ ಆಚರಣೆಯ ಸಂದರ್ಭದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಹಾಡುವ ಹಾಡಿನಲ್ಲಿನ ವ್ಯತ್ಯಾಸವನ್ನು ಹೀಗೆ ಗಮನಿಸಬಹುದು.

ಬ್ರಾಹ್ಮಣ(ಅಪ್ಪಿಯಮ್ಮ, ವಡೇರಹೋಬಳಿ) ಹೇಳಿದ ಹಾಡು(ಗಾಯತ್ರೀ ನಾವಡ;೧೯೯೧)

ತೆಂಗಿನ ಮರ ನೋಡಿ ತಂಗಿ ಋತುವಾದಳೆ
ತೆಂಗು ಫಲ ಕೊಟ್ಟು ಕರತನ್ನಿ

ಕರತನ್ನಿ ನಮ್ಮನೆಯ
ಚಿತ್ತಾರ ಬರೆದ ದೇಗುಲಿಗೆ
ಚಿಕ್ಕು (ಬತ್ತಾಡರು; ಗಿಳಿಯಾರು;ಕ್ಷೇತ್ರಕಾರ್ಯ)
"ಅಂಗಳು ಗುಡಿಸುತ ಕಂಡಿ
ರಂಗೊಲಿ ಹಾಕುತ ಕಂಡಿ
ಲೀಗಳು ಕಂಡ ಮಗುವೆ ಒಳಗಿಲ್ಲ/ಹೆರಗಿಲ್ಲ
ಮೈನರಿದ್ ಲಿಂಬಿ ವನ ಸೇರಿ"

ಎಲ್ಲ ಪರಿವರ್ತನೆಗಳನ್ನು ಒಳಗುಮಾಡಿಕೊಂಡೇ ಭಾಷೆಯ ಸೊಗಡನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಭಾಷಿಕ ಸಮುದಾಯ ಮಾಡುತ್ತಾ ಬಂದಿರುವುದು ಅವರ ಅನನ್ಯತೆಯನ್ನು ಕಾಯ್ದುಕೊಳ್ಳಲು ಮಾಡಿದ ಪ್ರಯತ್ನವಾಗಿ ಕಾಣುತ್ತದೆ. ಕುಂದ ಉತ್ಸವ, ಕುಂದ ಅಧ್ಯಯನ ಕೇಂದ್ರ, ಕುಂದಗನ್ನಡ, ಕುಂದನಾಡು ಎಂಬಲ್ಲೆಲ್ಲ ಈ ಎಚ್ಚರ ಮತ್ತು ಕಳಕಳಿ ಕಾಣಿಸುತ್ತದೆ. ಭಾಷೆ ತನ್ನ ಸಾಂಪ್ರದಾಯಿಕ ಸಂದರ್ಭದಿಂದ ಬಿಡಿಸಿಕೊಂಡ ನಂತರದಲ್ಲಿ ಅದನ್ನು ಮರುಚಲಾವಣೆಗೆ ತರಲು ಬೇರೆ ಸಂದರ್ಭಗಳನ್ನು ಸೃಷ್ಟಿಸಬೇಕಾಗುತ್ತದೆ. ವೇದಿಕೆಗಳಲ್ಲಿನ ಪ್ರದರ್ಶನಗಳು, ಮಕ್ಕಳು ಮಾಡಿದ ಸಂಗ್ರಹಿಸುವ ಪ್ರಯತ್ನ, ಪುಸ್ತಕ ರೂಪದಲ್ಲಿ ಸಂಗ್ರಹಿಸಿರುವ ಬಗೆ ಇವೆಲ್ಲ ಆ ಪ್ರಯತ್ನದ ಭಾಗವಾಗಿವೆ.

ಲಿಖಿತ ಸಾಹಿತ್ಯದಲ್ಲಿ ಕೋಟಕನ್ನಡ: ಜನಪದ ಸಾಹಿತ್ಯವಲ್ಲದೆ ಶಿಷ್ಟ ಸಾಹಿತ್ಯದಲ್ಲೂ ಕೋಟ ಕನ್ನಡ ಜಾಗ ಪಡೆದಿದೆ. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಇಲ್ಲಿನ ವಿಶಿಷ್ಟ ಪದಗಳು ಕಾಣಿಸಿಕೊಂಡರೆ, ವೈದೇಹಿ, ಮಿತ್ರಾ ವೆಂಕಟ್‌ರಾಜ್ ಅವರ ಕತೆಗಳಲ್ಲಿ ಪದಗಳ ಜೊತೆ ವಾಕ್ಯಗಳೂ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ. ಲಿಖಿತ ಸಾಹಿತ್ಯದಲ್ಲಿ ಪ್ರಮಾಣ ಕನ್ನಡದ ಜೊತೆ ಒಳನುಡಿಗಳ ಬಳಕೆ ಅನನ್ಯತೆಯ ಸೂಚಕವಾಗಿರುವುದರ ಜೊತೆಗೆ ಪ್ರಾದೇಶಿಕ ಆವರಣವನ್ನು ಕಟ್ಟಿಕೊಡುವಲ್ಲಿ ದುಡಿಯುತ್ತದೆ.

೬.೪. ಭಾಷೆ ಮತ್ತು ಲಿಂಗ[೭]

ಅಳಿಯ ಸಂತಾನ ಪ್ರಧಾನವಾಗಿರುವ, ಸಿರಿಯಂಥಹ ಸ್ವಾಭಿಮಾನಿ ಹೆಣ್ಣು ಹುಟ್ಟಿದ ಈ ನಾಡಿನಲ್ಲಿ ಮಹಿಳೆಯ ಸ್ಥಾನ ಯಾವುದು ಎಂಬುದನ್ನು ಗುರುತಿಸುವಲ್ಲಿ ಭಾಷಿಕ ಆಕರಗಳು ನಿರ್ಣಾಯಕವಾದುವಾಗಿವೆ. ಎಲ್ಲೆಡೆ ದೇವಿಯ ಆರಾಧನೆ ಇರುವ ಈ ಪ್ರದೇಶವನ್ನು 'ದೇವಿ ಕ್ಷೇತ್ರ' ಎಂದು ಇಲ್ಲಿನ ದೇವಾಲಯಗಳ ಅಧ್ಯಯನ ಮಾಡಿದ ಉಪ್ಪುಂದ ಚಂದ್ರಶೇಖರ ಹೊಳ್ಳರು ಗುರುತಿಸುತ್ತಾರೆ. ಹೀಗಿದ್ದೂ ಸಮಾಜದಲ್ಲಿ ಹೆಣ್ಣಿನ ಸ್ಥಾನದ ಕುರಿತು ಇಲ್ಲಿ

ವ್ಯಕ್ತವಾಗುವುದು ಸಾಂಪ್ರದಾಯಿಕ ದೃಷ್ಟಿಕೋನವೇ ಆಗಿದೆ. ಆಕೆ ಮನೆಯಲ್ಲಿ ಎಲ್ಲರಿಗೆ ನೆರವಾಗಿದ್ದು ಮದುವೆಯಾಗಿ ಗಂಡನ ಮನೆಗೆ ಹೋದ ಬಳಿಕ ಅತ್ತೆ, ಮಾವ, ಗಂಡರಿಗೆ ಎದುರಾಡದೆ ಹೊಂದಿಕೊಂಡು ಹೋಗಿ ಆದರ್ಶ ಗೃಹಿಣಿ ಎಂಬ ಹೆಸರು ಪಡೆಯಬೇಕು ಎಂಬ ಭಾವ ಜನಪದ ಗೀತೆಗಳಲ್ಲಿ ಮತ್ತೆ ಮತ್ತೆ ವ್ಯಕ್ತವಾಗಿದೆ.

ಅಳಿಯ ಸಂತಾನ ಪದ್ಧತಿ ಇರುವ ಬ್ರಾಹ್ಮಣೇತರರಲ್ಲಿ ಹುಡುಗಿ ಮದುವೆಯ ಬಳಿಕ ಗಂಡನ ಮನೆಗೆ ಹೋಗುವ ಕ್ರಮ ಇಲ್ಲ. ಆಕೆ ತನ್ನ ತಾಯಿಮನೆಗೇ ಯಜಮಾನಿ. ಆಕೆಯ ಮಕ್ಕಳು ಗುರುತಿಸಿಕೊಳ್ಳುವುದು ಅವಳ ಮೂಲಕವೇ. ಅಂದರೆ ಆಕೆಯ ಮಕ್ಕಳ ಬಳಿ ಆಕೆಯ ಬಳಿಯೇ ಆಗಿರುತ್ತದೆ. ಅದೇ ಮಕ್ಕಳ ಸಂತಾನ ಪದ್ಧತಿಯಲ್ಲಿ ಮದುವೆಯಾದ ಹೆಣ್ಣು ಗಂಡನ ಮನೆಗೆ ಹೋಗುತ್ತಾಳೆ. 'ಕೊಟ್ಟ್ ಹೆಣ್ ಕುಲದ್ ಹೆರ್ಗ್' ಎಂಬ ರೂಢಿಯ ಮಾತು ಇದನ್ನು ಹೇಳುತ್ತದೆ. ಮದುವೆಯ ಸಂದರ್ಭದಲ್ಲಿ 'ಕನ್ಯಾವರ್ಣನೆ' ಎಂಬ 'ಗೋತ್ರ' ಕಡಿಯುವ ಶಾಸ್ತ್ರವಿದೆ. ಮದುವೆಯಂದು ಹುಡುಗ ಹುಡುಗಿಯ ಗೋತ್ರವನ್ನು ಹೇಳಿ ಮಂತ್ರಪೂರ್ವಕವಾಗಿ ಹುಡುಗಿಯ ಗೋತ್ರವನ್ನು ಕಡಿದು ಹುಡುಗನ ಗೋತ್ರದೊಂದಿಗೆ ಬೆಸೆಯಲಾಗುವುದು ಮತ್ತು ಇವರಲ್ಲಿ ಮದುವೆಯಾದ ನಂತರ ಹುಡುಗಿಯ ಹೆಸರನ್ನು ಬದಲಿಸುವ ಕ್ರಮ ಇದೆ. ಇಲ್ಲಿ ಮಕ್ಕಳನ್ನು ಗುರುತಿಸುವುದು ತಂದೆಯ ಮೂಲಕ. ಇತ್ತೀಚೆಗೆ ಹೆಣ್ಣುಮಕ್ಕಳೂ ವಿದ್ಯಾವಂತರಾಗಿ, ಉದ್ಯೋಗಿಗಳಾಗಿ ಸಾರ್ವಜನಿಕ ಸ್ತರದಲ್ಲಿ ಕ್ರಿಯಾಶೀಲರಾಗಿ ರುವುದರಿಂದ ಹೆಸರು ಬದಲಿಸುವ ಕ್ರಮ ಹೆಚ್ಚಾಗಿ ಕಾಣುತ್ತಿಲ್ಲ. ಬದಲಿಸಿದರೂ ಅದು ಖಾಸಗಿ ಸ್ತರದಲ್ಲಿ ಮಾತ್ರ ಚಲಾವಣೆ ಪಡೆಯುತ್ತದೆ. ಆದರೆ ಗಂಡನ ಮನೆಯವರ ಉಪನಾಮವನ್ನು ಹೆಸರಿನೊಂದಿಗೆ ಸೇರಿಸುವುದನ್ನು ಕಾಣಬಹುದು.

ಬ್ರಾಹ್ಮಣರಲ್ಲಿ ಹೆಣ್ಣಿಗೆ ಮರುಮದುವೆಯ ಅವಕಾಶವಿಲ್ಲ. ಗಂಡ ಸತ್ತು ಹೋದರೆ ಕೇಶಮುಂಡನ ಮಾಡಿ ಆಕೆ ಉಳಿದ ಬದುಕನ್ನು ಅವರಿವರ ಚಾಕರಿಯಲ್ಲಿ ಕಳೆಯುತ್ತಿದ್ದಳು. ಆದರೆ ಬ್ರಾಹ್ಮಣೇತರರಲ್ಲಿ ಹೆಣ್ಣಿಗೆ ಮರುಮದುವೆಯ ಅವಕಾಶವಿದೆ. ಮೊದಲನೆಯ ಮದುವೆಯನ್ನು 'ಕೈದಾರೆ' ಎಂದರೆ ಎರಡನೆ ಈ ಮದುವೆಯನ್ನು 'ಬುಡುದಾರೆ' ಅಥವಾ 'ದಾತ್ರಿಮದಿ' ಎನ್ನುತ್ತಾರೆ. ಇದು ಮದುವೆ ಅನ್ನುವುದಕ್ಕಿಂತ ಹೆಚ್ಚಾಗಿ ಒಂದು ಒಪ್ಪಂದದ ರೀತಿಯಲ್ಲಿ ಇರುತ್ತದೆ. ಆದರೆ ಹಾಗೆ ಎರಡನೇ ಮದುವೆಯಾದ ಮೇಲೆ ಆ ಹೆಣ್ಣಿಗೆ ಹಿಂದಿನಂತೆ 'ಮುತ್ತೈದೆ'ಯ ಸ್ಥಾನಮಾನವಿಲ್ಲ. ಸಮಾಜ ಆಕೆಯ ಮೇಲೆ ತೋರಿಸುವ ಅನುಕಂಪ ಇಲ್ಲಿ ವ್ಯಕ್ತವಾಗುತ್ತದೆ ಹೊರತು ಆಕೆಯ ಸ್ಥಾನ ಇತರ 'ಮುತ್ತೈದೆ'ಯರ ಸ್ಥಾನಕ್ಕೆ ಸರಿ ಅಲ್ಲ. ಆದರೆ ಗಂಡಸಿನ ಮರುಮದುವೆಗೆ ಮದುವೆಯಷ್ಟೇ ಸ್ಥಾನವಿದೆ. ಎಲ್ಲ ಜಾತಿಗಳಲ್ಲೂ ಗಂಡಿಗೆ ಮರುಮದುವೆಯ ಅವಕಾಶವಿದೆ.

ಹೀಗೆ ನೋಡಿದಾಗ ಅಳಿಯ ಸಂತಾನ ಪದ್ಧತಿಯಲ್ಲಿ ಮಹಿಳೆಗೆ ಹೆಚ್ಚಿನ ಸ್ಥಾನಮಾನ ವಿರುವುದು ಕಾಣುತ್ತದೆ. ಆದರೆ ಇಲ್ಲಿನ ಬೈಗುಳಗಳು, ಜನಪದ ಹಾಡುಗಳು ಮತ್ತು ಹಿಂದಿನಿಂದಲೂ ಮಹಿಳೆಯರ ಮಾತಿಗಿರುವ ಬೆಲೆ ಇವನ್ನು ಗಮನಿಸಿದಾಗ ಇಲ್ಲಿ ಹೆಣ್ಣು ಪ್ರಧಾನ ಎಂಬ ವಾದವನ್ನು ಸಾಬೀತು ಪಡಿಸುವುದು ಕಷ್ಟವಾಗುತ್ತದೆ.

ವಿವಾಹ ಬಾಹಿಗ ಸಂಬಂಧವನ್ನು ಮೂಲ ಮಾಡಿಕೊಂಡು ಅದರಲ್ಲೂ ಹೆಣ್ಣಿನ ಶೀಲವನ್ನು ಕೇಂದ್ರವಾಗಿರಿಸಿಕೊಂಡಿರುವ ಬೈಗುಳಗಳು ಕೋಟಕನ್ನಡದಲ್ಲಿ ಚಾಲ್ತಿಯಲ್ಲಿವೆ. ಉದಾ, ನಿನ್ನಬ್ಬೆ ಹಡ, ಹಡ್ಬೆ, ಹಡ್ಬೆರಂಡೆ, ಹಲಬಾಲ್ ಬೋಳಿಮಗ, ಸೂಳೆ ಮಗ, ಬೋಳಿ ಮಗ, ದಿಗ್ಡ ದಿಮ್ಮಿ ಮುಂತಾದವುಗಳು ಹೆಣ್ಣಿನ ಲೈಂಗಿಕತೆಯನ್ನು ಕೇಂದ್ರವಾಗಿರಿಸಿ ಕೊಂಡಿವೆ. ಇವು ಬೇರೆಯದೇ ಆದ ಚಿತ್ರವನ್ನು ನಮ್ಮ ಮುಂದಿಡುತ್ತವೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಿರಿಯರನ್ನು ಕೇಳಿದಾಗ ಹಿಂದೆ ಹೆಣ್ಣಿನ ಮಾತು 'ಕೊಗ್ಗಿ'ಗೆ ಕೇಳಬಾರದು ಎಂಬಲ್ಲಿ, ಗಂಡಸರ ಮಾತಿನ ನಡುವೆ ಹೆಣ್ಣು ಪ್ರವೇಶಿಸಿದರೆ 'ಹೆಂಗ್ರಿಗೆಲ್ಲ ಈ ಪಂಚೇತ್ಕಿ ಯಾಕೆ' ಅದು ಅಧಿಕ ಪ್ರಸಂಗ ಎಂಬಲ್ಲಿ, 'ಗಂಡ್ರಿಲ್ಯಾ ಮನ್ಯಾಗೆ' ಎಂಬಲ್ಲಿ ಹೊರಗೆ ಬಂದು ಗಟ್ಟಿಯಾಗಿ ಮಾತಾಡುವ ಹೆಣ್ಣನ್ನು 'ಬಿಲಾಸ್ ಬಿಟ್ಬಾಳ್' ಎಂದು ಕರೆಯುವಲ್ಲಿ ಹೆಣ್ಣಿನ ಸ್ಥಾನಮಾನ, ಆಕೆಯ ಮೇಲಿನ ನಿರ್ಬಂಧಗಳು ವ್ಯಕ್ತವಾಗುತ್ತವೆ.

ಹಿಂದಿನಿಂದಲೂ ಎಲ್ಲ ಸಮುದಾಯಗಳಲ್ಲೂ ಗಂಡನಿಗೆ ಹೆಂಡತಿಯ ಹೆಸರು ಹೇಳುವ ಅಧಿಕಾರವಿದೆಯೇ ಹೊರತು ಹೆಣ್ಣು ಗಂಡನ ಹೆಸರನ್ನು ಹೇಳುವಂತಿಲ್ಲ. ಹಾಗೆ ಹೇಳಬೇಕಾಗಿ ಬಂದಾಗ ವೆಂಕಟರಮಣ ಎಂದಿದ್ದಲ್ಲಿ 'ಶನಿವಾರ ದೇವರ ಹೆಸ್ರ್' ಎಂದೂ ಈಶ್ವರ ಎಂದಿದ್ದಲ್ಲಿ 'ಸೋಮಾರ ದೇವ್ರ ಹೆಸ್ರ್' ಎಂದೂ ಇಂದಿಗೂ ಹೇಳುವವರಿದ್ದಾರೆ. ಆಧುನಿಕತೆಯಿಂದಾಗಿ ಹೆಂಡತಿ ಕೆಲವು ಸಂದರ್ಭಗಳಲ್ಲಿ ಬೇರೆಯವರಿಗೆ ಗಂಡನ ಹೆಸರು ತಿಳಿಸಬೇಕಾಗಿ ಬಂದಾಗ ಗಂಡನ ಹೆಸರು ಹೇಳುವುದಿದೆಯೇ ಹೊರತು ಉಳಿದಂತೆ ಕರೆಯುವಾಗ ಹೆಂಡತಿ ಗಂಡನನ್ನು 'ಹ್ವಾಯ್', 'ಇಗಣಿ', 'ಕೇಂಡ್ರಿಯಾ' ಎಂದು ಪರೋಕ್ಷವಾಗಿ ಸೂಚಿಸುವ ಬಗೆಯನ್ನು ಕಾಣುತ್ತೇವೆ.

ಜನಪದ ಸಾಹಿತ್ಯದಲ್ಲೂ ಹೆಣ್ಣಿನ ಭಾಷಿಕ ವರ್ತನೆಯ ಮೇಲಿರುವ ನಿರ್ಬಂಧ ವ್ಯಕ್ತವಾಗುತ್ತದೆ,

'ಬಾಳಿಪಟ್ಟೇಯ ಸೀರಿ ಬಾಳ ಹೊತ್ತ್ ಉಡ್‌ಬ್ಯಾಡ
ಬಾಗುಲಿ ಚಾಚಿ ನಿಲಬ್ಯಾಡ
ಬಾಗುಲಿ ಚಾಚಿ ನಿಲಬ್ಯಾಡ ತಂಗ್ಯಮ್ಮ

ಬಾವನಿಗೆ ಉತ್ರುವೇ ಕೊಡ್‌ಬ್ಯಾಡ'
'ಅಕ್ಕಿಯ ಕಲ್ಲೆಕ್ಕಿ ಅಂಗಳದಲ್ ಕೆಡಿಬ್ಯಾಡ
ಮಾಯಿಗುತ್ತರವ ಕೊಡಬ್ಯಾಡ'

ಇತ್ಯಾದಿ ಹಾಡುಗಳನ್ನು ಉದಾಹರಣೆಯಾಗಿ ನೋಡಬಹುದು.

ಇದರ ಜೊತೆಗೇ ಇಲ್ಲಿ ಹೆಣ್ಣಿಗೆ ಅನ್ಯಾಯವಾದಾಗ ಮನೆಗೆ, ಅನ್ಯಾಯ ಮಾಡಿದಾತನಿಗೆ ಒಳ್ಳೆಯದಾಗುವುದಿಲ್ಲ ಎಂಬ ಎಚ್ಚರಿಕೆಯ ಮಾತು, ಹೆಣ್ಣಿಗೆ ಅನ್ಯಾಯವಾದಾಗ ಆಕ್ರೋಶ ವ್ಯಕ್ತವಾಗಿರುವುದನ್ನು ಗಮನಿಸಬಹುದು.

ಹೆಣ್ಣಿನ ಗೋಳು ತಾಗಿ ಹೊನ್ನಿಯ ಮರ ಬೆಂದು
ಹನ್ನೆರಡು ಸಾವಿರ ಎಲೆ ತಾಳಿ। ರಾಮ
ಹೆಣ್ಣಿನ ಗೋಳು ಹೊಡಿಬೇಡ

ಹೊನ್ನಿನ ಕೀಲಿ ಇದ್ದಂತೆ
ಕಾಯಿ ಅಡಿಕೆ ಒಡುವಾನೆ
ಹೆಂಡತಿ ಇದ್ದಂತೆ ನೆರೆಮನೆಯ
ಹೆಂಡತಿ ಇದ್ದಂತೆ ನೆರೆಮನೆಯಲ್ ಸುಳುವನಿಗೆ
ನಡುಬೈಲಲಿ ಸಿಡಿಲೂ ಎರಗಲೀ

ಎಂಬಲ್ಲಿ ಕೈಹಿಡಿದವಳನ್ನು ಚೆನ್ನಾಗಿ ನಡೆಸಿಕೊಳ್ಳದವ ನಾಶ ಹೊಂದುತ್ತಾನೆ ಎಂಬ ಭಾವ ಕಂಡುಬರುತ್ತದೆ. ಆದರೆ ಈ ಹಾಡನ್ನು ಉದಾಹರಣೆಯಾಗಿ ಇಟ್ಟುಕೊಂಡು ಹೆಣ್ಣು ಸಬಲಳಾಗಿದ್ದಳು ಎಂದು ಹೇಳುವುದು ಕಷ್ಟವಾಗುತ್ತದೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಎಲ್ಲೂ ಮಹಿಳೆ ಅಧೀನ ಸ್ಥಿತಿಯಿಂದ ಹೊರಬಂದಿರುವುದು ಕಾಣುವುದಿಲ್ಲ. ಇದು ಜನಪದ ವಿದ್ವಾಂಸರು ಹೇಳುವ ಹಾಗೆ ವಾಸ್ತವದಲ್ಲಿ ಅಸಾಧ್ಯವಾದುದನ್ನು ಹಾಡಿನ ಮೂಲಕ ವ್ಯಕ್ತಪಡಿಸುವ ಬಗೆಗೆ ಉದಾಹರಣೆ ಎನಿಸುತ್ತದೆ.

ಜೊತೆಗೆ ದೈನಂದಿನ ಬದುಕಲ್ಲಿ ಮಾತಿನ ಮೇಲೆ ನಿರ್ಬಂಧ ಇದ್ದ ಸಮುದಾಯದಲ್ಲಿ ಜನಪದ ಸಾಹಿತ್ಯ ಹೆಣ್ಣಿನೊಂದಿಗೆ ಬೆಸೆದುಕೊಂಡಿರುವುದು ಗಮನಿಸಬೇಕಾದ ಸಂಗತಿ. ಗಾಯತ್ರೀ ನಾವಡ 'ಜನಪದ ಕತೆಗಳು ಹೆಣ್ಣಿನ ಹೆಸರಿನಲ್ಲಿ ರಿಜಿಸ್ಟರ್ ಆಗುವುದ'ನ್ನು ಗುರುತಿಸುತ್ತಾರೆ(ಗಾಯತ್ರೀ ನಾವಡ;೧೯೯೫;ಪು:೭೯). ವಾಸ್ತವದ ಬದುಕಿನ ಆಕೆಯ ಪಾಡು,

ಮೌನ ಮಾತುಪಡೆಯುವುದು ಜನಪದ ಕತೆಗಳಲ್ಲಿ. ಹೀಗಾಗಿ ಜನಪದ ಕತೆಗಳು, ಹಾಡುಗಳು ಮುಖ್ಯವಾಗಿ ಮಹಿಳೆಯ ಅಭಿವ್ಯಕ್ತಿಯ ದಾರಿಗಳಾಗಿವೆ. ಅವರು ಕ್ಷೇತ್ರ ಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಕಮಲಾ ನಾಯಿರಿ ಎಂಬಾಕೆ ಹೇಳಿದ ಮಾತು "ದಿನಾಲು ಮನಿಕಂಬತ್ತಿಗೆ ಕತೆ ಹೇಳ್ದಿರೆ ನನ್ ಮೊಮ್ಮಕ್ಕಳ್ ಹಟು ತೊಡ್ತೊ. ನಂಗೂ ಕತೆ ಹೇಳ್ದೇ ಮನಿಕಂಡ್ರೆ ನಿದ್ದಿ ಬತ್ತಿಲ್ಲೆ" ಎಂಬುದನ್ನು ಹೇಳುತ್ತಾ ಅವರು "ಇಲ್ಲಿ ಆಕೆಯ ಎರಡನೆಯ ವಾಕ್ಯ ಕತೆಗಾರರ ನೆಲೆಯಿಂದ ಕತೆಗಿರುವ ಉದ್ದೇಶ ಬಹುಮುಖ್ಯವಾದದ್ದನ್ನು ಹೇಳುತ್ತದೆ ಮತ್ತು ಆಕೆಗೆ ಬಿಡುಗಡೆಯ ಅನುಭವವನ್ನು ತರುತ್ತದೆ ಎನ್ನುವುದು ಮಹತ್ವದ ಸುಳಿವನ್ನು ನೀಡುತ್ತದೆ" ಎನ್ನುತ್ತಾರೆ(ಗಾಯತ್ರೀ ನಾವಡ;೧೯೯೫; ಪು:೧೧). ಆಕೆ ಎಷ್ಟರ ಮಟ್ಟಿಗೆ ತನ್ನನ್ನು ಇದರೊಂದಿಗೆ ಬೆಸೆದುಕೊಂಡಿದ್ದಾಳೆ ಎಂಬುದನ್ನು ತಿಳಿಸುತ್ತದೆ.

ಮಹಿಳೆಯರ ಮಾತು ಜಾತಿಯ ಭಿನ್ನತೆಯನ್ನು ಮೀರಿ ಹೆಚ್ಚು ಪ್ರಾದೇಶಿಕತೆಯನ್ನು ಪ್ರದರ್ಶಿಸುತ್ತದೆ. ಒಂದೇ ಮನೆಯಲ್ಲಿ ಬ್ರಾಹ್ಮಣ ಗಂಡಸಿನ ಮಾತಿಗೂ ಮತ್ತು ಹೆಂಗಸಿನ ಮಾತಿಗೂ ಸ್ಪಷ್ಟ ವ್ಯತ್ಯಾಸವನ್ನು ಗುರುತಿಸಬಹುದು. ಹೆಂಗಸಿನ ಮಾತು ಬ್ರಾಹ್ಮಣೇತರರ ಮಾತಿಗೆ ಹತ್ತಿರವಾಗಿದೆ. ಇದಕ್ಕೆ ಗಂಡಸಿನಂತೆ ಹೊರಗೆ ಹೋಗುವ, ಜಾಸ್ತಿ ಬೇರೆ ಜಗತ್ತಿನೊಂದಿಗೆ ಬೆರೆಯಲು ಹೆಣ್ಣಿಗೆ ಅವಕಾಶವಿಲ್ಲದಿರುವುದು ಪ್ರಮುಖ ಕಾರಣವೆನಿಸುತ್ತದೆ. "ಭಾಷೆಯಲ್ಲಿ ಲಿಂಗ ನೆಲೆಯ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಳ್ಳಲು ಮಹಿಳೆ ಮತ್ತು ಪುರುಷರ ಭಿನ್ನ ಜೀವನಶೈಲಿಗಳನ್ನು, ಅವರು ಯಾರೊಂದಿಗೆ ವ್ಯವಹರಿಸುತ್ತಾರೆ ಮತ್ತು ಒಂದು ಭಾಷಾ ಪ್ರಭೇದವನ್ನು ತಮ್ಮದಾಗಿಸಿಕೊಳ್ಳುವಲ್ಲಿ ಅವರನ್ನು ಪ್ರೇರೇಪಿಸುವ ಸಂಗತಿ ಯಾವುದು ಎಂಬುದನ್ನು ಗಮನಿಸಬೇಕಾಗುತ್ತದೆ(Meshrie Rajend et.al;2000;p:225). ಅಲ್ಲದೆ, ಇತ್ತೀಚಿನವರೆಗೂ ಒಟ್ಟಾರೆಯಾಗಿ ನೋಡುವುದಾದರೆ ಮನೆ ಚಾಕರಿ ಮಾಡುವವಳು ಶಾಲೆಗೆ ಹೋಗಬೇಕಾದುದರ ಅಗತ್ಯವೇನು, 'ಎಷ್ಟ್ ಓದೀರೂ ಬೂದಿ ತೋಡುದ್ ತಪ್ಪ್‌ತ್ತಾ?' ಎಂಬ ಭಾವನೆ ಮನೆಮಾಡಿಕೊಂಡಿತ್ತು. ಹೊರಗೆ ಹೋಗಿ ದುಡಿಯುವವನು ಗಂಡು, ಮನೆಮಟ್ಟು ನೋಡಿಕೊಳ್ಳುವವಳು ಹೆಣ್ಣು ಎಂಬ ಶ್ರಮ ವಿಭಜನೆ ಲೈಂಗಿಕ ಪಾತಳಿಯಲ್ಲೂ ಇರುವುದು ಇಲ್ಲಿ ಕಾಣುತ್ತದೆ. ಈ ನೆಲೆಯಲ್ಲಿ ಸ್ತ್ರೀಸಮಾಜವನ್ನು ವರ್ಗ ಪರಿಕಲ್ಪನೆಯಡಿಯಲ್ಲಿ ತರಬಹುದಾಗಿದೆ.

ಪುರುಷರಿಗಿಂತ ಮಹಿಳೆಯರು ಹೆಚ್ಚು ಭಾಷಿಕ ಅಭದ್ರತೆಗೆ ಪಕ್ಕಾಗುತ್ತಾರೆ ಎಂಬುದನ್ನು ವಿಲಿಯಂ ಲಾಬೊವ್ ಮತ್ತು ಪಿಯರೆ ಬೋರ್ದೋ ಗುರುತಿಸಿದ್ದಾರೆ.

ಒಟ್ಟಿನಲ್ಲಿ ಅಧಿಕಾರ ಕೇಂದ್ರ ನಿರ್ಣಯವಾಗುವುದು ಮಹತ್ವದ ಸಂಗತಿಗಳನ್ನು ಯಾರು ನಿರ್ಧರಿಸುತ್ತಾರೆ ಎಂಬುದರ ಮೇಲೆ. ಇಂದು ಜಾತಿಗಿಂತ ವರ್ಗ ಸಮಾಜದಲ್ಲಿ ನಿರ್ಣಾಯಕವಾಗಿದೆ. ಹೀಗಾಗಿ ಬದಲಾದ ಸಂದರ್ಭದಲ್ಲಿ ವ್ಯಕ್ತಿಯ ಸ್ಥಾನವನ್ನು ಜಾತಿ ನಿರ್ಧರಿಸದೆ ಅವರು ಆರ್ಥಿಕತೆಯ ಏಣಿಯಲ್ಲಿ ಎಲ್ಲಿದ್ದಾರೆ ಎಂಬುದು ನಿರ್ಧರಿಸುತ್ತದೆ.

೬.೫. ಪರಿಸರದ ಭಾಷೆಗಳೊಡನೆ ಸಂಪರ್ಕ ಮತ್ತು ಪ್ರತಿರೋಧ

ಭಾಷಿಕವಾದ ಅಸ್ಮಿತೆ ಈ ಪ್ರದೇಶದ ಜನರನ್ನು ಒಂದು ಮಾಡಿರುವ ಬಹು ದೊಡ್ಡ ಸಂಗತಿಯಾಗಿದೆ. ಹಾಗೆಯೇ ಯಜಮಾನ ಭಾಷೆ ಹೊರತುಪಡಿಸಿ ಭಾಷಿಕ ಕೊಡುಕೊಳೆಗೆ ಒಂದು ಬಗೆಯ ಒಳ ಪ್ರತಿರೋಧವನ್ನೂ ಈ ಭಾಷಿಕರು ತೋರಿಸುತ್ತಾರೆ ಎಂಬುದು ಅವರೊಡನೆ ಒಡನಾಡುವ ಸಂದರ್ಭದಲ್ಲಿ ನಿಚ್ಚಳವಾಗುತ್ತದೆ. ತುಳು ಭಾಷಿಕ ಪ್ರದೇಶಕ್ಕೆ ಅತಿ ಸಮೀಪದಲ್ಲಿದ್ದರೂ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಜನರ ಚಲನೆ ಇದ್ದರೂ ಕೋಟ ಕನ್ನಡ ಆಡುವ ಪ್ರದೇಶದಲ್ಲಿ ತುಳುವಿನ ಎದ್ದುಕಾಣುವ ಪ್ರಭಾವ ಕಾಣಿಸುವುದಿಲ್ಲ. ಕೆಲವೊಂದು ಸಮಾನ ಪದಗಳಿದ್ದರೂ ಅವು ತುಳುವಿನಿಂದ ಬಂದದ್ದು ಎನ್ನಲು ಸಾಧ್ಯವಿಲ್ಲ. ಅವನ್ನು ದ್ರಾವಿಡ ಮೂಲ ಎಂಬ ನೆಲೆಯಲ್ಲಿ ವಿಶ್ಲೇಷಿಸಬಹುದಾಗಿದೆ. ಏಕೆಂದರೆ ವರ್ತಮಾನದಲ್ಲಿ ಅಷ್ಟು ಹತ್ತಿರದಲ್ಲಿದ್ದರೂ ತುಳು ಭಾಷೆಯ ಕುರುಹು ಕೋಟ ಒಳನುಡಿಯಲ್ಲಿ ದೊರೆಯುವುದಿಲ್ಲ. ಎರಡನೆಯದಾಗಿ, ಕನ್ನಡದ ಹಳೆಯ ರೂಪಗಳು ಹಲವು ಇದರಲ್ಲಿ ಹಾಗೇ ಉಳಿದುಕೊಂಡಿವೆ. ಹೀಗಾಗಿ ಹಲವು ಸಾಮ್ಯ ಪದಗಳನ್ನು ಹಳೆಯ ರೂಪಗಳೊಂದಿಗೆ ಸಮೀಕರಿಸಲು ಸಾಧ್ಯವಾದುದ ರಿಂದ ಅದು ತುಳುವಿನ ಮೂಲಕ ಕೋಟ ಕನ್ನಡಕ್ಕೆ ಬಂತು ಎಂದು ಸಾಧಿಸುವುದು ಕಷ್ಟವಾಗುತ್ತದೆ. ಈ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ.

ತುಳು ಪ್ರದೇಶದಿಂದ ಬಂದವರೂ ಕೂಡಾ ತಮ್ಮ ಆಡುನುಡಿಯನ್ನು ಖಾಸಗಿ ಸ್ತರದಲ್ಲಿ ಮಾತ್ರ ಬಳಸುತ್ತಾರೆ. ಸಾಮಾಜಿಕ ಸ್ತರಕ್ಕೆ ಸಂಬಂಧಿಸಿದಂತೆ ಅವರು ಒಂದೋ ಪ್ರಮಾಣ ಕನ್ನಡ ಇಲ್ಲವೇ ಕೋಟ ಕನ್ನಡವನ್ನು ಆಶ್ರಯಿಸುತ್ತಾರೆ.

ಕೇರಳದಿಂದ ಈ ಪ್ರದೇಶಕ್ಕೆ ಪ್ರಾಚೀನ ಕಾಲದಲ್ಲಿ ವಲಸೆ ಬಂದವರೆಂದು ಹೇಳಲಾಗುವ ನಾಯಿರಿಯವರ ನುಡಿ ಮಲಯಾಳಂ ಆಗಿರುವ ಸಾಧ್ಯತೆ ಇದೆ. ಆದರೆ ಕಾಲಾಂತರದಲ್ಲಿ ಇವರು ತಮ್ಮ ಅಸ್ಮಿತೆಯನ್ನು ಭಾಷಿಕವಾಗಿ ಉಳಿಸಿಕೊಳ್ಳಲು ಹೊರಡಲಿಲ್ಲ. ಅವರು ತಾವು ಕೇರಳದಿಂದ ಬಂದವರೇ ಅಲ್ಲ, ಇಲ್ಲಿನವರೇ ಎಂದು ಹೇಳಿಕೊಳ್ಳುತ್ತಾರೆ. ಐತ ನಾರಿಯವರು ತಾವು ನಾಯಿರಿ ಸಮುದಾಯದವರ ಬಗ್ಗೆ ಬರೆದ ಪುಸ್ತಕದಲ್ಲಿ ಹೇಳುತ್ತಾರೆ "“ನೀವು

ಕೇರಳದವರೇ?" ಎಂಬ ಪ್ರಶ್ನೆಗೆ ನನ್ನ ಉತ್ತರ ಇಷ್ಟೆ. ನಾವು ಕೇರಳದ 'ನಾಯರ್' ಜನಾಂಗದವರಲ್ಲ, ಕನ್ನಡದ 'ನಾಯಿರಿ'ಗಳು. ನಮಗೂ ಅವರಿಗೂ ಯಾವ ರೀತಿಯ ಸಂಬಂಧವೂ ಇಲ್ಲ"(ಐತ ನಾಯಿರಿ; ೨೦೦೧;ಪು:೨-೩). ಇಲ್ಲಿನ ಇತರ ಉಪಸಮುದಾಯಗಳ ಜನರಂತೆ ಕೃಷಿ ಆಧಾರಿತ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ನಾಯಿರಿ ಸಮುದಾಯದ ವಾರ್ಷಿಕಾವರ್ತನ ಸ್ಥಳೀಯ ಇತರ ಸಮುದಾಯಗಳಿಗಿಂತ ಭಿನ್ನವಾಗಿಲ್ಲ. ಅವರು ತಮ್ಮ ವಿಶೇಷತೆಯನ್ನು ಪ್ರಕಟಪಡಿಸುವುದು ಜೀವನಾವರ್ತನದ ವಿಧಿವಿಧಾನಗಳ ಮೂಲಕ. ಅದರಲ್ಲೂ ವಿಶೇಷವಾಗಿ ಮದುವೆಗೆ ಮೊದಲು ಮಾಡುವ 'ಕೈದ ಪ್ರಸ್ತ' ಎನ್ನುವ ವಿಶೇಷ ಆಚರಣೆ ನಾಯಿರಿಗಳಲ್ಲಿ ಮಾತ್ರ ಕಾಣಬಹುದಾಗಿದೆ.

ಇಲ್ಲಿಂದ ಜೀವನೋಪಾಯಕ್ಕಾಗಿ ೧೩-೧೭ನೇ ಶತಮಾನದಲ್ಲಿ ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ವಲಸೆ ಹೋದ ಕೋಟ ಬ್ರಾಹ್ಮಣರು ಅಲ್ಲಿನ ಬಹುಭಾಷಿಕ ಪರಿಸರದ ಮಧ್ಯೆಯೂ ತಮ್ಮ ನುಡಿಯನ್ನು ಕಳೆದುಕೊಂಡಿಲ್ಲ. ಇವರ ಆಚರಣೆಗಳಲ್ಲಿ ತುಳುನಾಡಿನ ಹಲವು ವಿಶಿಷ್ಟ ಸಂಗತಿಗಳು ಸೇರಿಹೋಗಿವೆ. ಆದರೆ ಇವರು ತಾವು ಮಾತಾಡುವುದು 'ಕೋಟ ಭಾಷೆ' ಎಂದೇ ಹೇಳಿಕೊಳ್ಳುತ್ತಾರೆ. ಸುತ್ತಲಿನ ತುಳು, ಮಲಯಾಳಂ ಭಾಷೆಗಳ ಪ್ರಭಾವದಿಂದ ಇವರ ಭಾಷೆಯಲ್ಲಿ ಹಲವು ಎರವಲು ಪದಗಳು ಕಾಣಿಸುತ್ತವೆಯೇ ಹೊರತು ಅವರು ಭಾಷಿಕವಾಗಿ ಅನನ್ಯತೆಯನ್ನು ಕಾಯ್ದುಕೊಂಡಿರುವುದು ಕಂಡುಬರುತ್ತದೆ. ಆದರೆ ಇವರ ಮೌಖಿಕ ಸಾಹಿತ್ಯ ಕೋಟ ಭಾಷಿಕ ಪರಿಸರದಲ್ಲಿರುವಷ್ಟು ಶ್ರೀಮಂತವಾಗಿಲ್ಲ. ಈ ಪ್ರದೇಶದಲ್ಲಿರುವ ಇನ್ನೊಂದು ಬ್ರಾಹ್ಮಣ ಸಮುದಾಯವಾದ 'ಶಿವಳ್ಳಿ' ಬ್ರಾಹ್ಮಣರು ಕೋಟ ಭಾಷಿಕ ಪರಿಸರದಲ್ಲಿ ಈ ಒಳನುಡಿಯನ್ನು ಆಡುತ್ತಾರೆ. ಅದೇ ಈ ಭಾಷಿಕ ಪರಿಸರದ ಗಡಿ ದಾಟಿ ತುಳುನಾಡಿನಲ್ಲಿರುವವರು ತುಳುವಿನ ಪ್ರಭೇದವೊಂದನ್ನು ಮಾತಾಡುತ್ತಾರೆ. ಹೀಗೆ ನೋಡಿದಾಗ ಭಾಷೆ ಎನ್ನುವುದು ಈ ಪ್ರದೇಶದ ಜನರ ಅಸ್ಮಿತೆಯ ಪ್ರಮುಖ ಆಧಾರವಾಗಿದೆ ಎಂಬುದು ಕಾಣುತ್ತದೆ.

೬.೫.೧. ಕೋಟ ಒಳನುಡಿ ಮತ್ತು ಪ್ರಮಾಣ ಕನ್ನಡ

ನಗರಗಳಲ್ಲಿ ಉದ್ಯೋಗಕ್ಕಾಗಿ ವಲಸೆ ಹೋದವರ ಮೂಲಕ, ಆಧುನಿಕ ಶಿಕ್ಷಣದ ಮೂಲಕ ಪ್ರಮಾಣ ಕನ್ನಡ ಈ ಪ್ರದೇಶದಲ್ಲಿ ಪ್ರವೇಶ ಪಡೆದಿದೆ. ಈಗ ಮಾಧ್ಯಮಗಳಲ್ಲಿ ಬಳಕೆಯಾಗುವ ಮೈಸೂರು, ಬೆಂಗಳೂರು ಕನ್ನಡವೂ ಮೌಖಿಕ ನೆಲೆಯಲ್ಲಿ ಪ್ರಮಾಣ ಎನಿಸಿಕೊಂಡಿದೆ. ಔಪಚಾರಿಕ ಸಂದರ್ಭಗಳಲ್ಲಿ ಸಂವಹನಕ್ಕೆ ಬಳಸುವ ಪ್ರಭೇದ ಪ್ರಮಾಣ ಕನ್ನಡವೇ ಆಗಿದೆ. ದೈನಂದಿನ ಸನ್ನಿವೇಶಗಳಲ್ಲಿ ಪ್ರಮಾಣವನ್ನು ಬಳಸುವುದು ಪ್ರತಿಷ್ಠೆಯ

ಸಂಕೇತವಾಗಿದೆ. ಹಾಗೂ ಹಿಂದುಳಿದ ಸಮುದಾಯಗಳು ಮುಂಚಲನೆ ಸಾಧಿಸಲು ಆಧುನಿಕ ಶಿಕ್ಷಣದ ಮೂಲಕ ಪಡೆಯುವ ಕೌಶಲವಾಗಿ ಪ್ರಮಾಣ ಕನ್ನಡ ಮುಖ್ಯವಾಗುತ್ತದೆ. ಇದಕ್ಕೆ ಪ್ರಮಾಣ ಕನ್ನಡದ ಜೊತೆ ಅಧಿಕಾರ ಬೆಸೆದುಕೊಂಡಿರುವುದು ಕಾರಣವಾಗಿದೆ. ಇದು ಶಿಕ್ಷಣ, ಮಾಧ್ಯಮ, ಆಡಳಿತದ ಮೂಲಕ ಸದಾ ಪ್ರಭಾವ ಬೀರುವುದರಿಂದ ಜನ ಪ್ರಮಾಣ ಕನ್ನಡದೆಡೆಗೆ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ ಎರಡೂ ನೆಲೆಗಳಲ್ಲಿ ಒಲೆಯುತ್ತಿದ್ದಾರೆ.

೬.೫.೨. ಕೋಟ ಒಳನುಡಿ ಮತ್ತು ಇಂಗ್ಲಿಷ್

ಇಂಗ್ಲಿಷ್ ಭಾಷೆ ಇಡೀ ಜಗತ್ತಿಗೆ ತೆರೆದ ದಾರಿ. ಇದು ಶಿಕ್ಷಣ, ಮಾರುಕಟ್ಟೆಯ ಮೂಲಕ ಎಲ್ಲೆಲ್ಲೂ ತಣ್ಣನೆ ಹಿಡಿತ ಸಾಧಿಸುತ್ತಿದೆ. ಪ್ರಮಾಣ ಕನ್ನಡ ತೆರೆಯುವ ದಾರಿಗಿಂತ ಹೆಚ್ಚಿನ ಅವಕಾಶಗಳ ಬಾಗಿಲನ್ನು ಇಂಗ್ಲಿಷ್ ತೆರೆಯುತ್ತದೆ. ಜೊತೆಗೆ ಇಂಗ್ಲಿಷ್‌ನ ಕಲಿಕೆ ಮತ್ತು ಬಳಕೆ ಪ್ರತಿಷ್ಠೆಯ ಪ್ರಶ್ನೆಯೂ ಆಗಿದೆ. ಇವುಗಳಿಂದಾಗಿ ಇಂದು ಈ ಪರಿಸರದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳು ಹೆಚ್ಚಾಗಿವೆ, ಅಲ್ಲಿಗೆ ಹೋಗುವ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ಮಾತಿನ ಸಂದರ್ಭದಲ್ಲಿ ಅನಕ್ಷರಸ್ಥರು ಅಥವಾ ಒಂದೋ ಎರಡೋ ತರಗತಿವರೆಗೆ ಶಾಲೆಗೆ ಹೋದವರೂ ಮಾತಿನ ಸಂದರ್ಭದಲ್ಲಿ 'ನುಡಿ ಮಿಶ್ರಣ' ಮಾಡುವುದು ಕಂಡುಬರುತ್ತದೆ. ಉನ್ನತ ಶಿಕ್ಷಣ ಹೊಂದಿದವರಲ್ಲಿ 'ನುಡಿ ಜಗಿತ'ವೂ ಕಂಡುಬರುತ್ತದೆ. ಅನಕ್ಷರಸ್ಥ ಮಹಿಳೆಯರೂ ಪ್ರಮಾಣ ಕನ್ನಡದ ಪದಗಳು, ವಾಕ್ಯ ರಚನೆಯತ್ತ ವಾಲಿರುವುದು ಕನರಾಡಿ ವಾದಿರಾಜ ಭಟ್ ಸಂಪಾದಿಸಿದ ಕತೆಗಳಲ್ಲಿ ಮತ್ತು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

ಉದಾಹರಣೆಗೆ, ಬೋಟ್, ಐಸ್‌ಕ್ರೀಂ, ಪಿಚ್ಚರ್, ಮೋಟ್ರ್ ಮುಂತಾದ ಪದಗಳು ಅನಕ್ಷರಸ್ಥ ವಕ್ತೃಗಳು ಹೇಳಿದ ಕತೆಗಳಲ್ಲಿ ಬಂದಿವೆ.

೬.೫.೩. ಕೋಟ ಒಳನುಡಿ ಮತ್ತು ಸಂಸ್ಕೃತ

ಸಂಸ್ಕೃತವನ್ನು 'ದೇವಭಾಷೆ' ಎಂದು ಕರೆಯುವ ಮೂಲಕ ಅದನ್ನು ಸಾಮಾನ್ಯ ಭಾಷೆಗಿಂತ ಮೇಲ್‌ಸ್ತರದಲ್ಲಿ ನೋಡುವ ಬಗೆ ಭಾರತದಾದ್ಯಂತ ಕಂಡುಬರುವ ಸಂಗತಿ. ಕೋಟ ಭಾಷಿಕ ಸಮುದಾಯದಲ್ಲಿ ಆಚರಣೆಯ ಸ್ತರದಲ್ಲಿ ಸಂಸ್ಕೃತ ಪ್ರಾಮುಖ್ಯ ಪಡೆಯುತ್ತದೆ. ಇಂದು ಬ್ರಾಹ್ಮಣೇತರರ ಆಚರಣೆಗಳಲ್ಲೂ ಪುರೋಹಿತರ ಪ್ರವೇಶದ ಮೂಲಕ ಇದು ಜಾಗ ಪಡೆದಿದೆ. ಮಾತಿನ ಸಂದರ್ಭದಲ್ಲಿ ಸಮುದಾಯ ಹೆಚ್ಚು ಸಂಸ್ಕೃತ ಶಬ್ದಗಳನ್ನು ಬಳಸಿ ಮಾತಾಡುವುದನ್ನು 'ಶಿಷ್ಟ' ಎಂದು ಭಾವಿಸುತ್ತದೆ. ಔಪಚಾರಿಕ ಸಂದರ್ಭದಲ್ಲಿ ಮಾತಾಡುವಾಗ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿರುವುದನ್ನು ಗಮನಿಸಬಹುದು. ಹಾಗೇ ಬ್ರಾಹ್ಮಣರ ಮಾತಿನಲ್ಲಿ ಸಂಸ್ಕೃತ ಪದಗಳು ಹೆಚ್ಚಾಗಿರುತ್ತವೆ. ತಮ್ಮನ್ನು ತಾವು ಮೇಲ್ದರ್ಜೆಗೇರಿಸಿಕೊಳ್ಳುವ ರೀತಿಯಾಗಿ ಈ ಬಗೆಯ ಮಾತಿನ ಅನುಕರಣೆ ಕಾಣುತ್ತದೆ.

೬.೫.೪. ಕೋಟ ಒಳನುಡಿ ಮತ್ತು ಪರಿಸರದ ಇತರ ಭಾಷೆಗಳು

ಕೋಟ ಭಾಷಿಕ ಪರಿಸರದ ಜೊತೆಗೆ ನಿಕಟತೆಯಿರುವ ಇತರ ಭಾಷಿಕ ಪರಿಸರಗಳಿವೆ. ಅವುಗಳೆಂದರೆ, ತುಳು, ಕೊಂಕಣಿ, ಉರ್ದು, ಕೊರಗ ಮತ್ತು ಮರಾಠಿ ನಾಯ್ಕರ ಭಾಷೆ ಇವುಗಳು. ತುಳು ಭಾಷೆ ಮತ್ತು ಕೋಟಕನ್ನಡದಲ್ಲಿ ಕೆಲವು ಸಮಾನ ಪದಗಳಿದ್ದರೂ ಇವು ಕೊಡುಕೊಳೆಯ ಭಾಗವಾಗಿ ಬಂದಿರುವುದಕ್ಕಿಂತ ಇವು ಒಂದೇ ಭಾಷಿಕ ಕುಟುಂಬಕ್ಕೆ ಸೇರಿರುವುದರಿಂದ ಇರುವ ಸಾಮ್ಯ ಎಂದು ತೋರುತ್ತದೆ. ಈ ಪ್ರದೇಶವನ್ನು ತುಳುನಾಡಿನಡಿಯಲ್ಲಿ ವಿದ್ವಾಂಸರು ತಂದು ಅಧ್ಯಯನ ಮಾಡಿದ ಸಂದರ್ಭದಲ್ಲಿ ಇದು ಪ್ರತ್ಯೇಕವಾದ 'ಕನ್ನಡ ನಾಡು' ಎಂದು ಇಲ್ಲಿನ ಜನ ಸ್ಥಾಪಿಸಿಕೊಂಡ ಬಗೆ ಅನನ್ಯತೆಯನ್ನು ಸಾಬೀತುಪಡಿಸುತ್ತದೆ. ಈಗಲೂ ತುಳುಭಾಷಿಕ ಪರಿಸರ ಹತ್ತಿರವೇ ಇದ್ದರೂ ಕೋಟಕನ್ನಡದ ಪರಿಸರದಲ್ಲಿ ತುಳು-ಕನ್ನಡ ದ್ವಿಭಾಷಿಕ ಸನ್ನಿವೇಶಗಳು ತುಂಬಾ ಕಡಿಮೆ. ತುಳುನಾಡಿನ ಭೂತದ ಕೋಲ ಈ ಭಾಷಿಕ ಪರಿಸರದಲ್ಲಿ ಪಾಣಾರಾಟ ಎಂಬ ಹೆಸರಿನಿಂದ ಇದೆ. ಇಲ್ಲಿ ಪಾತ್ರಿಗಳಾಗಿರುವವರು ತುಳುನಾಡಿನಿಂದ ಬಂದ ಕುಡುಬಿ ಸಮುದಾಯದವರು. ಇವರನ್ನು 'ಪಾಣರು' ಎಂದು ಕರೆಯುತ್ತಾರೆ. 'ಪಾಣಾರಾಟ'ದ ಸಂದರ್ಭದಲ್ಲಿ ಪಾತ್ರಿ ತುಳುವಿನಲ್ಲಿ ಮಾತಾಡಿದರೂ ಯಜಮಾನ 'ನಂಗೆ ತುಳು ಅರ್ಥಾತಿಲ್ಲ, ಇದು ತೆಂಕಲ್ಲ, ಬಡ್ಗು, ಕನ್ನಡದಗೇ ನುಡಿ ಕೊಡ್ಕ್' ಎನ್ನುವುದನ್ನು ಕಾಣುತ್ತೇವೆ. ಇದನ್ನು ಅನನ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಭಾಷಿಕರಿಗಿರುವ ಕಳಕಳಿಯ ಸೂಚಕವಾಗಿ ನೋಡಬಹುದು. ಆಚರಣೆಗಳಲ್ಲಿ ಈ ಎರಡು ಭಾಷಿಕ ಸಮುದಾಯಗಳ ನಡುವೆ ಹಲವು ಸಾಮ್ಯತೆಯಿದ್ದರೂ ಭಾಷಿಕ ಕೊಡುಕೊಳೆ ದೊಡ್ಡ ಪ್ರಮಾಣದಲ್ಲಿ ಇಲ್ಲ ಎನಿಸುತ್ತದೆ. ಇನ್ನು ಕೊಂಕಣಿ, ಉರ್ದು, ಕೊರಗ, ಮರಾಠಿ ಭಾಷೆಗಳ ನೆಲೆಯಲ್ಲಿ ಗಮನಿಸುವಾಗ ಇಲ್ಲಿನ ಪದ ಅಲ್ಲಿ ಹೋಗಿರುವ ಸಾಧ್ಯತೆ ಇದ್ದರೂ ಆ ಭಾಷೆಗಳ ಪದಗಳು ಕೋಟಕನ್ನಡದಲ್ಲಿ ಜಾಗ ಪಡೆದಿರುವುದು ಕಾಣುವುದಿಲ್ಲ.

ಹೀಗಾಗಿ ಭಾಷೆಗಿರುವ ಪ್ರತಿಷ್ಠೆ, ಉಪಯೋಗಮೌಲ್ಯ ಮತ್ತು ಅಧಿಕಾರ ಭಾಷಿಕ ಸಂಪರ್ಕದ ದೃಷ್ಟಿಯಿಂದ ಮುಖ್ಯವಾಗುತ್ತದೆ ಎಂಬುದು ಕೋಟ ಭಾಷಿಕ ಪರಿಸರದ ವಿಚಾರದಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಜೊತೆಗೆ ಭಾಷೆಯ ಮೂಲಕ 'ಅನನ್ಯತೆ'ಯನ್ನು ಕಾಪಾಡಿಕೊಳ್ಳುವ ಬಗೆಯನ್ನು ಕೂಡಾ ಇಲ್ಲಿ ಕಾಣಬಹುದು.

೬.೬. ಆಧುನೀಕರಣ ಮತ್ತು ಸಂಸ್ಕೃತೀಕರಣ

ಇಲ್ಲಿ ಆಧುನೀಕರಣವನ್ನು ಮುಂಚಲನೆ ಎಂದೂ ಸಂಸ್ಕೃತೀಕರಣವನ್ನು ಮೇಲ್ಚಲನೆ ಎಂದೂ ಅರ್ಥೈಸಿಕೊಳ್ಳಲಾಗಿದೆ.

ಆಧುನೀಕರಣ: ಆಧುನಿಕತೆ ಇಲ್ಲಿ ಶಿಕ್ಷಣದ, ಹೋಟೆಲ್ ಉದ್ಯಮ, ವಲಸೆ, ರಾಷ್ಟ್ರೀಯ ಹೆದ್ದಾರಿ, ಮಾಧ್ಯಮಗಳ ಮೂಲಕ ಕಾಲಿಟ್ಟಿದೆ. ಆಧುನಿಕತೆ ಒಂದು ಉಪಭಾಷಿಕ ಸಮುದಾಯದಲ್ಲಿ ಪ್ರವೇಶ ಪಡೆದಾಗ ಜಾಗತಿಕವಾಗಿ ಆಗಿರುವಂತಹ ಬದಲಾವಣೆಗಳ ಹಿನ್ನೆಲೆಯಲ್ಲಿ ಕೋಟ ಭಾಷಿಕ ಸಮುದಾಯವನ್ನೂ ನೋಡಿದಾಗ ಇದು ಅತ್ಯಂತ ಭಿನ್ನವಾಗಿ ವರ್ತಿಸುವಂತೆ ಕಂಡು ಬರುವುದಿಲ್ಲ.

ಕೃಷಿ ಆಧಾರಿತ ಅರ್ಥವ್ಯವಸ್ಥೆ ವಿಘಟನೆಗೊಂಡು ಜಾತಿ ಆಧಾರಿತ ಸಮಾಜ ನಿಧಾನವಾಗಿ ಬದಲಾಗುತ್ತಿರುವ ಸಂದರ್ಭದಲ್ಲಿ ಆಧುನಿಕ ಶಿಕ್ಷಣದಿಂದ ಮಾತ್ರ ಒಳ್ಳೆಯ ಬದುಕನ್ನು ರೂಪಿಸಿಕೊಳ್ಳುವುದು ಸಾಧ್ಯ ಎಂಬ ಕಲ್ಪನೆ ಜನರಲ್ಲಿ ಆಳವಾಗಿ ಬೇರೂರಿದೆ. ಒಂದು ಒಳನುಡಿಯನ್ನಾಡುವ ಪ್ರದೇಶದಲ್ಲಿ ಆಧುನಿಕ ಶಿಕ್ಷಣ ಎಂಬುದು ಆ ನುಡಿಯ ಪ್ರಮಾಣ ಪ್ರಭೇದ ಮತ್ತು ಇಂಗ್ಲಿಷ್‌ನ ಮೂಲಕ ಬರುತ್ತದೆ. ಆರಂಭದಲ್ಲಿ ಕನ್ನಡ ಶಾಲೆಗಳೇ ಹೊಸ ಬದುಕಿನ ಬಾಗಿಲುಗಳಾಗಿದ್ದವು. ಈಗ ಆ ಜಾಗವನ್ನು ನಿಧಾನವಾಗಿ ಇಂಗ್ಲಿಷ್ ಆವರಿಸುತ್ತಿರುವುದು ಕೋಟ ಪ್ರದೇಶದಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

ಪ್ರಮಾಣ ಕನ್ನಡ ಮತ್ತು ಇಂಗ್ಲಿಷ್ ಇವೆರಡೂ ಯಜಮಾನ ಭಾಷೆಗಳಾಗಿವೆ ಮಾತ್ರವಲ್ಲ ಇವು ಇಲ್ಲಿನ ಜನರಿಗೆ ಹೊಸ ಅವಕಾಶಗಳ ಹೆದ್ದಾರಿಯಾಗಿವೆ. ತನ್ನ ಸುತ್ತಲಿನ ಭಾಷೆಗಳ ಮಧ್ಯೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವಂತೆ ಕೋಟ ಕನ್ನಡ ಆಧುನಿಕತೆಯ ಜೊತೆಗೆ ಹೆಣೆದುಕೊಂಡಿರುವ ಇಂಗ್ಲಿಷ್ ಭಾಷೆಯ ಜೊತೆ ಮತ್ತು ಪ್ರಮಾಣ ಕನ್ನಡದ ಜೊತೆ ವರ್ತಿಸುವುದಿಲ್ಲ. ಇಲ್ಲಿ ಅವುಗಳ ಜೊತೆ ಮರುಹೊಂದಾಣಿಕೆ ಮಾಡಿಕೊಳ್ಳುವ ಬಗೆ ಕಾಣುತ್ತದೆ. ಹೀಗೆ ಒಂದು ಭಾಷಿಕ ಸಮುದಾಯದಲ್ಲಾಗುವ ಪಲ್ಲಟದ ಜೊತೆ ಜೊತೆಗೇ ಆ ಪ್ರಕ್ರಿಯೆಯಲ್ಲಿ ಭಿನ್ನ ಭಾಷೆಗಳು ಬಳಕೆಯಾಗುವ ಭಿನ್ನ ಸ್ತರಗಳ ಮರುನಿರ್ವಚನವೂ ನಡೆಯುತ್ತದೆ. ಪ್ರಮಾಣ ಕನ್ನಡ ಇಲ್ಲಿ ಶಿಷ್ಟತೆಯನ್ನು ತೋರಿಸುವಲ್ಲಿ ಮತ್ತು ವ್ಯವಹಾರಗಳ ಸ್ತರದಲ್ಲಿ ಬಳಕೆಯಾಗುತ್ತದೆ. ಇಂಗ್ಲಿಷ್ ಹೊಸ ಅವಕಾಶಗಳ ಮೂಲಕ ನಗರದೆಡೆಗೆ ಸೆಳೆಯುವ, ವ್ಯವಹಾರದ ಜಗತ್ತಿನ ಭಾಷೆಯಾಗಿ ತನ್ನ ನೆಲೆ ಪಡೆದುಕೊಂಡಿದೆ. ಇವುಗಳ ನಡುವೆ ಸಂಸ್ಕೃತ ಭೂಯಿಷ್ಠವಾದ ಒಂದು ಶೈಲಿ ಶಿಷ್ಟ ಆಚರಣೆಗಳ ಮತ್ತು ವಿದ್ವತ್ತಿನ ಜಗತ್ತಿಗೆ ನಿರ್ದಿಷ್ಟವಾಗಿದೆ. ಕೋಟ ಒಳನುಡಿ ದೈನಂದಿನ ವ್ಯವಹಾರ, ವೈಯಕ್ತಿಕ ಸಂಬಂಧಗಳ ನೆಲೆಯಲ್ಲಿ ಮತ್ತು ಆಚರಣೆಗಳ ಜಗತ್ತಿನಲ್ಲಿ ನೆಲೆ ಪಡೆದುಕೊಂಡಿದೆ.

ಒಳನುಡಿಯೊಂದು ದೈನಂದಿನ ವ್ಯವಹಾರಗಳಲ್ಲಿ ತನ್ನ ನೆಲೆ ಕಂಡುಕೊಂಡಿರುವುದು ಅತ್ಯಂತ ಆಧುನಿಕ ಸಮಾಚಾರವೇನಲ್ಲ. ಏಕೆಂದರೆ ಒಳನುಡಿ ಎಂದೂ ಶಿಕ್ಷಣ ಮಾಧ್ಯಮದ

ಭಾಷೆಯಾಗಿ ಬಳಕೆಯಾದುದಿಲ್ಲ. ಇಲ್ಲಿನ ಜನ ಇಂದಿಗೂ ಶಿಷ್ಟತೆಗೆ ಹೊರಳುವುದು ಪ್ರಮಾಣ ಭಾಷೆಯ ಮೂಲಕವೇ. ಕೋಟ ಕುಂದಾಪುರ ಪ್ರದೇಶದ ಜನಪದ ಸಾಹಿತ್ಯವನ್ನು ಅದರಲ್ಲೂ ವಿಶೇಷವಾಗಿ ಹಾಡುಗಳನ್ನು ಗಮನಿಸಿದಾಗ ಅವು ನಾವು ಈಗ ಕರೆಯುವ ಕೋಟ ಕನ್ನಡದ ವಿನ್ಯಾಸದಲ್ಲಿಲ್ಲ. ಬ್ರಾಹ್ಮಣೇತರರ ಹಾಡುಗಳಲ್ಲಿ ಈ ವ್ಯತ್ಯಾಸವಿದ್ದರೂ ಅವೂ ಮೊದಲಿನ ಸ್ವರೂಪವನ್ನು ಉಳಿಸಿಕೊಂಡಿಲ್ಲ. ಸಾಗೆಂದು ಅವು ಈಗ ನಾವು ಬಳಸುವ ಪ್ರಮಾಣ ಕನ್ನಡವನ್ನೂ ಸಂಪೂರ್ಣವಾಗಿ ಹೋಲುವುದಿಲ್ಲ. ಆದರೆ ಕತೆಗಳ ವಿಚಾರದಲ್ಲಿ ಇದು ಹೀಗೆ ಹೊರಳುವುದಿಲ್ಲ. ಕತೆಗಳಲ್ಲಿ ಆಡುನುಡಿಯ ಬಳಕೆ ಹೆಚ್ಚು. ಹಾಡಿನ ವಿಚಾರಕ್ಕೆ ಬಂದಾಗ ಅದು ಆಯಾ ಸಂದರ್ಭದಲ್ಲಿ ತಾನು ಪ್ರಮಾಣ ಎಂದುಕೊಂಡ ಪ್ರಭೇದದೆಡೆಗೆ ಒಲೆಯುವುದನ್ನು ಕಾಣಬಹುದು. "ಜನಪದ ಗೀತಗಳನ್ನು ಹೇಳುವವರು ತಮ್ಮ ಗ್ರಾಮ್ಯರೂಪ ಗಳನ್ನು ಹೇಳಲು ಸಂಕೋಚಪಟ್ಟು ವಿದ್ಯಾವಂತರೊಡನೆ ತಮ್ಮಿಂದ ಸಾಧ್ಯವಾದಷ್ಟು ತಿದ್ದಿ ಗ್ರಾಂಥಿಕ ರೂಪದಲ್ಲಿ ಹೇಳುವುದು"(ಗುಂಡ್ಮಿ ಚಂದ್ರಶೇಖರ ಐತಾಳ, ಮದ್ದುಂಟೆ ಜನನ ಮರಣಕ್ಕೆ, ಪು.೩೮) ಇದನ್ನು ದೃಢೀಕರಿಸುತ್ತದೆ.

ಅಲ್ಲದೆ, ಆಧುನಿಕತೆಯಿಂದುಂಟಾದ ಹಲವು ಪರಿಣಾಮಗಳಲ್ಲೊಂದು ಜನಪದರ ಸೃಜನ ಶೀಲತೆಯ 'ಜಾಗ'(Space)ವನ್ನು ಆಕ್ರಮಿಸಿಕೊಂಡಿರುವುದು. ಸಿನೆಮಾ, ಟಿ.ವಿ, ಧ್ವನಿಮುದ್ರಿತ ಹಾಡುಗಳು ಹಿಂದೆ ಜನರು ಮನರಂಜನೆಗಾಗಿ ಹೇಳುತ್ತಿದ್ದ ಕತೆಗಳು, ಕಟ್ಟುತ್ತಿದ್ದ ಹಾಡುಗಳು ಈ ಅವಕಾಶವನ್ನು ಆವರಿಸಿವೆ. ವಿಶೇಷ ಸಂದರ್ಭಗಳಲ್ಲಿ ಆರತಿ ಎತ್ತುವ ಹಾಡು, ಶೋಭಾನೆ ಹಾಡುಗಳ ಬದಲಾಗಿ ಕ್ಯಾಸೆಟ್ ಹಾಡುಗಳು ಕೇಳಿಸುತ್ತವೆ.

ಆದರೆ ಪ್ರಮಾಣ ಕನ್ನಡದೊಂದಿಗೆ ಇಂಗ್ಲಿಷ್ ಪ್ರವೇಶಿಸುತ್ತಿರುವುದು ಜಾಗತೀಕರಣದ ನಂತರದಲ್ಲಿ ನಡೆಯುತ್ತಿರುವ ಪ್ರಮುಖ ವಿದ್ಯಮಾನ. ಇದರಿಂದ ನಿಧಾನವಾಗಿ ಆಡುನುಡಿ ಬಳಕೆಯಾಗುತ್ತಿರುವ ಸ್ತರಗಳಲ್ಲಿ ಪಲ್ಲಟಗಳಾಗುತ್ತಿರುವುದು ಅರಿವಿಗೆ ಬರುತ್ತದೆ. ಆಧುನಿಕ ಶಿಕ್ಷಣ ಪಡೆದುಕೊಂಡವರು ದಿನನಿತ್ಯದ ಮಾತುಕತೆಗಳಲ್ಲಿಯೂ ಪ್ರಮಾಣ ಕನ್ನಡದತ್ತ ಒಲೆಯುತ್ತಾರೆ. ಇದು ಬಹಳ ಸ್ಪಷ್ಟವಾಗಿ ಕಂಡುಬರುವುದು ಬ್ರಾಹ್ಮಣ ಗಂಡಸರಲ್ಲಿ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾತಾಡಿಸಿದ ಬಹುತೇಕ ಬ್ರಾಹ್ಮಣ ಗಂಡಸರು ಕೋಟ ಕನ್ನಡ ಮಾತಾಡುವಾಗಲೂ ಬಹುಪಾಲು ಅದರ ಗ್ರಾಮ್ಯ ವರಸೆಯನ್ನು ಬಿಟ್ಟು ಪ್ರಮಾಣದತ್ತ ಹೊರಳುವುದನ್ನು ಗಮನಿಸ ಲಾಗಿದೆ. ಜೊತೆಗೆ ಇತರ ಸಮುದಾಯದ ಜನರಿಗಿಂತ ಹೆಚ್ಚು ಇವರು ಇಂಗ್ಲಿಷ್‌ಗೆ ತಮ್ಮನ್ನು ತೆರೆದುಕೊಂಡಿದ್ದಾರೆ. ಮಾತಾಡುವ ಸಂದರ್ಭದಲ್ಲಿ ನುಡಿಜಗಿತ ಸರ್ವೇಸಾಮಾನ್ಯ. ಅದೇ ಆರ್ಥಿಕವಾಗಿ ಸಂಪನ್ನರಾದ ಇತರ ಸಮುದಾಯದ ಜನರು ಈ ಮಟ್ಟದಲ್ಲಿ ಪ್ರಮಾಣ

ಕನ್ನಡದತ್ತ ಒಲೆಯುವುದು ಕಂಡುಬರುವುದಿಲ್ಲ. ಅದರಲ್ಲೂ ಬಂಟರು ಬಹಳ ಪ್ರಬಲವಾಗಿ ತಮ್ಮ ಭಾಷಿಕ ಅಸ್ಮಿತೆಗೆ ಆತುಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ನಾಡವರೆಂದು ಕರೆಸಿಕೊಳ್ಳುವ ಬಂಟರು ಕನ್ನಡ ಭಾಷೆಯನ್ನು ತಮ್ಮ ಅಸ್ಮಿತೆಯನ್ನು ಬೆಸೆದುಕೊಂಡ ಬಗೆಯನ್ನು ಎಚ್.ಎಲ್.ನಾಗೇಗೌಡ ಗುರುತಿಸಿದ್ದಾರೆ. "ಇವರು(ನಾಡವರು) ಕನ್ನಡ ನಾಡಿನವರು. ಬೇಲೂರು, ಸಾಗರ ಮುಂತಾದ ಕಡೆಗಳಿಂದ ಬಂದು ಇಲ್ಲಿ ನೆಲೆಸಿದವರೆಂದು ಹೇಳುತ್ತಾರೆ. ಇವರಿಂದಾಗಿ ಈ ಪ್ರದೇಶದಲ್ಲಿ ಕನ್ನಡ ಭಾಷೆ ಮನೆಮಾತಾಯಿತು"(ನಾಗೇಗೌಡ.ಎಚ್.ಎಲ್; ೨೦೦೭;ಪು:೨೬೪). ಪ್ರಬಲ ಸಮುದಾಯವಾಗಿದ್ದ ಬಂಟರು ಕನ್ನಡ ಭಾಷೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವುದರಿಂದ ಅವರಿಗೆ ಅಧೀನವಾಗಿದ್ದ ಸಮುದಾಯಗಳೂ ಜೊತೆಗೆ ಗುರುತಿಸಿಕೊಂಡವು ಎನ್ನಬಹುದು.

'ಉಳುವವನೇ ಭೂಮಿಯ ಒಡೆಯ' ಕಾನೂನು ಬಂದ ನಂತರದಲ್ಲಿ ಸಮಾಜ ಮರುವಿಂಗಡನೆಗೊಳ್ಳುವ ಪ್ರಕ್ರಿಯೆಯನ್ನು ಗಮನಿಸುವಾಗ ಮೊದಲನೇ ಹಂತದಲ್ಲಿ ಬಹುಮುಖ್ಯವಾಗಿ ಕಾಣಿಸಿಕೊಳ್ಳುವುದು ಹೋಟೆಲ್ ಉದ್ಯಮದ ವ್ಯಾಪಕ ಬೆಳವಣಿಗೆಯಾದರೆ ಎರಡನೇ ಹಂತದಲ್ಲಿ ಕಾಣಿಸಿಕೊಳ್ಳುವುದು ಆಧುನಿಕ ಶಿಕ್ಷಣ ಮತ್ತು ಅದರ ಮೂಲಕ ತೆರೆದುಕೊಂಡ ದಾರಿ. ಇಲ್ಲಿ ಭಾಷೆ ಮಹತ್ವದ ಪಾತ್ರವನ್ನು ವಹಿಸುತ್ತದೆ. ಏಕೆಂದರೆ ಭಾಷೆ ಎನ್ನುವುದೂ ಒಂದು 'ಸಾಂಸ್ಕೃತಿಕ ಬಂಡವಾಳ'ವಾಗಿ ಅಧುನಿಕ ಜಗತ್ತಿನಲ್ಲಿ ಕೆಲಸ ಮಾಡುತ್ತದೆ. ಆಧುನಿಕ ಜಗತ್ತಿನಲ್ಲಿ ವ್ಯಾವಹಾರಿಕ ಯಶಸ್ಸಿನತ್ತ ಒಯ್ಯುವ ಈ ಭಾಷೆಗಿರುವ ಮೌಲ್ಯ ನಿಧಾನವಾಗಿ ಬೆಳೆಯುತ್ತಾ ತಮ್ಮ ಆಡುನುಡಿಗಳ ವ್ಯಾವಹಾರಿಕ ಮೌಲ್ಯವನ್ನು ಮಸುಕು ಮಾಡುತ್ತದೆ. ತಮ್ಮ ಒಳನುಡಿಯ ಬಗ್ಗೆ ಕೀಳರಿಮೆ ಬೆಳೆಯುತ್ತದೆ. ನಿಧಾನವಾಗಿ ಬದುಕಿನ ಎಲ್ಲ ಸ್ತರಗಳಿಂದಲೂ ಅದು ಜಾರತೊಡಗುವ ವಿದ್ಯಮಾನ ಇಂದು ಜಾಗತಿಕವಾಗಿ ನಡೆಯುತ್ತಿರುವಂಥ ಸಂಗತಿ. ಕೋಟ ಕನ್ನಡ ಈ ಸಂಕ್ರಮಣ ಸ್ಥಿತಿಯಲ್ಲಿ ಇದೆ.

ಬದುಕುವ ವಿಧಾನ ಬದಲಾದಂತೆ ಆಡುನುಡಿಗಳು ತಮ್ಮ ಔಪಯೋಗಿಕ ಮೌಲ್ಯ ಕಳೆದುಕೊಳ್ಳುತ್ತಾ ಆಚರಣೆಯ ಸ್ತರದಲ್ಲಿ ಮತ್ತು ಕೇವಲ ಒಂದು ಎತ್ನಿಕ್ ಐಡೆಂಟಿಟಿಯಾಗಿ ಮಾತ್ರ ಅಸ್ಮಿತೆಯನ್ನು ಕಂಡುಕೊಳ್ಳುತ್ತಿರುವುದು ಬುಡಕಟ್ಟು ಜನಾಂಗಗಳ ಭಾಷೆಗಳ ಅಧ್ಯಯನದಲ್ಲಿ ಕಂಡುಬರುವ ಅಂಶ. ಇದೇ ವಿಚಾರ ಪ್ರಾದೇಶಿಕ ಒಳನುಡಿಗಳ ವಿಚಾರಕ್ಕೂ ಅನ್ವಯವಾಗುತ್ತದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಸಂಸ್ಕೃತೀಕರಣ: ಸಂಸ್ಕೃತೀಕರಣ ಎಂಬುದು ತಳಸಮುದಾಯದ ಜನ ಮೇಲ್‌ಚಲನೆ ಸಾಧಿಸುವ ಭಾಗವಾಗಿ ಮೇಲ್‌ಸ್ತರದಲ್ಲಿರುವ ಜನರನ್ನು ಅನುಕರಿಸುವುದು. ಇಲ್ಲಿ ಮಡಿ

ಮತ್ತು ಮೈಲಿಗೆಯ ಪರಿಕಲ್ಪನೆಗಳು ಪ್ರಧಾನವಾಗುತ್ತವೆ. ಹೀಗೆ ನೋಡಿದಾಗ ಕೋಟ ಭಾಷಿಕ ಸಮುದಾಯದಲ್ಲಿ ಸಂಸ್ಕೃತೀಕರಣದ ಪ್ರಕ್ರಿಯೆಯನ್ನು ಹೆಸರಿಡುವುದರಲ್ಲಿ ಮತ್ತು ಆಚರಣೆಗಳನ್ನು ಅನುಕರಿಸುವಲ್ಲಿ ಕಾಣಬಹುದು.

ಮಕ್ಕಳ ಹೆಸರಿಡುವಲ್ಲಿ ಮತ್ತು ಹಿಂದೆ ಇದ್ದ ಜನರಿಗೆ ಗ್ರಾಮ್ಯ ಎನಿಸಿದ ಪದಗಳ ಜಾಗದಲ್ಲಿ ಮರುನಾಮಕರಣ ಮಾಡುವಲ್ಲಿ ಸಂಸ್ಕೃತೀಕರಣದ ಪ್ರಕ್ರಿಯೆ ಸ್ಪಷ್ಟವಾಗಿ ಕಾಣಿಸುತ್ತದೆ. ಬ್ರಾಹ್ಮಣೇತರಲ್ಲಿ ಅಜ್ಜನ ಹೆಸರು ಇಡುವ ಪದ್ಧತಿ ಇಲ್ಲ. ಸಂಸ್ಕೃತೀಕರಣದ ಭಾಗವಾಗಿ ಬ್ರಾಹ್ಮಣೇತರರೂ 'ಕುಂಡಲಿ' ಬರೆಸಲು ಆರಂಭಿಸಿದ್ದಾರೆ. ಈಗ ನಕ್ಷತ್ರವನ್ನು ಅನುಸರಿಸಿ ಹೆಸರು ಇಡುವ ಕ್ರಮ ಕಾಣಿಸುತ್ತದೆ. ಮಗು ಯಾವ ನಕ್ಷತ್ರದಲ್ಲಿ ಹುಟ್ಟುತ್ತದೆಯೋ ಆ ನಕ್ಷತ್ರದ ಮೊದಲ ಅಕ್ಷರದಿಂದ ಆರಂಭವಾಗುವ ಹೆಸರು ಇಡುವ ಕ್ರಮ ಇತ್ತೀಚಿನ ದಿನಗಳಲ್ಲಿ ಬೆಳೆದುಬಂದಿದೆ. ಆಧುನಿಕ ಹೆಸರುಗಳನ್ನು ಮತ್ತು ಶಿಷ್ಟ ಎನಿಸುವ ಹೆಸರನ್ನು ಇಡುತ್ತಾರೆ.

ಉದಾಹರಣೆಗೆ,

ಬ್ರಾಹ್ಮಣೇತರರಲ್ಲಿ ಅಜ್ಜ ಅಜ್ಜಿಯ ಹೆಸರು ಚಂದು, ಬಚ್ಚಿ, ಕುಷ್ಟ, ಬಾಬು, ತಿಮ್ಮಣ್ಣ ಹೀಗಿದ್ದರೆ ಅವರ ಮಕ್ಕಳ ಹೆಸರು ಶಂಕರ, ಯೋಗೀಶ, ಆನಂದ ಹೀಗೆ ಬದಲಾಗಿವೆ. ಬತ್ತಾಡರ ಮನೆಗಳಲ್ಲಿ ಶಮಂತ ಭಾರ್ಗವ ಎಂಬ ಅತ್ಯಂತ 'ಶಿಷ್ಟ' ಹೆಸರುಗಳು ಕಾಣಿಸುತ್ತವೆ. ಇವು ಸಂಸ್ಕೃತೀಕರಣ ಪ್ರಕ್ರಿಯೆಯ ಸೂಚಕಗಳು.

ಊರು, ಪ್ರದೇಶ, ದೈವಗಳ ವಿಚಾರಕ್ಕೆ ಬಂದರೆ ಹಿಂದೆ ಇದ್ದ ಹೆಸರನ್ನು ಶಿಷ್ಟವಾಗಿ ಬದಲಾಯಿಸುವ ಪ್ರಕ್ರಿಯೆ ಕಾಣುತ್ತದೆ. ಕೆಲವು ಉದಾಹರಣೆಗಳನ್ನು ಗಮನಿಸುವುದಾದರೆ,

ಗುರಿನಕೆರೆ–ವರುಣತೀರ್ಥ

ಹೋರ್‌ಬಬ್ಬರ್ಯ–ಮಹಿಷಬಬ್ಬರ್ಯ

ಬಸ್ರೂರಿನಲ್ಲಿ ಪಂಜುರ್ಲಿ–ವರಾಹ ಮೂರ್ತಿ

ಹಾಡುಹಳ್ಳಿ–ಸಂಗೀತಪುರ

ಬಸ್ರೂರು–ವಸುಪುರ

ಆಚರಣೆಗಳಲ್ಲಿ ಬ್ರಾಹ್ಮಣೀಕರಣ ಇಲ್ಲಿನ ಸಮುದಾಯಗಳಲ್ಲಿ ಎದ್ದುಕಾಣುತ್ತದೆ. ಹಿಂದೆ ಬ್ರಾಹ್ಮಣೇತರರ ಮದುವೆಗಳಲ್ಲಿ ಅಗ್ನಿ ಇರಲಿಲ್ಲ. ಗುರ್ಕಾರ್ರ್ ನಿಂತು ಮದುವೆ ಮಾಡಿಸುತ್ತಿದ್ದರು. ಇಂದು ಅಲ್ಲಿ ಪುರೋಹಿತರ ಆಗಮನವಾಗಿದೆ. ಹೀಗಾಗಿ ಆಚರಣೆಗಳ ಸಂದರ್ಭದ ಭಾಷಿಕ

ಅಭಿವ್ಯಕ್ತಿಯೂ ಬದಲಾಗುತ್ತಿದೆ. ಸಾಂದರ್ಭಿಕ ಪದಬಳಕೆಯ ಹಂತದಲ್ಲಿ ಬದಲಾವಣೆ ಕಂಡುಬರುತ್ತದೆ. ಹಿಂದೆ ಇದ್ದ ಹಾಡು, ಹೇಳಿಕೆಗಳ ಜಾಗದಲ್ಲಿ ಇಂದು ಮಂತ್ರಗಳು ಬಂದಿವೆ.

ಶ್ರೇಷ್ಠತೆಯನ್ನು ಕಾಪಾಡಿಕೊಳ್ಳಲು 'ಶಿಷ್ಟ' ಎಂದು ತಾವು ಭಾವಿಸುವ ಭಾಷಾ ಪ್ರಭೇದಕ್ಕೆ ಹೊರಳುವುದನ್ನು ಕೂಡಾ ಸಂಸ್ಕೃತೀಕರಣದ ಭಾಗವಾಗಿ ನೋಡಬಹುದಾಗಿದೆ. ಇಲ್ಲಿ ತಾವು ಆಡುವ ಭಾಷೆ ಗ್ರಾಮ್ಯವಾದುದು, ಗೌರವಕ್ಕೆ ಕಡಿಮೆ ಎಂಬ ಕೀಳರಿಮೆ ಈ ಬಗೆಯ ಪ್ರವೃತ್ತಿಗೆ ಕಾರಣವಾಗಿದೆ.

ಮೇಲ್‌ಚಲನೆಗಿಂತ ಹೆಚ್ಚಾಗಿ ತಮ್ಮ ಇರುವ ನೆಲೆಯನ್ನೇ ಸ್ಥಾಪಿಸಿಕೊಳ್ಳುವುದು ಸಂಸ್ಕೃತೀಕರಣಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆಯುವ ವಿದ್ಯಮಾನ. ಜಾತಿ ಏಣಿಯ ಭಿನ್ನ ಮೆಟ್ಟಲುಗಳಲ್ಲಿ ನೆಲೆಗೊಂಡ ಸಮುದಾಯಗಳು ಜಾತಿಯ ಮೂಲದ ಬಗೆಗಿನ ಕತೆಯ ಮೂಲಕ, ಆಚರಣೆಗಳ ವಿಶಿಷ್ಟತೆಯ ಮೂಲಕ ತಮ್ಮ ಪಾವಿತ್ರ್ಯವನ್ನು ಸಾಬೀತುಪಡಿಸುವುದನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಭಾಷಿಕವಾಗಿ ಅವರು ಕಟ್ಟಿಕೊಳ್ಳುವ ಕತೆಗಳು ಕುತೂಹಲ ಕಾರಿಯಾಗಿವೆ. ಆದರೆ ಕತೆಗಳೊಳಗೇ ಇರುವ ವೈರುಧ್ಯಗಳು ವಾಸ್ತವವನ್ನು ತೆರೆದು ತೋರುತ್ತವೆ.

ಈ ಭಾಷಿಕ ಸಮುದಾಯಗಳ ಹಲವು ಅಸ್ಮಿತೆಗಳಲ್ಲಿ ಭಾಷಿಕ ಅಸ್ಮಿತೆ ಒಂದಾದರೂ ಅದೇ ಪ್ರಧಾನ ಅಸ್ಮಿತೆಯಲ್ಲ. ಆರ್ಥಿಕವಾಗಿ ಎಷ್ಟೇ ಬದಲಾವಣೆಗಳಾದರೂ, ಆಧುನಿಕತೆಯ ಪ್ರವೇಶವಾದರೂ ಶ್ರೇಣೀಕರಣದ ರಚನೆಯಲ್ಲಿ ಬದಲಾವಣೆಗಳಾದರೂ 'ಜಾತಿ' ಒಂದು ಅಸ್ಮಿತೆಯಾಗಿ ಈ ಪ್ರದೇಶದಲ್ಲಿ ಕಾಣುತ್ತದೆ. ವಿವಿಧ ಸಮುದಾಯಗಳನ್ನು ಒಗ್ಗೂಡಿಸುವಲ್ಲಿ ಭಾಷೆ ಪ್ರಧಾನವಾಗಿರುವುದರಿಂದ ಎಲ್ಲ ಒಟ್ಟಾಗಿ ಭಾಷಿಕ ಸಮುದಾಯವಾಗಿ ಗುರುತಿಸಿಕೊಳ್ಳುವ ಬಗೆಯನ್ನು ಕಾಣಬಹುದು.

ಟಿಪ್ಪಣಿಗಳು

೧. ಒಂದು ಭಾಷೆ ಇನ್ನೊಂದು ಭಾಷೆಗಿಂತ ಹೆಚ್ಚುಗಾರಿಕೆ ಮೆರೆಯುವುದು. ಒಂದು ಭಾಷೆ ಇನ್ನೊಂದು ಭಾಷೆ ಶ್ರೇಷ್ಠ ಎಂಬುದು, ಭಾಷೆಯ ಆಧಾರದಲ್ಲಿ ಸಮುದಾಯಗಳನ್ನು ಮೇಲು, ಕೀಳು ವಿಭಜನೆ ಮಾಡುವುದು, ಒಂದು ಭಾಷೆಯನ್ನು ಇನ್ನೊಂದು ಭಾಷಿಕ ಸಮುದಾಯದ ಮೇಲೆ ಹೇರುವುದು ಇವೆಲ್ಲವೂ ಭಾಷಿಕ ಯಾಜಮಾನ್ಯದ ನೆಲೆಯವು.

೨. Vocabulary is a marker of division in society and individuals may actively cultivate alternatives inorder to make more subtle social distinctions. Pronunciation reflects the permanent social group with which speaker identifies. (Brian Riley T;2000;p:66)

೩. ಭಾಷಿಕ ಅಭದ್ರತೆ ಎಂದರೆ ವ್ಯಕ್ತಿ ಅಥವಾ ಸಮುದಾಯಕ್ಕೆ ತನ್ನ ಭಾಷೆಯ ಬಳಕೆಯ ಸೂಕ್ತತೆಯ ಬಗ್ಗೆ ಇರುವ ಆತಂಕ, ಸಂಕೋಚ ಮತ್ತು ಆತ್ಮವಿಶ್ವಾಸದ ಕೊರತೆ. ಈ ಪರಿಭಾಷೆಯನ್ನು ಮೊತ್ತಮೊದಲು ಬಳಸಿದವರು ವಿಲಿಯಂ ಲಾಬೊವ್.

೪. ಸಾಂಸ್ಕೃತಿಕ ಬಂಡವಾಳ ಎಂಬ ಪರಿಕಲ್ಪನೆಯನ್ನು ಆರ್ಥಿಕವಲ್ಲದ ಸ್ವತ್ತುಗಳನ್ನು ಸೂಚಿಸುವಲ್ಲಿ ಬಳಸಲಾಗಿದೆ. ವಿದ್ಯೆ, ಬೌದ್ಧಿಕತೆ ಮುಂತಾದವುಗಳು ಆರ್ಥಿಕತೆಯಾಚೆಗೆ ಸಾಮಾಜಿಕ ಚಲನೆಗೆ ಕಾರಣವಾಗುವ ಸಂಗತಿಗಳಾಗಿವೆ. ಇವುಗಳನು ಸಾಂಸ್ಕೃತಿಕ ಬಂಡವಾಳ ಎಂದು ಕರೆಯಲಾಗುತ್ತದೆ. ಈ ಪರಿಕಲ್ಪನೆಯನ್ನು ರೂಪಿಸಿದವನು ಫ್ರೆಂಚ್ ಸಮಾಜಶಾಸ್ತ್ರಜ್ಞ ಪಿಯರೆ ಬೋರ್ದೋ.

೫. ಭಾಷಿಕ ಅಸಾಮರ್ಥ್ಯ ಎಂದರೆ ಭಾಷೆಯ ವ್ಯಾಕರಣ, ಬಳಕೆ ಕುರಿತು ಸರಿಯಾದ ತಿಳುವಳಿಕೆ ಇಲ್ಲದಿರುವುದು.

೬. ಸಂವಹನದ ಅಸಾಮರ್ಥ್ಯ ಎಂದರೆ ಭಾಷೆಯ ಜ್ಞಾನ ಇದ್ದೂ ಸಂದರ್ಭಕ್ಕನುಗುಣವಾಗಿ ಒಪ್ಪಿತವಾಗುವ ರೀತಿಯಲ್ಲಿ ಮಾತನಾಡಲು ಸಾಧ್ಯವಾಗದಿರುವುದು.

೭. ಇಂಗ್ಲಿಷ್‌ನ 'gender' ಎಂಬರ್ಥದಲ್ಲಿ ಇಲ್ಲಿ ಬಳಸಲಾಗಿದೆ. ಇದು ಜೈವಿಕ ವ್ಯತ್ಯಾಸಕ್ಕಿಂತ ಭಿನ್ನವಾಗಿದ್ದು ಸಾಮಾಜಿಕವಾಗಿ ರೂಪಿತವಾಗುವಂಥದ್ದು.

• • •

ಅಧ್ಯಾಯ : ಏಳು

ಮುಂಚಲನೆಗಳು

೭.೧. ಮುಂಚಲನೆಗೆ ಕಾರಣವಾದ ಸಂಗತಿಗಳು

೭.೧.೧. ವಲಸೆ

೭.೧.೨. ಆಧುನಿಕ ಶಿಕ್ಷಣ

೭.೧.೩. ಭೂ ಮಸೂದೆ

೭.೧.೪. ಹೆದ್ದಾರಿ

೭.೧.೫. ಸಿನೆಮಾ ಮತ್ತು ದೂರದರ್ಶನ

೭.೨. ಸಂಸ್ಕೃತಿಯ ಪದರಗಳು ಮತ್ತು ಭಾಷಿಕ ಚಲನೆ

೭.೨.೧. ತಲೆಮಾರುಗಳು

೭.೨.೨. ಜಾತಿ

೭.೨.೩. ವರ್ಗ

೭.೨.೪. ಲಿಂಗ

೭.೩. ಸಾಂಸ್ಕೃತಿಕ ಪ್ರಕ್ರಿಯೆಗಳು

೭.೩.೧. ವಿಲೀನಗೊಳ್ಳುವುದು

೭.೩.೨. ಅನನ್ಯತೆಯನ್ನು ಕಾಯ್ದುಕೊಳ್ಳುವುದು

೭.೩.೩. ಮರುಹೊಂದಾಣಿಕೆ ಮಾಡಿಕೊಳ್ಳುವುದು

೭.೩.೪. ಮರುಹೊಂದಾಣಿಕೆಯ ದಿಕ್ಕಿನಲ್ಲಿ ಕೋಟ ಭಾಷಿಕ ಸಮುದಾಯ

ಅಧ್ಯಾಯ : ಏಳು

ಮುಂಚಲನೆಗಳು

ಜಾಗತಿಕವಾಗಿ ಒಳನುಡಿಗಳು ಇಂದು ಸ್ಥಿತ್ಯಂತರದ ಕಾಲಘಟ್ಟದಲ್ಲಿವೆ. ಭಾಷೆಯ ಬಗೆಗಿರುವ ಶ್ರೇಷ್ಠ, ಕನಿಷ್ಠ ಕಲ್ಪನೆಗಳು ಮತ್ತು ವ್ಯಾವಹಾರಿಕ ಅನುಕೂಲತೆ ಭಾಷಿಕ ಸಮುದಾಯವನ್ನು ಸದಾ ತಟ್ಟುತ್ತಲೇ ಇರುತ್ತವೆ. ಕೋಟ ಭಾಷಿಕ ಸಮುದಾಯ ಭಾಷಿಕ ಬದಲಾವಣೆಯ ದಿಕ್ಕಿನ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ತಲೆಮಾರುಗಳು, ಜಾತಿ, ವರ್ಗ, ಲಿಂಗಗಳ ಮೂಲಕ ಹರಡಿಕೊಂಡಿರುವ ಸಂಸ್ಕೃತಿಯ ಪದರಗಳಲ್ಲಿ ಭಾಷಿಕ ಚಲನೆಯನ್ನು ಗುರುತಿಸುವುದು ಮೊದಲನೇ ಹಂತವಾದರೆ ಈ ಮೂಲಕ ಆ ಚಲನೆಯ ಸ್ವರೂಪವನ್ನು ಗುರುತಿಸುವ ಪ್ರಯತ್ನವನ್ನು ಎರಡನೇ ಹಂತದಲ್ಲಿ ಮಾಡಲಾಗಿದೆ. ಅನ್ಯ ಪ್ರಭಾವಗಳು ಎದುರಾದಾಗ ಸಮುದಾಯ ಸಂಪೂರ್ಣವಾಗಿ ಅರ್ಪಿಸಿಕೊಳ್ಳುತ್ತದೆಯೋ ಅನನ್ಯತೆಯನ್ನು ಕಾಯ್ದುಕೊಳ್ಳುತ್ತದೆಯೋ ಅಥವಾ ಮರುಹೊಂದಾಣಿಕೆ ಮಾಡಿಕೊಳ್ಳುತ್ತದೆಯೋ ಎಂಬ ಬಗ್ಗೆ ಇಲ್ಲಿ ವಿಶ್ಲೇಷಣೆ ನಡೆಸುತ್ತಾ ಕೋಟ ಒಳನುಡಿ ಹೇಗೆ ಮರುಹೊಂದಾಣಿಕೆ ಮಾಡಿಕೊಂಡಿದೆ ಎಂಬ ಬಗ್ಗೆ ಚರ್ಚಿಸಲಾಗಿದೆ.

೭.೧. ಮುಂಚಲನೆಗೆ ಕಾರಣವಾದ ಮುಖ್ಯ ಸಂಗತಿಗಳು

೭.೧.೧. ವಲಸೆ

ಜೀವನೋಪಾಯಕ್ಕಾಗಿ ಬೇರೆ ಊರಿಗೆ ಹೋದ ಸಂದರ್ಭದಲ್ಲಿ ಆ ಊರಿನ ಭಾಷೆ ಪ್ರಭಾವ ಬೀರುತ್ತದೆ. ಅವರು ಮತ್ತೆ ಊರಿಗೆ ಬಂದು ನೆಲೆಸಿದಾಗ ಅವರ ಮೂಲಕ

ಭಾಷೆಯಲ್ಲಿ ಬದಲಾವಣೆಗಳು ಉಂಟಾಗುತ್ತವೆ. ಇಲ್ಲಿನ ಹೆಚ್ಚಿನ ಜನ ಬೇರೆ ಊರಿಗೆ ಹೋಗಿ ನೆಲೆಸಿದ್ದು ವ್ಯಾಪಾರದ ಉದ್ದೇಶದಿಂದ. ಹಾಗೆ ಹೋದವರು ಅಲ್ಲೇ ನೆಲೆಸಿ ಅವರ ಭಾಷೆ ಆ ಊರಿನ ಭಾಷೆಯಾದದ್ದೂ ಇದೆ. ಅವರು ಮತ್ತೆ ಮರಳಿ ಬಂದಾಗ ಆ ಭಾಷೆಯ ಪ್ರಭಾವ ಅವರ ಮಾತಿನಲ್ಲಿ ಕಾಣಿಸುತ್ತದೆ. ಒಂದು ಸಮುದಾಯದಲ್ಲಿ ಈ ಪ್ರಮಾಣ ಹೆಚ್ಚಾದಷ್ಟು ನಿಧಾನವಾಗಿ ಭಾಷಿಕವಾಗಿ ಬದಲಾವಣೆಯಾಗುತ್ತದೆ.

೭.೧.೨. ಆಧುನಿಕ ಶಿಕ್ಷಣ

ಶಿಕ್ಷಣದ ಮೂಲಕ ಒಂದೆಡೆ ಪ್ರಮಾಣ ಕನ್ನಡ, ಇನ್ನೊಂದೆಡೆ ಇಂಗ್ಲಿಷ್ ಈ ಪರಿಸರದಲ್ಲಿ ಜಾಗ ಪಡೆದಿದೆ. ಶಾಲೆಯಲ್ಲಿನ ಪಠ್ಯ ಮತ್ತು ಬೋಧನೆಗೆ ಬಳಸುವ ಭಾಷೆ ಪ್ರಮಾಣ ಕನ್ನಡ ಮತ್ತು ಇಂಗ್ಲಿಷ್ ಆಗಿರುವುದರಿಂದ ಸಹಜವಾಗಿಯೇ ಪ್ರಮಾಣ ಕನ್ನಡ ಔಪಚಾರಿಕ ನೆಲೆಯಲ್ಲಿ, ಒಳನುಡಿ ಅನೌಪಚಾರಿಕ ನೆಲೆಯಲ್ಲಿ ಅಸ್ತಿತ್ವ ಕಂಡುಕೊಳ್ಳುತ್ತದೆ. ಜೊತೆಗೆ ಇಲ್ಲಿನ ಶಾಲೆಗಳಿಗೆ ನೇಮಕಗೊಂಡ ಅಥವಾ ವರ್ಗವಾಗಿ ಬಂದ ಘಟ್ಟ ಮತ್ತು ಬಯಲುಸೀಮೆಯ ಅಧ್ಯಾಪಕರ ಪ್ರಭಾವವೂ ಇಲ್ಲಿನ ಮಕ್ಕಳ ಮೇಲೆ ಆದಹಾಗೆ ಕಾಣುತ್ತದೆ.

೭.೧.೩. ಭೂ ಮಸೂದೆ

ಭೂಮಸೂದೆಯಿಂದಾಗಿ ಭೂರಹಿತ ಗೇಣಿದಾರರು ಭೂಮಿಯನ್ನು ಪಡೆಯುವಂತಾಯಿತು. ಇದರಿಂದ ಹೆಚ್ಚು ಲಾಭವಾದ್ದು ಬಂಟರಿಗೆ. ಇತರ ಸಮುದಾಯದವರಿಗೂ ಇದರಿಂದ ಪ್ರಯೋಜನವಾಗಿದೆ. ಅವರೂ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಮುಂದುವರೆಯಲು ಕಾರಣ ವಾಗಿದೆ. ಇದು ಹಳೆಯ ಶ್ರೇಣೀಕರಣದ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತಂದಿದೆ. ಇದು ಭಾಷಿಕ ಬದಲಾವಣೆಗಳಿಗೆ ಕಾರಣವಾಗಿದೆ.

೭.೧.೪. ಹೆದ್ದಾರಿ

ಈ ಪ್ರದೇಶದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೬೬(ಹಿಂದೆ ಇದು ೧೭ಆಗಿತ್ತು) ಆಧುನಿಕತೆಗೆ ಸಮಾಜವನ್ನು ತೆರೆದಿದೆ. ಇದರಿಂದಾಗಿ ಜನರು ವೇಗವಾಗಿ ಬದಲಾವಣೆಗಳಿಗೆ ತಮ್ಮನ್ನು ಒಡ್ಡಿಕೊಳ್ಳುವಂತಾಗಿದೆ. ಹೆದ್ದಾರಿಯಿಂದಾಗಿ ವ್ಯಾಪಾರ ವಹಿವಾಟು ಗಳು ಹೆಚ್ಚಾಗಿ ಜನರ ನಡುವಣ ಸಂಪರ್ಕ ಹೆಚ್ಚಾಗಿದೆ. ಹೆದ್ದಾರಿಗೆ ಸಮೀಪವಿರುವ ಮತ್ತು ಹೆದ್ದಾರಿಯಿಂದ ದೂರವಿರುವ ಪ್ರದೇಶಗಳಲ್ಲಿ ಈ ಕಾರಣದಿಂದಾಗಿಯೇ ಸಾಕಷ್ಟು ಭಿನ್ನತೆಯನ್ನು ಗುರುತಿಸಬಹುದು.

೭.೧.೫. ಸಿನೆಮಾ ಮತ್ತು ದೂರದರ್ಶನ

ಸಿನೆಮಾ ಮತ್ತು ದೂರದರ್ಶನಗಳಲ್ಲಿ ಪ್ರಧಾನವಾಗಿ ಬಳಕೆಯಾಗುವ ಭಾಷೆ ಮೈಸೂರು ಬೆಂಗಳೂರು ಪ್ರದೇಶದ ಆಡುನುಡಿ. ಇನ್ನು ಉಳಿದ ಒಳನುಡಿಗಳು ನಗೆಯುಕ್ಕಿಸುವಲ್ಲಿ

ಬಳಕೆಯಾಗುತ್ತವೆ. ಸಿನೆಮಾ, ದೂರದರ್ಶನಗಳ ಭಾಷೆ ಕೋಟ ಭಾಷಿಕರ ಮೇಲೆ ಪ್ರಭಾವ ಬೀರಿರುವ ಬಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಿಚ್ಚಳವಾಗಿ ಕಂಡುಬಂದಿದೆ. 'ಬರ್ತೀನಿ', 'ಕಣೆ', 'ಪರವಾಗಿಲ್ಲ' ಮುಂತಾದವುಗಳು ಇವರ ಮಾತುಗಳಲ್ಲಿ ಜಾಗ ಪಡೆದಿವೆ ಮತ್ತು ಈ ಬಗೆಯಲ್ಲಿ ಮಾತಾಡುವುದು ಆಧುನಿಕತೆಯ ಸಂಕೇತ ಎಂಬ ಭಾವನೆ ಅವರಲ್ಲಿದ್ದಂತೆ ಕಾಣುತ್ತದೆ.

ಈ ಚಲನೆ ಸಂಸ್ಕೃತಿಯ ಬೇರೆ ಬೇರೆ ಪದರಗಳಲ್ಲಿ ಹೇಗೆ ಹರಡಿಕೊಂಡಿದೆ ಎಂಬುದನ್ನು ಮುಂದಿನ ಹಂತದಲ್ಲಿ ಗಮನಿಸಲಾಗಿದೆ,

೭.೨. ಸಂಸ್ಕೃತಿಯ ಪದರಗಳು ಮತ್ತು ಭಾಷಿಕ ಚಲನೆಗಳು

ಒಂದು ಸಂಸ್ಕೃತಿ ಹೇಗೆ ವ್ಯವಸ್ಥಿತಗೊಂಡಿದೆ ಮತ್ತು ಶ್ರೇಣೀಕೃತಗೊಂಡಿದೆ ಎಂಬುದರ ಸೂಚಕಗಳ ಆಧಾರದಲ್ಲಿ ಸಂಸ್ಕೃತಿಯ ಪದರಗಳನ್ನು ಗುರುತಿಸುವುದು ಸಾಧ್ಯ. 'ಸಂಸ್ಕೃತಿಯ ಪದರಗಳು' ಎಂಬ ಪರಿಕಲ್ಪನೆಯನ್ನು ಪುರಾತತ್ವ, ಅನುವಾದ, ಸಂಸ್ಕೃತಿ ಅಧ್ಯಯನದ ಸಂದರ್ಭಗಳಲ್ಲಿ ಬಳಸುತ್ತಾ ಬರಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಭಾಷೆ ಸಮಾಜದ ವಿವಿಧ ಸ್ತರಗಳಿಗನುಗುಣವಾಗಿ ಹರಡಿಕೊಂಡಿರುವ ಬಗೆಯನ್ನು ಗಮನಿಸಲಾಗಿದೆ. ಜಾತಿ, ವರ್ಗ, ಲಿಂಗ, ವಯಸ್ಸು ಪ್ರಮುಖವಾಗಿ ಈ ಸ್ತರಗಳಿಗೆ ಆಧಾರವಾಗಿದೆ. ಕೋಟ ಭಾಷಿಕ ಸಮುದಾಯ ದಲ್ಲಿ ಸಂಸ್ಕೃತಿಯ ವಿಭಿನ್ನ ಪದರಗಳಲ್ಲಿ ಭಾಷೆಯ ಪಾತ್ರವನ್ನು ಗುರುತಿಸುವ ಮೂಲಕ ಸಮುದಾಯದ ಚಲನೆಯನ್ನು ಹೇಗೆ ಹಿಡಿಯಬಹುದು ಎಂಬ ನೆಲೆಯಲ್ಲಿ ಚರ್ಚೆ ನಡೆಸಲಾಗಿದೆ.

೭.೨.೧. ತಲೆಮಾರುಗಳು

ತಲೆಮಾರುಗಳಲ್ಲಿ ಭಾಷಿಕ ಚಲನೆಯನ್ನು ಗುರುತಿಸುವ ಸಂದರ್ಭದಲ್ಲಿ ಮೂರು ತಲೆಮಾರುಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ.

ಹಿಂದೆ ಸಾಂಪ್ರದಾಯಿಕ ವೃತ್ತಿಯನ್ನು ಅವಲಂಬಿಸಿದ್ದವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮತ್ತು ಅವರ ವಲಸೆಯ ಪ್ರಮಾಣ ಇಂದಿನಷ್ಟು ಇರಲಿಲ್ಲ. ಹೀಗಾಗಿ ಅವರ ಭಾಷೆ ಹೆಚ್ಚು ಅನ್ಯಪ್ರಭಾವಕ್ಕೆ ಒಳಗಾಗದೆ ಅನನ್ಯತೆಯನ್ನು ಕಾಯ್ದುಕೊಂಡಿದೆ. ಇವರಲ್ಲಿ ಬೇರೆ ಊರಿಗೆ ಕೆಲಸದ ಕಾರಣದಿಂದ ಹೋಗಿ ನೆಲೆಸಿದವರ ಭಾಷೆಯಲ್ಲಿ ಸಾಕಷ್ಟು ಬದಲಾವಣೆ ಕಂಡುಬಂದಿದೆ. ವಲಸೆ, ಚಲನೆಯ ಪ್ರಮಾಣ ಹೆಚ್ಚಾದಂತೆ ಭಾಷೆಯಲ್ಲಿಯೂ ಸಾಕಷ್ಟು ಬದಲಾವಣೆಗಳು ಕಂಡುಬರುತ್ತವೆ. ಮಧ್ಯವಯಸ್ಸಿನ ಅನೇಕರಲ್ಲಿ ಅವರ ಹಿಂದಿನ ತಲೆಮಾರಿನವರ ಭಾಷೆಯಲ್ಲಿನ ಸೊಗಡು ಮಸುಕಾಗಿರುವುದು ಕಂಡುಬರುತ್ತದೆ. ಮೂರನೇ ತಲೆಮಾರಿನ ಯುವಕರು ದೈನಂದಿನ ಸಂದರ್ಭಗಳಲ್ಲಿ ಒಳನುಡಿಯನ್ನೇ ಬಳಸುತ್ತಾರಾದರೂ ಸಂಸ್ಕೃತಿ ವಿಶಿಷ್ಟ ಪದಗಳು ಅವರ

ಕೋಶದಲ್ಲಿ ದಾಖಲಾಗಿರುವ ಪ್ರಮಾಣ ಕಡಿಮೆ. ಆದರೆ ಈ ಭಾಷೆಯ ಮಹತ್ವವನ್ನು ಮನಗಂಡ ಹಿರಿಯರ ಉತ್ತೇಜನದಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪದಗಳನ್ನು, ಜನಪದ ಸಾಹಿತ್ಯವನ್ನು ಸಂಗ್ರಹಿಸುವ ದಾಖಲಿಸುವ ಕೆಲಸದಲ್ಲಿ ತೊಡಗಿರುವುದು ಕಾಣುತ್ತದೆ. ಕೋಟ ವಿವೇಕ ಪ್ರೌಢಶಾಲೆಯ ಮಕ್ಕಳು ಮಾಡಿದ ಸಂಗ್ರಹ, ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ವಾರ್ಷಿಕ ಸಂಚಿಕೆ 'ದರ್ಶನ' ಶಾರದಾ ಕಾಲೇಜು ಬಸ್ರೂರಿನ ವಾಷಿಕ ಸಂಚಿಕೆ 'ಶಾರದಾ ವಾಣಿ'ಗಳಲ್ಲಿ ವಿದ್ಯಾರ್ಥಿಗಳ ಶ್ರಮ, ಆಸಕ್ತಿ ಕಾಣುತ್ತದೆ.

೭.೨.೨. ಜಾತಿ

ಬ್ರಾಹ್ಮಣರು ಹೆಚ್ಚು ಆಧುನಿಕತೆಗೆ ಮತ್ತು ಪ್ರಮಾಣ ಕನ್ನಡದೆಡೆಗೆ ಒಲೆದಿರುವುದು ಕಂಡುಬರುತ್ತದೆ. ಸಂಸ್ಕೃತೀಕರಣ ಅನ್ನುವುದಕ್ಕಿಂತ ಹೆಚ್ಚಾಗಿ ಆಧುನೀಕರಣ ಸಮುದಾಯಗಳ ಚಲನೆಗೆ ಕಾರಣವಾಗಿದೆ. ಆರ್ಥಿಕ ಸಬಲತೆ, ಶಿಕ್ಷಣ ಮತ್ತು ಆಧುನೀಕರಣದಿಂದ ಜಾತಿಗಳ ನಡುವಣ ಭಾಷಿಕ ವ್ಯತ್ಯಾಸಗಳು ಕಡಿಮೆಯಾಗುತ್ತಿವೆ. ವ್ಯತ್ಯಾಸಗಳು, ವಿಶಿಷ್ಟತೆಗಳು ಅಳಿಸಿ ಹೋಗುತ್ತಿದ್ದರೂ ಬಂಟರು ಪ್ರಜ್ಞಾಪೂರ್ವಕವಾಗಿ ಭಾಷಿಕ ಅನನ್ಯತೆಯನ್ನು ಭಾಷಾ ಬಳಕೆಯ ಮೂಲಕ ಎತ್ತಿಹಿಡಿಯುವುದು ಕಾಣುತ್ತದೆ.

೭.೨.೩. ವರ್ಗ

ಆರ್ಥಿಕವಾಗಿ ಬಲವಾಗಿರುವ ಸಮುದಾಯಗಳು ತಮ್ಮ ಅಧೀನ ನೆಲೆಯಿಂದ ಮುಕ್ತವಾಗುವುದನ್ನು ವರ್ಗದ ಪರಿಭಾಷೆಯ ಮೂಲಕ ಅರ್ಥ ಮಾಡಿಕೊಳ್ಳಬಹುದಾಗಿದೆ. ಆದರೆ ವರ್ಗದ ದೃಷ್ಟಿಯಿಂದ ಮೇಲ್‌ಚಲನೆ ಆದ ಮಾತ್ರಕ್ಕೆ ಅವರ ಭಾಷೆಯಲ್ಲಿ ಬದಲಾವಣೆ ಆಗಿದೆ ಎಂದು ಹೇಳುವುದು ಸಾಧ್ಯವಿಲ್ಲ. ಇಲ್ಲಿ ಅವರು ಅನುಸರಿಸಿರುವ ವೃತ್ತಿ ಯಾವುದು ಎಂಬುದು ಮುಖ್ಯವಾಗುತ್ತದೆ. ಕೃಷಿಯನ್ನು ಅವಲಂಬಿಸಿದವರು ಆರ್ಥಿಕವಾಗಿ ಮೇಲ್‌ಸ್ತರಕ್ಕೇರಿದರೂ ಅವರ ಭಾಷೆಯಲ್ಲಿ ಹೆಚ್ಚಿನ ಬದಲಾವಣೆಯಾಗಿರುವುದು ಕಂಡುಬರುವುದಿಲ್ಲ. ಅದೇ ಮೀನುಗಾರಿಕೆಯ ಸಂದರ್ಭದಲ್ಲಿ ಇಂಗ್ಲಿಷ್‌ನ ಪದಗಳು ಕಿಕ್ಕಿರಿದಿವೆ. ಸರಕಾರಿ ವಲಯದಲ್ಲಿ ಕೆಲಸ ಮಾಡುವವರ ಭಾಷೆ ಪ್ರಮಾಣದತ್ತ ಒಲೆಯುತ್ತದೆ.

ವರ್ಗದ ನೆಲೆಯಲ್ಲಿ ಮೇಲ್‌ಸ್ತರದಲ್ಲಿರುವವರಿಗೆ ಶಿಕ್ಷಣ ಮತ್ತು ಮುಂಚಲನೆಗೆ ಹೆಚ್ಚಿನ ಅವಕಾಶಗಳಿವೆ. ಹೀಗಾಗಿ ಅವರು ಸಾರ್ವಜನಿಕ ವಲಯಗಳಲ್ಲಿ ಪ್ರಮಾಣಕ್ಕೆ ಒಲೆಯುವ ಬಗೆ ಹೆಚ್ಚಾಗಿ ಕಂಡುಬರುತ್ತದೆ. ಇನ್ನೂ ಆರ್ಥಿಕವಾದ ಚಲನೆ ಸಾಧಿಸದೇ ಇರುವವರ ಭಾಷೆ ಹೆಚ್ಚು ಗ್ರಾಮ್ಯವಾಗಿರುವುದು ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿದೆ. ಇದಕ್ಕೆ

ಅವರಿಗೆ ಆರ್ಥಿಕತೆಯ ಕಾರಣದಿಂದ ಮುಂಚಲನೆಗೆ ಹೆಚ್ಚಿನ ಅವಕಾಶಗಳು ಲಭ್ಯವಾಗದೇ ಇರುವುದು ಕಾರಣವಾಗಿದೆ.

೭.೨.೪. ಲಿಂಗ

ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಹೆಣ್ಣಿನ ಸ್ಥಾನ ಇಂದು ಮೇಲೇರಿದೆ. ಹಿಂದೆ ಗಂಡಸರದ್ದೆಂದು ಭಾವಿಸಲಾದ ಭಾಷಿಕ ವಲಯಗಳಲ್ಲಿ ಇಂದು ಹೆಣ್ಣಿನ ಹಾಜರಿ ಕಾಣುತ್ತದೆ. ಕೌಟುಂಬಿಕವಾಗಿ ಹೆಣ್ಣಿನ ಪಾತ್ರದ ಬದಲಾವಣೆಯಲ್ಲಿ ಅವಿಭಕ್ತ ಕುಟುಂಬ ವಿಭಕ್ತ ಕುಟುಂಬಗಳಾಗಿ ವಿಘಟನೆಗೊಂಡದ್ದು ಗಮನಾರ್ಹ ಸಂಗತಿಯಾಗಿದೆ. ವಿಭಕ್ತ ಕುಟುಂಬಗಳಿಂದಾಗಿ ಹೆಣ್ಣು ಎದುರು ಬಂದು ಮಾತಾಡಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು ಇದು ಪರೋಕ್ಷವಾಗಿ ಹೆಣ್ಣು ಮುಂಬರಲು ಕಾರಣವಾಗಿದೆ. ಆಧುನಿಕ ಸಂದರ್ಭಗಳು ಮತ್ತು ಶಿಕ್ಷಣದಿಂದಾಗಿ ಹೆಣ್ಣಿಗೆ ಸಮಾನ ಅವಕಾಶಗಳು ಲಭ್ಯವಾಗಿರುವುದರಿಂದ ಸಾಂಪ್ರದಾಯಿಕವಾದ ಭಾಷಿಕ ವಲಯದ ಗಡಿಗಳು ಅಳಿಸಿಹೋಗಿವೆ. ಹಿಂದೆ ಹೆಣ್ಣುಮಕ್ಕಳಿಗೆ ನಿಷೇಧವಾಗಿದ್ದ ಅನೇಕ ಸಂಗತಿಗಳು ಇಂದು ಕಾಣುವುದಿಲ್ಲ. ಹೆಂಗಸರು ಇಂದು ಸಾರ್ವಜನಿಕ ವಲಯಗಳಲ್ಲಿ ಗಂಡನ ಹೆಸರು ಹೇಳಲು ಆರಂಭಿಸಿದ್ದಾರೆ. ಆದರೆ ಮನೆಯೊಳಗೆ ಹೆಸರು ಹೇಳಿ ಕರೆಯುವುದಿಲ್ಲ, ಆದರೆ ಸಂದರ್ಭ ಬಂದಾಗ ಬೇರೆಯವರಿಗೆ ತಿಳಿಸಲು ಹಿಂಜರಿಯುವುದಿಲ್ಲ. ಆಧುನಿಕ ಸಂದರ್ಭದಲ್ಲಿ ಕಚೇರಿ, ಶಾಲೆ, ಚುನಾವಣೆಯ ಸಂದರ್ಭಗಳಲ್ಲಿ ಗಂಡನ ಹೆಸರು ತಿಳಿಸಲೇಬೇಕಾದ ಸಂದರ್ಭಗಳು ಹೆಚ್ಚಾಗಿ ಈಗ ಮೊದಲಿದ್ದ ನಿಷೇಧ ಅಳಿದು ಹೋಗಿದೆ.

೭.೩. ಸಾಂಸ್ಕೃತಿಕ ಪ್ರಕ್ರಿಯೆಗಳು

ಮಾನವಶಾಸ್ತ್ರಜ್ಞ ಕ್ರೋಬರ್ ಸಂಸ್ಕೃತಿ ಹೇಗೆ ಸದ್ಯದಲ್ಲಿ ಪ್ರವರ್ತಿಸುತ್ತದೆ ಮತ್ತು ದೀರ್ಘಾವಧಿಯಲ್ಲಿ ಬದಲಾಗುತ್ತದೆ ಎಂಬುದನ್ನು 'ಸಾಂಸ್ಕೃತಿಕ ಪ್ರಕ್ರಿಯೆ'(Cultural Process) ಎಂಬ ಪರಿಭಾಷೆಯ ಮೂಲಕ ವಿವರಿಸಿದ್ದಾನೆ. ಈ ಸಾಂಸ್ಕೃತಿಕ ಪ್ರಕ್ರಿಯೆಯಲ್ಲಿ ದೀರ್ಘಾವಧಿಯಲ್ಲಿ ಆಗುವ ಬದಲಾವಣೆಯನ್ನು ಮೂರು ನೆಲೆಗಳಲ್ಲಿ ಗುರುತಿಸಲಾಗುತ್ತದೆ.

೭.೩.೧. ವಿಲೀನಗೊಳ್ಳುವುದು

ಅನ್ಯ ಸಂಸ್ಕೃತಿಯ ಪ್ರಭಾವದಲ್ಲಿ ಸಮುದಾಯಗಳು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಸಂಪೂರ್ಣವಾಗಿ ತ್ಯಜಿಸಿ ಅದರೊಂದಿಗೆ ಸೇರಿಹೋಗುವುದನ್ನು ಇದು ಸಂಕೇತಿಸುತ್ತದೆ. ತಮ್ಮ ಸಂಸ್ಕೃತಿಯ ಬಗ್ಗೆ ಕೀಳರಿಮೆ ತಾಳಿದ ಸಮುದಾಯಗಳು ಪ್ರಧಾನ ಸಂಸ್ಕೃತಿಯೊಂದಿಗೆ ವಿಲೀನಗೊಂಡು ಆ ಮೂಲಕ ಮುನ್ನಡೆ ಸಾಧಿಸಲು ಬಯಸುತ್ತವೆ. ಯಾಜಮಾನ್ಯ ಸಂಸ್ಕೃತಿಗಳು ಅಧೀನ ಸಮುದಾಯಗಳನ್ನು 'ನಾಗರಿಕ'ಗೊಳಿಸುವ ಭಾಗವಾಗಿ ನೇರವಾದ ಶಕ್ತಿ ಪ್ರಯೋಗದಿಂದ ಮತ್ತು ಸಾಂಸ್ಕೃತಿಕ ತಂತ್ರಗಾರಿಕೆಯಿಂದ ಸ್ಥಳೀಯ ಸಂಸ್ಕೃತಿಯನ್ನು ನಾಶ ಮಾಡುತ್ತವೆ. ಹೀಗೆ ಸಂಸ್ಕೃತಿ ತನ್ನ ಅನನ್ಯತೆಯನ್ನು ಕಳೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಮುದಾಯದ

ಸ್ವ-ಇಚ್ಛೆ ಮತ್ತು ಅನ್ಯ ಸಮುದಾಯದ ನೇರ ಮತ್ತು ಪರೋಕ್ಷ ಹೇರಿಕೆ ಇವೆರಡೂ ಕೆಲಸ ಮಾಡುತ್ತವೆ.

೭.೩.೨. ಅನನ್ಯತೆಯನ್ನು ಕಾಯ್ದುಕೊಳ್ಳುವುದು

"ಯಾವುದೇ ಒಂದು ಸಂಸ್ಕೃತಿ, ಸಮೂಹ ಮತ್ತೊಂದರಿಂದ ಬೇರೆಯಾಗುವ ವಿಶಿಷ್ಟ ಅಂಶಗಳನ್ನು ದೃಢವಾಗಿ ಹೊಂದಿದ್ದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಪ್ರದರ್ಶಿಸಿದರೆ ಅದು ಆ ಸಮೂಹದ 'ಸಾಂಸ್ಕೃತಿಕ ಅನನ್ಯತೆ' ಆಗುತ್ತದೆ"(ಅಂಬಳಿಕೆ ಹಿರಿಯಣ್ಣ;೧೯೯೨; ಪು:೧). ಅನ್ಯಸಂಸ್ಕೃತಿಯೊಂದಿಗೆ ಮುಖಾಮುಖಿಯಾದಾಗ ಸಮುದಾಯಗಳು ಎಚ್ಚರದಿಂದ 'ಅನನ್ಯತೆ'ಯನ್ನು ಕಾಯ್ದುಕೊಳ್ಳುವ ಬಗೆಯನ್ನು ಗಮನಿಸಬಹುದು. ಅನ್ಯಸಂಸ್ಕೃತಿಯ ಅಧೀನದಲ್ಲಿರುವ ಮತ್ತು ಪ್ರಭಾವಕ್ಕೊಳಗಾಗುತ್ತಿರುವ ಸಮುದಾಯಗಳು ಇಕ್ಕಟ್ಟಿನ ಸ್ಥಿತಿಯಲ್ಲಿರುವಾಗ ಎಚ್ಚರದಿಂದ ವಿಶಿಷ್ಟತೆಯನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ. ಅವು ಭಾಷೆಯನ್ನು, ಧಾರ್ಮಿಕ ನಂಬಿಕೆಯನ್ನು, ಆಚರಣೆಗಳನ್ನು, ಜೀವನ ಪದ್ಧತಿಯನ್ನು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಳ್ಳುವ ಮೂಲಕ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವುದನ್ನು ಗಮನಿಸಬಹುದು. ಈ ಪ್ರಕ್ರಿಯೆಯಲ್ಲಿ ಅನ್ಯದ ವಿರುದ್ಧ ಪ್ರತಿರೋಧವಿರುತ್ತದೆ. ಹಿಂದೊಮ್ಮೆ ಇದ್ದ, ಇಂದು ಆಚರಣೆಯಲ್ಲಿ ತಪ್ಪಿ ಹೋದ ಸಂಗತಿಗಳನ್ನು ಮತ್ತೆ ಪುನರುಜ್ಜೀವನಗೊಳಿಸುವ ಪ್ರಕ್ರಿಯೆಯನ್ನು ಇದರ ಭಾಗವಾಗಿ ಗಮನಿಸಬಹುದು. ಕೋಟ ಭಾಷಿಕ ಸಮುದಾಯ ಪ್ರಮಾಣ ಕನ್ನಡ ಮತ್ತು ಇಂಗ್ಲಿಷನ್ನು ಹೊರತುಪಡಿಸಿ ಪರಿಸರದ ಇತರ ಭಾಷೆಗಳ ಜೊತೆಗಿನ ಸಂಪರ್ಕದಲ್ಲಿ ಈ ಬಗೆಯಲ್ಲಿ ಅನನ್ಯತೆ ಕಾಯ್ದುಕೊಂಡಿರುವುದನ್ನು ಗಮನಿಸಬಹುದು.

೭.೩.೩. ಮರುಹೊಂದಾಣಿಕೆ ಮಾಡಿಕೊಳ್ಳುವುದು

ಮರು ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆ ಅನುಸಂಧಾನದ ಹಾದಿ. ಇಲ್ಲಿ ಅನ್ಯದ ಬಗ್ಗೆ ಪ್ರತಿರೋಧವಿಲ್ಲ. ಆದರೆ ಸಮುದಾಯಗಳು ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವ ದಾರಿಯಾಗಿ ಕೆಲವು ಸಂಸ್ಕೃತಿ ಬದ್ಧ ಸಂಗತಿಗಳನ್ನು ಉಳಿಸಿಕೊಳ್ಳುತ್ತವೆ. ಅನ್ಯದ ಪ್ರಭಾವದಿಂದ ಮುಂಚಲನೆ ಸಾಧಿಸುತ್ತಲೇ ಕೆಲವು ವಲಯಗಳಲ್ಲಿ ಸಂಸ್ಕೃತಿನಿಷ್ಠತೆಯನ್ನು ಇವು ಪ್ರದರ್ಶಿಸುತ್ತವೆ. ಇದನ್ನು ಹೀಗೆ ಗಮನಿಸಬಹುದು.

"ತನ್ನ ನಿರಂತರತೆಯಲ್ಲಿ ಸಂಸ್ಕೃತಿ ಎಂಬುದು ತನಗೆ ಆಪ್ತವಾದ ಹೊರಗಿನದನ್ನು ಪಡೆಯುತ್ತಾ ತನ್ನ ಸಂಚಯದಲ್ಲಿ ಸೇರಿಸಿಕೊಳ್ಳುತ್ತದೆ. ಹಾಗೆ ಸೇರಿಸಿಕೊಂಡ ಸರಕು ಯಥಾವತ್ತಾಗಿ ಇರಲಾರದು. ಅದು ಯಾವುದಕ್ಕೆ ಸೇರುತ್ತದೋ ಆ ಸಮುದಾಯದ ಆಶೋತ್ತರಗಳಿಗನುಗುಣವಾಗಿ ಮಾರ್ಪಾಟು ಹೊಂದಬಹುದು. ಇದ್ದ ಹಾಗೇ ಇರುವುದಿಲ್ಲ. ಹೀಗಾಗಿ ಒಂದು ಸಂಸ್ಕೃತಿ

ಎಂಬುದು ನಿರಂತರವಾದುದು ಹಾಗೆಯೇ ಚಲನಶೀಲವಾದುದು. ಹೀಗಾದಾಗ ಒಂದು ಸಂಸ್ಕೃತಿಯಿಂದ ಯಾವುದಾದರೂ ಅಂಶಗಳನ್ನು ಪಡೆದುಕೊಂಡರೆ ಅದು ನೇರ ಅನುಸರಣೆ ಆಗಿರುವುದಿಲ್ಲ. ಬದಲಾಗಿ ಹಾಗೆ ಪಡೆದುಕೊಂಡ ಸಮುದಾಯದ ಆಶೋತ್ತರಗಳಿಗೆ ಅನುಗುಣವಾಗಿ ಮಾರ್ಪಡುತ್ತದೆ"(ಬೋರಲಿಂಗಯ್ಯ.ಹಿ.ಚಿ;೨೦೦೧;ಪುಃ೯೧-೯೨).

ಇಲ್ಲಿ "ಅವು ಹೇಗೆ ಸ್ವೀಕರಿಸುತ್ತವೆ ಮತ್ತು ಯಾವ ರೀತಿಯಲ್ಲಿ ತಮ್ಮಲ್ಲಿ ವಿಲೀನಗೊಳಿಸಿ ಕೊಳ್ಳುತ್ತವೆ ಎಂಬುದು ಮುಖ್ಯ"(ಬೋರಲಿಂಗಯ್ಯ.ಹಿ.ಚಿ;೨೦೦೧;ಪುಃ೯೨). ಇದು ಒಂದು ಸಮುದಾಯದ ಆದ್ಯತೆಯ ಮೇಲೆ ನಿರ್ಧಾರಿತವಾಗುತ್ತದೆ.

೬.೩.೪. ಮರುಹೊಂದಾಣಿಕೆಯ ದಿಕ್ಕಿನಲ್ಲಿ ಕೋಟ ಭಾಷಿಕ ಸಮುದಾಯ

ಕೋಟ ಭಾಷಿಕ ಸಮುದಾಯದ ಚಲನೆಯನ್ನು ಕಂಡಾಗ ಅದು ಅನನ್ಯತೆಯನ್ನು ಉಳಿಸಿಕೊಳ್ಳುತ್ತಾ ಮರುಹೊಂದಾಣಿಕೆ ಸಾಧಿಸುವ ದಿಕ್ಕಿನಲ್ಲಿರುವುದು ಕಾಣಿಸುತ್ತದೆ.

ಲೌಕಿಕ ಅಗತ್ಯಗಳಿಗಾಗಿ ಮುನ್ನಡೆಯ ದಾರಿಯಾಗಿ ಭಾಷಿಕ ಬದಲಾವಣೆಗೆ ತೆರೆದುಕೊಂಡ ಈ ಭಾಷಿಕ ಸಮುದಾಯ ಮರುಹೊಂದಾಣಿಕೆಯ ಪ್ರಕ್ರಿಯೆಯಲ್ಲಿ ಭಾಷೆಯ ಬಳಕೆಯಲ್ಲಿ ಭಿನ್ನ ವಲಯಗಳನ್ನು ಗುರುತಿಸಿಕೊಂಡಿದೆ. ಆಚರಣೆ, ಕುಟುಂಬ ಮುಂತಾದ ಖಾಸಗಿ ವಲಯಗಳಲ್ಲಿ ಒಳನುಡಿಯನ್ನೂ ವ್ಯವಹಾರ, ಶಿಕ್ಷಣ, ಕಚೇರಿ ಮುಂತಾದ ಸಾರ್ವಜನಿಕ ವಲಯಗಳಲ್ಲಿ ಪ್ರಮಾಣದ ಕಡೆಗಿನ ಒಲೆತವನ್ನೂ ಪ್ರದರ್ಶಿಸುತ್ತದೆ.

ಸಂಪ್ರದಾಯಗಳಲ್ಲಿ ಬದುಕನ್ನು ಪೊರೆಯುವ ಅನೇಕ ಸಂಗತಿಗಳಿವೆ, ಅಂಥವುಗಳನ್ನು ಉಳಿಸಿಕೊಳ್ಳಬೇಕು ಎಂಬ ಮನೋಭಾವ ಬದಲಾಗುತ್ತಿರುವ ಸಂದರ್ಭದಲ್ಲೂ ಭಾಷಿಕ ವೈಶಿಷ್ಟ್ಯವನ್ನು ಕಾಪಿಡುವ ನಿಟ್ಟಿನಲ್ಲಿ ಕೆಲಸ ಮಾಡಿದೆ. ಈ ಪ್ರವೃತ್ತಿಗೆ ಉದಾಹರಣೆಯಾಗಿ 'ಕಾಂಬ' ಸಮ್ಮೇಳನ, 'ಕುಂದ ಉತ್ಸವ', 'ಕುಂದ ಅಧ್ಯಯನ ಕೇಂದ್ರ', 'ದರ್ಶನ', 'ಶಾರದಾವಾಣಿ', ಶಂಕರನಾರಾಯಣ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕರು ಸೇರಿ ಸಂಗ್ರಹಿಸಿ ಪ್ರಕಟಿಸಿದ ಪ್ರಾದೇಶಿಕ ಸಂಸ್ಕೃತಿ ವಿವರಗಳನ್ನೊಳಗೊಂಡ ಪುಸ್ತಕ 'ಬೀಜ ಮುಹೂರ್ತ' ಮುಂತಾದವುಗಳನ್ನು ಗಮನಿಸಬಹುದು. ವಿದ್ಯಾರ್ಥಿಗಳು ತಮ್ಮ ಹಿರಿಯರಿಂದ ಕೇಳಿ ಅಥವಾ ಜನರೊಡನೆ ಹೋಗಿ ಬೆರೆತು ಅವರ ಭಾಷೆಯ ಸೊಗಡನ್ನು ಗ್ರಹಿಸಿ ದಾಖಲಿಸುವ ಪ್ರಯತ್ನ ಮೂಲ ಸ್ತರದಲ್ಲಿ ಉಳಿಸಿಕೊಳ್ಳಲಾಗದ್ದನ್ನು ಸಂಗ್ರಹಿಸಿ ರಕ್ಷಿಸಿಕೊಳ್ಳೋಣ ಎಂಬ ಭಾವನೆಯಿಂದ ಉಂಟಾದದ್ದು. ಇಂದಿನ ಜನಪದ ಸಂಗ್ರಹ ಕಾರ್ಯಗಳೆಲ್ಲ ಇದೇ ಬಗೆಯವು ಎಂಬುದನ್ನು ಗಮನಿಸಬಹುದು.

ಮರುಹೊಂದಾಣಿಕೆಯ ಈ ಪ್ರಕ್ರಿಯೆಯಲ್ಲಿ ಜಾತಿಗಳು 'ಅಸ್ಮಿತೆ'ಗಳಾಗಿ ರೂಪ ಪಡೆಯುತ್ತಿರುವ ಬಗೆಯನ್ನು ಕಳೆದ ಅಧ್ಯಾಯಗಳಲ್ಲಿ ಗಮನಿಸಲಾಗಿದೆ. ಇದರ ಭಾಗವಾಗಿ ಬ್ರಾಹ್ಮಣೇತರರ ಹೆಸರಿಡುವ ಪ್ರಕ್ರಿಯೆಯಲ್ಲಿ ಆದ ಬದಲಾವಣೆಯನ್ನು ಗಮನಿಸಬಹುದು. ಆಧುನಿಕವಾದ ಅಥವಾ ಹಿಂದೆ ತಮ್ಮ ಸಮುದಾಯಕ್ಕೆ ಇಡಲು ನಿರಾಕರಿಸಲಾಗಿದ್ದ 'ಶಿಷ್ಟ' ಹೆಸರುಗಳನ್ನು ಇಟ್ಟಾಗಲೂ ಜಾತಿಯನ್ನು ಸೂಚಿಸುವ ಉಪನಾಮಗಳನ್ನು ಬಳಿಯ ಆಧಾರದಲ್ಲಿ ಇಡುವ ಪ್ರವೃತ್ತಿ ಕಾಣುತ್ತದೆ.

ಅಂಕಿತ ನಾಮಗಳು ಸಂಸ್ಕೃತೀಕರಣ ಮತ್ತು ಆಧುನೀಕರಣವನ್ನು ಪ್ರದರ್ಶಿಸುತ್ತವೆ. ಉದಾಹರಣೆಗೆ, ಹಿಂದೆ ಇದ್ದ ಸೋಮ, ಬಚ್ಚಿ, ಚಿಕ್ಕು, ಚಂದು ಎಂಬ ಹೆಸರುಗಳಿಗೆ ಬದಲಾಗಿ ಇಂದು ಪವನ್, ಸತೀಶ್, ಸೃಷ್ಟಿ, ನಮಿತಾ ಮುಂತಾದ ಹೆಸರುಗಳನ್ನು ಇಡಲು ಆರಂಭಿಸಿದ್ದಾರೆ. ಆದರೆ ಹಿಂದೆ ಹೆಸರು ಮುಂದೆ ಹಾಕಿಕೊಳ್ಳುತ್ತಿದ್ದ ಜಾತಿ ಸೂಚಕಗಳನ್ನು ಬಳಿಯ ಆಧಾರದಲ್ಲಿ ವಿಶಿಷ್ಟವಾಗಿ ಹಾಕಲು ಆರಂಭಿಸಿದ್ದಾರೆ.

ಹಿಂದೆ ಹೆಸರಿನ ಮುಂದೆ ಪೂಜಾರಿ ಎಂದು ಹಾಕಿಕೊಳ್ಳುತ್ತಿದ್ದವರು ಇಂದು ಸಾಲಿಯಾನ್, ಅಮೀನ್, ಸುವರ್ಣ ಎಂದು ಹಾಕಿಕೊಂಡರೆ ಮೊಗವೀರ ಎಂದು ಹಾಕಿಕೊಳ್ಳುತ್ತಿದ್ದವರು ಈಗ ಚಂದರ್, ಕಾಂಚನ್ ಎಂದು ಹಾಕಿಕೊಳ್ಳುತ್ತಿದ್ದಾರೆ.

ಮರುಹೊಂದಾಣಿಕೆ ಮಾಡಿಕೊಳ್ಳುವ ಬಗೆ ತನ್ನತನವನ್ನು ಉಳಿಸಿಕೊಂಡೇ ಮುಂಚಲನೆಯತ್ತ ನಡೆಯಲು ಸಮುದಾಯ ಕಂಡುಕೊಳ್ಳುವ ತಂತ್ರಗಾರಿಕೆಯ ಭಾಗವಾಗಿದೆ. ಜಾತಿ, ಪ್ರದೇಶಗಳ ನಡುವಣ ಸೂಕ್ಷ್ಮ ಭಾಷಾ ವ್ಯತ್ಯಾಸ ಇಲ್ಲವಾದರೂ ಸಾಮೂಹಿಕ ನೆಲೆಯಲ್ಲಿ ಭಾಷಿಕ ಅನನ್ಯತೆಯನ್ನು ತೋರುವ ಬಗೆ ಇಲ್ಲಿ ಕಾಣುತ್ತದೆ. ಇದು ಪ್ರಜ್ಞಾಪೂರ್ವಕ ಮತ್ತು ಅಪ್ರಜ್ಞಾಪೂರ್ವಕ ಹೀಗೆ ಎರಡೂ ನೆಲೆಗಳಲ್ಲಿ ನಡೆಯುತ್ತಿದೆ.

• • •

ಅಧ್ಯಾಯ : ಎಂಟು

ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಅಧ್ಯಯನದಲ್ಲಿ ಎದುರಾದ ತೊಡಕುಗಳು ಮತ್ತು ಬಿಡಿಸಿಕೊಂಡ ಬಗೆ

೮.೩. ಅಧ್ಯಯನದ ಹೊಸ ಸಾಧ್ಯತೆಗಳು

ಅಧ್ಯಾಯ : ಎಂಟು

ಸಮಾರೋಪ

ಕೋಟ ಭಾಷಿಕ ಪರಿಸರದ ಸಂಸ್ಕೃತಿ ಮತ್ತು ಭಾಷೆಯ ನಂಟನ್ನು ಶೋಧಿಸುವ ದಾರಿಯಲ್ಲಿ ಎದುರಾದ ತೊಡಕುಗಳು, ಅವುಗಳನ್ನು ಮುಖಾಮುಖಿಯಾದ ಬಗೆ ಮತ್ತು ಕಂಡುಕೊಂಡ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಜೊತೆಗೆ ಅಧ್ಯಯನದ ಹೊಸ ಸಾಧ್ಯತೆಗಳನ್ನೂ ಗುರುತಿಸಲಾಗಿದೆ.

೮.೧. ಅಧ್ಯಯನದ ಫಲಿತಗಳು

ಭಾಷೆ ಮತ್ತು ಸಂಸ್ಕೃತಿಯ ನಡುವಣ ನಂಟನ್ನು ಕೋಟ ಒಳನುಡಿಯನ್ನು ಅನುಲಕ್ಷಿಸಿ ಮಾಡಿದ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಅಂಶಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಚಚರ್ಚಿಸಲಾಗಿದೆ,

೧. ಭಾಷೆ ಸಂಸ್ಕೃತಿಯನ್ನು ನಿರ್ದೇಶಿಸದಿದ್ದರೂ ಪ್ರಭಾವಿಸುತ್ತದೆ. ಭಾಷೆ ಗ್ರಹಿಕೆಯನ್ನು ನಿರ್ದೇಶಿಸುವುದಿಲ್ಲ, ಆದರೆ ಪ್ರಭಾವಿಸುತ್ತದೆ ಎಂಬ ಸಪೀರ್ ವೂರ್ಫ್ ಪ್ರಮೇಯದ ದುರ್ಬಲ ವಾದವನ್ನು ಪೂರ್ವಗ್ರಹಿಕೆಯಾಗಿಟ್ಟುಕೊಂಡು ಅಧ್ಯಯನ ಆರಂಭಿಸಲಾಗಿತ್ತು. ಅಧ್ಯಯನದ ದಾರಿಯಲ್ಲಿ ಅದನ್ನು ಸಮರ್ಥಿಸುವ ಸಂಗತಿಗಳು ಎದುರಾದವು. ಹೀಗಾಗಿ ಕೋಟ ಭಾಷಿಕ ಸಮುದಾಯಕ್ಕೆ ತನ್ನ ಒಳನುಡಿ ಕಟ್ಟಿಕೊಟ್ಟ ಚೌಕಟ್ಟಿನಾಚೆಗೂ ಯೋಚಿಸುವುದು ಸಾಧ್ಯವಾಗಿದೆ; ಅನ್ಯ ಸಂಸ್ಕೃತಿಯಿಂದ ಬಂದ ಸಂಗತಿಗಳನ್ನು ಒಳಗುಮಾಡಿಕೊಳ್ಳುವುದು ಸಾಧ್ಯವಾಗಿದೆ.

೨. ಭಾಷಿಕ ಪಲ್ಲಟ ಮತ್ತು ಸಂಸ್ಕೃತಿಯ ಪಲ್ಲಟ ಇವೆರಡೂ ಒಂದರೊಡನೊಂದು ಸಂಬಂಧ ಹೊಂದಿವೆ. ಒಂದು ಸಮುದಾಯದ ಜೀವನಶೈಲಿಯಲ್ಲಾದ ಬದಲಾವಣೆಯೂ ಭಾಷೆಯ ಬದಲಾವಣೆಯೂ ಜೊತೆಜೊತೆಗೇ ಸಾಗುತ್ತದೆ. ಜೀವನವಿಧಾನವನ್ನೇ ಸಂಸ್ಕೃತಿ ಎನ್ನುವುದಾದರೆ ಅನ್ಯಸಂಗತಿಗಳ ಪ್ರಭಾವದಿಂದ ಬದುಕಲ್ಲಿ ಬದಲಾವಣೆ ಆದ ಹಾಗೆ ಆ ಬದಲಾವಣೆಯನ್ನು ಸಂಕೇತಿಸುವ ನೆಲೆಯಲ್ಲಿ ಭಾಷೆ ಬದಲಾಗುತ್ತದೆ. ಭಾಷೆ ತೆರೆದು ತೋರುವ ಹೊಸ ದಿಕ್ಕಿನ ಪ್ರಭಾವ ಬದುಕಿನ ವಿಧಾನದ ಮೇಲೆ ಆಗುತ್ತದೆ. ಹೀಗೆ ಇವೆರಡೂ ಪರಸ್ಪರ ಪ್ರಭಾವದೊಂದಿಗೆ ಮುಂಬರಿಯುತ್ತವೆ.

೩. ಒಂದು ಭಾಷೆಯ ಮೇಲೆ ಅನ್ಯ ಭಾಷೆಯ ಪ್ರಭಾವ ಆ ಭಾಷೆಯ ಸ್ಥಾನಮಾನದ ಮೇಲೆ ನಿರ್ಧರಿತವಾಗಿರುತ್ತದೆ. ಒಂದು ಭಾಷೆಯ ಪ್ರಭಾವ ಇನ್ನೊಂದು ಭಾಷೆಯ ಮೇಲೆ ಆಗುವಲ್ಲಿ ಆ ಇನ್ನೊಂದು ಭಾಷೆಯ ಉಪಯೋಗಮೌಲ್ಯ ಮತ್ತು ಅಧಿಕಾರದ ಜೊತೆ ಅದಕ್ಕಿರುವ ಸಂಬಂಧ ನಿರ್ಣಾಯಕವಾಗಿರುತ್ತದೆ. ಕೋಟ ಭಾಷಿಕ ಸಮುದಾಯದಲ್ಲಿ ಇಂಗ್ಲಿಷ್ ಮತ್ತು ಪ್ರಮಾಣ ಕನ್ನಡಕ್ಕಿರುವ ಈ ಗುರುತ್ವ ಪರಿಸರದ ಇತರ ಭಾಷೆಗಳಿಗೆ ಇಲ್ಲದಿರುವುದರಿಂದ ಅವು ನಿಕಟವಾಗಿದ್ದರೂ ಕೋಟ ಒಳನುಡಿಯ ಮೇಲೆ ಗಣನೀಯ ಪ್ರಭಾವ ಬೀರಿಲ್ಲ. ಇದು ಎರವಲು ಪದಗಳನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ.

೪. ಕೋಟ ಭಾಷಿಕ ಸಮುದಾಯದ ಹಿನ್ನೆಲೆಯಲ್ಲಿ ಸಮುದಾಯಕ್ಕೆ ಭಾಷಿಕ ಅಸ್ಮಿತೆಯೇ ಎಲ್ಲಕ್ಕಿಂತ ಪ್ರಧಾನವಾದದ್ದಲ್ಲ. ಸಮುದಾಯ ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ಸಂಗತಿಗಳಲ್ಲಿ ಒಳನುಡಿಗಳ ದೃಷ್ಟಿಯಿಂದ ಭಾಷೆಯೇ ಎಲ್ಲಕ್ಕಿಂತ ಪ್ರಧಾನವಾದದ್ದಲ್ಲ. ಜಾತಿ ಎನ್ನುವುದು ಪ್ರಧಾನವಾದದ್ದಾಗಿದೆ. ನಂತರದಲ್ಲಿ ಇತರ ಅಸ್ಮಿತೆಗಳು ಬರುತ್ತವೆ. ಮತ್ತು ಈ ಅಸ್ಮಿತೆಗಳು ಭಿನ್ನಸ್ತರದಲ್ಲಿ ಕೆಲಸ ಮಾಡುತ್ತವೆ.

೫. ಸಮಾಜದ ಶ್ರೇಣೀಕರಣದ ಏಣಿಯಲ್ಲಿ ಮೇಲೇರುವುದರಲ್ಲಿ ಮತ್ತು ಪ್ರಗತಿ ಸಾಧಿಸುವಲ್ಲಿ ಭಾಷೆಯ ಪಾತ್ರ ನಿರ್ಣಾಯಕವಾದುದಾಗಿದೆ. ಅಂದರೆ ಮುಂಚಲನೆ ಮತ್ತು ಮೇಲ್ಚಲನೆ ಇವೆರಡರಲ್ಲೂ ಭಾಷೆಯ ಪಾತ್ರ ಮುಖ್ಯವಾಗಿದೆ. ಯಾವ ಭಾಷೆಗೆ ಹೆಚ್ಚಿನ ಉಪಯೋಗಮೌಲ್ಯ ಮತ್ತು ಸ್ಥಾನಮಾನ ಇರುತ್ತದೋ ಆ ಭಾಷೆಯನ್ನು ಕಲಿಯುವ ಮೂಲಕ ಪ್ರಗತಿಯ ದಾರಿಯಲ್ಲಿ ಮುನ್ನಡೆಯುವುದು ಸುಲಭವಾಗುತ್ತದೆ. ಈ ಮೂಲಕ ಶ್ರೇಣೀಕರಣದ ಏಣಿಯಲ್ಲಿ ಮೇಲೇರುವುದು ಸಾಧ್ಯವಾಗುತ್ತದೆ.

೬. ಭಾಷೆಯ ಅನನ್ಯತೆಯನ್ನು ನಿರ್ಧರಿಸುವಲ್ಲಿ ಜಾತಿ, ವರ್ಗ, ಲಿಂಗಕ್ಕಿಂತ ವೃತ್ತಿ ನಿರ್ಣಾಯಕವಾದುದಾಗಿದೆ. ಭಾಷಿಕ ಅನನ್ಯತೆ ಮತ್ತು ವ್ಯತ್ಯಾಸ ಜಾತಿ, ವರ್ಗ, ಲಿಂಗ,

ವಯಸ್ಸು ಎಲ್ಲಕ್ಕಿಂತ ಮುಖ್ಯವಾಗಿ ಸಮುದಾಯ, ಕುಟುಂಬ ಅಥವಾ ವ್ಯಕ್ತಿಯ ವೃತ್ತಿಯನ್ನು ಅವಲಂಬಿಸಿದೆ. ಕೃಷಿ ಆಧಾರವಾಗಿರುವವರು ಜಾತಿ, ಲಿಂಗಗಳ ಭೇದಗಳಾಚೆಗೆ ಹೆಚ್ಚು ಪ್ರಾದೇಶಿಕ ಪ್ರಭೇದಕ್ಕೆ ಒಲೆಯುವುದನ್ನು ಕಾಣುತ್ತೇವೆ. ಒಂದೇ ಜಾತಿ ಸಮುದಾಯದಲ್ಲಿ ವೃತ್ತಿಯನ್ನವಲಂಬಿಸಿ ಭಾಷಿಕ ವ್ಯತ್ಯಾಸಗಳು ಕಾಣುತ್ತವೆ.

೭. ಭಾಷೆಗೆ ಒಂದು ಕೇಂದ್ರ ಇದೆ ಎಂಬ ಕಲ್ಪನೆ ನಿರಾಧಾರವಾದುದು. ಒಂದು ಭಾಷಾಪ್ರಭೇದ ಇನ್ನೊಂದಕ್ಕಿಂತ ಶ್ರೇಷ್ಠವಾದುದು, ಒಂದು ಪ್ರದೇಶದ ಭಾಷೆ ತುಂಬಾ ಸಾರವತ್ತಾದುದು ಎಂಬ ಕಲ್ಪನೆ ಭಾವುಕ ನೆಲೆಯಿಂದ ಹೊರಟದ್ದು, ಹೊರತು ಅಂತಹ ಕಲ್ಪನೆ ನಿರ್ಧಾರವಾದುದು. ಭಾಷೆಯ ಕಾರಣಕ್ಕಾಗಿ ಮೇಲರಿಮೆ ಮತ್ತು ಕೀಳರಿಮೆ ಇವೆರಡಕ್ಕೂ ಭಾಷೆಗಿರುವ ಸ್ಥಾನಮಾನ, ಆರ್ಥಿಕ ಮೌಲ್ಯ ಇವು ಮುಖ್ಯವಾಗುತ್ತವೆ. ಇದನ್ನು ಅಧಿಕಾರ ಕೇಂದ್ರ ನಿರ್ಧರಿಸುತ್ತದೆ.

೮. ಭೌಗೋಳಿಕ ಗಡಿಗಳು ಭಾಷೆಯ ಭಿನ್ನತೆಗೆ ಕಾರಣವಾಗುವ ಅಂಶಗಳಲ್ಲಿ ಒಂದಾದರೂ ಅವುಗಳೇ ನಿರ್ಣಾಯಕವಾದುವಲ್ಲ. ಕಲ್ಯಾಣಪುರ ಹೊಳೆಯ ಬಳಿಕ ಇನ್ನೂ ಅನೇಕ ಹೊಳೆಗಳು ಬರುತ್ತವೆ. ಆದರೆ ಗಣನೀಯವಾದ ಭಾಷಿಕ ವ್ಯತ್ಯಾಸ ಕಾಣಿಸುವುದಿಲ್ಲ. ಒಂದೇ ಆಡಳಿತ, ಆರ್ಥಿಕ ಅಗತ್ಯ, ಚಲನೆ ಮತ್ತು ಭಾಷಿಕ ಅನನ್ಯತೆಯನ್ನು ಉಳಿಸಿಕೊಳ್ಳುವಲ್ಲಿ ಒಂದು ಭಾಷಿಕ ಸಮುದಾಯದ ಇಚ್ಛಾಶಕ್ತಿ ಇವೆಲ್ಲವೂ ಮುಖ್ಯವಾಗುತ್ತವೆ. ಭೌಗೋಳಿಕ ಗಡಿಗಳು ಮುಖ್ಯವಾಗದ ಆಧುನಿಕ ಸಂದರ್ಭದಲ್ಲಿ ಈ ಎಲ್ಲ ಸಂಗತಿಗಳು ಭಾಷಿಕ ಅನನ್ಯತೆಯನ್ನು ಕಾಯ್ದುಕೊಳ್ಳುವಲ್ಲಿ ಮುಖ್ಯವಾಗುತ್ತದೆ.

೮.೨. ಅಧ್ಯಯನ ಸಂದರ್ಭದಲ್ಲಿ ಎದುರಾದ ತೊಡಕುಗಳು ಮತ್ತು ಬಿಡಿಸಿಕೊಂಡ ಬಗೆ

ಕನ್ನಡದ ಸಂದರ್ಭದಲ್ಲಿ ನಡೆದ 'ಸಂಸ್ಕೃತಿ ಅಧ್ಯಯನ'ಗಳನ್ನು ಗಮನಿಸಿದಾಗ ಮುಖ್ಯವಾಗಿ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಇವು ಒಂದರ ಜಾಗದಲ್ಲೊಂದು ಮುಕ್ತವಾಗಿ ಬಳಕೆಯಾಗುತ್ತಾ ಬಂದಿವೆ. ಜೊತೆಗೆ, 'ಸಂಸ್ಕೃತಿ' ಎಂಬ ಪದ ಆರ್ಥಿಕ, ರಾಜಕೀಯ, ಸಾಮಾಜಿಕ, ಐತಿಹಾಸಿಕ, ಕಲೆ, ಆಚರಣೆ, ನಂಬಿಕೆ ಹೀಗೆ ಎಲ್ಲವನ್ನೂ ಒಳಗೊಳ್ಳುವ ಪರಿಕಲ್ಪನೆಯಾಗಿ ಬೆಳೆಯುತ್ತಾ ಬಂದಿದೆ. ಈ ನೆಲೆಯಲ್ಲಿ ಸಾಮಾಜಿಕ ಅಂಶಗಳು ಯಾವುವು, ಸಂಸ್ಕೃತಿಯ ಅಂಶಗಳು ಯಾವುವು ಎಂಬುದನ್ನು ಬಿಡಿಸಿಕೊಳ್ಳಬೇಕಾಗಿತ್ತು. ಇವುಗಳ ನಡುವಣ ಗಡಿ ತುಂಬಾ ನಿರ್ದಿಷ್ಟವಾಗಿಲ್ಲ. ಸಮಾಜ ವ್ಯವಸ್ಥೆಗೊಂಡಿರುವ ಬಗೆ, ಅದರ ಸಾಂಸ್ಥಿಕ ರಚನೆ ಸಮಾಜಶಾಸ್ತ್ರದ ಆಸಕ್ತಿಯ ವಿಷಯವಾದರೆ ಆ ಸಮಾಜದ ಜನರ ನಂಬಿಕೆ, ಆಚರಣೆ, ಜೀವನಶೈಲಿ ಮುಂತಾದವುಗಳೆಡೆಗೆ ಸಂಸ್ಕೃತಿ ಅಧ್ಯಯನಕಾರರು ಆಸಕ್ತಿ ಹೊಂದಿದ್ದಾರೆ. ಆದರೆ ಇವು ಪರಸ್ಪರ ಗಡಿಗಳನ್ನು ಹೆಚ್ಚಿನ ಸಂದರ್ಭಗಳಲ್ಲಿ ದಾಟುತ್ತಿರುತ್ತವೆ.

ಸಮಾಜ ಮತ್ತು ಭಾಷೆ ಬಗ್ಗೆ ಅಧ್ಯಯನ ಮಾಡುವ ಶಾಖೆಯನ್ನು 'ಸಾಮಾಜಿಕ ಭಾಷಾವಿಜ್ಞಾನ'ವೆಂದೂ, ಭಾಷೆ ಮತ್ತು ಸಂಸ್ಕೃತಿ ಕುರಿತು ಅಧ್ಯಯನ ಮಾಡುವ ಶಾಖೆಯನ್ನು 'ಮಾನವಶಾಸ್ತ್ರೀಯ ಭಾಷಾ ವಿಜ್ಞಾನ'ವೆಂದೂ ಕರೆಯಲಾಗುತ್ತದೆ. ಆದರೆ ಮಾನವಶಾಸ್ತ್ರೀಯ ಭಾಷಾವಿಜ್ಞಾನಿಗಳು ಹೆಚ್ಚು ಕೆಲಸ ಮಾಡಿದ್ದು ಬುಡಕಟ್ಟುಗಳ ಭಾಷೆಯ ಕುರಿತು. ಇವರು ಬುಡಕಟ್ಟಿನ ಭಾಷೆ, ಲೋಕಗ್ರಹಿಕೆ, ನಂಬಿಕೆ, ಆಚರಣೆ, ಬಂಧುತ್ವ ಕುರಿತು ಗಮನ ಕೇಂದ್ರೀ ಕರಿಸಿದರು. ಸಾಮಾಜಿಕ ಭಾಷಾವಿಜ್ಞಾನಿಗಳು ಸಮಾಜದ ವಿವಿಧ ಸ್ತರಗಳಲ್ಲಿ ಭಾಷೆ ಹೇಗೆ ನೆಲೆಗೊಂಡಿದೆ, ಇದರ ಹಿಂದೆ ಕೆಲಸ ಮಾಡುವ ಧೋರಣೆಗಳು, ಮನಸ್ಥಿತಿ, ಅಧಿಕಾರ ಸಂಬಂಧ, ಅಸ್ಮಿತೆ ಇವುಗಳ ಕುರಿತು ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಆಯ್ದು ಕೊಂಡಿರುವ ಸಮುದಾಯ ಬುಡಕಟ್ಟುಗಳಂತೆ ಒಂದೇ ಬದುಕಿನ ಕ್ರಮವನ್ನು ಹಂಚಿಕೊಳ್ಳುವ ಸಮುದಾಯವಲ್ಲ. ಇದು ವರ್ಗ, ಜಾತಿಗಳಾಗಿ ವಿವಿಧ ಸ್ತರಗಳಲ್ಲಿ ವ್ಯವಸ್ಥಿತಗೊಂಡಿರುವ ಸಮುದಾಯ. ಜೊತೆಗೆ, ಆಧುನಿಕತೆಗೆ ವೇಗವಾಗಿ ತೆರೆದುಕೊಳ್ಳುತ್ತಿರುವ ಸಮುದಾಯ. ಹೀಗಾಗಿ ಸಂಸ್ಕೃತಿಯನ್ನು, ಸಮಾಜವನ್ನೂ ಒಳಗೊಂಡಿರುವ ಕಲ್ಪನೆಯಾಗಿ ಪರಿಭಾವಿಸುತ್ತಾ ಅಧ್ಯಯನ ವಿಧಾನ ರೂಪಿಸಿಕೊಳ್ಳಲಾಯಿತು.

ಇನ್ನೊಂದು ತೊಡಕು ಎಂದರೆ, ಕನ್ನಡದಲ್ಲಿ ಈ ಬಗೆಯ ಅಧ್ಯಯನಗಳ ಕೊರತೆ. ಹೀಗಾಗಿ ಅಲ್ಲಿನ ಸಿದ್ಧಾಂತ ಮತ್ತು ಇಲ್ಲಿನ ವಾಸ್ತವಗಳ ನಡುವೆ ದಾರಿ ಕಂಡುಕೊಂಡು ಹೋಗಬೇಕಾದ ಸವಾಲು ಎದುರಿಗಿತ್ತು. ಪಾಶ್ಚಾತ್ಯ ಸಮಾಜದಲ್ಲಿ ನಡೆದ ಈ ಬಗೆಯ ಅಧ್ಯಯನಗಳು ವರ್ಗ ಮತ್ತು ಬುಡಕಟ್ಟುಗಳ ನೆಲೆಯಿಂದ ನಡೆದಂಥವು. ಆದರೆ ನಮ್ಮ ಸಮಾಜದಲ್ಲಿ ಜಾತಿ ನಿರ್ಧಾರಕವಾಗಿದೆ. ಹೀಗಾಗಿ ಇಲ್ಲಿನ ವಾಸ್ತವವನ್ನು ಗ್ರಹಿಸಬೇಕಾದ ರೀತಿ ಬೇರೆ. ಹೀಗಾಗಿ ತಾತ್ವಿಕ ಚೌಕಟ್ಟು ರೂಪಿಸಿಕೊಳ್ಳುವುದು ಸವಾಲಿನ ಕೆಲಸವಾಗಿತ್ತು. ಈ ನೆಲೆಯಲ್ಲಿ ಮೊದಲು ಕ್ಷೇತ್ರಕಾರ್ಯ ನಡೆಸಿ ಆ ಸಮುದಾಯದ ಭಾಷಿಕ ನಡವಳಿಕೆಗಳು, ವರ್ತನೆ, ಅಲ್ಲಿ ಸಮುದಾಯ ರಚಿತಗೊಂಡಿರುವ ಪರಿ ಇವನ್ನು ಗಮನಿಸಿ, ನಂತರ ಓದು ಮತ್ತು ವಿದ್ವಾಂಸರೊಂದಿಗಿನ ಚರ್ಚೆಯಿಂದ ದಾರಿಯನ್ನು ಕಂಡುಕೊಳ್ಳಲಾಯಿತು. ಆದರೂ 'ಭಾಷೆ ಮತ್ತು ಸಂಸ್ಕೃತಿ' ಇವೆರಡರ ವ್ಯಾಪ್ತಿಯೂ ಬಹುದೊಡ್ಡದು, ಇವುಗಳ ನಂಟೂ ಹಲವು ಮುಖವುಳ್ಳದ್ದು. ಕೋಟ ಭಾಷಿಕ ಸಮುದಾಯದಲ್ಲಿ ಈ ನಂಟು ವ್ಯಕ್ತವಾಗುವ ಬಗೆಗಳಲ್ಲಿ ಮುನ್ನೆಲೆಯಲ್ಲಿರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇದು ಆರಂಭ ಮಾತ್ರ. ಇಲ್ಲಿ ಚರ್ಚಿತವಾದ ಪ್ರತಿಯೊಂದು ಅಂಶದ ಕುರಿತೂ ಇನ್ನಷ್ಟು ವಿಸ್ತೃತ ಅಧ್ಯಯನವನ್ನು ಮುಂದಿನ ದಿನಗಳಲ್ಲಿ ನಡೆಸಬಹುದಾದ ಸಾಧ್ಯತೆ ಇದೆ.

೮.೩. ಅಧ್ಯಯನದ ಹೊಸ ಸಾಧ್ಯತೆಗಳು

ಕೋಟ ಭಾಷಿಕ ಸಮುದಾಯ ಮತ್ತು ಕೋಟ ಒಳನುಡಿ ಬಹುಮುಖಿ ಆಯಾಮಗಳನ್ನು ಹೊಂದಿದ್ದು ಭಾಷೆ ಮತ್ತು ಸಂಸ್ಕೃತಿ ಕುರಿತು ಆಸಕ್ತಿ ಹೊಂದಿದವರಿಗೆ ಹಲವು ನೆಲೆಯಿಂದ ಅಧ್ಯಯನ ನಡೆಸಬಹುದಾದ ಅವಕಾಶ ಇಲ್ಲಿದೆ.

೧. ಕಲ್ಯಾಣಪುರದಿಂದ ಉತ್ತರಕ್ಕೆ ಬೈಂದೂರಿನ ಗಡಿವರೆಗೂ ಕೋಟ ಒಳನುಡಿಯ ವ್ಯಾಪ್ತಿ ಇದ್ದರೂ ಇಲ್ಲಿ ಪ್ರಾದೇಶಿಕವಾಗಿ ಸೂಕ್ಷ್ಮ ವ್ಯತ್ಯಾಸ ಗುರುತಿಸುವುದು ಸಾಧ್ಯವಿದೆ. ಪ್ರತಿ ನದಿ ಬಂದಾಗಲೂ ಅದರ ಎರಡು ದಡಗಳ ಭಾಷೆಗಳಲ್ಲಿ ವ್ಯತ್ಯಾಸ ಕಾಣಿಸುತ್ತದೆ. ಈ ಬಗ್ಗೆ ವಿಸ್ತೃತ ಅಧ್ಯಯನ ನಡೆಸಬಹುದಾಗಿದೆ.

೨. ಭಾಷಿಕ ಹಿನ್ನೆಲೆಯಿಂದ ಸಸ್ಯಗಳ, ಪ್ರಾಣಿಗಳ ಹೆಸರು, ಆಹಾರ ಸಂಸ್ಕೃತಿ, ಸ್ಥಳನಾಮ, ವ್ಯಕ್ತಿ ನಾಮ ಮುಂತಾದವುಗಳ ಕುರಿತು ಪೂರ್ಣಪ್ರಮಾಣದ ಅಧ್ಯಯನಗಳು ಇದುವರೆಗೆ ನಡೆದಿಲ್ಲ. ಇವುಗಳನ್ನಿರಿಸಿಕೊಂಡು ಗಂಭೀರ ಅಧ್ಯಯನ ನಡೆಸಬಹುದಾಗಿದೆ.

೩. ಇಲ್ಲಿನ ಜನಪದ ಸಾಹಿತ್ಯ ಆಧುನಿಕತೆಯ ಆಗಮನದಿಂದ ನಿಧಾನವಾಗಿ ಮರೆಗೆ ಸರಿಯುತ್ತಿವೆ. ಇದುವರೆಗೆ ಇವುಗಳನ್ನು ಸಂಗ್ರಹಿಸುವ ಕೆಲಸ, ಜಾನಪದದ ದೃಷ್ಟಿಯಿಂದ ವಿಶ್ಲೇಷಣೆ ನಡೆಸುವ ಕೆಲಸ ನಡೆದಿದೆಯೇ ಹೊರತು ಭಾಷಿಕವಾಗಿ ವಿಶ್ಲೇಷಿಸುವ ಕೆಲಸ ನಡೆದಿಲ್ಲ. ಇದು ಒಳನುಡಿಯ ರಚನೆ ಮತ್ತು ಅಲ್ಲಿನ ಸಂಸ್ಕೃತಿ ಕುರಿತು ಇನ್ನಷ್ಟು ಬೆಳಕು ಬೀರಬಹುದು.

೪. ಕೋಟ ಒಳನುಡಿಯಲ್ಲಿ ಇಂದು ತಮಿಳಿನಲ್ಲಿ ಬಳಕೆಯಲ್ಲಿರುವ ಪದಗಳು ಮತ್ತು ಅವುಗಳನ್ನು ಹೋಲುವ ರಚನೆಗಳು ಬಳಕೆಯಲ್ಲಿವೆ. ಈ ಬಗ್ಗೆ ಅಧ್ಯಯನಗಳು ನಡೆದಿಲ್ಲ. ಜೊತೆಗೆ, ಕೋಟ ಒಳನುಡಿ ಮತ್ತು ಸುತ್ತಲಿನ ಇತರ ಭಾಷೆಗಳ ನಡುವಣ ಕೊಡು ಕೊಳೆ ಕುರಿತೂ ಗಂಭೀರ ಅಧ್ಯಯನ ನಡೆಸುವ ಅವಕಾಶವಿದೆ. ಇದು ದ್ರಾವಿಡ ಭಾಷೆಗಳು ಕವಲೊಡೆದ ಬಗೆ ಅಥವಾ ಸಮಾಂತರವಾಗಿ ರೂಪುಗೊಂಡ ಬಗೆ, ಐತಿಹಾಸಿಕವಾಗಿ ಇವುಗಳ ನಡುವೆ ಇದ್ದ ಸಂಪರ್ಕ, ಚಾರಿತ್ರಿಕವಾಗಿ ಆದ ಭಾಷಿಕ ಬದಲಾವಣೆ ಕುರಿತು ಕುತೂಹಲಕರ ಅಂಶಗಳನ್ನು ತೆರೆದಿಡಬಲ್ಲದು.

೫. 'ಮಾತುಕತೆ'ಯ ಸಂದರ್ಭವನ್ನು ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಕೆಲಸವನ್ನು ಪ್ರಸ್ತುತ ಅಧ್ಯಯನದಲ್ಲಿ ನಡೆಸಲಾಗಿದೆ. ಅದರ ಜೊತೆಗೆ, ರಾಚನಿಕವಾಗಿ 'ಮಾತುಕತೆ'ಯನ್ನು ಸಾಮಾಜಿಕ ಭಾಷಾವಿಜ್ಞಾನದ ನೆಲೆಯಿಂದ ಅಧ್ಯಯನ ಮಾಡುವ ಸಾಧ್ಯತೆಗಳಿವೆ.

ಒಟ್ಟಿನಲ್ಲಿ ಭಾಷೆ ಮತ್ತು ಸಂಸ್ಕೃತಿಯ ನಂಟನ್ನು ಶೋಧಿಸುವ ಪ್ರಯತ್ನಗಳು ನಮ್ಮ ಸಂದರ್ಭದಲ್ಲಿ ಹೆಚ್ಚಾಗಿ ನಡೆದಿಲ್ಲ. ಕೇವಲ ಭಾಷಿಕ ಅಧ್ಯಯನಗಳು ಅಥವಾ ಸಾಂಸ್ಕೃತಿಕ ಅಧ್ಯಯನಗಳು ಪ್ರತ್ಯೇಕವಾಗಿ ನಡೆದಿವೆ. ಈ ಬಗೆಯಲ್ಲಿ ಅಧ್ಯಯನ ನಡೆಸುವ ಹಲವು ಸಾಧ್ಯತೆಗಳು ನಮ್ಮ ಮುಂದಿವೆ. ಇವು ನಮ್ಮ ಗಮನಕ್ಕೆ ಬಾರದಿರುವ ಹಲವು ವಾಸ್ತವಗಳನ್ನು ನಮ್ಮ ಮುಂದೆ ತೆರೆದಿಡಬಲ್ಲದು.

ಕೋಟ ಭಾಷಿಕ ಸಮುದಾಯದ ಭಾಷೆ ಮತ್ತು ಸಂಸ್ಕೃತಿಯ ನಂಟನ್ನು ಶೋಧಿಸುವ ಈ ಅಧ್ಯಯನದ ಮೂಲಕ ಈ ಒಳನುಡಿಯ ಕೆಲವು ಚಹರೆಗಳನ್ನು ತೋರುವ ಪ್ರಯತ್ನ ಮಾಡಲಾಗಿದೆ. ಭಾಷೆ ಮತ್ತು ಸಂಸ್ಕೃತಿ ಸದಾ ಚಲನಶೀಲವಾದದ್ದು. ಹೀಗಾಗಿ ಚಲನೆ ಎನ್ನುವುದು ನಿರಂತರ ನಡೆಯುವ ಪ್ರಕ್ರಿಯೆ. ಈ ಪ್ರಯಾಣದಲ್ಲಿ ಸಮುದಾಯಗಳು ನಿಂತ ನೆಲೆಯನ್ನು ಮತ್ತು ಹೋಗಬೇಕಾದ ದಾರಿಯನ್ನು ಪರಿಭಾವಿಸುವ ಬಗೆ ಎರಡೂ ಸಂಸ್ಕೃತಿ ಅಧ್ಯಯನದ ದೃಷ್ಟಿಯಿಂದ ಮುಖ್ಯವಾಗುತ್ತದೆ. ಈ ದಾರಿಯಲ್ಲಿ ಒಂದು ಭಾಷಿಕ ಸಮುದಾಯ ಒಟ್ಟಾಗಿ ಸುತ್ತಲಿನ ಲೋಕವನ್ನು ಗ್ರಹಿಸುವ ಬಗೆ ಯಾವುದು, ಅವು ಅನ್ಯವಾದುದು ಎದುರಾದಾಗ ಯಾವುದನ್ನು ಒಳಗುಮಾಡಿಕೊಳ್ಳುತ್ತವೆ ಮತ್ತು ಯಾವುದರ ಬಗ್ಗೆ ಪ್ರತಿರೋಧ ತೋರುತ್ತವೆ, ಯಾವುದನ್ನು ಸಾಮೂಹಿಕವಾಗಿ ಒಪ್ಪಿಕೊಂಡು ಪಾಲಿಸುತ್ತವೆ, ಅವುಗಳಿಗೆ ಕೊಟ್ಟುಕೊಂಡ ಸಾಮಾಜಿಕ ಅರ್ಥಗಳೇನು, ಇವು ಒಂದು ಭಾಷಿಕ ಸಂಸ್ಕೃತಿಯ ಸ್ವರೂಪವನ್ನು ತಿಳಿಯುವಲ್ಲಿ ಮುಖ್ಯವಾಗುತ್ತವೆ. ಪ್ರಸ್ತುತ ಅಧ್ಯಯನ ಈ ನಿಟ್ಟಿನಲ್ಲಿ ಮೈದಳೆದಿದೆ.

• • •

ಅನುಬಂಧ

೧. ವಕ್ತೃ ಮಾಹಿತಿ

೨. ಮಾದರಿ ಪ್ರಶ್ನಾವಳಿ

೩. ಗ್ರಂಥಸೂಚಿ

೪. ಸಾಂಸ್ಕೃತಿಕ ಪದಕೋಶ

೧. ವಕ್ತೃ ಮಾಹಿತಿ

೧. ಉಪೇಂದ್ರ ಸೋಮಯಾಜಿ; ೭೦ವ; ಬ್ರಾಹ್ಮಣರು, ನಿವೃತ್ತ ಶಿಕ್ಷಕರು, ಚಿತ್ರಪಾಡಿ.

೨. ಐತ ನಾಯಿರಿ; ೮೦ವ; ನಾಯಿರಿ; ನಿವೃತ್ತ ಶಿಕ್ಷಕರು; ಕಾರ್ಕಡ.

೩. ಕರಿಯ ಗುರ್ಕಾರ್ರ್; ೬೫ವ; ಮೊಗವೀರ; ಮೀನುಗಾರಿಕೆ; ಪಡುಕೆರೆ.

೪. ಕಾಡು; ೫೬ವ; ಬಿಲ್ಲವ; ಬಿಜ್ಜಲ್ತಿ; ಕಾರ್ಕಡ.

೫. ಕಿಶೋರ್ ಕುಮಾರ್ ಶೆಟ್ಟಿ; ೩೫ವ; ಬಂಟರು; ಶಿಕ್ಷಕರು; ನೂಜಾಡಿ.

೬. ಕೂಸಕ್ಕ; ೫೫ವ; ಬಿಲ್ಲವ; ಕೃಷಿ; ಗಿಳಿಯಾರು.

೭. ಗಿರಿಜ; ೮೦ವ; ಬಿಲ್ಲವ; ಕೃಷಿ; ನೂಜಾಡಿ.

೮. ಗುಲಾಬಿ; ೪೮ವ; ಬಿಲ್ಲವ; ಕೃಷಿ; ಗಿಳಿಯಾರು

೯. ಗೌರಿ; ೫೩ವ; ಬಿಲ್ಲವ; ಕೃಷಿ; ಗಿಳಿಯಾರು.

೧೦. ಗುಂಡಣ್ಣ; ೪೫ವ; ಬಿಲ್ಲವ; ಕೃಷಿ; ಕೊರಾಡಿ.

೧೧. ಚಂದು; ೬೮ವ; ಬತ್ತಾಡ; ಕೃಷಿ; ಗಿಳಿಯಾರು.

೧೨. ಚಂದು; ೮೦ವ; ಬಿಲ್ಲವ; ಕೃಷಿ; ನೂಜಾಡಿ.

೧೩. ಚಿಕ್ಕು; ೭೦ವ; ಬತ್ತಾಡ; ಕೃಷಿ;ಗಿಳಿಯಾರು.

೧೪.ಜಯಲಕ್ಷ್ಮಿ; ೫೬ವ; ಬಂಟರು; ಕೃಷಿ; ನೂಜಾಡಿ.

೧೫. ತಿಮ್ಮ ಪೂಜಾರಿ; ೪೮ವ; ಬಿಲ್ಲವ; ಕೃಷಿ; ಗಿಳಿಯಾರು.

೧೬. ದುರ್ಗಿ; ೭೨ ವ; ಮೊಗವೀರ; ಕೃಷಿ; ಪಡುಕೆರೆ.

೧೭. ನಾಗು; ೬೦ವ; ಬತ್ತಾಡ; ಕೃಷಿ; ಕಾಸಾನುಗುಂದು.

೧೮. ಪ್ರತಿಭಾ; ೧೭ವ; ಬಿಲ್ಲವ; ವಿದ್ಯಾರ್ಥಿನಿ; ಕಾಸಾನುಗುಂದು.

೧೯. ಬಚ್ಚಮ್ಮ ಶೆಡ್ತಿ; ೮೦ವ; ಬಂಟರು; ಕೃಷಿ; ಕಾಸಾನುಗುಂದು.

೨೦. ಬಾಡುನಾಯ್ಕ; ೮೨ವ; ಮೊಗವೀರ; ಮೀನುಗಾರಿಕೆ; ಕಾಸಾನುಗುಂದು.

೨೧. ಬಾಬು; ೫೯ವ; ಬಿಲ್ಲವ; ಮೂರ್ತೆದಾರಿಕೆ, ಕೃಷಿ; ನೂಜಾಡಿ.

೨೨. ಭಾರತಿ ಶೆಟ್ಟಿ; ೩೨ವ; ಬಂಟರು; ಗೃಹಿಣಿ; ನೂಜಾಡಿ.

೨೩. ಭಾಸ್ಕರ ಮಯ್ಯ; ೬೦ವ; ಬ್ರಾಹ್ಮಣ; ಪ್ರಾಧ್ಯಾಪಕರು, ಗುಂಡ್ಮಿ.

೨೪. ಮಂಜ ಪೂಜಾರಿ; ೭೩ವ; ಕೃಷಿ; ಬನ್ನಾಡಿ.

೨೫. ಮಂಜುಳಾ; ೨೦ವ; ಬತ್ತಾಡ; ಕೃಷಿ; ಕಾಸಾನ್‌ಗುಂದು.

೨೬. ಮಾಚಿ; ೫೩ವ; ಬಿಲ್ಲವ; ಕೃಷಿ; ನೂಜಾಡಿ.

೨೭. ಮುತ್ತಣ್ಣ; ೬೫ವ; ಬತ್ತಾಡರು, ಮೀನುಗಾರಿಕೆ; ಗಿಳಿಯಾರು.

೨೮. ಯೋಗೀಶ್; ೩೦ವ; ಮೊಗವೀರ; ಮೀನುಗಾರಿಕೆ, ಪಡುಕೆರೆ.

೨೯. ಲಕ್ಷ್ಮಿ ಶೆಡ್ತಿ; ೭೫ವ; ಬಂಟರು; ಕೃಷಿ; ಕಾಸಾನುಗುಂದು.

೩೦. ಲಲಿತಾ; ೪೩ವ; ಬತ್ತಾಡ; ಕೃಷಿ; ಗಿಳಿಯಾರು.

೩೧. ವಾಸುದೇವ ಮಯ್ಯ; ೭೦ವ; ಬ್ರಾಹ್ಮಣ; ಕೃಷಿ; ಕಾಸಾನುಗುಂದು.

೩೨. ವಿಶಾಲಾಕ್ಷಿ ಅಮ್ಮ; ೯೨ವ; ಬ್ರಾಹ್ಮಣರು; ಗೃಹಿಣಿ; ಕಾರ್ಕಡ.

೩೩. ವಿಶ್ವಂಭರ ಉಪಾಧ್ಯಾಯ; ೮೨ವ; ಬ್ರಾಹ್ಮಣರು; ನಿವೃತ್ತ ಶಿಕ್ಷಕರು; ಕುಂಭಾಸಿ.

೩೪. ವಿಶ್ವನಾಥ ಹೇರಳೆ; ೫೨ವ; ಬ್ರಾಹ್ಮಣ; ಖಾಸಗಿ ಉದ್ಯೋಗ; ಚೇಂಪಿ.

೩೫. ಶಂಕರ ಮೊಗವೀರ; ೪೫ವ; ಮೊಗವೀರ; ಮೀನುಗಾರಿಕೆ; ಪಡುಕೆರೆ

೩೬. ಶ್ರೀಧರ ಹಂದೆ; ೮೦ವ; ಬ್ರಾಹ್ಮಣ; ನಿವೃತ್ತ ಶಿಕ್ಷಕರು; ಚಿತ್ರಪಾಡಿ.

೩೭. ಸಣ್ಣಮ್ಮ; ೮೦ವ; ಮೊಗವೀರ; ಕೃಷಿ; ಪಡುಕೆರೆ.

೩೮. ಸಾವಿತ್ರಿ ಬಾಯಿ; ೫೬ವ; ಬ್ರಾಹ್ಮಣ; ಗೃಹಿಣಿ; ಕಾವ್ಡಿ.

೩೯. ಸುಧಾ; ೪೨ವ; ಬ್ರಾಹ್ಮಣರು; ಗೃಹಿಣಿ; ಚೇಂಪಿ.

೪೦. ಸೋಮು; ೬೦ವ; ಮೊಗವೀರ; ಮೀನುಗಾರಿಕೆ; ಪಡುಕೆರೆ.

• • •

೨. ಮಾದರಿ ಪ್ರಶ್ನಾವಳಿ

ವೈಯಕ್ತಿಕ ಮಾಹಿತಿ:

೧. ಹೆಸರು:

೨. ವಿಳಾಸ:

೩. ವಿದ್ಯಾರ್ಹತೆ:

೪. ವಯಸ್ಸು:

೫. ಜಾತಿ:

೬. ವೃತ್ತಿ:

ವಿಷಯವಾರು ಮಾಹಿತಿ:

ದಿನಚರಿಗೆ ಸಂಬಂಧಿಸಿದ ವಿವರಗಳು:

೧. ನೀವು ಆಡುವ ಭಾಷೆ ಯಾವುದು?

೨. ನಿಮ್ಮ ಮನೆಯಲ್ಲಿ ಯಾರೆಲ್ಲ ಇದ್ದೀರಿ?

೩. ನಿಮ್ಮದು ಅವಿಭಕ್ತ ಕುಟುಂಬವೇ? ವಿಭಕ್ತ ಕುಟುಂಬವೇ?

೪. ನಿಮ್ಮ ಮನೆತನದ ಹೆಸರೇನು?–ಕುಲನಾಮ

೫. ಅದಕ್ಕೆ ಹಿನ್ನೆಲೆಯೇನಾದರೂ ಇದೆಯೇ?

೬. ಬಂಧುಗಳನ್ನು ಸಂಬೋಧಿಸುವ ಪದಗಳೇನು?

೭. ನಿಮ್ಮ ಮನೆತನದ ಪಾರಂಪರಿಕ ವೃತ್ತಿ ಏನು?

೮. ವೃತ್ತಿಯ ಪರಿಕರಗಳು ಯಾವುವು?

೯. ಮನೆಯ ರಚನೆ ಕುರಿತ ವಿವರಗಳು

೧೦. ಎಷ್ಟು ವರ್ಷದಿಂದ ಈ ಊರಲ್ಲಿ ವಾಸವಾಗಿದ್ದೀರಿ?

೧೧. ಮೂಲ ಸ್ಥಳ ಯಾವುದು?

೧೨. ದಿನಚರಿ ಮತ್ತು ಊಟೋಪಚಾರಗಳು

೧೩. ಉಡುಗೆ–ತೊಡುಗೆಗಳು

೧೪. ಬಂಧುತ್ವ ಸೂಚಕ ಪದಗಳು ಯಾವುವು?

೧೫. ಸಂಬೋಧನೆಯ ಪದಗಳು ಯಾವುವು?

೧೬. ಮಕ್ಕಳು ಯಾವ ಶಾಲೆಗೆ ಹೋಗುತ್ತಾರೆ?

೧೭. ಬೈಗುಳಗಳು

ವಿಶೇಷ ಆಚರಣೆಗಳಿಗೆ ಸಂಬಂಧಿಸಿದ ವಿವರಗಳು

೧. ಜೀವನಾವರ್ತನ ಆಚರಣೆಗಳು

೨. ವಾರ್ಷಿಕಾವರ್ತನ ಆಚರಣೆಗಳು

ಸಾಹಿತ್ಯ, ಕಲೆ, ಶಿಷ್ಟ ಮತ್ತು ಜನಪದ ಕತೆ ಹಾಡು, ಒಗಟು, ಚಾಟೂಕ್ತಿ, ಗಾದೆಗಳನ್ನು ವಕ್ತೃಗಳಿಂದ ಕೇಳಿ ಸಂಗ್ರಹಿಸುವುದು.

• • •

೩. ಗ್ರಂಥಸೂಚಿ

ಕನ್ನಡ ಪುಸ್ತಕಗಳು

೧. ಅಂಬಳಿಕೆ ಹಿರಿಯಣ್ಣ, ೧೯೯೨; **ಸೈದ್ಧಾಂತಿಕ ಜಾನಪದ**; ಪ್ರಜ್ವಲ ಪ್ರಕಾಶನ, ಮೈಸೂರು.

೨. ಇಂದಿರಾ ಹೆಗ್ಗಡೆ; ೨೦೦೯; **ಬಂಟರು: ಒಂದು ಸಮಾಜೋ ಸಾಂಸ್ಕೃತಿಕ ಅಧ್ಯಯನ**; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩. ಐತ ನಾಯಿರಿ; ೨೦೦೧; **ಉಡುಪಿ ಜಿಲ್ಲೆಯ ನಾಯಿರಿ ಜನಾಂಗದ ಕಿರುಪರಿಚಯ**; ರಮ್ಯ ಆಫ್‌ಸೆಟ್ ಪ್ರಿಂಟರ್ಸ್, ಸಾಲಿಗ್ರಾಮ.

೪. ಕನರಾಡಿ ವಾದಿರಾಜ ಭಟ್ಟ, ೨೦೦೭, **ಕುಂದಗನ್ನಡದ ಜನಪದ ಕತೆಗಳು**, ಸ್ವಾಗತ ಸಮಿತಿ, ಅಖಿಲಭಾರತ ೭೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

೪. ಕಾರ್ಸ್ಟೆಯರ್ಸ್.ಜಿ.ಎಂ ಮತ್ತು ಕಪೂರ್.ಆರ್.ಎಲ್(ಅನುವಾದ: ಕೋಟ ಶಿವರಾಮ ಕಾರಂತ); ೧೯೮೫; **ಕೂಟ ಮಹಾಜಗತ್ತು**; ಅಕ್ಷರ ಪ್ರಕಾಶನ, ಸಾಗರ.

೫. ಕೆಂಪೇಗೌಡ ಕೆ; ೧೯೭೬; **ಭಾಷಾವಿಜ್ಞಾನ ಕೋಶ**; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬. ಗಾಯತ್ರೀ ನಾವಡ; ೧೯೯೧; **ಚಿತ್ತಾರ ಬರೆದ ಬದುಕು**; ಪ್ರಾದೇಶಿಕ ವ್ಯಾಸಂಗ; ಕುಂದಾಪುರ.

೭. ಗಾಯತ್ರೀ ನಾವಡ; ೧೯೯೯; **ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು**; ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ, ಸಿರಿ ಪ್ರಕಾಶನ, ಹೊಸಪೇಟೆ

೮. ಗುಂಡ್ಮಿ ಚಂದ್ರಶೇಖರ ಐತಾಳ; ೧೯೭೦; **ಚಿನ್ನದ ಕದಿರಂಗೆ ಸಲಹೀನಿ**; ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೯. ಗುಂಡ್ಮಿ ಚಂದ್ರಶೇಖರ ಐತಾಳ; ೧೯೭೩; **ಮದ್ದುಂಟೆ ಜನನ ಮರಣಕ್ಕೆ**; ಆನಂದ ಪ್ರಕಾಶನ, ಮಂಗಳೂರು.

೧೦. ಗುಂಡ್ಮಿ ಚಂದ್ರಶೇಖರ ಐತಾಳ; ೧೯೮೨; **ಕೈಲಿಯ ಕರೆದ ನೊರೆಹಾಲು**; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೧. ಜಯಪ್ರಕಾಶ ಶೆಟ್ಟಿ ಹೆಚ್, ಚಿಕ್ಕಮಗಳೂರು ಗಣೇಶ(ಸಂ); ೨೦೦೬; **ಬೀಜಮುಹೂರ್ತ**; ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.

೧೨. ತಪಸ್ವೀಕುಮಾರ್.ನಂ; ೨೦೦೦; **ಸಂಸ್ಕೃತಿ ವಿಕಾಸ**; ಚೇತನ ಬುಕ್ ಹೌಸ್, ಮೈಸೂರು.

೧೩. ನಾಗೇಗೌಡ ಎಚ್.ಎಲ್; ೨೦೦೭; **ಪ್ರವಾಸಿ ಕಂಡ ಇಂಡಿಯಾ ಸಂಪುಟ-೨**; ಐಬಿಎಚ್ ಪ್ರಕಾಶನ, ಬೆಂಗಳೂರು.

೧೪. ನಾರಾಯಣ.ಕೆ.ವಿ, ೧೯೯೮; **ದ್ವಿಭಾಷಿಕತೆ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ನಾರಾಯಣ. ಕೆ.ವಿ; ೧೯೯೯; **ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ನಾರಾಯಣ ಕೆ.ವಿ; ೨೦೦೦; **ಭಾಷೆಯ ಸುತ್ತಮುತ್ತ**; ಕ್ರೈಸ್ಟ್ ಕಾಲೇಜು ಕನ್ನಡ ಸಂಘ, ಬೆಂಗಳೂರು.

೧೭. ನಾರಾಯಣ ಕೆ.ವಿ; ೨೦೦೨; **ಮತ್ತೆ ಭಾಷೆಯ ಸುತ್ತಮುತ್ತ**; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೮. ನಾರಾಯಣ.ಕೆ.ವಿ; ೨೦೦೫; **ನಮ್ಮೊಡನೆ ನಮ್ಮ ನುಡಿ**; ವಿಶ್ವಾಸ್ ಪ್ರಿಂಟರ್ಸ್, ಬೆಂಗಳೂರು.

೧೯. ನಾರಾಯಣ ಕೆ.ವಿ.(ಸಂ); ೨೦೦೫; **ಭಾಷೆ (ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ)**; ಪ್ರಸಾರಾಂಗ, ಕನ್ನಡ.ವಿ.ವಿ, ಹಂಪಿ.

೧೫. ನಾರಾಯಣ ಕೆ.ವಿ; ೨೦೦೭; **ಕನ್ನಡ ಜಗತ್ತು ಅರ್ಧ ಶತಮಾನ**, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ನಾವಡ ಎ.ವಿ.(ಸಂ); ೨೦೦೭; **ಕರಾವಳಿ ಜಾನಪದ**; ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ-೨೦೦೭, ಉಡುಪಿ.

೨೧. ಪುರುಷೋತ್ತಮ ಬಿಳಿಮಲೆ; ೧೯೯೭; **ಕೂಡುಕಟ್ಟು**; ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

೨೨. ಪುರುಷೋತ್ತಮ ಬಿಳಿಮಲೆ; ೨೦೦೮; **ಜನ ಸಂಸ್ಕೃತಿ**; ಕ್ರೈಸ್ಟ್ ಯೂನಿವರ್ಸಿಟಿ, ಕನ್ನಡ ಸಂಘ, ಬೆಂಗಳೂರು.

೨೩. ಬೋರಲಿಂಗಯ್ಯ ಹಿ.ಚಿ; ೨೦೦೧; **ವಿಸ್ಮೃತಿ ಮತ್ತು ಸಂಸ್ಕೃತಿ**; ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು.

೨೪. ಮಲ್ಲಿನಾಥಯ್ಯ.ಡಿ.ಎಚ್; ೧೯೭೪; **ಸಾಂಸ್ಕೃತಿಕ ಮಾನವಶಾಸ್ತ್ರ**; ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೫. ಮಯ್ಯ.ಪಾ.ನ; ೧೯೯೫; **ಕೋಟದವರು-ಕೋಟ ಪ್ರದೇಶದ ಸಾಂಸ್ಕೃತಿಕ ಅಧ್ಯಯನ**; ಪಾರಂಪಳ್ಳಿ ಪ್ರಕಾಶನ, ಮಂಗಳೂರು.

೨೬. ಮಯ್ಯ.ಪಾ.ನ; ೨೦೦೧; **ಕ್ವಾಟ(ಕೋಟ)-ಕುಂದಾಪ್ರ ಪ್ರದೇಶದ ಚಾಟೂಕ್ತಿಗಳು-ಚಾಟೂಕ್ತಿ ನಿಘಂಟು**; ಪಾರಂಪಳ್ಳಿ ಪ್ರಕಾಶನ; ಮಂಗಳೂರು.

೨೭. ಮಲ್ಲೇಪುರಂ ಜಿ. ವೆಂಕಟೇಶ್(ಸಂ); ೧೯೯೪; **ಪಾತಳಿ**; ಶಂಬಾ ವಿಚಾರ ವೇದಿಕೆ, ಬೆಂಗಳೂರು.

೨೮. ಮೊಗಳ್ಳಿ ಗಣೇಶ್; ೧೯೯೮; **ಸೊಲ್ಲು**; ಸಿ.ವಿ.ಜಿ ಪಬ್ಲಿಕೇಶನ್ಸ್; ಬೆಂಗಳೂರು.

೨೯. ರಹಮತ್ ತರೀಕೆರೆ; ೨೦೦೬; **ಕತ್ತಿಯಂಚಿನ ದಾರಿ**; ಅಭಿನವ ಪ್ರಕಾಶನ, ಬೆಂಗಳೂರು.

೩೦. ರಹಮತ್ ತರೀಕೆರೆ; ೨೦೦೮; **ಸಾಂಸ್ಕೃತಿಕ ಅಧ್ಯಯನ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೧. ವರಮಹಾಲಕ್ಷ್ಮೀ ಹೊಳ್ಳ ಯು; ೨೦೦೭; **ಹಳೆಯಮ್ಮನ ಆತ್ಮಕಥೆ**; ಸ್ವಾಗತ ಸಮಿತಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ-೨೦೦೭, ಉಡುಪಿ

೩೨. ವರಮಹಾಲಕ್ಷ್ಮೀ ಹೊಳ್ಳ ಯು; ೨೦೦೪; **ಅಕ್ಕ ಕುಂಕುಮದಕ್ಕ**; ಕುಂದ ಅಧ್ಯಯನ ಕೇಂದ್ರ, ಉಪ್ಪುಂದ.

೩೩. ವಿಶ್ವಂಭರ ಉಪಾಧ್ಯಾಯ; ೨೦೦೦; **ಕುಂದಗನ್ನಡ**; ಎನ್.ಆರ್.ಎ.ಎಂ.ಎಚ್ ಪ್ರಕಾಶನ; ಕೋಟೇಶ್ವರ.

೩೪. ಶಂಕರನಾರಾಯಣ ರಾವ್.ಎನ್.ಪಿ; ೧೯೭೮; **ಸಂಸ್ಕೃತಿಯ ರೂಪಿಕೆಗಳು**; ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

೩೫. ಶಂಕರಭಟ್ ಡಿ.ಎನ್; ೧೯೯೫; **ಕನ್ನಡ ಭಾಷೆಯ ಕಲ್ಪಿತ ಚರಿತ್ರೆ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೬. ಶಂಕರಭಟ್ ಡಿ.ಎನ್; ೨೦೦೧; **ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ**; ಭಾಷಾ ಪ್ರಕಾಶನ, ಮೈಸೂರು.

೩೭. ಶಂಕರಭಟ್ ಡಿ.ಎನ್; ೨೦೦೫; **ಕನ್ನಡ ಬರಹವನ್ನು ಸರಿಪಡಿಸೋಣ**; ಭಾಷಾ ಪ್ರಕಾಶನ, ಮೈಸೂರು.

೩೮. ಶಂಕರಭಟ್ ಡಿ.ಎನ್; ೨೦೦೭; **ಕನ್ನಡ ನುಡಿ ನಡೆದು ಬಂದ ದಾರಿ**; ಭಾಷಾ ಪ್ರಕಾಶನ, ಮೈಸೂರು.

೩೯. ಶಿವರಾಮ ಐತಾಳ; ೧೯೭೧; **ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಸಾಹಿತ್ಯ**; ಶಾರದಾ ಮಂದಿರ ಪ್ರಕಾಶನ.

೪೦. ಶ್ರೀಧರ್.ಎಸ್.ಎನ್; ೧೯೯೫; **ಇಂದಿನ ಕನ್ನಡ ರಚನೆ ಮತ್ತು ಬಳಕೆ**; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಶ್ರೀಮತಿ ಎಚ್.ಎಸ್, ಶಿವಾನಂದ ಎಸ್.ವಿರಕ್ತಮಠ, ಜೆ. ಕೃಷ್ಣ(ಸಂ); ೨೦೦೭, **ಹೆಣ್ಣು ಮತ್ತು ಭಾಷೆ**; ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಶ್ರೀಮತಿ ಎಚ್.ಎಸ್. (ಅನು); ೨೦೦೯; **ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ**; ಪ್ರಸಾರಾಂಗ, ಕನ್ನಡ.ವಿ.ವಿ, ಹಂಪಿ

೪೩. ಸೂರ್ಯನಾರಾಯಣ ಹಂದೆ.ಕೆ.ಎಚ್; ೧೯೮೪; **ಬಂಧನಗಾಣದ ಶಬ್ದ ಸಂಪತ್ತು**; ಹಂದೆ ಪ್ರಕಾಶನ, ಹಂದಟ್ಟು.

೨. ಇಂಗ್ಲಿಷ್ ಪುಸ್ತಕಗಳು

1. Acharya.A.S; 1971; **Barakuru Kannada**; Deccan College, Pune.
2. Boas Franz; 1911; **'Handbook of North American Indians (Vol. 1)'**; Bureau of American Ethnology; Bulletin 40; Washington: Government Print Office (Smithsonian Institution; Bureau of American Ethnology).
3. Bauman Zygmunt; 1973; **Culture as Praxis**; Sage Publications; London.
4. Bourdieu Pierre; 1977; **Language and Symbolic Power**; Polity Press.
5. Bowern Claire; 2008; **Linguistic Fieldwork**; Macmillan.
6. Brown; R.W; 1958; **Words and Things: An Introduction to Language**; The Free Press; New York.
7. Burke Lucy Crowley Tony, Girvin Alen (Ed); 2000; **The Routledge Language and Cultural Theory Reader**; Routledge.
8. Chomsky Noam; 2003; **On Language**; Penguin Books India.
9. Crystal David; 2000; **Language Death**; Cambridge University Press.
10. Danesi Marcel; 2004; **A Basic Course in Anthropological Linguistics**; Canadian Scholars' Press Inc.
11. Dittmar Norbert; 1976; **Socio Linguistics**; Edward Arnold; London.
12. Dumont Louis; 1988; **Homo Hierarchicus**; Oxford University Press.

13. Duranti Alessando(Ed); 2004; **A Companion to Linguistic Anthropology**; Blackwell Publishing.

14. Duranti Alessandro; 1997; Linguistic Anthropology; Cambridge University Press.

15. Edie J.M; 1976; **Speaking and Meaning: The Phenomenology of Language**; Indiana University Press; Bloomington.

16. Edwards John; 2009; **Language and Identity**; Cambridge University Press.

17. Edwards Roberta; 2001; **Introducing Cultural Antropology**; Mc Graw Hill Mayfield.

18. Emeneau M.B; 1967; **Dravidian Linguistics Ethnology and Folktales**; Annamalai University; Annamalai Nagar.

19. Fromkin Victoria, Rodman Robert, Hyams Nina; 2004; **An Introduction to Language;** Thomson and wadsworth.

20. Greenberg Joseph H; 1968; **Anthropological Linguistics**; Random House; Newyork.

21. Gupta Dipankar; 2004; **Caste in Question: Identity or Hierarchy?**; Sage Publications; India.

22. Hymes Dell; 1964; **Language in Culture and Society**; Allied Publishers

23. Halliday MAK, A MacIntosh, P. Strevens; 1964; **The Linguistic Sciences and Language Teaching**; Longman, London.

24. Jourdan Christine, Tuite Kevin(ed); 2006; **Language; Culture and Society;** Cambridge University Press.

25. Koul Maharaj.K; 1986; **A Sociolinguistic Study of Kashmiri;** Indian Institute of Language Studies; Patiala.

26. Kramsch Claire H G; 1998; Language and Culture; Oxford University Press.

27. Kroeber Alfred L; 1948; **Anthropology: Culture; Patterns and Process**; Harcourt; Brace and World, Newyork.

28. Leckie-Tarry Helen; 1995; **Language and Context**; Pinter Publishers; London.

29. Levi Strauss Claude; 1963; **Structural Anthropology;** Basic Books.

30. Meshrie Rajend, Swann Joan, Deumart Andrea, Lea William L; 2000; **Introducing Sociolinguistics;** Edinburgh University Press.

31. Ramesh.K.V; 1970; **A History of South Canara**; Karnataka University; Darwar.

32. Rao Narasimha K.V.V.L and Bayer Jennifer.M.(ed); 2000; **Research Methodology in Linguistics;** CIIL; Mysore.

33. Renkema Jan; 1984; **Introduction to Discourse Studies;** John Benjamin's Publishing Company.

34. Riley Brian T; 2000; Socio-Linguistics; **Language in Culture and Society**; Cosmo Publications; India.

35. Risager Karen; **Language and Culture**; 2006; Multilingual Matters; LTD.

36. Romaine Suzanne;2001; **Language in Society-An Introduction to Sociolinguistics;** Oxford University Press.

37. Sastri. K.G; 1971; **The Havyaka Dialect of North Canara;** Karnataka University; Darwar.

38. Serena Nanda; 1994; **Cultural Anthropology**; Fifth Edition; Wadsworth Publishing Company; California.

39. Tannen Deborah; 1984; **Conversational Style;** Oxford University Press.

40. Tilley Christopher; 1999; **Material Culture and Metaphor**; Blackwell Publishing House Ltd.

41. Tylor Edward B; 1897; **An Introduction to the Study of Man and Civilization;** D.Appleton and Co.

42. Uberoi Patricia; Nandini undar; Satish Deshpande(Ed); 2007; **Anthropology in the East;** Permanent Black.

43. Underhill James W; 2009; **Humboldt, Worldview and Language;** Edinburgh University Press.

44. Upadhyaya U P(ed); 1996; **Coastal Karnataka**; Rashtrakavi Govinda Pai Research Centre; Udupi.

45. Wittgenstein Ludwig; 1974; **Philosophical Grammar**; University of California Press.

46. Wodak Ruth; 1997; **Language and Discourse;** Sage Publications.

47. Woodword Ian; 2007; **Understanding Material Culture;** Sage Publications Ltd.

48. Ziauddin Sardar; Borin Van Loon (ed); 2007; **Introducing Cultural Studies;** Icon Books.

೩. ಲೇಖನಗಳು

೧. ಕನರಾಡಿ ವಾದಿರಾಜ ಭಟ್ಟ; ೧೯೭೭; **'ಕುಂದಾಪುರ ಕನ್ನಡ'**; ದರ್ಶನ ವಾರ್ಷಿಕ ಸಂಚಿಕೆ; ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ.

೨. ಕೆಂಪೇಗೌಡ.ಕೆ; ೨೦೦೩; **'ಕರಾವಳಿ ಕನ್ನಡದ ಸ್ವರೂಪ',** ಕನ್ನಡ ಉಪಭಾಷೆಗಳ ಅಧ್ಯಯನ; ಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು.

೩. ಗಾಯತ್ರೀ ನಾವಡ; ೧೯೯೫; **'ಜನಪದರ ಕತೆಗಳಲ್ಲಿ ಹೆಣ್ಣು',** ಜಾನಪದ ವರ್ಷ; ಜಾನಪದ ಅಕಾಡೆಮಿ, ಬೆಂಗಳೂರು.

೪. ನಾವಡ ಎ.ವಿ.; ೧೯೭೪೫; **'ಮಂಗಳೂರು ಪರಿಸರದ ಕೋಟದವರ ಆಡುನುಡಿ ಹಾಗೂ ತುಳು',** ವಿವಕ್ಷೆ; ಕರ್ನಾಟಕ ಸಂಘ, ಪುತ್ತೂರು.

೫. Acharya Shriramana Alevooru; 1996; **'Kannadas of Dakshina Kannada'**, Coastal Karnataka; Dr.U.P.Upadhyaya(ed); Rashtrakavi Govinda Pai Research Centre,Udupi.

೬. Boas Franz; 1911; 'Handbook of North American Indians (Vol.1)'; Bureau of American Ethnology; Bulletin 40; Washington: Government Print Ofiice.

೭. Goodenough Ward; 1957; **'Cultural Anthropology and Linguistics'**; Report of the Seventh Annual Round Table Meating on Linguistics and Language Study, Washington DC.

೪. ಕಾಲೇಜು ವಾರ್ಷಿಕ ಸಂಚಿಕೆಗಳು

೧. 'ದರ್ಶನ'; ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ.

೨. 'ಶಾರದಾವಾಣಿ'; ಶಾರದಾ ಕಾಲೇಜು, ಬಸ್ರೂರು.

• • •

೪. ಸಾಂಸ್ಕೃತಿಕ ಪದಕೋಶ

ಕೋಟ ಒಳನುಡಿ ಪರಿಸರದ ಜನರ ವೃತ್ತಿ, ಆಚರಣೆ, ದೈನಂದಿನ ಜೀವನದಲ್ಲಿ ಬಳಸುವ ವಸ್ತುಗಳಿಗೆ ಸಂಬಂಧಿಸಿದ ಪದಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಭಾಷಿಕವಾಗಿ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಶಿಷ್ಟ ಪದಗಳನ್ನಷ್ಟೆ ಪಟ್ಟಿ ಮಾಡಲಾಗಿದೆ. ಕ್ಷೇತ್ರಕಾರ್ಯಕ್ಕೆ ಸಂದರ್ಭದಲ್ಲಿ ಸಂಗ್ರಹಿಸಿದ ಪದಗಳು ಮತ್ತು ಈಗಾಗಲೇ ಈ ಭಾಷಿಕ ಪರಿಸರದ ಪದಗಳನ್ನು ಸಂಗ್ರಹಿಸಿ ಹೊರತಂದ ಪದಕೋಶಗಳ ನೆರವನ್ನು ಪಡೆದು ಈ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಬಂಧನಗಾಣದ ಶಬ್ದ ಸಂಪತ್ತು(೧೯೮೪), ಕುಂದಗನ್ನಡ ಶಬ್ದನಿಧಿ(೨೦೦೦), ಭಂಡಾರ್‌ಕಾರ್ಸ್ ಕಾಲೇಜಿನ ವಾರ್ಷಿಕ ಸಂಚಿಕೆ ದರ್ಶನದಲ್ಲಿ ಬರುತ್ತಿರುವ ಕುಂದಾಪ್ರ ಕನ್ನಡ ಶಬ್ದಾರ್ಥಕೋಶ ಸರಣಿಗಳನ್ನು, ಅದರಲ್ಲೂ ವಿಶೇಷವಾಗಿ ೧೯೮೨-೮೩ರ ಸಂಚಿಕೆಯಲ್ಲಿ ಎ.ವಿ.ನಾವಡರು ಸಂಪಾದಿಸಿರುವ 'ಬತ್ತದ ಬೇಸಾಯ-ವೃತ್ತಿ ಪದಕೋಶ'ವನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಇದು ಪರಿಚಯಾತ್ಮಕ ಕೋಶವೇ ಹೊರತು ಸಮಗ್ರ ಸ್ವರೂಪದ್ದಲ್ಲ.

ಕೃಷಿ

ವರ್ಷದ ಮೂರು ಬೆಳೆಗಳು

ಕಾತಿ, ಸುಗ್ಗಿ, ಕೊಳ್ಕಿ

ಕೃಷಿ ಉಪಕರಣಗಳು

ಅಡೆ – ಕೀಲು

ಆನೆಮೆಟ್ – ಅಂಗಳವನ್ನು ಸಮತಟ್ಟುಗೊಳಿಸಲು ಬಳಸುವ ಮರದ ಭಾರವಾದ ವೃತ್ತಾಕಾರದ ಸಲಕರಣೆ

ಆರ್ – ನೇಗಿಲು

ಉಂಗ್ರುಗುಟ್ಟ, ಉಂಗ್ಲಗುಟ್ಟ – ಎತ್ತುಗಳ ಕೊರಳ ಹಗ್ಗಕ್ಕೆ ಬಿಗಿಯಲು ಅನುಕೂಲವಾಗುವಂತೆ ನೊಗದಲ್ಲಿರುವ ಎರಡು ಕಬ್ಬಿಣದ ಉಂಗುರಗಳು

ಒಂದ್ಹೊಡೆನೇಲ್ – ಬಿರುಸು ನೆಲವನ್ನು ಉಳಲು ಬಳಸುವ ಅಥವಾ ಮತ್ತೆ ಮತ್ತೆ ಉಳಲು ಬಳಸುವ ಸವೆದು ಸಣ್ಣಿಸಿದ ನೇಗಿಲು

ಒನ್ಕಿ – ಒನಕೆ

ಕಂಬ್ಳಿಗುಪ್ಪಿ	–	ಮಳೆಯ ರಕ್ಷಣೆಗಾಗಿ ಕಂಬಳಿಯಿಂದ ಮಾಡಿದ ಕವಚ
ಕಡ್ಕತ್ತಿ	–	ಕಡಿವ ದೊಡ್ಡ ಕತ್ತಿ
ಕುಮಿ	–	ನೊಗದ ಎರಡು ತುದಿ
ಕೆಳಡೆ	–	ಹೀಸ್ ಮತ್ತು ನೇಲ್‌ಗೆಂಡೆಯನ್ನು ಜೋಡಿಸುವ ಕೆಳಕೀಲು
ಕೈಮಣೆ	–	ಅಂಗಳಕ್ಕೆ ಮಣ್ಣುಹಾಕಿ ಸಮತಟ್ಟುಗೊಳಿಸುವ ಮರದ ಹಿಡಿಯುಳ್ಳ ಹಲಗೆ
ಕೈಯಾಳ್ ಬಳ್ಳಿ, ಮೇಕೆ ಬಳ್ಳಿ	–	ಕರುಕಟ್ಟುವ ಹಗ್ಗ
ಗುರ್ಬು, ಗೊರಬು	–	ಮಳೆಗೆ ರಕ್ಷಣೆಯಾಗಿ ಹಾಕಿಕೊಳ್ಳುವ ಓಲೆಯ ಕವಚ
ಗೆರ್ಸಿ	–	ಗೆರಸೆ
ಗೊಬ್ರ ಹೆಡ್ಗಿ	–	ಮುಟ್ಟಿಗಿಂತ ಚಿಕ್ಕ ಬೆತ್ತದ ಬುಟ್ಟಿ
ಗೋರಿ ಅವಡ್, ಗೋರಿ ಹೀಸ್	–	ಗೋರಿಹಲಗೆಯಿಂದ ನೊಗಕ್ಕೆ ಬಿಗಿವ ಉದ್ದನೆಯ ಮರದ ಪಟ್ಟಿ
ಗೋರಿ	–	ಮಣ್ಣನ್ನು ಸಮತಟ್ಟುಗೊಳಿಸಲು ಎತ್ತಿನ ನೊಗಕ್ಕೆ ಕಟ್ಟಿ ಎಳೆವ ಹಲಗೆ
ಜೊತ್ಗ	–	ಉಂಗುರದಿಂದ ಎತ್ತುಗಳ ಕೊರಳಿಗೆ ಕಟ್ಟುವ ಹುರಿಯ ಪಟ್ಟಿ
ತಳ್ಕೆ ಬಳ್ಳಿ	–	ಗದ್ದೆ ಉಳುವ ಹೋರಿಗಳನ್ನು ಬಂಧಿಸುವ ಹಗ್ಗ
ದುಡಿಬಳ್ಳಿ	–	ಎತ್ತು, ಕೋಣಗಳ ಮೂತಿಗೆ ಹಾಕುವ ಹಗ್ಗ
ನೇಲ್ ಹೀಸ್	–	ನೇಗಿಲಿನ ಹೊಡೆ ಮತ್ತು ನೊಗವನ್ನು ಜೋಡಿಸುವ ಉದ್ದವಾದ ಮರದ ಪಟ್ಟಿ
ನೇಲ್ ಹೊಡೆ, ಕಬರ್	–	ನೇಗಿಲಿನ ರೆಕ್ಕೆಯಂತಿರುವ ಎರಡು ಬದಿಗಳು
ನೇಲ್	–	ನೇಗಿಲು
ನೇಲ್‌ಮ್ಯಾಳಿ	–	ನೇಗಿಲಿನ ಬಾಗಿದ ಹಿಡಿ
ನೇಲ್‌ಕುದ್ರಿ	–	ನೇಗಿಲಿನ ಹೀಸ್ ಮತ್ತು ಮ್ಯಾಳಿಯನ್ನು ಬಂಧಿಸುವ ಬಾಗುಪಟ್ಟಿ
ನೇಲ್‌ಗೆಂಡಿ	–	ನೇಗಿಲಿನ ಹಿಂಭಾಗ
ನೇಲತ್ತಿ	–	ಕುಳ, ನೇಗಿಲು ಸವೆಯದಂತೆ ಹಾಗೂ ಮಣ್ಣೊಳಗೆ ಆಳವಾಗಿ ಇಳಿವ ಸಲುವಾಗಿ ನೇಗಿಲಿಗೆ ಹೊಡೆದ ಕಬ್ಬಿಣದ ಪಟ್ಟಿ

ನೊಗ	–	ಉಳುವ ಎತ್ತು/ಕೋಣಗಳ ಕತ್ತಿನ ಮೇಲಿರಿಸುವ ಮರದ ದಿಂಡು
ನೊಗ್ದ ಬಳ್ಳಿ	–	ನೊಗ ಮತ್ತು ನೇಗಿಲಿನ ಉದ್ದ ಮರವನ್ನು ಕಟ್ಟುವ ಹುರಿ
ನೊಗದ ಹೆಡೆ	–	ಎತ್ತಿನ ಹೆಗಲ ಮೇಲೆ ಕುಳಿತುಕೊಳ್ಳುವ ನೊಗದ ಚಪ್ಪಟೆ ಭಾಗ
ಪಿಕ್ಕಾಸಿ	–	ಗುದ್ದಲಿ
ಬಡ್ಗ	–	ಹಡಿಮಂಚ ಅಥವಾ ಹಡಿಮಂಚದ ಹಲಗೆಗಳು
ಬದ್ದೊನ್ಕಿ	–	ಬತ್ತ ಕುಟ್ಟುವ ಹಲ್ಲುಗಳುಳ್ಳ ಒನಕೆ
ಬೋಡ್ ಒನ್ಕಿ	–	ಅಕ್ಕಿಯ ತೌಡನ್ನು ಬೇರ್ಪಡಿಸಲು ಬಳಸುವ ಹಲ್ಲಿರದ ಒನಕೆ
ಮಂಕರ್ಕಿ	–	ಬಿಳಲಿನಿಂದ ಮಾಡಿದ ಬುಟ್ಟಿ
ಮಂಡ್‌ಕೀಲ್	–	ಕುಳದ ರಂಧ್ರಗಳ ಮೂಲಕ ನೇಗಿಲಿನ ಹೊಡೆಗೆ ಹೊಡೆಯಲು ತಕ್ಕುದಾದ ಕಬ್ಬಿಣದ ಮೊಳೆಗಳು
ಮಡೆಬಳ್ಳಿ	–	ಒಣಹುಲ್ಲಿನಿಂದ ಮಾಡುವ ಹಗ್ಗ
ಮುಟ್ಟಿ	–	ಬೆತ್ತದ ದೊಡ್ಡ ಹೆಡ್ಗಿ
ಮೇಲಡೆ	–	ಹೀಸ್ ಮತ್ತು ನೇಲ್‌ಗೆಂಡೆಯನ್ನು ಜೋಡಿಸುವ ಮೇಲ್‌ಕೀಲು
ಸಾರಣ್ಗಿ	–	ಜಾಲಿಸಲು ಬಳಸುವ ಬೆತ್ತದ ಸಾಧನ
ಹೀಸಿನ ಮಣಿ	–	ನೇಗಿಲಿನ ಹೀಸಿನ ತುದಿಯಲ್ಲಿ ನೊಗಕ್ಕೆ ಕಟ್ಟಲು ಅನುಕೂಲವಾಗುವಂತೆ ಕಡಿದು ಮಾಡಿದ ಕಚ್ಚುಗಳು
ಹಿಡಿಸೂಡಿ	–	ಕಸಬರಿಕೆ
ಹಲ್ಲ್ ಒನ್ಕಿ	–	ಬತ್ತದ ಸಿಪ್ಪೆ ಬೇರ್ಪಡಿಸಲು ಬಳಸುವ ಹಲ್ಲಿರುವ ಒನಕೆ
ಹಲ್ಕತ್ತಿ	–	ಗರಗಸದ ಬಾಯಿಯಂತಿರುವ ಕತ್ತಿ
ಹಾಳಿ	–	ಅಡಿಕೆ ಹಾಳೆಯಿಂದ ಮಾಡಿದ ಟೊಪ್ಪಿಗೆ
ಹುಲ್ಕತ್ತಿ	–	ಹುಲ್ಲು ಕೊಯ್ಯುವ ಹರಿತವಾದ ಕತ್ತಿ
ಹಾರಿ	–	ಹಾರೆ
ಹೆಟ್‌ಕೊಡ್ತಿ	–	ಮಣ್ಣಿನ ಹೆಂಟೆಯನ್ನು ಒಡೆಯಲು ಬಳಸುವ ಸಾಧನ
ಹೆಟ್‌ಮಣೆ	–	ಅಂಗಳವನ್ನು ಸಮತಟ್ಟಾಗಿಸಲು, ಬಳಸುವ ಮರದ ಭಾರವಾದ ಉದ್ದನೆಯ ಸಲಕರಣೆ

ಹೆಡ್ಗಿ	–	ಬೆತ್ತದ ದೊಡ್ಡ ಬುಟ್ಟಿ
ಹೊಳ್ಚ್	–	ನೇಗಿಲು ತಯಾರಿಸುವ ಮೊದಲಿನ ಮರದ ತುಂಡು

ಕೃಷಿ ಪ್ರಕ್ರಿಯೆ

ಅರ್ಕ್ಲ್	–	ಗದ್ದೆಯಲ್ಲಿ ಮೊದಲ ಬಾರಿ ಮಾಡುವ ಒಂದು ಸಾಲಿನ ಉಳುಮೆ
ಅಗೆ ಒಯ್ಯುದ್	–	ಅಗೆ ಕೀಳುವುದು
ಅಗೆ	–	ಬತ್ತದ ಸಸಿ
ಅಜ್ಜಿಮುರುದ್	–	ಹೊರೆ ಹಾಕುವಾಗ ಮೊದಲ ಅರಿಯ ತಲೆಯನ್ನು (ತೆನೆಯಿರುವ ಭಾಗ) ಮೇಲ್ಭಾಗಕ್ಕೆ ಮಡಚಿ ಬುಡವನ್ನು ಹರವಿ ಇಡುವುದು
ಅಟ್ಟಣ್ಗಿ	–	ಹುಲ್ಲಿನ ಬಣವೆಗೆ ಗೆದ್ದಲು ಹಿಡಿಯದಂತೆ ಅದರ ಬುಡಕ್ಕೆ ಕೊಡುವ ಮರದ ಚೌಕಟ್ಟು
ಅರ್ಕಚ್ಚು ಆಗುದ್	–	ಇಡಿಯ ಗದ್ದೆ ನಾಟಿ ಆಗದೆ ಉಳಿದು ಹೋಗುವುದು
ಅರಿಮಾಡುದ್	–	ಕೊಯ್ದಿಟ್ಟ ಪೈರನ್ನು ಅಲ್ಲಲ್ಲಿ ಸಣ್ಣ ಸಣ್ಣ ರಾಶಿ ಮಾಡಿ ಗದ್ದೆಯಲ್ಲಿ ಒಣಗಲು ಬಿಡುವುದು
ಅವುಳಿ, ಓಳಿ	–	ಉಳುಮೆಯಿಂದಾದ ಓಳಿ
ಆನೆ ಹತ್ತುದ್	–	ಬತ್ತ ಹಡಿಮಂಚಕ್ಕೆ ತಾಗುವಷ್ಟು ಎತ್ತರಕ್ಕೆ ಬರುವುದು
ಆರಾತ್/ಅಲಾತು	–	ದೊಡ್ಡ ಹುರಿ ಹಗ್ಗ
ಇಡ್‌ಕೆಯ್	–	ಬತ್ತದ ಪೈರನ್ನು ಒಗ್ಗೂಡಿಸಿ ಮನೆಗೆ ಹೊತ್ತು ತರುವ ಸಮಯದಲ್ಲಿ ಗದ್ದೆಯಲ್ಲೆ ಬಿದ್ದ ಬಿಡಿಬಿಡಿಯಾದ ಬತ್ತದ ಪೈರು
ಉಂಡಿಗೆ	–	ಹುಲ್ಲು ಸೂಡಿ
ಉಮಿ	–	ಅಕ್ಕಿಯ ಹೊರಸಿಪ್ಪೆ
ಉಳ್ ಉಕ್ಕಿ	–	ನಾಟಿಗೆ ಎರಡು ದಿನ ಮೊದಲು ಮಾಡುವ ಉಳುಮೆ
ಉರ್ಮಣ್ ಕೀಳುದ್	–	ಗಾರೊಡಿ ಹೂಟಿಯ ಅನಂತರ ಹೆಚ್ಚು ಆಳಕ್ಕೆ ಉಳುವುದು
ಊಂತ್	–	ಆಧಾರ ಕಂಬ
ಎಡ ಸಸಿ ಹಾಕುದ್	–	ನಾಟಿಯ ಕೊನೆಯಲ್ಲಿ ಅಲ್ಲಲ್ಲಿ ಬಿಟ್ಟುಹೋದ ಸ್ಥಳಗಳಲ್ಲಿ ಪುನಃ ಸಸಿಗಳನ್ನು ನೆಡುವುದು
ಎಡಗೆ	–	ಮೊದಲ ಮಳೆಗೆ ಹಾಕಿದ ಬೀಜ ಮೊಳಕೆ ಬಂದು ಹುಟ್ಟದೆ ಹೋದಲ್ಲಿ ಅಲ್ಲಲ್ಲಿ ಮತ್ತೆ ಮಾಡುವ ಬಿತ್ತನೆ

ಎದ್‌ರ್ ಉಕ್ಕಿ	–	ನೆಡುವ ಮೊದಲಿನ ದಿನದ ಉಳುಮೆ
ಏರ್‌ಗಡು	–	ನೀರಿನ ದ್ವಾರಕ್ಕೆ ಸ್ವಲ್ಪ ಮಣ್ಣು ಇರಿಸಿ ಒಂದು ಮಟ್ಟಕ್ಕಿಂತ ಮಿಕ್ಕಿದ ನೀರು ಮಾತ್ರ ಒಳ ಅಥವಾ ಹೊರಸರಿಯುವಂತೆ ಮಾಡುವ ಏರ್ಪಾಡು
ಏರಿ ಮೆಟ್ಟುದ್	–	ಓಳಿಯಲ್ಲಿ ಬೀಜ ಹಾಕಿದ ನಂತರ ಎರಡು ದಂಡೆಗಳಲ್ಲಿನ ಮಣ್ಣನ್ನು ಕಾಲಿನಿಂದ ಮೆಟ್ಟಿ ಓಳಿಯನ್ನು ಮುಚ್ಚುವುದು
ಒಂದಾಳ್ ಅಗೆ	–	ಅರುವತ್ತು ಸೂಡಿ ಅಗೆ
ಒಚ್ಕೊರಡು	–	ಕತ್ತಿ ಮಸೆಯುವ ಕೊರಡು
ಒಡ್ನೂಲ್	–	ಕಣಜ ಕಟ್ಟುವಾಗ ಆಧಾರಕ್ಕೆ ಕಟ್ಟುವ ಹಗ್ಗ
ಒತ್ ಕದ್ರ್	–	ಒತ್ತೊತ್ತಾಗಿ ಕಾಳು ತುಂಬಿರುವ ತೆನೆ
ಒಯ್ಯಣೆ	–	ಒಬ್ಬರೇ ನೀರೆಳೆಯುವ ಏತ
ಒಳಲ್ ಹಾಕುದ್	–	ಉಳುವಾಗ ಶ್ರಮಪರಿಹಾರಕ್ಕಾಗಿ ರಾಗವಾಗಿ ದನಿ ತೆಗೆಯುವುದು
ಓಜ್ ಹಾಕು	–	ನಾಟಿಗೆ ಗಡಿರೇಖೆ ಗುರುತಿಸುವುದು
ಓಜ್‌ನ್ ಕೋಲು	–	ಗದ್ದೆಯಲ್ಲಿ ನಟ್ಟಿ ಅಳೆಯುವ ಕೋಲು
ಓಳಿ ಮರುದ್	–	ಉತ್ತ ಗದ್ದೆಯ ತೋಡನ್ನು ಮುಚ್ಚುವುದು
ಕಂಚಿನ್ ಮುಡಿ	–	೬೩ ಸೇರಿನ ಮುಡಿ
ಕಂಟ	–	ಗದ್ದೆ ಅಂಚು; ದಂಡೆ; ಬದು
ಕಟ್ಟಾಸ್	–	ಸೂಡಿ ಕಟ್ಟಲು ಬಳಸುವ ನಾಲ್ಕಾರು ಪೈರಿನ ಎಳೆಗಳು
ಕಟ್‌ಮುಡಿ	–	ಹುಲ್ಲು ಮಡೆಗಳಿಂದ ಮಾಡಿದ ಮುಡಿ
ಕಡಿಯಕ್ಕಿ	–	ತುಂಡಾದ ಅಕ್ಕಿ
ಕಡು	–	ನೀರು ಗದ್ದೆಯೊಳಗೆ ಬರಲು ಅಥವಾ ಹೊರಹೋಗಲು ಇರುವ ದ್ವಾರ
ಕಡುಕತ್ತಿ	–	ಹುಲ್ಲು ಕೊಯ್ಯುವ ಕತ್ತಿ
ಕಣ್ ಒಡುದ್	–	ಬೆಂದ ಬತ್ತ ಒಡೆಯುವುದು
ಕಣನೀರ್ ಒಡ್ಗುದ್	–	ಅಂಗಳಕ್ಕೆ ಸೆಗಣಿ ಸಾರಿಸುವುದು
ಕದ್ರ್ ಉಜ್‌ಗುದು, ಕದ್ರ್ ಉಗುದ್	–	ತೆನೆ ಹೊರಗೆ ಕಾಣಿಸಿಕೊಳ್ಳುವುದು
ಕದ್ರ್	–	ತೆನೆ

ಕಯ್ಯಾಳ	–	ಭತ್ತದ ಹುಲ್ಲಿನ ಹೊರೆಕಟ್ಟು, ಹುರಿಹಗ್ಗ
ಕರ್ನೋಲಿ	–	ಪೈರು ಬಡಿವಾಗ ಅಂಗಣದಲ್ಲಿ ಅಲ್ಲಿ ಇಲ್ಲಿ ಚೆಲ್ಲಿದ ಬತ್ತ
ಕಲ್ಲಿ	–	ತರಗೆಲೆ ತರುವ ಹಗ್ಗದ ಬಲೆ
ಕಳ್ಳೆ	–	ಅಕ್ಕಿ ತೆಗೆದ ಹುಲ್ಲಿನ ಮುಡಿಯ ಹೊರಕವಚ
ಕಾಲ್ ಹೊಡೆ	–	ಹೊಡೆ ಬಿಡಲು ತೊಡಗಿದ ಸ್ಥಿತಿ
ಕಾವಿನ ಕೋಲ್	–	ತಿರಿಯ ನಡುವೆ ಆಧಾರಕ್ಕಾಗಿ ನೆಡುವ ಕೋಲು
ಕುಂಟಾಣಿ	–	ಅಗೆಯುವ ಹತಾರಿ
ಕುರಣಿ	–	ಹೂಟೆಯ ಸಾಧನದಲ್ಲಿ ಇರುವ ತೂತು
ಕುರುಳೆ	–	ಸಣ್ಣ ನೇಗಿಲು
ಕೂಂಗಿ ಹಾಕುದ್, ಒಳಾಲ್ ಹಾಕುದ್	–	ಗದ್ದೆ ಉಳುವಾಗ ಎಳೆವ ರಾಗ
ಕೂಳಿ	–	ಪೈರಿನ ಕತ್ತರಿಸಿದ ಬುಡ
ಕೆಯ್	–	ಬತ್ತದ ಪೈರು
ಕೆಯ್ ಜಪ್ಪುದ್	–	ಪೈರಿಂದ ಕಾಳನ್ನು ಬೇರ್ಪಡಿಸಲು ಬಡಿಯುವುದು
ಕೆಲ್ ನಂಡ್	–	ನೀರು ಸಾಲದೆ ಬೀಜ ಲಡ್ಡಾದುದು
ಕೆಲ್ಲ್ ಮಾಡುದ್	–	ಬೀಜ ಹಾಕುವ ಮೊದಲು ಗದ್ದೆಯನ್ನು ನೆನೆಸುವ ಸಲುವಾಗಿ ಮಾಡುವ ನೀರ ತೋಡುಗಳ ಏರ್ಪಾಡು
ಕೇಲ್	–	ಅಕ್ಕಿ ತುಂಬುವ ಮಣ್ಣಿನ ದೊಡ್ಡ ಗುಡಾಣ
ಕೈಗೋರಿ	–	ಅಂಗಳದಲ್ಲಿ ಬತ್ತವನ್ನು ಒಟ್ಟುಮಾಡಲು ಬಳಸುವ ಸಾಧನ
ಕೈಹರುದ್	–	ಉತ್ತು ಹದವಾದ ಗದ್ದೆಯಲ್ಲಿ ನಾಟಿ ಮಾಡುವಾಗ ಕೆಸರಿನಲ್ಲಿ ಕೈ ಸುಲಭವಾಗಿ ಊರುವುದು
ಕೊಚ್ಚು	–	ಭತ್ತ ಅಥವಾ ಅಕ್ಕಿಯ ರೂಪದಲ್ಲಿ ಕೃಷಿ ಕಾರ್ಮಿಕರಿಗೆ ಅಕ್ಕಿಯ ರೂಪದಲ್ಲಿ ಕೊಡುವ ವೇತನ
ಕೊಣ್ಣೆ	–	ಧಾನ್ಯ ಕಾಳು ತೆಗೆದ ಮೇಲೆ ಉಳಿದ ಭಾಗ
ಕೊಪ್ಪರಿಗೆ	–	ಬತ್ತ ಬೇಯಿಸುವ ದೊಡ್ಡ ಗುಡಾಣ
ಕೊಪ್ಪರ್ಗಿ	–	ಬತ್ತ ಬೇಯಿಸಲು ಬಳಸುವ ಅಗಲ ಬಾಯಿಯ ಪಾತ್ರೆ
ಕೊಯ್ಲ್	–	ಕಟಾವು
ಕೊರಿಕಾಸುದ್	–	ಬತ್ತವನ್ನು ಗುಳ್ಳೆ ಬರುವ ತನಕ ಬೇಯಿಸುವುದು
ಕೊಳ್ಕಿ ಕರ್ಡುದ್	–	ಗದ್ದೆಯಲ್ಲಿ ನೀರು ತುಂಬಿ ಕೊಳಕೆ ಬೆಳೆಗಾಗಿ ಉಳುವುದು

ಗಜನಿ	–	ಸಾರವತ್ತಾದ ಭೂಮಿ
ಗಣಪತಿ ನಟ್ಟಿ	–	ಮೊದಲ ನಟ್ಟಿ
ಗಾರೊಡಿ ಹೂಟಿ	–	ಧಾನ್ಯ ಕಿತ್ತ ಮೇಲೆ ಮಳೆ ಬರುವ ಮೊದಲು ಒಣಗಿ ಗಟ್ಟಿಯಾಗಿರುವ ಗದ್ದೆಯಲ್ಲಿ ಮಾಡುವ ಉಳುಮೆ
ಗಾಳಿಗ್ ಹಿಡುದ್	–	ಬತ್ತವನ್ನು ಚೊಕ್ಕಗೊಳಿಸಲು ತೆಂಗಿನ ಮಡಲಿಂದ ಗಾಳಿ ಹಾಕುವುದು
ಗೋರಿಕೆರುದ್	–	ಉತ್ತ ಗದ್ದೆಯ ಮಣ್ಣನ್ನು ಸಮತಟ್ಟುಗೊಳಿಸುವ ಸಲುವಾಗಿ ಗೋರಿ ಎಳೆಯುವುದು
ಚೆಂಡೆ	–	ಹುಲ್ಲಿನ ಸೂಡಿಯಿಂದ ಮಾಡಿದ ವೃತ್ತಾಕಾರದ ರಚನೆ
ಡೊಗ್ಗಾಲ್ ಹಾಕುದ್	–	ತೆನೆ ಬರುವ ಮೊದಲೇ ಬಿದ್ದು ಅನಂತರ ಪುನಃ ಬೇರು ಒಡೆದು ಗಿಡ ನೆಟ್ಟಗೆ ನಿಂತು ತೆನೆ ಬಿಡುವುದು
ಚಂಡಿ, ಚಂಡೆ	–	ಸುಮಾರು ನಾಲ್ಕು ಇಂಚು ವ್ಯಾಸದ ಒಣಹುಲ್ಲಿನ ಹಗ್ಗ
ಚಟ್ಟ್ ಬತ್ತ	–	ಹೊಟ್ಟು ಬತ್ತ
ಚಟ್ಟಿ/ಸೆಟ್ಟಿ ಹಾಕುವುದು	–	ನದಿಯ ಕೆಸರನ್ನು ಗದ್ದೆಗೆ ಹಾಕುವುದು
ಚಾಪು	–	ಸನ್ನೆಯಿಂದ ಭಾರವೆತ್ತುವ ಆನಿಕೆ
ಚೀರ್ ಅವುಳಿ, ಬಗ್ಸಾಲ್	–	ಹೆಚ್ಚಿನ ನೀರು ಹರಿದುಹೋಗುವಂತೆ ಗದ್ದೆಯ ನಡುನಡುವೆ ತೆಗೆವ ಚಿಕ್ಕ ಚಿಕ್ಕ ತೋಡು
ಚೀರಣ್ಗೆ ಅಗಿ	–	ಸಣಕಲಾಗಿ ಬೆಳೆದ ಬತ್ತದ ಸಸಿ
ಚ್ವಾಳ	–	ಅರಾಲಲ್ಲಿ ಬಿದ್ದ ಮಳೆ ನೀರು ಹರಿದು ಸಮುದ್ರಕ್ಕೆ ಸೇರುವ ತೋಡು
ಜಬ್ಲ್ ಬರ್ಗುದ್	–	ಅಗೆಡಿಯ ಬದಿಯಲ್ಲಿ ಬೆಳೆದ ಹುಲ್ಲು ಕಿತ್ತು ಹಾಕುವುದು
ಜೂಳಿ	–	ಧಾನ್ಯದ ಸಿಪ್ಪೆ
ಜೌಳ್	–	ಸಾರವಿಲ್ಲದ ಭೂಮಿ
ತಂಪಿನ ಅಗೆ	–	ತೇವವಿರುವ ಗದ್ದೆಗೆ ಹಾಕುವ ಬಿತ್ತನೆ
ತಟ್ಟಿ	–	ಗದ್ದೆ ನೆನಸುವಾಗ ಮಾಡುವ ತಾತ್ಕಾಲಿಕ ಅಡ್ಡದಂಡೆ
ತಳ	–	ಒಂದು ಮುಷ್ಟಿ ಗಾತ್ರದ ಅಗೆ
ತಳುಲ್	–	ಕಾಳು ಬೇರ್ಪಡಿಸಿದ ಮೇಲೆ ಚೆಲ್ಲಿದ ಹುಡಿಹುಲ್ಲು
ತಾರ್	–	ಬಯಲು
ತಿಟ್ಪು	–	ಏರು ಜಾಗ

ತಿರಿ	–	ಬತ್ತ ಜೋಪಾನವಾಗಿಡಲು ಒಣಹುಲ್ಲನ್ನು ಬಳಸಿ ಕಟ್ಟುವ ಕಣಜ
ತುಂಬ್ಲೊಡೆ	–	ಪೂರ್ಣ ಪ್ರಮಾಣದಲ್ಲಿ ಬೆಳೆದಿರುವ ತೆನೆಯ ಚೀಲ
ತೊಡಲ್ ಕೊಕ್ಕಿ	–	ಹುಲ್ಲು ಕಟ್ಟನ್ನು ಒಕ್ಕುವಾಗ ಹುಲ್ಲನ್ನು ಹಾಕಲು, ಹರಡಲು ಬಳಸುವ ಕೈಹಿಡಿಯುಳ್ಳ ಕೊಕ್ಕೆ
ತೊಡ್‌ನಟ್ಟಿ	–	ಮೊದಲ ನಾಟಿ
ತೊಳಸ್ಲ	–	ತೌಡು ಹೋಗಿ ಬೆಳ್ಳಗಾದ ಅಕ್ಕಿ
ತೌಡು	–	ಅಕ್ಕಿಯ ಒಳಕವಚದ ಹುಡಿ
ತೌಡ್‌ಸಾಲ್	–	ಮಣ್ಣು ನುಣ್ಣಗೆ ಹುಡಿಯಾಗುವಂತೆ ಮಾಡುವ ಉಳುಮೆ
ದಬ್ಬೆ	–	ಬಿದಿರಿನ ಸೀಳುಭಾಗ
ದರೆ	–	ಮಣ್ಣಿನ ತಡೆಗೋಡೆ
ದಳಕಟ್ಟು	–	ಜಾನುವಾರು ಕಟ್ಟುವ ಮರದ ಉದ್ದನೆಯ ದಳಿಯಿಂದ ಕೂಡಿದ ಚೌಕಟ್ಟು
ದಿಂಡ್	–	ಹಡಿಮಂಚದ ಚೌಕಟ್ಟಿನ ಅಡ್ಡನೆಯ ತುಂಡು
ದುಂಬಿನ್‌ಚೆಂಡ್	–	ದುಂಬಿನ ಹುಲ್ಲಿನಿಂದ ಮಾಡಿದ ಚೆಂಡೆ
ದುಂಬು ಒಡ್ಡುದ್, ಕಂಜಿ ಒಡ್ಡುದ್	–	ಕೆಯ್ ಬಡಿಯುವಾಗ ಉದುರುವ ಹಗುರವಾದ ಕಸ, ಹುಲ್ಲುಗಳನ್ನು ಗುಡಿಸುವುದು
ದುಂಬುಹುಲ್	–	ತಳುಹುಲ್
ದುಡಿ	–	ಎಮ್ಮೆ, ಹೋರಿಗಳಿಗೆ ಹುರಿಹಗ್ಗ ಅಥವಾ ನಾರಿನಿಂದ ಮಾಡಿದ ಕಡಿವಾಣ
ದೋಳ್‌ಗಂಡಿ	–	ತೀರ ವಿರಳವಾಗಿ ನೆಡುವುದು
ನಟ್ಟಿ ಉಕ್ಕಿ	–	ನಾಟಿಯ ದಿನದ ಉಳುಮೆ
ನಲವತ್ತು ಹಾನೆ	–	ಒಂದ್ ಮುಡಿ
ನಿಟ್ಟಾಣಿ	–	ನೇಗಿಲಿಂದ ನೆಟ್ಟಗೆ ಉಳುವ ಭಂಗಿ
ನೀರಗೆ	–	ಕೆಲ್ಲ್ ಮಾಡಿ ಬಿತ್ತುವ ಬಿತ್ತನೆ
ನೀರ್‍ಲೊಟಿ	–	ಗದ್ದೆಯಲ್ಲಿ ಹದವಾದ ಪ್ರಮಾಣದಲ್ಲಿ ನೀರು ನಿಲ್ಲಿಸಿ ಮಾಡುವ ಉಳುಮೆ
ನುಚ್ಚಕ್ಕಿ	–	ಚಿಕ್ಕಚಿಕ್ಕ ತುಂಡಾದ ಅಕ್ಕಿ
ನೆಟ್ಟಿ	–	ನಾಟಿ

ನೆಡಿಕಂಟ	–	ಅಗಲವಾದ ನಡೆದಾಡಲು ತಕ್ಕುದಾದ ಅಂಚು
ನೆನ್ಸಿ ಹಾಕು ಅಗೆ	–	ಬೀಜವನ್ನು ಸುಮಾರು ಹನ್ನೆರಡು ಗಂಟೆ ಕಾಲ ನೆನೆಸಿ ಬಾಚಿ ಬೆದೆಬರಿಸಿ ಬಿತ್ತುವ ಬಿತ್ತನೆ
ಪಟ್ಲ	–	ಬತ್ತದ ಬೆಳೆ ಮೂರಾಗುವ ನೀರಾಶ್ರಯದ ಭೂಮಿ
ಪಣ್ತ	–	ಧಾನ್ಯದ ಕಣಜ
ಬಲಗ್	–	ಹಡಿಮಂಚದ ಚೌಕಟ್ಟಿನ ಉದ್ದನೆಯ ತುಂಡು
ಬಳಿ ಹಾಕುದ್	–	ಬತ್ತ ಒಕ್ಕುವ ಜಾಗ ಮತ್ತು ಹುಲ್ಲಿನ ರಾಶಿಯ ಜಾಗವನ್ನು ಬೇರ್ಪಡಿಸುವ ಗಡಿರೇಖೆ
ಬಾಡ್ ಹಾಕುದ್	–	ಬೆಂದ ಬತ್ತವನ್ನು ಒಣಹಾಕುವುದು
ಬಾಡಾಪ್ಪ್, ಎಡಾರುದ್	–	ನೀರಿಲ್ಲದೆ ಉತ್ತ ನೆಲ ಒಣಗುವುದು
ಬಾಲ್‌ಹುಲ್ಲು	–	ಕಟ್ಟುಕಟ್ಟಿದ ಹುಲ್ಲು
ಬಾಳ್‌ಹುಲ್‌ಕುತ್ರಿ	–	ವರ್ಷ ವರ್ಷ ಹುಲ್ಲು ಪೇರಿಸುವ ಕುತ್ರಿ
ಬೀಂಜ	–	ಬೀಜ
ಬೆಟ್ಮಕ್ಕಿ	–	ಮಳೆಗಾಲದಲ್ಲಿ ಹೆಚ್ಚು ನೀರು ತುಂಬುವ ಅರೆಗಾಲದಲ್ಲಿ ಪಸೆನಿಲ್ಲದ ಅಂಟುಮಣ್ಣಿನ ಬಯಲು
ಬೆದ್ ನೀರ್	–	ಮೊಳಕೆ ಒಡೆವ ಸಲುವಾಗಿ ಗದ್ದೆಗೆ ಕೊಡುವ ನೀರು
ಬೆದೆ	–	ಮೊಳಕೆ
ಬೆದ್ರ್‌ಗಾಚ್ ಅಗಿ	–	ಸೊಂಪಾಗಿ ಬೆಳೆದ ಬತ್ತದ ಸಸಿ
ಬೇಗುದ್, ಸವ್ರುದ್	–	ಕಲ್ಲನ್ನು ಬೇರೆ ಮಾಡಲು ಮೊರದಲ್ಲಿ ಬತ್ತವನ್ನು ಹಾಕಿ ಗೇರುವ ಒಂದು ವಿಧಾನ
ಬೇಳೆ ಬೆಣ್ತಕ್ಕಿ	–	ದೋಸೆಗೆ ಬಳಸುವ ಸ್ವಲ್ಪ ಬೆಂದ ಅಕ್ಕಿ
ಮರ್ಕ್ಲ್	–	ಎರಡು ಸಾಲಿನ ಉಳುಮೆ
ಮರ್ಚ್	–	ಎಮ್ಮೆ ಕಟ್ಟುವ ಗೊಂಡೆ ಹಗ್ಗ
ಮಡಿಹಗ್ಗ	–	ಒಣಹುಲ್ಲನ್ನು ಕೈಯಲ್ಲಿ ಹೊಸೆದು ಮಾಡುವ ಹಗ್ಗ
ಮಡೆ	–	ಹುಲ್ಲಿನ ಹಗ್ಗ
ಮದುಮಗ್ಳ್ ಮುರುದ್	–	ಎರಡನೆಯ ಅರಿಯ ತಲೆಯನ್ನು ಕೆಳಮುಖವಾಗಿ ಮಡಚಿ ಬುಡವನ್ನು ಹರವಿ ಇಡುವುದು
ಮರಗೊಡ್ಲು	–	ಮರದ ನೆರಳಿನಲ್ಲಿರುವ ಸ್ಥಳ
ಮರ್‌ನಟ್ಟಿ	–	ಎರಡನೆಯ ದಿನದ ನಾಟಿ

ಮರ್ಕ್ಕಾಳಿ	–	ಕೂಳಿಯಿಂದ ಚಿಗುರೊಡೆದ ಬತ್ತದ ಸಸಿ
ಮುಲ್ಲಿ ಕೊಚ್ಚುದ್	–	ನೇಗಿಲು ಹೋಗದ ಗದ್ದೆಯ ನಾಲ್ಕು ಮೂಲೆಗಳನ್ನು ಹಾರೆಯಿಂದ ಕೊಚ್ಚುವುದು
ಮಲ್ಗದ್ದೆ	–	ಮನೆಯ ಬಳಿಯಿರುವ ಗದ್ದೆ
ಮುಟ್ಟಾಳೆ	–	ಅಡಿಕೆ ಹಾಳೆ ಟೊಪ್ಪಿ
ಮುರ್ಗಿ	–	ತಿರಿಗೆ ಆಧಾರವಾಗಿ ತಳದಲ್ಲಿ ದುಂಬುಹುಲ್ಲನ್ನು ಸುತ್ತಿ ಮಾಡಿದ ವೃತ್ತಾಕಾರ
ಮುಷ್ಟಿ ಅಗೆ	–	ಸುಗ್ಗಿ ಬೆಳೆಗೆ ಗೊಬ್ಬರದೊಂದಿಗೆ ಮಿಶ್ರ ಮಾಡಿ ಬಿತ್ತುವ ಬಿತ್ತನೆ
ಮೇಟಿಕಂಬ	–	ಹಡಿಮಂಚ ಅಲ್ಲಾಡದಂತೆ ಕಟ್ಟಲು ಬಳಸುವ ಕಂಬ, ಎತ್ತುಗಳನ್ನು ಕಟ್ಟುವ ಕಂಬ
ಮೇಲಾಳ್	–	ನಾಟಿಯ ಸಂದರ್ಭದಲ್ಲಿ ಸಸಿಗಳನ್ನು ಹೊತ್ತು, ತರುವ, ಮೂಲೆ ಕೊಚ್ಚುವ, ಅಂಚು ನೇರ ಮಾಡುವ ಕೆಲಸದಾಳು
ಮೋಳ್ಸುದ್	–	ಸಾಲಿನ ತುದಿ ಮುಟ್ಟಿದೊಡನೆ ಎತ್ತುಗಳನ್ನು ತಿರುಗಿಸುವುದು
ಲಾಳ	–	ಎತ್ತಿನ ಕಾಲಿಗೆ ಹೊಡೆಯುವ ಕಬ್ಬಿಣದ ಪಟ್ಟಿ
ವಡಗು	–	ಗದ್ದೆಯಲ್ಲಿ ನೀರು ತುಂಬಿ ಗದ್ದೆಯ ಬದುಗಳು ಸಡಿಲವಾಗಿ ಒಡೆದು ಹೋಗುವುದು
ವಳಸಾಲು	–	ನದಿಯ ಶಾಖೆ
ವಳಾಲು	–	ಹಿತ್ತಿಲು ಜಾಗ
ವಾರ್ಗಿ ಅಕ್ಕಿ	–	ಅರ್ಧ ತೊಳಸಲು ಅಕ್ಕಿ
ಸರ್ಗ್	–	ಟೊಳ್ಳಾದ ಬತ್ತವನ್ನು ಹೊಂದಿದ ತೆನೆ
ಸನಿಕಟ್	–	ಎರಡು ತಳ ಸೇರಿಸಿ ಮಾಡಿದ ಸಸಿಯ ಕಟ್ಟ
ಸಲಗೆ	–	ನೂರು ಸೂಡಿ ಬೈಹುಲ್ಲು
ಸಸಿಕಟ್ ಬೆಟ್ಟ್‌ಗೆ ಹಾಕುದ್, ಅಗೆ ಬೆಟ್ಟ್‌ಗೆ ಹಾಕುದ್	–	ಗದ್ದೆಯ ಅಂಚಿನ ಮೇಲೆ ಸಸಿ ಕಟ್ಟುಗಳನ್ನು ಹರಹುವುದು
ಸಳ್ಕೆ	–	ಸಲಾಕೆ
ಸಂಯಾಳ	–	ಬತ್ತದ ಸಸಿ ನೀರಿನ ಪ್ರವಾಹದಿಂದ ಕೊಚ್ಚಿಹೋಗದಂತೆ ಗದ್ದೆಯ ನೀರು ಹೊರ ಹರಿಯುವ ಬಾಯಿಗೆ ಗೂಟ ಊರಿ ಹುರಿಹಗ್ಗ, ಅಡರು ಬಿಗಿವ ಏರ್ಪಾಡು

ಸಾಲ್ ಅಗೆ	–	ಸಾಲಿನಲ್ಲಿ ಬಿತ್ತುವ ಬೀಜ
ಸಾಲ್ ತೆಗುದ್	–	ನಾಲ್ಕು ಸಾಲು ಉತ್ತು ಐದನೆ ಸಾಲನ್ನು ಬೀಜ ಹಾಕಲು ಯೋಗ್ಯವಾಗುವಂತೆ ಸಣ್ಣ ಓಳಿಗಳನ್ನು ಮಾಡಿ ಉಳುವುದು
ಸಾಲ್ ನಟ್ಟಿ	–	ಸಾಲಾಗಿ ಬತ್ತದ ಸಸಿಗಳನ್ನು ನೆಡುವುದು
ಸೂಡಿ	–	ಒಂದು ಹಿಂಡಿ ಪೈರು
ಸೊಲ್ಮಣೆ	–	ತೆಂಗಿನ ಕಾಯಿಯ ಸಿಪ್ಪೆ ಸುಲಿಯುವ ಮಣೆ
ಸೊಲಿ, ಕಜ್ಯಕ್ಕಿ	–	ಹೆಚ್ಚು ತೌಡು ಹೋಗದ ಕೆಂಪಕ್ಕಿ
ಸೆಟ್ಟೆ	–	ಮಣ್ಣ ಹೆಂಟೆ
ಸೇಡ್ ಬಿಡುದು	–	ಗದ್ದೆ ನೀರಿಲ್ಲದೆ ಒಡೆದುಹೋಗುವುದು
ಸೈಂಗೋಲ್	–	ಕಬ್ಬಿಣದ ಸರಳು
ಹಡ್ಲ್ ಒಕ್ಕುದ್	–	ಅಂಗಳದಲ್ಲಿ ಪೈರನ್ನು ಹರವಿ ಮೇಟಿ ಕಂಬಕ್ಕೆ ಎತ್ತನ್ನು ಕಟ್ಟಿ ಅದರ ಮೇಲೆ ನಡೆಯಿಸಿ ಕಾಳು ಒಕ್ಕುವುದು
ಹಡಿಮಂಚ, ಆನಿ	–	ಬತ್ತ ಬಡಿಯುವ ಮಂಚ
ಹಡುಹಣಿ	–	ನೇಗಿಲು ಮಣ್ಣೊಳಗೆ ಹೆಚ್ಚು ಊರಿಕೊಂಡು ಸಾಗುವ ಭಂಗಿ
ಹಣಿ ಆಪ್‌ದ್	–	ಉಳುಮೆಗೆ ಸಿದ್ಧವಾಗುವುದು
ಹದ್‌ನಟ್ಟಿ	–	ಕೊನೆಯ ನಾಟಿ
ಹದ್ನ/ಏರ್ತ	–	ಮಳೆಗಾಲ ಪೂರ್ತಿ ದುಡಿದ ಎತ್ತು ಕೋಣಗಳಿಗೆ ಮಾಡುವ ಔಷಧಿ ರೂಪದ ಉಪಚಾರ
ಹನ್ಕುಟಿ	–	ಮರದ ನೆರಳಲ್ಲಿರುವ ಬತ್ತದ ಸಸಿಗಳು ಕವಲು ಸುಳಿ ಒಡೆಯದೆ ಹಾಗೆಯೇ ಚಿಕ್ಕ ತೆನೆ ಬಿಡುವುದು
ಹಮ್ಮ್ಯಣ್	–	ಸಸಿಗಳನ್ನು ತೀರಾ ಮಲಗಿಸಿ ನೆಡುವಿಕೆ
ಹರ್‌ಕೂಳಿ	–	ದೊಡ್ಡದಾಗಿ ಬಿಟ್ಟಿರುವ ಬತ್ತದ ಗಿಡದ ಬುಡ
ಹಲ್ಕಿ	–	ಅಂಗಳದಲ್ಲಿ ಒಣಹಾಕಿದ ಬತ್ತವನ್ನು ಆಗಿಂದಾಗ್ಗೆ ಮಗುಚಲು ಬಳಸುವ ಹಲ್ಲುಗಳುಳ್ಳ ಸಾಧನ
ಹಳು	–	ಪೊದರು
ಹಳ್ ನೀರ್ ಅಗೆ	–	ಕೊಳಕೆ ನೆಟ್ಟ ಗದ್ದೆಯ ಕೊಯ್ಲು ಆದ ಮರುದಿನವೇ ಉತ್ತು ಬಿತ್ತುವ ಬಿತ್ತನೆ

ಹಾರ್ ಅವುಳಿ	–	ಹೆಚ್ಚಿಗಿನ ನೀರು ಹರಿದು ಹೋಗುವ ಸಲುವಾಗಿ ಗದ್ದೆಯ ಸುತ್ತಲು ತೆಗೆವ ಸಣ್ಣ ತೋಡು
ಹಾಲ್ ನುಂಗುದ್	–	ತೆನೆಯ ಕಾಳುಗಳಲ್ಲಿ ಹಾಲಿನಂತಹ ದ್ರವ ತುಂಬಿಕೊಳ್ಳುವುದು
ಹಿಡ್ಪು, ಮದ್ಲ್	–	ನೆಡುವ ಬತ್ತದ ಅಗೆಯ ಪ್ರಮಾಣ
ಹಿಡಿ	–	ಎರಡು ಸೂಡಿ
ಹಿಣಿಲು	–	ಮೊಳಕೆ
ಹಿಂಡಿನಟ್ಟಿ	–	ಬತ್ತದ ಸಸಿಗಳನ್ನು ಹಿಂಡಿಯಾಗಿ ಊರುವುದು
ಹಿಳ್ಳೆ	–	ಬತ್ತದ ಸಸಿಯಲ್ಲಿ ಬರುವ ಕವಲು ಸುಳಿ
ಹುಲ್‌ಬತ್ತ	–	ಪೈರನ್ನು ಎರಡನೆ ಬಾರಿ ಬಡಿದಾಗ ಉದುರುವ ಬತ್ತ
ಹುಲ್‌ಜಪ್ಪುಕೋಲ್	–	ದುಂಬುಹುಲ್ಲನ್ನು ಬಡಿಯಲು ಬಳಸುವ ಕೋಲು
ಹುಲ್‌ಕುತ್ರಿ	–	ಹುಲ್ಲಿನ ಬಣವೆ
ಹೂ ಕೊಂಡಾಡುದ್	–	ಪೈರಲ್ಲಿ ಹೂ ಕಾಣಿಸಿಕೊಳ್ಳುವುದು
ಹೂಟಿ ಆಳ್	–	ಉಳುವ ಕೆಲಸದಾಳು
ಹೂಟಿ	–	ಉಳುಮೆ
ಹೆಣ್ಕೆಕಟ್ಟುದ್	–	ಗದ್ದೆಯ ಅಂಚು ಕುಸಿದು ಹೋಗದಂತೆ ಗೂಟಗಳನ್ನು ನೆಟ್ಟು ಭದ್ರಗೊಳಿಸುವುದು
ಹೇಂದೆ	–	ಕಡಿಮೆ ಪ್ರಮಾಣದಲ್ಲಿ ಒಣಹಾಕಿದಾಗ ಆಗುವ ಅಕ್ಕಿ
ಹೊಲ್ಗುದ್	–	ಒತ್ತೊತ್ತಾಗಿ ನೆಡುವುದು
ಹೊಲಿ ಹಿಟ್ ಹಿಡೂದ್	–	ಪೈರನ್ನು ಅಂಗಳಕ್ಕೆ ತರುವ ಹೆಬ್ಬಾಗಿಲಲ್ಲಿ ಬೂದಿ ಅಥವಾ ಸೇಡಿಯಿಂದ ದಪ್ಪವಾದ ೩ ಗೆರೆಗಳನ್ನು ಉದ್ದಕ್ಕೆ ಎಳೆದಿಡುವುದು
ಹೊಲಿ	–	ಬತ್ತದ ರಾಶಿ
ಹೊಲಿಕರುದ್	–	'ಹೊಲ್ಯಡ್ಬೋ' ಎಂದು ಕೂಗುತ್ತಾ ಪೈರನ್ನು ಬಡಿಯುವುದು(ಹೊಲಿ ಓಡಿಬಾ)
ಹೊಳ್‌ಸಾಲ್	–	ವಿರಳವಾದ ಸಾಲುಗಳುಳ್ಳ ಹೂಟೆ
ಹೊರಿಹಾಕುದ್	–	ನೆಲದಲ್ಲಿ ಹಗ್ಗ ಹಾಸಿ ಅದರ ಮೇಲೆ ಕೊಯ್ದಿಟ್ಟ 'ಅರಿ'ಗಳನ್ನು ಪೇರಿಸಿಕೊಂಡು ಬರುವುದು
ಹೊಡೆ	–	ಹಾಳೆಯೊಳಗೆ ಅವಿತಿರುವ ಎಳೆಯ ತೆನೆ
ಹೊಡಿ ಅಗೆ, ಮಳ್ನೀರ್ ಅಗೆ	–	ಒಂದು ಮಳೆ ಬಂದೊಡನೆ ಬಿತ್ತುವ ಬಿತ್ತನೆ

ಹೊಡಿ ಬಾಯಿಗ್ ನೀರ್ ಸಿಕ್ಕುದ್ – ತೆನೆ ಬರುವ ಮೊದಲೇ ಮಳೆ ಬಂದು ಅದರೊಳಗೆ ನೀರು ಸೇರಿಕೊಳ್ಳುವುದು

ಹೊಡಿ ಹೂಂಟಿ – ಬೇಸಿಗೆಯ ಉಳುಮೆ

ಹೊದ್ ಮಾಡುದ್, ವಡಿ ಸವ್ರುದ್ – ಗದ್ದೆ ಅಂಚನ್ನು ವರ್ಷವರ್ಷವೂ ಕೆತ್ತುತ್ತಾ ಬರುವುದು

ಹೊದ್ದು ಮಾಡು – ಗದ್ದೆಯ ಸುತ್ತ ಮಣ್ಣು ತೆಗೆಯುವುದು

ಹೊಲೇಟ್ – ಬತ್ತದ ರಾಶಿಯ ಸುತ್ತ ಬೂದಿಯಿಂದ ಗೆರೆ ಎಳೆಯುವುದು

ಮಣ್ಣಿನ ವಿಧಗಳು

ಕಕ್ರಿ – ಅಂಟಾದ ಕಲ್ಲುಗೊಜ್ಜುಮಣ್ಣು

ಕಡ್ಮಣ್ಣ್ – ಜಿಗುಟಾದ ಫಲವತ್ತಾದ ಮಣ್ಣು

ಕೊಜೆ – ಅಂಟಾದ ಆವೆಮಣ್ಣು

ತೌಡು ಹೊಯಿಂಗಿ – ತೇವಾಂಶವುಳ್ಳ ನುಣ್ಣಗಿನ ಮರಳು

ಬೋಳ್ ಹೊಯಿಂಗಿ – ಫಲವತ್ತಾಗಿರದ ಒಣ ಮರಳು

ಸ್ವಾರ್ಲ್ ಮಣ್ಣ್ – ಮಳೆ ನೀರು ಬಿದ್ದು ಮರಳಿನಂತಾಗಿರುವ ಮಣ್ಣು

ಸೇಡಿಮಣ್ಣ್ – ಬಿಳಿಮಣ್ಣು

ಗದ್ದೆ–ಬಗೆಗಳು

ಅಗೇಡಿ – ಬತ್ತದ ಸಸಿಗಳನ್ನು ಬೆಳೆಸುವ ಗದ್ದೆ

ಅರಾಲ್ ಗೆದ್ದಿ – ಸಮುದ್ರ ತೀರದ ಪಕ್ಕದಲ್ಲಿರುವ ಮರಳು ಮಿಶ್ರಿತ ಗದ್ದೆ

ಉಜರ್ ಗೆದ್ದಿ – ನೀರಿನ ಒಸರು ವಿಶೇಷವಾಗಿರುವ ಗದ್ದೆ

ಕಂಪ್ಲ್ ಗೆದ್ದಿ – ಕೆಸರು ಗದ್ದೆ

ಕರ್‌ನಂಜ್ – ಕರಿಮಣ್ಣಿನ ಜವುಗು ಗದ್ದೆ

ಕಳಿನ್ ಗೆದ್ದಿ – ನದಿ ಕಡವಿನ ಸಮೀಪವಿರುವ ಗದ್ದೆ

ಕೋಡಿಕಟ್ಟ್ – ನೀರಿನ ಕೋಡಿ ನಿಂತಿರುವ ಗದ್ದೆ

ತಲ್‌ನೀರ್‌ಮಕ್ಕಿ – ಹಾಡಿ ನೀರು ಆಧಾರವಾಗಿರುವ ಗದ್ದೆ

ಬಾನ್ನೀರ್ ಮಕ್ಕಿ – ಮಳೆಯನ್ನೇ ಆಶ್ರಯಿಸಿಕೊಂಡಿರುವ ಬೆಟ್ಟುಗದ್ದೆ

ಬೆಳ್‌ನಂಜ್ – ಬಿಳಿ ಸೇಡಿಮಣ್ಣಿನ ಜವುಗು ಗದ್ದೆ

ಬೈಲ್ – ಸಮತಟ್ಟಾದ ಬಯಲು ಗದ್ದೆ

ಮಕ್ಕಿ – ಫಲವತ್ತಾದ ಎತ್ತರದ(ಬೆಟ್ಟು) ಗದ್ದೆ

ಸಿಡಿಗದ್ದೆ – ಸಿಡಿಯಾಟ ನಡೆಸುತ್ತಿದ್ದ ಗದ್ದೆಯಾಗಿರಬಹುದು

ಹಡುವಲ್	–	ಸುಗ್ಗಿ ಬೆಳೆಗೆ ಸಸಿ ಮಾಡುವ ಗದ್ದೆ
ಹಡ್ಲ್ ಗೆದ್ದಿ	–	ಬಂಜರು ಗದ್ದೆ

ನೀರಿನ ಮೂಲ

ಆಗರ	–	ನದಿ ಪಕ್ಕದಲ್ಲಿರುವ ನೀರು ತಂಬಿರುವ ತಗ್ಗು ಪ್ರದೇಶ
ಆಲ	–	ಬಾವಿ, ಕೆರೆಗಳಲ್ಲಿನ ನೀರಿನ ಒಸರು
ಒಜರ್	–	ಒಸರು
ಕೆರಿ	–	ಕೆರೆ
ಕೈತೋಡು	–	ಮನೆಯ ಸಮೀಪದಲ್ಲಿ ಹರಿವ ಚಿಕ್ಕ ನೀರಿನ ಹರಿವು
ಗುಮ್ಮಿ	–	ಕಲ್ಲುಕಟ್ಟದ ಸಣ್ಣ ಕೆರೆಯಂತಿರುವ ಜಲಾಶಯ
ಗೋಸಲ್ ಕೆರಿ	–	ಕೆಸರು ಪಾಚಿ ತುಂಬಿದ ಕೆರೆ
ತೋಡು	–	ನೀರಿನ ಕಾಲುವೆ
ಬಾಮಿ	–	ಬಾವಿ
ಮದಗ	–	ಮಳೆಗಾಲದಲ್ಲಿ ನೀರು ತುಂಬುವ ತಗ್ಗು ಪ್ರದೇಶ
ಸಾರ್	–	ಹೊಳೆಯ ಕವಲು
ಹೊಟ್ಬಾಮಿ	–	ನೀರಿಲ್ಲದ ಹಾಳುಬಾವಿ

ನೀರು ಎತ್ತುವ ಸಾಧನ–ಭಾಗಗಳು

ಒಯಿಹಣೆ, ಒಯ್ಕಣೆ	–	ಎಳೆವ ಏತ
ನೀರ್‌ಗಾಣ	–	ಎತ್ತುಗಳನ್ನು ಹೂಡಿ ನೀರೆತ್ತುವ ಸಾಧನ
ಮೆಟ್ಕಣೆ, ಮೆಟ್‌ಹಣೆ	–	ಏತದ ಅಡ್ಡ ಮರದ ಮೇಲೆ ಜನ ಸಂಚರಿಸುವ ಮೂಲಕ ನೀರೆತ್ತುವ ಏತ
ವಾಂದೆ	–	ಸುಮಾರು ೫ ಅಡಿ ಉದ್ದದ ದೋಣಿಯಾಕಾರದ ಮರದ ಮರಿಗೆಯಿಂದ ನೀರನ್ನು ಎತ್ತಿ ಹಾಯಿಸುವ ವ್ಯವಸ್ಥೆ
ಸಂಬಳ್ಗಿ	–	ಡಬ್ಬದ ಬಾಯಿಗೆ ಎದುರೆದುರು ಎರಡು ಹಗ್ಗ ಬಿಗಿದು ಅದರ ಆಧಾರದಿಂದ ಎದುರಾಗಿ ನಿಂತ ಇಬ್ಬರು ನೀರು ಮೊಗೆವ ಒಂದು ಸಾಧನ

ಏತದ ಭಾಗಗಳು

ಅಟ್ಟೆ	–	ತೊಲೆ ಮತ್ತು ಗಳವನ್ನು ಜೋಡಿಸುವ ಬೆತ್ತದ ಸಲಕರಣೆ
ಕಣೆತೊಲೆ/ಹಣೆತೊಲೆ	–	ಏತದ ಭಾರವಾದ ಉದ್ದನೆಯ ತೊಲೆ
ಕುದುರಿ	–	ತೊಲೆಯ ನಡುವೆ ಕಟ್ಟಿರುವ ತೂತಿರುವ ಸಾಧನ
ಗಳ	–	ಏತದ ತೊಲೆಯಿಂದ ಇಳಿದಿರುವ ಉದ್ದನೆಯ ಬಿದಿರು

ದಿಂಪು – ಭಾರಕಟ್ಟಿರುವ ತೊಲೆಯ ಬುಡ

ದೊಟ್ಟೆಮರಿಗೆ – ಮರದ ನೀರೆತ್ತುವ ಭರಣಿ

ನಾಗೋಸ್ – ದೊಟ್ಟೆ ಮರಿಗೆ ಮತ್ತು ಗಳವನ್ನು ಜೋಡಿಸುವ ಅಡ್ಡಕೀಲು

ಬಡಿಗೆ – ಕುದುರೆಯ ತೂತಿನ ಮೂಲಕ ಹಾಯುವ ಅಡ್ಡ ಕೋಲು

ಹಣೆ ಕಂಬ – ಏತದ ತೊಲೆಯನ್ನು ಆಧರಿಸುವ ಎರಸು ಕಂಬ

ಹರ್ಣಿ – ನೀರ ಹರಿವಿಗಾಗಿ ಮಾಡಿದ ತಾಳೆ ಮರದ ಕಾಂಡ

ಜೀವನಾವರ್ತನ, ವಾರ್ಷಿಕಾವರ್ತನ ಮತ್ತು ವಿಶೇಷ ಸಂದರ್ಭಗಳಿಗೆ ಸಂಬಂಧಿಸಿದ ಪದಗಳು

ಅಂತರ್ಪಟ – ಮದುವೆಯ ಸಂದರ್ಭದಲ್ಲಿ ಹುಡುಗ ಹುಡುಗಿ ಪರಸ್ಪರ ಮಾಲೆ ಹಾಕುವ ಸಂದರ್ಭದಲ್ಲಿ ಹಿಡಿಯುವ ಪರದೆ

ಅಗಲು – ದೇವರೆದುರಿಡುವ ಅನ್ನದ ಮುದ್ದೆಯ ಸಾಲು

ಅಗ್ನಿ ದಾಟು – ಕೂಸಾಳು ಸಮುದಾಯದಲ್ಲಿಮುಟ್ಟಾದ ಹೆಂಗಸು ಕೊಳ್ಳಿಯನ್ನು ಹೊಸ್ತಿಲ ಮೇಲಿಟ್ಟು ದಾಟಿ ಶುದ್ಧ ಮಾಡಿಕೊಳ್ಳುವುದು

ಅಚ್ಚಿನ ಆರತಿ – ಅಕ್ಕಿಯಲ್ಲಿ ತ್ರಿಕೋನಾಕೃತಿ ರಚಿಸಿ ಅದನ್ನು ಆರತಿ ತಟ್ಟೆಯ ಮುಂದಿರಿಸಿ ಮಾಡುವ ಆರತಿ

ಅಜ್ಜಿ ಓಡಿಸುವುದು/ಹೊಸ್ತ್ಲಜ್ಜಿ – ಸ್ವಾಣಿ ತಿಂಗಳಲ್ಲಿ ದರಿದ್ರವನ್ನು ಓಡಿಸುವ ಆಚರಣೆ

ಅಟ್ಟ್‌ಬಳ್ಸುದ್ – ದೈವಕ್ಕೆ ಅನ್ನ, ಮಾಂಸಾಹಾರ ಅರ್ಪಿಸುವುದು

ಅನಂತವ್ರತ – ಅನಂತ ಚತುರ್ದಶಿಯಂದು ಮಾಡುವ ಆಚರಣೆ

ಅಮಾಸಿ ಸ್ನಾನ – ಕರ್ಕಾಟಕ ಅಮವಾಸ್ಯೆಯಂದು ಮಾಡುವ ಸಮುದ್ರ ಸ್ನಾನ

ಅಮಿ ಹೊಂಡ – ಮಗುವಿನ ಕಸ, ಮಾಸುಬಳ್ಳಿ ಹುಗಿಯಲು ಮಾಡುವ ಹೊಂಡ

ಅರಸಿನೆಣ್ಣೆ – ಉಪನಯನ, ಮದುವೆಯ ದಿನ ಬೆಳಗ್ಗೆ ಹುಡುಗ, ಮದುಮಗಳು ಅಥವಾ ಮದುಮಗನನ್ನು ದೇವರ ಮುಂದೆ ಕೂರಿಸಿ ಅರಸಿನ, ಎಣ್ಣೆ ಮೈಗೆ ಹಚ್ಚುವ ಶಾಸ್ತ್ರ

ಅವಲ್ ಬಿಡುದ್ – ಬತ್ತದ ಅವಲಕ್ಕಿಯನ್ನು ತುಳಸಿಕಟ್ಟೆಗೆ ಅರ್ಪಿಸುವ ಆಚರಣೆ

ಅರಳು ಹೊಯ್ಯುವುದು – ಮದುವೆಯ ಸಂದರ್ಭದಲ್ಲಿ ಹುಡುಗಿಯ ಅಣ್ಣ ಹೋಮಕ್ಕೆ ಅರಳು ಹಾಕುವುದು

ಆರ್ದ್ರೋಡು ಹಬ್ಬ – ಹಗ್ಗಿನ ತಿಂಗಳ ಮೊದಲ ದಿನದಂದು ನಡೆಸಲಾಗುವ ಭೂಮಿಯ ಮೊದಲ ಉಳುಮೆಯ ಆಚರಣೆ

ಆರತಕ್ಷತೆ – ಮದುವೆಯ ಬಳಿಕ ಹುಡುಗನ ಮನೆಯಲ್ಲಿ ವಧೂವರರಿಗೆ ಆರತಿ ಎತ್ತಿ ಉಡುಗೊರೆ ನೀಡುವ ಆಚರಣೆ

ಆಶ್ಲೇಷ ಬಲಿ – ನಾಗಾರಾಧನೆಯ ಒಂದು ವಿಧ

ಆಸಾಡಿ ಹಬ್ಬ – ಆಷಾಢ ತಿಂಗಳಲ್ಲಿ ಬರುವ ಮೊದಲ ಹುಣ್ಣಿಮೆಯಂದು ಆಚರಿಸುವ ಹಬ್ಬ

ಆಸಾಡಿ ಹೊರೆ – ಆಷಾಢ ತಿಂಗಳಲ್ಲಿ ತಾಯಿಮನೆಯಿಂದ ಮಗಳ ಮನೆಗೆ ಕಳುಹಿಸುವ ಬಳುವಳಿ

ಇಳ್ಳಿ ಮಾತುದ್ – ಒಪ್ಪಿಗೆಯ ಸೂಚಕವಾಗಿ ವೀಳ್ಯ ಇರುವ ಹರಿವಾಣ ಬದಲಾಯಿಸಿಕೊಳ್ಳುವುದು

ಉಂಗುರುಡಿಕೆ ಸೀರೆ – ಮದುವೆಯ ಸಂದರ್ಭದಲ್ಲಿ ವಧುವಿಗೆ ಗಂಡನ ಕಡೆಯವರು ಕೊಡುವ ಸೀರೆ

ಉಂಗುರದಾಟ – ಮದುವೆಯ ಸಂದರ್ಭದಲ್ಲಿ ಎರಡೂ ಕಡೆಯವರು ಆಡುವ ಉಂಗುರ ಹುಡುಕುವ ಆಟ

ಉತ್ತರಿಗೆ ಸೀರೆ – ಮದುವೆಯ ಸಂದರ್ಭದಲ್ಲಿ ಹುಡುಗಿಯ ಮೈಮೇಲೆ ಹೊದೆಸುವ ಸೀರೆ

ಉಪ್ಪಿ ಕಯ್ಡಿಗಿ – ವಿಭೂತಿ ಇಡುವ ಕರಡಿಗೆ

ಉರು – ದೈವ, ಭೂತದ ಮರದ ಆಕೃತಿಗೆ ಇಡುವ ಹೆಸರು

ಉಳ್ ಹಣ್ಬ್ – ಹಣ್ಬ್ ಆದ ಒಂದು ದಿನದ ಬಳಿಕ ಮಾಡುವ ಆಚರಣೆ

ಎಡಿ ಇಡುದ್ – ಪಿತೃಗಳಿಗೆ ಅನ್ನಾಹಾರಗಳನ್ನು ಇಡುವುದು

ಎಣ್ಣೆಹಿಟ್ಟು – ಬಸರಿಗೆ ಬಳಸಲು ಗಂಡನ ಮನೆಯಲ್ಲಿ ಮಾಡುವ ಕರಿದ ತಿಂಡಿ

ಎದುರುಗುಂಬುವುದು – ಮದುವೆಯ ಸಂದರ್ಭದಲ್ಲಿ ನೆಂಟರನ್ನು ಬರಮಾಡಿಕೊಳ್ಳುವುದು

ಏಳಿರ್ಲ್ – ಚೊಚ್ಚಲ ಮಗು ಹುಟ್ಟಿದ ಏಳನೇ ದಿನ ಬ್ರಾಹ್ಮಣರಲ್ಲಿ ಆರೋಗ್ಯ, ಆಯುಷ್ಯಕ್ಕೆ ಗಣಪತಿಯನ್ನು ಪೂಜಿಸುವುದು

ಐನೀರ್ – ಮುಟ್ಟಾಗಿ ಐದನೇ ದಿನ ಹೆಣ್ಣು ಶುದ್ಧೀಕರಿಸಿಕೊಳ್ಳುವ ಸ್ನಾನ

ಒಡಲು ತುಂಬುವುದು – ಬಸರಿಯ ಮಡಿಲನ್ನು ತುಂಬುವುದು

ಒಸಗೆ – ಹುಡುಗಿ ಮೈನರೆದ ಮನೆಯಿಂದ ಗಂಡಿನ ಅಥವಾ ಹೆಣ್ಣಿನ ಮನೆಗೆ ವಿಷಯ ತಿಳಿಸುವುದು.

ಒಳ್ಳೊಳಿ	–	ಶುಭಾಶುಭ ಸಂದರ್ಭಗಳು
ಓಕುಳಿ	–	ಆಚರಣೆಗಳಲ್ಲಿ ಬಳಸುವ ಅರಶಿನ, ಸುಣ್ಣ ಬೆರೆಸಿದ ನೀರು
ಕಂಕಣ ಕಟ್ಟಿಕೊಳ್ಳುವುದು	–	ಮದುವೆ ನಿಗದಿಯಾದ ಬಳಿಕ ಸೂತಕ ಬಂದರೆ ಮದುವೆ ಕಾರ್ಯಕ್ಕೆ ತೊಂದರೆಯಾಗದಿರಲಿ ಎಂದು ಕಂಕಣ ಕಟ್ಟಿಕೊಳ್ಳುವ ಕ್ರಮ
ಕಡುಬಿನ ಕಾಳಗ	–	ನಾಯಿರಿ ದೀಕ್ಷೆ ಕೊಡುವಾಗ ಕೆರೆ ಸ್ನಾನ ಸಂದರ್ಭದಲ್ಲಿ ಕಡುಬಿನಿಂದ ಹೊಡೆದುಕೊಳ್ಳುವ ಆಚರಣೆ
ಕಡ್ಲ್ ಪೂಜೆ	–	ಮೊಗವೀರರು ಸಮುದ್ರಕ್ಕೆ ಹೋಗುವ ಮುನ್ನ ಕಡಲನ್ನು ಪೂಜಿಸುವ ಆಚರಣೆ
ಕತ್ತಿ ಎತ್ತಿ ಕೊಡುದ್	–	ನಾಯಿರಿ ದೀಕ್ಷೆ ಕೊಡುವ ಸಂದರ್ಭದಲ್ಲಿ ಖಡ್ಗ ಹಿಡಿಸುವ ಆಚರಣೆ
ಕದ್ರಾರತಿ	–	ಮದುಮಕ್ಕಳು ಬರುವಾಗ ದೃಷ್ಟಿ ತಾಗದಂತೆ ಅರಸಿನ ಕುಂಕುಮ ಬೆರೆಸಿದ ನೀರನ್ನು ಸುಳಿದು ಚೆಲ್ಲುವುದು
ಕನ್ನಸ್ತ್ರೀ	–	ಮದುವೆಗೆ ಮುಂಚೆ ಸತ್ತ ಪ್ರೇತಾತ್ಮ
ಕನ್ನೆಮುತ್ತೈದೆ	–	ಮದುವೆಯಾಗದ ಹುಡುಗಿ
ಕನ್ಯಾವರ್ಣನೆ	–	ಬ್ರಾಹ್ಮಣರಲ್ಲಿ ಮದುವೆಯ ಸಂದರ್ಭದಲ್ಲಿ ಹೆಣ್ಣಿನ ಗೋತ್ರ ಕಡಿಯುವ ಶಾಸ್ತ್ರ
ಕಲಶಕನ್ನಡಿ	–	ಮದುವೆಯ ಸಂದರ್ಭದಲ್ಲಿ ಹುಡುಗನ ಅಕ್ಕ ಕಲಶ ಹಿಡಿಯುವ ಕ್ರಮ
ಕಲಶಗ್ರಹಣ	–	ಪ್ರಸ್ತದ ಸಂದರ್ಭದ ಆಚರಣೆ
ಕಾಮನ ಹೊಂಡ	–	ಧಿಂಸಾಲ್ ಹಬ್ಬಕ್ಕೆಂದು ತಯಾರಿಸುವ ಹಣಬಿನ ಹೊಂಡಕ್ಕಿರುವ ಹೆಸರು
ಕಾರ್ರ್‌ಬೂದಿ	–	ಮಡಿವಾಳ್ತಿ ತರುವ ಬೂದಿ
ಕಾಶೀಯಾತ್ರೆ	–	ಬ್ರಾಹ್ಮಣರಲ್ಲಿ ಸಮಾವರ್ತನೆಯ ಸಂದರ್ಭದಲ್ಲಿ ಹುಡುಗ ಕಾಶಿಗೆ ಹೊರಟಂತೆ ನಟಿಸುವ ಶಾಸ್ತ್ರ
ಕಿವಿಸುರಿಮದಿ	–	ಮಗುವಿಗೆ ಕಿವಿ ತೂತು ಮಾಡುವ ಆಚರಣೆ
ಕುಂಟ್‌ನೀರು	–	ಶವಸಂಸ್ಕಾರಕ್ಕೆ ಹೊರಟಾಗ ಶವದ ಮುಂದೆ ಗಡಿಗೆಯಲ್ಲಿ ನೀರು ಹಿಡಿದುಕೊಂಡು ಹೋಗುವುದು

ಕೆರೆ ಮೀಯಿಸುವ ಶಾಸ್ತ್ರ	–	ಹಿಂದೆ ನಾಲ್ಕು ದಿನಗಳ ಮದುವೆಯಲ್ಲಿ ನಾಲ್ಕನೆಯ ದಿನ ಬ್ರಾಹ್ಮಣರಲ್ಲಿ ವಧೂವರರು ಕೆರೆಯಲ್ಲಿ ಮೀನು ಹಿಡಿಯುವಂತೆ ನಟಿಸುವ ಶಾಸ್ತ್ರ
ಕೇಲಿಗೆ ಅಕ್ಕಿ ಹಾಕುದ್	–	ಕಾವೇರಿ ಸಂಕ್ರಮಣದಂದು ಕೇಲಿಗೆ ಶೇಡಿಯಿಂದ ಗೆರೆಯೆಳೆದು ಬಿಳಿ ಅಕ್ಕಿ ಹೊಯ್ದು ದೀಪ ಹಚ್ಚಿ, ಧೂಪ ಹಾಕಿ ಪೂಜಿಸುವ ಆಚರಣೆ
ಕೈದಪ್ರಸ್ತ	–	ನಾಯಿರಿ ದೀಕ್ಷೆ ಕೊಡುವ ಆಚರಣೆ
ಕೈಹಾಸ್ ಕೊಡುದ್	–	ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವುದು
ಕೊಡಿ ತರುದ್	–	ಮದುವೆಯ ಸಂದರ್ಭದಲ್ಲಿ ಕಬ್ಬಿನ ಸುಳಿ ಅಥವಾ ತುಂಡು ತರುವುದು
ಕೊಡ್ನೀರ್ ಮದಿ	–	ಒಡೆಯರ ಮನೆಯಿಂದ ನೀರು ತಂದು ಮದುವೆಯ ದಿವಸ ಮದುಮಗಳು ಮಾಡುವ ಸ್ನಾನಕ್ಕೆ ಸಂಬಂಧಿಸಿದ ವಿಧಿ
ಕೋಡಂಗಿ	–	ತುಳಸಿ ಪೂಜೆ ಸಂದರ್ಭದಲ್ಲಿ ಹನುಮಂತನನ್ನು ಕರೆಯುವ ಬಗೆ
ಕೋಲ್ ಗೂಟ ಹಾಕು	–	ಪಂಚಾಂಗ ಮುಹೂರ್ತ ಮಾಡುವುದು
ಕೋಲುನೆಣೆ	–	ಕಡ್ಡಿಗೆ ಬಟ್ಟೆ ಸುತ್ತಿ ಎಣ್ಣೆಯಲ್ಲಿ ಅದ್ದಿ ಉರಿಸುವುದು
ಕೋಲ್ ಹೊಯ್ಯುದ್	–	ಕೂಸಾಳುಗಳು ಹಂಚೈಸಿಯಿಂದ ಬಾರಾತ್ ತಿಂಗಳ ನಡುವಿನ ಸಮಯದಲ್ಲಿ ಮನೆ ಮನೆಗೆ ಬಂದು ಹಾಡು ಹೇಳಿ ಕೋಲಾಟ ಆಡುವುದು
ಕ್ಯಾನಿಕಡ್ಬು	–	ಆಸಾಡಿ ತಿಂಗಳಲ್ಲಿ ಮಾಡುವ ಔಷಧ ರೂಪದ ಆಚರಣೆ
ಗದ್ದಿಗೆ	–	ದೈವದ ಪೀಠ
ಗುಂಡಿ ಮುಳ್ಕುದ್	–	ಬ್ರಾಹ್ಮಣೇತರರಲ್ಲಿ ಸತ್ತ ೧೧ನೇ ದಿನ ಸ್ನಾನ ಮಾಡುವುದು
ಗುರ್ಕಾರ	–	ಬ್ರಾಹ್ಮಣೇತರರಲ್ಲಿ ಸಮುದಾಯದ ನೇತಾರ
ಗುಳಿನೀರ್	–	ಸತ್ತ ಹತ್ತನೇ ದಿನ ಬಿಡುವ ತರ್ಪಣ
ಗೆಂಡ	–	ಆರಾಧನೆಯ ಭಾಗವಾಗಿ ಕೆಂಡದ ಮೇಲೆ ನಡೆಯುವ ಆಚರಣೆ
ಗೆಜ್ಜೆಕತ್ತಿ	–	ಬಾಣಂತಿ ಇಟ್ಟುಕೊಳ್ಳುವ ಕತ್ತಿ
ಗೆಡ್ಗಿ ನೀರ್	–	ಬ್ರಾಹ್ಮಣೇತರರಲ್ಲಿ ಮದುವೆಯ ಸಂದರ್ಭದಲ್ಲಿ ಮಣ್ಣಿನ ಗಡಿಗೆಯಿಂದ ಎರೆಯುವ ನೀರು

ಗೈಯ್ಡಿ	–	ಭೂತಸ್ಥಾನ
ಗೊಂಬೆ ಚಟ್ಟ್	–	ಬ್ರಾಹ್ಮಣರಲ್ಲಿ ಹುಡುಗಿ ಮೈನರೆದ ಸಂದರ್ಭದಲ್ಲಿ ೪ನೇ ದಿನ ಕಾಡಿ ಎಲೆಯಿಂದ ಗೋಡೆಯಲ್ಲಿ ಮುದ್ರೆ ಮೂಡಿಸುವುದು
ಗೋತ್ರ	–	ಬ್ರಾಹ್ಮಣರು ತಮ್ಮನ್ನು ಋಷಿಗಳ ಮೂಲಕ ಗುರುತಿಸಿಕೊಳ್ಳುವ ಬಗೆ
ಗೋಮಯ	–	ಸೆಗಣಿ ನೀರು
ಘಟ್ಟೆ	–	ಕಳಶ
ಘಟ್ಟೆ ಇಡುವುದು	–	ನವರಾತ್ರಿಯಂದು ದೇವಿಗೆ ಅಡಿಯಕ್ಕಿಯ ಮೇಲೆ ಕಳಶ ಇಟ್ಟು ಪೂಜಿಸುವ ಕ್ರಮ
ಚಕ್ರ ಹಾಕುದ್	–	ಉಪನಯನದ ಸಂದರ್ಭದಲ್ಲಿ ವಟುವಿಗೆ ಭಿಕ್ಷೆ ಹಾಕುವುದು
ಚಟ್ಟ್ ಹೊಯ್ಯುದ್	–	ಬ್ರಾಹ್ಮಣರಲ್ಲಿ ಹುಡುಗಿ ಮೈನರೆದಾಗ ಗೋಡೆಯ ಮೇಲೆ ಕೈಗುರುತು ಮೂಡಿಸುವ ಶಾಸ್ತ್ರ
ಚಟ್ಟ	–	ಶವ ಹೊರಲು ಬಳಸುವ ಬಿದಿರಿನ ಏಣಿಯಂತಹ ಸಾಧನ
ಚತ್ತಿಗಾರ್ತಿ	–	ಮದುವೆಯ ಸಂದರ್ಭದಲ್ಲಿ ಮದುಮಗನ ಅಥವಾ ಮದುಮಗಳ ಜೊತೆಗಿರುವ ಅವನ/ಅವಳ ಸೋದರಿ
ಚಪ್ಪರದೂಟ	–	ಸಮ್ಮಾನೂಟ
ಚರು	–	ಭೂತ, ದೈವಗಳಿಗೆ ಬಳಸುವ ಅರ್ಧಬೆಂದ ಅನ್ನದ ರಾಶಿ
ಚಾಪೆ ಹಾಕುದ್	–	ಮದುವೆಯ ಸಂದರ್ಭದಲ್ಲಿ ಚಾಪೆ ಹಾಕಿ ತೆಗೆದು ಮಾಡುವ ಶಾಸ್ತ್ರ
ಚಿಕ್ಕಮೇಳ	–	ನವರಾತ್ರಿ ಸಂದರ್ಭದಲ್ಲಿ ಮನೆ ಮನೆಗೆ ಬರುವ ಕೂಸಾಳುಗಳ ಕಲಾ ತಂಡ, ಇವರ ಪ್ರದರ್ಶನ ಯಕ್ಷಗಾನವನ್ನು ಹೋಲುತ್ತದೆ
ಚೌತಿ	–	ಸಣ್ಣ ಹೊಸ್ತ್
ಚೌಲ	–	ಉಪನಯನದ ಮೊದಲು ಕ್ಷೌರಿಕ ಕೂದಲು ಕತ್ತರಿಸುವ ಶಾಸ್ತ್ರ
ಜಕ್ಣಿ	–	ಅಗಲಿದ ಪಿತೃಗಳನ್ನು ಸೂಚಿಸುವ ಪದ, ಪ್ರೇತಾತ್ಮ
ಜಲ್ಲಿ	–	ಬ್ರಾಹ್ಮಣರಲ್ಲಿ ಬಸರಿಗೆ ಏಳನೇ ತಿಂಗಳಾದಾಗ ಮಾಡುವ ಶಾಸ್ತ್ರ

ಜೊಂಬು ಹಾಕುವುದು	–	ಧಿಂಸಾಲ್ ಸಂದರ್ಭದಲ್ಲಿ ಕಾಮನ ಆಗಮನವನ್ನು ಸೂಚಿಸುವಂತೆ ಕಾಮನನ್ನು ಹೊಗಳುವುದು
ಜೋಗಿಮಗಿ	–	ನವರಾತ್ರಿಯ ಸಂದರ್ಭದಲ್ಲಿ 'ಜೋಗಿ'ಗೆ ಎಡೆಯಿಟ್ಟು ಅದರ ಮೇಲೆ ಇಡುವ ಕಲಶ
ತನು	–	ನಾಗನಿಗೆ ಹಾಲೆರೆಯುವುದು
ತರ್ಪಣ	–	ಪಿತೃಗಳನ್ನು ನೆನೆಸಿ ನೀರು ಬಿಡುವುದು
ತಲೆಗಾಣಿಕಿ	–	ಒಕ್ಕಲಿನವರು ಒಡೆಯರಿಗೆ ಸಲ್ಲಿಸುವ ಕಾಣಿಕೆ
ತಲ್‌ನೀರ್ ಮದಿ	–	ಮೈನರೆದಾಗ ಮಾಡುವ ಆಚರಣೆ
ತಾತಿ	–	ಅನಿಷ್ಟ ಎರಗದಂತೆ ಕಟ್ಟುವ ತಾಯಿತ
ತಿಂಗಳು ಮಾಡುದ್	–	ಹೆರಿಗೆಯಾದ ೪೦ ದಿನ ಅಥವಾ ೩ ತಿಂಗಳ ಬಳಿಕ ಆಕೆ ಮರಳಿ ಸಹಜ ಜೀವನಕ್ರಮಕ್ಕೆ ಪ್ರವೇಶಿಸುವ ಆಚರಣೆ
ತಿಂಗೋಡು	–	ಸಂಕ್ರಮಣದ ಮರುದಿನ, ಸೌರಮಾನದ ಲೆಕ್ಕಾಚಾರದ ಪ್ರಕಾರ ತಿಂಗಳ ಮೊದಲನೆಯ ದಿನ
ತಿರ	–	ವಧುದಕ್ಷಿಣೆ ರೀತಿಯಲ್ಲಿ ಹುಡುಗಿಯ ಮನೆಯವರಿಗೆ ಹಣ ನೀಡುವ ಕ್ರಮ
ತೆತ್ತಿಗಾರ	–	ಮದುವೆಯಲ್ಲಿ ಹುಡುಗನ ಜೊತೆಗಿರುವ ಹುಡುಗನ ಭಾವ
ತೊಟ್ಲ್ ಕಾಣ್ಕೆ	–	ಮಗುವನ್ನು ತೊಟ್ಟಿಲಿಗೆ ಹಾಕಿದ ದಿನ ತೊಟ್ಟಿಲು ತೂಗಿದ ಮಹಿಳೆಯರಿಗೆ ಅದರ ನಾಲ್ಕು ಮೂಲೆಯಲ್ಲಿಟ್ಟಿದ್ದ ವೀಳ್ಯದೆಲೆ, ಅಡಿಕೆ, ಹಣ ಕೊಡುವುದು
ತೊಟ್ಲ್ ಮಾತುದ್	–	ಅತ್ತೆ, ಸೊಸೆ ಮನೆಗೆ ಹೋಗಿ ಬಂದ ಬಳಿಕ ತೊಟ್ಟಿಲು ಬದಲಾಯಿಸುವ ವಿಧಿ
ತೊಡಮನಿ	–	ಮದುವೆಯ ನಂತರದ ದಿನ ನಡೆಸುವ ವಿಶೇಷ ಊಟ
ತೊಟ್ಲ್ ಕರುದ್	–	ತಾಯಿ–ಮಗುವನ್ನು ಮೂರು ತಿಂಗಳ ಬಳಿಕ ಗಂಡನ ಮನೆಯವರು ಕರೆದೊಯ್ಯಲು ಬರುವುದು
ತೊಳಸಿ ಪೂಜೆ	–	ಉತ್ಥಾನ ದ್ವಾದಶಿಯಂದು ತುಳಸಿಯನ್ನು ಆರಾಧಿಸುವುದು, ಬಿಲ್ಲವರಲ್ಲಿ ತೊಳಸಿ ಪೂಜೆ ವಿಶೇಷ, ಅವರು ಇದರ ಭಾಗವಾಗಿ 'ಹೌಂದ್ರಾಯನ ವಾಲ್ಗ' ಎಂಬ ಹಾಡು, ಕುಣಿತ ನಡೆಸುತ್ತಾರೆ.
ದಂಟ್‌ಕೋಲು	–	ಉಪನಯನ, ಸಮಾವರ್ತನೆ ಸಂದರ್ಭದಲ್ಲಿ ಹುಡುಗ ಹಿಡಿದುಕೊಳ್ಳುವ, ಮೇಲೆ ಅಡಿಕೆ, ವೀಳ್ಯದೆಲೆ ಕಟ್ಟಿದ ಗೋಳಿ ಮರದ ಗೆಲ್ಲು

ದಕ್ಕೆ ಬಲಿ	–	ದೈವ ಪಾತ್ರಿಯ ಮೈಮೇಲೆ ಬರುವ ಆಚರಣೆ
ದರ್ಶನ	–	ನಾಗ, ದೈವ, ಭೂತಗಳು ವ್ಯಕ್ತಿಯ ಮೇಲೆ ಆವಾಹನೆಗೊಂಡು ಅವು ಸಂಭಾಷಣೆ ನಡೆಸುವುದು
ದಶದಾನ	–	ಸಾವಿನ ಸಂದರ್ಭದಲ್ಲಿ ಬ್ರಾಹ್ಮಣರಿಗೆ ಕೊಡುವ ಹತ್ತು ಬಗೆಯ ದಾನಗಳು
ದಾತ್ರಿ ಮದಿ	–	ವಿಧವೆಯ ಮರುಮದುವೆ
ದಾರಿ ಸ್ಯಾಸಿ	–	ಮದುವೆಯ ಧಾರೆಯ ಸಂದರ್ಭ
ದಿನ ನೋಡುದ್	–	ಶುಭಸಮಾರಂಭಗಳಿಗೆ ನಕ್ಷತ್ರ ಪ್ರಕಾರ ಒಳ್ಳೆಯ ದಿನವನ್ನು ನೋಡುವುದು
ದಿಬ್ಣ	–	ಮದುವೆಗೆ ಹುಡುಗನ ಅಥವಾ ಹುಡುಗಿಯ ಕುಟುಂಬದವರು ಜೊತೆಯಾಗಿ ಹೊರಡುವುದು
ದಿಮ್‌ಸಾಲ್ ಹಬ್ಬೊ	–	ಶಿವರಾತ್ರಿಯ ಸಂದರ್ಭದಲ್ಲಿ ಕಾಮನನ್ನು ದಹಿಸುವ ಆಚರಣೆ
ದಿವಾಳಿ	–	ದೀಪಾವಳಿ
ದೈವ	–	ದೇವರ ಗಣಗಳು
ದೈದ ಮನಿ	–	ದೈವಸ್ಥಾನ
ದೃಷ್ಟಿ ತೆಗುದ್	–	ಮಗುವಿಗೆ ಕೆಟ್ಟ ದೃಷ್ಟಿ ತಾಗದಂತೆ ಬಳಿದು ಹಾಕುವುದು
ಧರ್ಮೋದಕ/ಗುಳಿನೀರ್ ಸ್ನಾನ	–	ಬ್ರಾಹ್ಮಣರಲ್ಲಿ ಸತ್ತ ೧೦ನೇ ದಿನ ಮಾಡುವ ಶಾಸ್ತ್ರ
ಧಾರಾ ಮಂಟಪ	–	ಮದುವೆಯಲ್ಲಿ ಧಾರೆ ನಡೆಯುವ ಜಾಗ
ಧಾರೆ ಸೀರೆ	–	ವಧುವಿಗೆ ತಂದೆ ಕೊಡುವ ಸೀರೆ
ಧಾರೆ ಬಳೆ	–	ಮದುವೆಯ ಸಂದರ್ಭದಲ್ಲಿ ಹುಡುಗಿ ಹೊಸ ಬಳೆ ತೊಡುವುದು
ನಂಬ್ಗಿ	–	ಮದುವೆ ನಿಶ್ಚಯ
ನವರಾತ್ರಿ ಹೊರೆ	–	ನವರಾತ್ರಿ ಸಂದರ್ಭದಲ್ಲಿ ತಾಯಿ ಮನೆಯಿಂದ ಮಗಳ ಮನೆಗೆ ಕಳುಹಿಸುವ ಬಳುವಳಿ
ನವರಾತ್ರಿ	–	ಸರ್ವೇಶ್ರೀಯ ಆರಾಧನೆ
ನಾಂದಿ	–	ಮದುವೆ ನಿಗದಿಯಾದ ಮೇಲೆ ಮದುವೆಯ ಸಂದರ್ಭದಲ್ಲಿ ಸೂತಕ ತಟ್ಟದಿರಲೆಂದು ಮಾಡುವ ಶಾಸ್ತ್ರ
ನಾಂದಿ ಬಳೆ	–	ನಾಂದಿ ಸಂದರ್ಭದಲ್ಲಿ ಹುಡುಗಿ ಬಳೆ ತೊಡುವುದು
ನಾಗದೇವ್ರ ಬಾಂಬ್ರ್	–	ಸರ್ಪ ಸತ್ತಾಗ ಮಾಡುವ ಸಂಸ್ಕಾರ

ನಾಗೋಲೆ ಪ್ರಸ್ತ	–	ಕೆರೆ ಮೀಯಿಸುವ ಶಾಸ್ತ್ರ
ನಿಣಿಕೋಲ್	–	ಕಡ್ಡಿಗೆ ಬಟ್ಟೆ ಸುತ್ತಿ ಎಣ್ಣೆಯಲ್ಲಿ ಅದ್ದಿ ಉರಿಸುವುದು
ನಿಶ್ಚಯ ತಾಂಬೂಲ	–	ಮದುವೆ ನಿಗದಿಗೊಳಿಸುವ ಸಮಾರಂಭ
ನೀಚ	–	ದೈವಗಳ ಶ್ರೇಣಿಯಲ್ಲಿ ಕೆಳಹಂತದಲ್ಲಿರುವ ದೈವ
ನೀರ್ಕುಂಟು	–	ಉತ್ತರ ಕ್ರಿಯೆಯ ವೇಳೆಗೆ ಬಂಧುಗಳಿಗೆ ಕೊಡುವ ವಸ್ತ್ರ
ನೂಲ್ಹಬ್ಬ	–	ಜನಿವಾರ ಹಾಕುವ ಶಾಸ್ತ್ರ
ನೆಂಟಸ್ತಿಕೆ	–	ವೈವಾಹಿಕ ಸಂಬಂಧ ಬೆಳೆಸುವುದು
ಪಂಚಗವ್ಯ	–	ಗೋಮಯ, ಗೋಮೂತ್ರ ಇತ್ಯಾದಿ ಐದು ಪದಾರ್ಥಗಳನ್ನು ಬೆರೆಸಿದ ಮಿಶ್ರಣ, ಶುದ್ಧೀಕರಣ ಸಂದರ್ಭದಲ್ಲಿ ಇದು ಬೇಕಾಗುತ್ತದೆ
ಪಂಚಮರ್ಯಾದೆ	–	ಬ್ರಾಹ್ಮಣರ ಮದುವೆಗಳಲ್ಲಿ ಹುಡುಗಿಯ ಸೋದರ ಮಾವ, ಸೋದರತ್ತೆ, ಅಣ್ಣ–ತಮ್ಮ, ತಾಯಿ, ಅಜ್ಜಿ ಇವರಿಗೆ ಗಂಡಿನ ಕಡೆಯವರು ಸಲ್ಲಿಸುವ ಮರ್ಯಾದೆ
ಪರಾಕಿನ ಹಾಡ್	–	ಹೊಗಳುವ ಹಾಡು
ಪ್ರಸ್ತದೂಟ	–	ಪ್ರಸ್ತದ ಸಂದರ್ಭದಲ್ಲಿ ಬಂಧುಗಳು ಜೊತೆಗೆ ಮಾಡುವ ಊಟ
ಪಾಣಾರಾಟ	–	ತುಳುನಾಡಿನಲ್ಲಿ ಭೂತಕೋಲವನ್ನು ಈ ಪ್ರದೇಶದಲ್ಲಿ ಪಾಣಾರಾಟ ಎನ್ನುತ್ತಾರೆ
ಪಾತ್ರಿ	–	ದೇವರು, ದೈವ, ಭೂತಗಳನ್ನು ತನ್ನ ಮೇಲೆ ಆವಾಹಿಸಿಕೊಳ್ಳುವವನು
ಪ್ಯಾರ್ಟಿ	–	ಬ್ರಾಹ್ಮಣರಲ್ಲಿ ಮದುವೆಯ ಬಳಿಕ ಹುಡುಗಿ ಗಂಡನ ಮನೆಗೆ ಹೋಗುವಾಗ ಜೊತೆಗೆ ಹೋಗುವ ಆಕೆಯ ಸಂಬಂಧಿ, ಮಹಿಳೆ
ಪಿಂಡ	–	ಪಿತೃಗಳಿಗೆ ಸಾಲಾಗಿ ಇಡುವ ಅನ್ನದ ಉಂಡೆ
ಪಿಟಾರಿ ಪೆಟ್ಟಿಗೆ	–	ಗರ್ಭಿಣಿಯ ಬಯಕೆಯ ತಿಂಡಿ ಇಡುವ ಪೆಟ್ಟಿಗೆ
ಪುಂಸವನ	–	ಬ್ರಾಹ್ಮಣರಲ್ಲಿ ಹೆಣ್ಣು ಗರ್ಭಿಣಿಯಾದಾಗ ಗಂಡುಮಗು ಬಯಸಿ ಮಾಡುವ ಶಾಸ್ತ್ರ
ಪುರೋಹಿತ	–	ಪೂಜೆ ಪುನಸ್ಕಾರಗಳನ್ನು ಮುನ್ನಡೆಸುವ ವೈದಿಕ ಬ್ರಾಹ್ಮಣ
ಪ್ರಸ್ತದೂಟ	–	ಪ್ರಸ್ತದ ಸಂದರ್ಭದಲ್ಲಿ ಬಂಧುಗಳೆಲ್ಲ ಸೇರಿ ಮಾಡುವ ಊಟ

ಬಂಡಿಕೋಲ್	–	ನಾಯಿರಿ ದೀಕ್ಷೆ ಸಂದರ್ಭದಲ್ಲಿ ಆಯುಧ ನೀಡುವ ಶಾಸ್ತ್ರ
ಬಟ್ಲಗುಂಬುದ್	–	ಗಂಡು, ಹೆಣ್ಣಿನ ಮನೆಯಲ್ಲಿ ಬಟ್ಟಲಲ್ಲಿ ಉಣ್ಣುವ ಆಚರಣೆ
ಬಯನ	–	ಬಾಗಿನ
ಬಯ್ಕಿ ಮದಿ	–	ಗರ್ಭಿಣಿ ೭ನೇ ತಿಂಗಳಲ್ಲಿದ್ದಾಗ ಮಾಡುವ ಶಾಸ್ತ್ರ
ಬರ ಹಿಡ್ಸುದ್	–	ಮಗುವನ್ನು ಅಕ್ಷರಾಭ್ಯಾಸಕ್ಕೆ ತೊಡಗಿಸುವ ಆಚರಣೆ
ಬಲೀಂದ್ರ ಪೂಜೆ	–	ಬಲೀಂದ್ರನನ್ನು ಕರೆಯುವ ಆಚರಣೆ
ಬಳು ಮೀಸುದ್	–	ಶುಭ ಸಮಾರಂಭಗಳಲ್ಲಿ ಬಳಿಯವರು ಮತ್ತು ಕುಟುಂಬದವರು ಸೇರಿ ಹುಡುಗಿ ಅಥವಾ ಹುಡುಗನಿಗೆ ಮಾಡಿಸುವ ಸ್ನಾನ
ಬಳುಮೇಸ್ತಿ	–	ಅಳಿಯ ಸಂತಾನದಲ್ಲಿ ಮದುವೆಯಾಗಿ ಬಂದ ಹೆಣ್ಣು
ಬಾಗಲ್ ತಡುದ್	–	ಮೊದಲ ರಾತ್ರಿಯಂದು ಹುಡುಗನನ್ನು ಕೋಣೆ ಪ್ರವೇಶಿಸುವ ಮುನ್ನ ತಡೆದು ಕೀಟಲೆ ಮಾಡುವುದು
ಬಾಳ್ ಬಂಡಾರ	–	ಭೂತದ ತೊಡುಗೆಗಳಾದ ಕಾಲ್‌ಕಡಿ, ಗೆಟ್ಟಿಗೆ, ಗಿಚ್ಚಿ ಮುಂತಾದವುಗಳನ್ನು ಒಟ್ಟಾಗಿ ಹೀಗೆ ಕರೆಯುತ್ತಾರೆ.
ಬಾಳ್ ಬಳೊಳಿ	–	ಮದುವೆಯಾಗಿ ಹೋಗುವ ಹೆಣ್ಣಿಗೆ ತಾಯಿ ಮನೆಯವರು ನೀಡುವ ಬಳುವಳಿ
ಬಿಜ್ಜಲ್ತಿ	–	ಹೆರಿಗೆ ಮಾಡಿಸುವವಳು
ಬೀಗರ ಔತಣ	–	ಮದುವೆಯ ಮರುದಿನ ಹುಡುಗನ ಮನೆಯಲ್ಲಿ ನಡೆಯುವ ಔತಣ
ಬೂದ್‌ನೀರು	–	ನರಕ ಚತುರ್ದಶಿಯಂದು ಮೀಯುವ ಆಚರಣೆ
ಬೊಜ್ಜ	–	ಸತ್ತ ಬಳಿಕ ಮಾಡುವ ಉತ್ತರಕ್ರಿಯೆ
ಮಗೆ	–	ಮಣ್ಣಿನ ಕಲಶ
ಮಧುಪರ್ಕ	–	ಬ್ರಾಹ್ಮಣರಲ್ಲಿ ಹೆಣ್ಣಿನ ಮನೆಯವರು ಗಂಡಿಗೆ ಕೊಡುವ ಕೌಳಿಗೆ, ಸೌಟು, ಹರಿವಾಣ ಮುಂತಾದವುಗಳು
ಮನೆ ಒಕ್ಲು	–	ಗೃಹ ಪ್ರವೇಶ
ಮರೊಳಿ	–	ಮದುವೆಯ ದಿನ ಹುಡುಗಿಯ ತಂದೆ ಗಂಡಿಗೆ ಮರ್ಯಾದೆ ರೂಪದಲ್ಲಿ ನೀಡುತ್ತಿದ್ದ ದಕ್ಷಿಣೆ

ಮಾಯಿದಿಕ್ಕಳು ಹಣ ಕೊಡುವ ಶಾಸ್ತ್ರ	–	ಹುಡುಗನಿಗೆ ಮದುವೆಯ ಸಂದರ್ಭದಲ್ಲಿ ಹುಡುಗನಿಗೆ ಹುಡುಗಿಯ ತಾಯಿ ಮತ್ತು ಅವರ ಅಕ್ಕತಂಗಿಯರು ಹಣ ನೀಡುವ ಶಾಸ್ತ್ರ
ಮಾಲಯ	–	ಮಹಾಲಯ ಅಮವಾಸ್ಯೆಯಂದು ಪಿತೃಗಳಿಗೆ ಬಡಿಸುವ ಆಚರಣೆ
ಮಾಸ್ತಿಯಮ್ಮ	–	ದೇವಿಯನ್ನು ಕರೆಯುವ ಬಗೆ
ಮಿಸಾಲಿಡುದ್	–	ಸತ್ತವರಿಗೆ ಬಡಿಸುವ ವಿಧಿ
ಮುಂಡಿಗೆ ಮುತ್ತೈದೆ ಮಾಡುವ ಶಾಸ್ತ್ರ	–	ವಿಧವೆಗೆ ಮರುಮದುವೆ ಮಾಡುವುದು
ಮುಂಡಿಗಿ	–	ಮರದ ಉದ್ದನೆಯ ಕಂಬ ಅಥವಾ ಆಕೃತಿ
ಮುಹೂರ್ತ ಸ್ವಾಸಿ	–	ದಿಬ್ಬಣ ಹೊರಡುವ ಮೊದಲು ಮದುಮಕ್ಕಳಿಗೆ ಅವರವರ ಮನೆಯಲ್ಲಿ ಕೂರಿಸಿ ಅಕ್ಷತೆ ಹಾಕುವುದು
ಮೂರ್ತದರಿ	–	ಹುಡುಗಿ ಒಪ್ಪಿಗೆಯಾದರೆ ಮುಹೂರ್ತ ಮಡಿಕೆ ಇಡುವ ಶಾಸ್ತ್ರ
ವರು	–	ವರಹ
ವಸಂತ	–	ವಸಂತ ಮಾಸದಲ್ಲಿ ಮಾಡುವ ವಿಶೇಷ ತುಳಸಿ ಪೂಜೆ, ಇದು ಬಿಲ್ಲವರಲ್ಲಿ ವಿಶೇಷ
ಶೋಭಾನೆ	–	ಶುಭ ಸಮಾರಂಭಗಳಲ್ಲಿ ಹಾಡುವ ಹಾಡು
ಶ್ರಾದ್ಧ	–	ಬ್ರಾಹ್ಮಣರಲ್ಲಿ ವರ್ಷಕ್ಕೊಮ್ಮೆ ಪಿತೃಗಳನ್ನು ಅವರು ಸತ್ತ ತಿಥಿಯಂದು ನೆನೆಸಿಕೊಳ್ಳುವ ಆಚರಣೆ
ಸಕ್ನ ಕೊಡುದ್	–	ಬಸರಿಗೆ ಎಲೆ ತಿನ್ನಲು ಕೊಡುವುದು
ಸಕ್ನದಕ್ಕಿ ಕಾಯಿ	–	ಬಸರಿಯ ಮಾವ ಅಥವಾ ಅಣ್ಣ ಮಡಿಲಿಗೆ ಹಾಕುವ ಅಕ್ಕಿ, ತೆಂಗಿನಕಾಯಿ
ಸತ್ತರ್‌ಗಂಜಿ	–	ಶವ ಸಂಸ್ಕಾರವಾದ ಬಳಿಕ ಅದುವರೆಗೆ ಉಪವಾಸವಿದ್ದ ಬಂಧುಗಳು ಉಣ್ಣುವ ಗಂಜಿ
ಸಪಿಂಡೀಕರಣ	–	ಸತ್ತವರನ್ನು ಪಿತೃಗಳೊಂದಿಗೆ ಸೇರಿಸುವ ಶಾಸ್ತ್ರ
ಸಮಾವರ್ತನೆ	–	ಬ್ರಾಹ್ಮಣರಲ್ಲಿ ಮದುವೆಯ ಹಿಂದಿನ ದಿನ ಹುಡುಗನ ಮನೆಯಲ್ಲಿ ಮಾಡುವ ಶಾಸ್ತ್ರ (ಕಾಶಿಯಾತ್ರೆ)
ಸಮ್ಮಾನೂಟ	–	ಮದುವೆಯಾದ ನಂತರದ ದಿನ ಮಾಡುವ ವಿಶೇಷ ಊಟ
ಸಾವು ಮಾತಾಡ್ಸುದ್	–	ಸತ್ತ ವ್ಯಕ್ತಿಯ ಮನೆಯವರನ್ನು ಸಂತೈಸುವ ಬಗೆ

ಸ್ಯಾಸಿ	–	ಅಕ್ಷತೆ
ಸೀಮಂತೋನ್ನಯನ	–	ಬ್ರಾಹ್ಮಣರಲ್ಲಿ ಗರ್ಭ ಸ್ಥಿರತೆಗಾಗಿ ಮಾಡುವ ಶಾಸ್ತ್ರ
ಸುಣ್ಣ ಹೊಯ್ಯುದ್	–	ಯುಗಾದಿಯ ಸಂದರ್ಭದಲ್ಲಿ ಬಾಕುಡರು ತುಳಸಿಕಟ್ಟೆಯ ಎದುರು ಸುಣ್ಣ ಹಾಕುವ ಶಾಸ್ತ್ರ
ಸುತಿ	–	ದೈವ/ಭೂತ ಆವಾಹನೆಯ ಸಂಕೇತವಾಗಿ ಬಿಳಿಯಕ್ಕಿಯ ಮೇಲೆ ಇಡುವ ತೆಂಗಿನಕಾಯಿ
ಸೆಕೆಹಿಟ್ಟ್	–	ಬಸರಿಗೆ ತಾಯಿಮನೆಯಲ್ಲಿ ಬಡಿಸುವ, ಸೆಕೆಯಲ್ಲಿ ಹಿಟ್ಟು ಬೇಯಿಸಿ ಮಾಡಿದ ತಿಂಡಿ
ಸೆಟ್ಕ್ ಹಿಡ್ಸುದ್	–	ಮದುವೆಯ ಸಂದರ್ಭದಲ್ಲಿ ರಾತ್ರಿ ಊಟದ ಹೊತ್ತು ಹೆಣ್ಣಿನ ಕೈಯಿಂದ ಮದುಮಗನಿಗೆ ಊಟ ಬಡಿಸುವ ಆಚರಣೆ
ಸೊಡ್ಲಿ ಗುಡ್ಸುದ್	–	ಸತ್ತ ವ್ಯಕ್ತಿಯನ್ನು ಸುಟ್ಟ ಬಳಿಕ ಬೂದಿ ಒಟ್ಟುವ ಶಾಸ್ತ್ರ
ಸೋಣೆ ಆರತಿ	–	ಸೋಣೆ ತಿಂಗಳಲ್ಲಿ ದೇವಸ್ಥಾನಗಳಲ್ಲಿ ದೇವರಿಗೆ ಸಲ್ಲಿಸುವ ವಿಶೇಷವಾದ ಆರತಿ
ಹಣ್ತಿಗೆ	–	ಹಣತೆ
ಹಣ್ಬ್	–	ಮರದ ಕೊಳ್ಳಿ ಇಟ್ಟು, ಅದರ ಸುತ್ತ ಹುಲ್ಲು ಸುತ್ತಿ ಮಾಡಿದ ರಾಶಿ. ಧಿಂಸಾಲ್ ಹಬ್ಬದ ಸಂದರ್ಭದಲ್ಲಿ ಇದನ್ನು ಸುಡಲಾಗುತ್ತದೆ.
ಹತ್ರಾವದಿ	–	ಹಗ್ಗಿನ ತಿಂಗಳ ಹತ್ತನೇ ದಿನದಂದು ಸಾಂಕೇತಿಕವಾಗಿ ಬೀಜ ಬಿತ್ತುವ ಆಚರಣೆ
ಹರ್ಶೇವೆ	–	ತಿರುಪತಿ ಯಾತ್ರೆ ಬಳಿಕ ಮಾಡುವ ಸೇವೆ
ಹಲಗೆ	–	ದೇವರನ್ನು ಸಂಕೇತಿಸುವ ಹಲಗೆ
ಹಸೆ ಹಾಸುದ್	–	ಮದುಮಕ್ಕಳಿಗೆ ಪ್ರಸ್ತದಂದು ಹಾಸಿಗೆ ಹಾಸುವ ಆಚರಣೆ
ಹಾಕಿ ಬೆಚ್ಚುದ್	–	ಭೂತ, ದೈವಗಳಿಗೆ ಬಡಿಸುವುದು
ಹಾನ	–	ದೈವ, ಭೂತಗಳಿಗೆ ಬಡಿಸುವಾಗ ಕುಂಕುಮ, ಅರಶಿನ ಅಥವಾ ಕರಿ ಬಳಸಿ ಮಾಡುವ ಬಣ್ಣದ ನೀರು
ಹಾರ	–	ಬಲಿ, ಆಹಾರ
ಹಾಲ್‌ತುಪ್ಪ	–	ಮೈನರೆದ ಹುಡುಗಿಗೆ ಪೌಷ್ಟಿಕತೆ ತುಂಬಿಕೊಡುವಂತಹ ತಿನಿಸು ಕೊಡುವ ಆಚರಣೆ
ಹಿಂಡಿ ಅರುದ್/ಹೊಸಕ್ಕಿ ಬಾಗುದ್	–	ಹೊಸ ಬತ್ತದ ಅಕ್ಕಿ ಮಾಡಿ ಅದೇ ದಿನ ಉಣ್ಣುವ ಆಚರಣೆ

ಹೂ ಮುಡ್ಸು ಶಾಸ್ತ್ರ	–	೫ನೇ ತಿಂಗಳಲ್ಲಿ ಗರ್ಭಿಣಿಗೆ ಹೂ ಮುಡಿಸುವ ಶಾಸ್ತ್ರ
ಹೂಗಿನ ಕೋಲ್	–	ನವರಾತ್ರಿಯಂದು ಹುಡುಗರು ಮನೆಮನೆಗೆ ಬಂದು ನಡೆಸುವ ಹಾಡು, ಕುಣಿತ
ಹೊರ್ಮಾಲಿ	–	ಕೂಸಾಳುಗಳ ಮದುವೆ, ಈಗ ಈ ಹೆಸರಿನಿಂದ ಕರೆಯುವುದಿಲ್ಲ
ಹೊಸ್ತು	–	ಹೊಸ ಕದಿರನ್ನು ಕೊಯ್ಯುವ ಆಚರಣೆ

ಮೀನುಗಾರಿಕೆ

ಅಗ್ರ	–	ಬೋಟಿನ ಮುಂಭಾಗ
ಅರಾಲ್	–	ಸಮುದ್ರ ಕಿನಾರೆ
ಅಳುವೆ	–	ಹೊಳೆ ಸಮುದ್ರ ಸೇರುವ ಪ್ರದೇಶ
ಅಂಬ್ ಹಾಕುದ್	–	ಹುಟ್ಟು ಹಾಕುವುದು
ಆನ	–	ಹೊಳೆ, ಸಮುದ್ರ ಸೇರುವ ಜಲಾವೃತ ಪ್ರದೇಶ
ಒತ್ತುದ್	–	ಹುಟ್ಟು ಹಾಕುವುದು
ಒಳಗ್ ಬಪ್ಪ್ದ್	–	ದಡದತ್ತ ಬರುವುದು
ಕಣ್ಣಿ ಮಕ್ಕಳ್	–	ಮೀನು ಗೋರುವವರು
ಕಮಾನಿನವರು	–	ದಕ್ಕೆಯಲ್ಲಿದ್ದು ಮೀನುಗಾರಿಕೆಗೆ ಸಂಬಂಧಿಸಿದ ಕೆಲಸ ಮಾಡುವವರು
ಕರ್ಪು	–	ಮೀನಿನ ಗುಂಪು
ಕಳಸಿ	–	ಬೋಟ್‌ನ ಭಾಗ
ಕಳಿ	–	ಮೇಲಿನ ಜಾಗ
ಕಳು	–	ಹೊಳೆ ದಾಟುವ ಪ್ರಯಾಣಿಕರು ನಿಲ್ಲುವ ಜಾಗ
ಕೊಲ್ಲೈ	–	ಲಂಗರು ಹಾಕಲು ಬಳಸುವ ಕೊಕ್ಕೆ
ಕೋಡಿ	–	ಕಡಲಿನ ಅಳುವೆಯ ಬದಿ
ಗಂಡನ ಕೂಳ್	–	ಮಳೆಗಾಲದ ನಂತರದ ಕಡಲು
ಗ್ವಾನ	–	ಮೀನಿನ ಹಿಂಡಿ
ತಾಂಡೇಲ	–	ಮಾರಿಬಲೆಯನ್ನು ಮುನ್ನಡೆಸುವವನು
ತುಪ್ಪಾನ್	–	ತೂಫಾನು
ತೋಳ್ಸುದ್	–	ಹುಟ್ಟ್ ಹಾಕುದ್

ದಕ್ಕೆ – ಸಾಮೂಹಿಕವಾಗಿ ದೋಣಿಗಳನ್ನು ನಿಲ್ಲಿಸುವ ಮತ್ತು ಮೀನುಗಾರಿಕೆಯ ಚಟುವಟಿಕೆ ನಡೆಯುವ ಜಾಗ

ನಂಗಲ್ – ಲಂಗರು

ನೀರ್ ಕಾಕಿ – ಸದಾ ಸಮುದ್ರದಲ್ಲಿರಲು ಬಯಸುವವರು

ಪಡ್ಡಾಯಿ ಹ್ವಾಪ್ದ್ – ಕಡಲಿಗೆ ಹೋಗುವುದು

ಬ್ಯಾಲಿಗುಡ್ಡೆ – ಕಿನಾರೆ

ಮಕ್ಕಳ ಕೂಳ್ – ಮಳೆಗಾಲದ ಸಮುದ್ರ

ಮಡಿ ಬೀಳುದ್ – ಅನುಕೂಲವಾಗುವ ಜಾಗದಲ್ಲಿ 'ಪಾಂಡಿ'ಯನ್ನು ನೀರಿಗೆ ಇಳಿಸುವುದು

ಮಳಿಚಿಪ್ಪಿ – ಕಪ್ಪೆಚಿಪ್ಪು

ಶಾಡಿ ಬೀಳುದ್ – ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಳು ಹುಟ್ಟುವುದು

ಹೌಂದ್ರ – ಸಮುದ್ರ

ಮೀನುಗಾರಿಕೆಗೆ ಸಂಬಂಧಿಸಿದ ಆಚರಣೆಗಳು

ಕಡ್ಲ್ ಪೂಜೆ – ತೊಂದರೆಯಾಗದಿರಲಿ ಎಂದು ಸಮುದ್ರಕ್ಕೆ ಹೋಗುವ ಮೊದಲು ಮಾಡುವ ಪೂಜೆ

ಕುಟ್ಟಿಪೂಜೆ – ವಿಘ್ನಗಳು ಉಂಟಾಗದಿರಲಿ ಎಂದು ಜಲದೇವತೆಗೆ ಮಾಡುವ ಪೂಜೆ

ಸಿರಣಿ ಪೂಜೆ – ಹೆಚ್ಚು ಮೀನು ದೊರೆಯಲಿ ಎಂಬ ಆಶಯದಿಂದ ಮಾಡುವ ಪೂಜೆ

ಕೋಳ್ಯಾರ ಮಾವ – ಹಿಂದೆ ಕಡಲಿಗೆ ಹೋದಾಗ ದುರ್ಮರಣ ಹೊಂದಿದ ವ್ಯಕ್ತಿಯಿಂದ ತೊಂದರೆಯಾಗದಿರಲಿ ಎಂದು ಕೋಳಿ ಕೊಡುವ ಆಚರಣೆ

ಚೌತಿ ಕಾಯಿ – ಕಡಲಿನ ಉತ್ಪಾತಗಳು ಕಡಿಮೆಯಾಗಲಿ ಎಂದು ತೆಂಗಿನಕಾಯಿಯ ಸಣ್ಣ ಆಕೃತಿಯನ್ನು ಚಿನ್ನದಲ್ಲಿ ಮಾಡಿ ಚೌತಿಯಂದು ಕಡಲಿಗೆ ಹಾಕುವ ಆಚರಣೆ

ಬಲೆಗ್ ದಾರ ಹಾಕುದ್ – ನಿಗದಿಪಡಿಸಿದ ದಿನದಂದು ಬಲೆಯನ್ನು ಒಂದಕ್ಕೊಂದು ಜೋಡಿಸಿ ವಿಸ್ತರಿಸುವ ಆಚರಣೆ

ಕೆರೆಯಲ್ಲಿ ಮೀನು ಹಿಡಿಯುವ ಸಲಕರಣೆಗಳು

ಅಂಡಿ

ಕಂತ್ ಬಲೆ

ಕರ್‌ಗೂಳಿ

ಗೂಳಿ

ಗೋರ್ ಬಲೆ

ಚಟ್ಲಿವಾಡ

ಬೀಸ್ ಬಲೆ

ಶಡಿಗಾಳ

ಹಿಡಿಗಾಳ

ಬಲೆಗಳು

ಎರಣಿ ಬಲೆ

ಕಂತ್‌ಬಲೆ

ಕೈರಪ್ಪಣಿ

ಕೋಟಿ ಬಲೆ

ಗೋರ್‌ಬಲೆ

ಜೂಲಿ ಬಲೆ

ತಂಬೂರಿ ಬಲೆ

ನೇಗಿ ಬಲೆ

ಪಟ್ಟೆ ಬಲೆ

ಬಂಜಾಯಿ ಬಲೆ

ಬಯ್ಗಿ ಬಲೆ

ಬಲಿಯನ್ ಬಲಿ

ಬೀಸ್‌ಬಲೆ

ಮಾರಿಬಲೆ

ಸಾಣಿಬಲೆ

ಇಂಜಿನ್ ದೋಣಿ/ಬೋಟ್‌ಗಳು

ಓಡ

ಪರ್ಸೀನ್

ಪಾಂಡಿ

ಪಾತಿದೋಣಿ

ಬೀಡಿನ ದೋಣಿ

ಮಚ್ವೆ

ಸಂಗೋಡ

ಮೀನಿನ ವಿಧಗಳು

ಸಿಹಿನೀರಿನ ಮೀನುಗಳು

ಎಡಿ

ಎರಿ

ಐರ್

ಕಂಬರ್

ಕಡ್ಗಿ

ಕರ್ಸಿ

ಕಲ್

ಕಾಣಿ

ಕಾಳ್ಸಿ

ಕುಂಚ

ಕುಂಡರ್ ಬಡ್ಡಾ

ಕೊಲ್‌ಕಾಣಿ

ಚೆಂಗ್ಟಿ

ಜಾಗ್ಟಿ

ಜಾರಿ

ಬಾಳಿ

ಮಟ

ಮಯ್ಬಿ

ಮುಯ್ಡ್

ಶಾಡಿ

ಸಿಂಗ

ಸುಲಾಪಿ

ಹೂಮೀನು

ಸಮುದ್ರದ ಮೀನುಗಳು

ಅಂಬರ್ಕಿ

ಅಟ್ಟೆ ಜಗ್ಗ್

ಅಡಾಯಿ

ಅರಗ

ಅರ್‌ಕೋಳಿ

ಎತ್ ಮೀನು

ಎರಣಿ ಮೀನು

ಎಶಿಡಿ

ಕಂಡಿಕೆ

ಕಂಬನಾ

ಕಟ್ರಿ

ಕಡಕ್ ಮೀನು

ಕರ್ಸಿ

ಕಲ್ಕೆ

ಕಳ್ಸಿ

ಕಳ್ಳಿಗೋರಿ

ಕಾಣಿ

ಕಾಳ್ಸಿ

ಕುಂಚ್

ಕುರ್‌ತಲಿ

ಕೆಂಬೇರಿ

ಕೆಮುಸ್ಸಿ

ಕೊಂತಿ

ಕೊಕ್ಕರ

ಕೊಡಾಯಿ

ಗೂರ್ಕ್

ಗೊಂಡಿ

ಚಟ್

ಚಟ್ಲಿ

ಚಾಟಿ

ಚಿಪ್ಪಟಿ

ಚೊಂದಿ

ಜಗ್ಗ್

ಜಾರಿ

ತಪ್ಪಳಕಿ

ತೀಗ್ಗಣಿ

ತೊರ್ಕಿ

ನಂಗ್

ನರಲಿ

ಬಂಗುಡೆ

ಬಡ್ತಿ

ಬಣ್ಣ

ಬಳ್ಕ

ಬಾವುಕ

ಬಾಳಿ

ಬಿಳಿ ಜುಟ್ಟು

ಬೆಳ್‌ಮೀನ್

ಬೈಗೆ

ಬೊಣ್ಣಾ

ಮಣಗು

ಮದುಮಗಳ ಮೀನು

ಮಳಿ

ಮಾಂಜ್

ಮಾಲು

ಮುಳ್‌ಬಾಳಿ

ಮೊಗ್ಗ

ಶಾಡಿ

ಸುಲಾಪಿ

ಹಕ್ಕಿತೊರ್ಕಿ

ಹಾಂಕ್ಟಿ

ಹಾಮ್‌ಳಿ

ಹೊಟ್ ಮೀನು

ಮೂರ್ತೆದಾರಿಕೆಗೆ ಸಂಬಂಧಿಸಿದ ಪದಗಳು

ಅರುಕತ್ತಿ	–	ತಾಳೆ, ತೆಂಗಿನ ಗೊನೆಗಳನ್ನು ಕಡಿಯಲು ಬಳಸುವ ಕತ್ತಿ
ಕಂದಲ್	–	ತೆಂಗು, ತಾಳೆಯ ರಸ ಸಂಗ್ರಹವಾಗಲು ಕಟ್ಟಿದ ಮಣ್ಣಿನ ಮಡಿಕೆ
ಕತ್ತಿಕ್ವಾರ್ಕಿ	–	ಮರ ಹತ್ತುವಾಗ ಬೆನ್ನಿನ ಹಿಂದೆ ಕತ್ತಿಯನ್ನು ಸಿಕ್ಕಿಸಿಕೊಳ್ಳುವ ಸಾಧನ
ಕೊಪ್ಪರಿಗಿ	–	ತಾಳೆ ರಸವನ್ನು ಕುದಿಸುವ ದೊಡ್ಡ ಪಾತ್ರೆ
ಗೊನಿ ತಿಕ್ಕು ಕೋಲ್	–	ತಾಳೆಗೊನೆಯನ್ನು ಹದ ಮಾಡಲು ಬಳಸುವ ಕೋಲು
ಚಿಟ್ಟಿ	–	ಕುದಿಸಿದ ತಾಳೆ ರಸವನ್ನು ಹೊಯ್ಯುವ ಓಲೆಯ ಸಣ್ಣ ಪಾತ್ರೆ
ಚೋಂಗಿ	–	ತೆಂಗಿನ ಗರಿ
ಬೆದ್ರಿನ ಏಣಿ	–	ಮರ ಹತ್ತಲು ಬಳಸುವ ಬಿದಿರಿನ ಏಣಿ
ವಾಲಿ ಬೆಲ್ಲ/ಹನಿ ಬೆಲ್ಲ	–	ತಾಳೆ ಮರದ ರಸದಿಂದ ತಯಾರಿಸಿದ ಬೆಲ್ಲ
ಸುಣ್ಣ ಹಾಕುದ್	–	ತಾಳೆ ರಸ ಹುಳಿಯಾಗದಂತೆ ಸುಣ್ಣ ಹಾಕುವ ಕ್ರಮ
ಸೊರಿ ಅಂಡಿ	–	ಸೋರೆಕಾಯಿಯ ಬುರುಡೆ
ಹನಿಮರ	–	ತಾಳೆ ಮರ

ಮನೆಗೆ ಸಂಬಂಧಿಸಿದ ಪದಗಳು

ಅಗಳಿ	–	ಬಾಗಿಲ ಚಿಲಕ
ಉಪ್ಪರ್ಗಿ	–	ಮಾಳಿಗೆ
ಓಡ್ಲ್	–	ಹಂಚು
ಓರಿ	–	ವಿಶಾಲವಾದ ಹಜಾರ

ಕಡ್ಮಾಡ್	–	ಕೆಳ ಅಂತರದ ಮಾಡು, ಒಂದೇ ಪಾರ್ಶ್ವವಿರುವ ಮಾಡು
ಕೀಳರೆ	–	ಕಿರುಜಗಲಿ
ಕೆಸರು ಹಲಗೆ	–	ದಾರಂದದ ಮೇಲಿನ ಹಲಗೆ
ಕೊಗ್ಳ್	–	ಅಡ್ಡ ತೊಲೆ
ಕೊಪ್ಪ	–	ಕೊರಗರ ಗುಡಿಸಲು
ಗಿಡ್ಕಿ	–	ಬಿದಿರು ಚೌಕಟ್ಟಿಗೆ ಮಡಲನ್ನು ಕಟ್ಟಿ ಮಾಡಿದ ಬಾಗಿಲು
ಗಿಳಿಗುಟ್ಟ	–	ಏನನ್ನಾದರೂ ಸಿಕ್ಕಿಸಲು ಗೋಡೆಗೆ ಹುಗಿದಿರುವ ಗೂಟ
ಗುಡಿ	–	ಕೂಸಾಳುಗಳ ಗುಡಿಸಲು
ಗ್ವಾಡಿ	–	ಗೋಡೆ
ಚಾವ್ಡಿ	–	ಚಾವಡಿ
ಚಿಟ್ಟಿ	–	ಜಗಲಿ
ತಟ್ಟಿ	–	ತೆಂಗಿನಗರಿಯಿಂದ ಮಾಡಿದ ತಡೆಗೋಡೆ
ತಳಿಗಂಡಿ	–	ಸಣ್ಣ ಕಿಟಕಿ
ದಡ್ಡೋರಿ	–	ದೊಡ್ಡ ಕೋಣೆ
ದಾರಂದ	–	ಬಾಗಿಲ ಚೌಕಟ್ಟು
ದಿಡ್ಡಿ ಬಾಗ್ಲ್	–	ಮನೆಯಿಂದ ವ್ಯವಸಾಯದ ಭೂಮಿಯಿರುವ ದಿಕ್ಕಿನಲ್ಲಿರುವ ಬಾಗಿಲು
ದೊಂಬೆ	–	ಹಂಚಿನ ಮಾಡಿನ ಸಂದುಗಳಲ್ಲಿ ಬೋರಲಾಗಿ ಹಾಕುವ ಓಣಿ ಹಂಚು
ದ್ವಾರ ಬಾಗಿಲು	–	ಪ್ರಧಾನ ಬಾಗಿಲು
ಪಂಚಾಂಗ	–	ತಳಪಾಯ
ಪಡ್ಸಾಲಿ	–	ಒಳಜಗುಲಿ
ಪಾಗಾರ	–	ಕಂಪೌಂಡ್
ಬಿಡಾರ	–	ತಾತ್ಕಾಲಿಕ ವಾಸಸ್ಥಾನ
ಮನೆ	–	ಮೇಲ್‌ಜಾತಿ, ಮೇಲ್ವರ್ಗದವರ ವಾಸಸ್ಥಾನಕ್ಕಿರುವ ಹೆಸರು
ಮಳಮಾಡು	–	ಮಳೆ ತಾಗದಂತೆ ಅಡ್ಡಮಾಡಿದ ಸಣ್ಣದಾದ ತಾತ್ಕಾಲಿಕ ಮಾಡು
ಮಾಡಿನ ಜಂತಿ	–	ಅಡ್ಡೆ

ಮುಚ್ಚಿಗಿ	–	ಕೋಣೆಯ ಮೇಲೆ ಸೂರಿನ ಕೆಳಗಿನ ಮರದ ಹಾಸು
ಮೆಟ್ಲ್	–	ಮೆಟ್ಟಿಲು
ಹಟ್ಟಿ	–	ಜಾನುವಾರುಗಳನ್ನು ಕಟ್ಟುವ ಜಾಗ
ಹೆಬ್ಬಾಗ್ಲ್	–	ಮುಖ್ಯ ಬಾಗಿಲು
ಹೊಸ್ತ್ಲ್	–	ಹೊಸ್ತಿಲು

ಆಹಾರ ಪದ್ಧತಿ

ಅಡುಗಾಯಿ	–	ಬೇಯಿಸಿದ ಉಪ್ಪಿನಕಾಯಿ
ಅತ್ರಾಸ	–	ಕಜ್ಜಾಯ
ಅಪ್ಪದ ಹಿಟ್ಟ್	–	ಹಿಟ್ಟನ್ನು ಅಗಲದ ಪಾತ್ರೆಯಲ್ಲಿ ಬೇಯಿಸಿ ಮಾಡುವ ತಿಂಡಿ
ಉಪ್ಪಿನ್ಕಾಯಿ	–	ಉಪ್ಪಿನ ಕಾಯಿ
ಉಪ್ಪಿನ್ಹೊಡಿ ಕುಟ್ಟುದ್	–	ಬ್ರಾಹ್ಮಣೇತರರ ಮನೆಗಳಲ್ಲಿ ಚಟ್ಲಿ ಇತ್ಯಾದಿಗಳನ್ನು ಮೆಣಸಿನೊಂದಿಗೆ ಸೇರಿಸಿ ಕುಟ್ಟುವುದು
ಕಡ್ಬ್	–	ಕಡುಬು
ಕಾಯಿರಸ	–	ಸಿಹಿಯಾದ, ತೆಂಗಿನ ಕಾಯಿ ಅರೆದು ಹಾಕಿ ಮಾಡಿದ ಸಾಂಬಾರಿನಂತಹ ಪದಾರ್ಥ
ಕೊಟ್ಟೆ	–	ಮುಂಡ್ಕನೋಲೆಯನ್ನು ಸುತ್ತಿ ಮಾಡಿದ ಕೊಳವೆಯಂತಹ ರಚನೆಯಲ್ಲಿ ಇಡ್ಲಿ ಹಿಟ್ಟು ಹಾಕಿ ಸೆಕೆಯಲ್ಲಿ ಬೇಯಿಸಿ ಮಾಡುವ ತಿಂಡಿ
ಕೋಸಂಬ್ರಿ	–	ಕೋಸಂಬರಿ
ಗಸಿ	–	ದಪ್ಪ ಸಾಂಬಾರು
ಗೊಜ್ಜ್	–	ಗೊಜ್ಜು
ಗೊಡ್ಡಿಟ್ಟ್	–	ಹೊಸಕ್ಕಿ ದಪ್ಪ ಅರೆದು ಅರಶಿನ ಎಲೆಯಲ್ಲಿ ಹಾಕಿ ಆವಿಯಲ್ಲಿ ಬೇಯಿಸಿ ಮಾಡುವ ತಿಂಡಿ
ಗೌಲ್	–	ತರಕಾರೇತರ ಅಡುಗೆ
ಚಕ್ಲಿ	–	ಚಕ್ಕುಲಿ
ಚಟ್ನಿ	–	ಚಟ್ನಿ
ಚಯ್ಕಿ	–	ಔಷಧೀಯ ಗುಣವುಳ್ಳ ಲೇಹದಂತಹ ಪದಾರ್ಥ
ಚಿಗಳುಂಡೆ	–	ಎಳ್ಳಿನ ಉಂಡೆ
ಚಿತ್ರಾನ್ನ	–	ಚಿತ್ರಾನ್ನ

ಚೆಟ್ಟಿ	–	ಕಾವಲಿಯಲ್ಲಿ ಕಾಯಿಸಿ ಮಾಡುವ ತಿಂಡಿ
ತಂಬಿಟ್ಟು	–	ಹಲವು ಬಗೆಯ ಹಿಟ್ಟುಗಳನ್ನು ಸೇರಿಸಿ ಮಾಡುವ ಉಂಡೆ
ತಂಬ್ಳಿ	–	ನೀರಾದ ಚಟ್ನಿಯಂತಹ ಪದಾರ್ಥ, ವಿವಿಧ ಸೊಪ್ಪು, ಕಾಯಿಗಳನ್ನು ಬಳಸಿ ತೆಂಗಿನತುರಿ ಹಾಕಿ ತಯಾರಿಸಲಾಗುತ್ತದೆ
ತಾಳ್ಳ್	–	ಪಲ್ಯ
ತೆಳ್ಳಿದ್ವಾಸಿ	–	ನೀರು ದೋಸೆ
ತೊಗೆ	–	ಕಾಳು ಬೇಯಿಸಿ ಮಾಡುವ ಸಿಹಿಯಾದ ಸಾರು
ತೌಡಿಟ್ಟ್	–	ತೌಡಿನಿಂದ ತಯಾರಿಸಿದ ಪಾನೀಯ
ದ್ವಾಸಿ	–	ದೋಸೆ
ಪತ್ರೊಡೆ	–	ಕೆಸುವಿನ ಎಲೆಯಲ್ಲಿ ಮೆಣಸಿನೊಂದಿಗೆ ಅರೆದ ಅಕ್ಕಿ ಹಿಟ್ಟು ಹಾಕಿ ಮಾಡುವ ತಿಂಡಿ
ಪದಾರ್ತು	–	ಸಾಂಬಾರು
ಪನ್ಯರ	–	ವಿಶೇಷ ಆಚರಣೆಗಳಲ್ಲಿ ನೀಡುವ ಪ್ರಸಾದ ರೂಪದ ತಿಂಡಿ
ಪಳ್ದ್ಯ	–	ಮೊಸರು ಹಾಕಿ ಮಾಡುವ ಬಿಳಿ, ಹಳದಿ ಬಣ್ಣದ ಸಾಂಬಾರು
ಪಾಯ್ಸ	–	ಪಾಯಸ
ಬಲ್ಚಟ್	–	ಅಕ್ಕಿಕಾಯಿ ಹಾಕಿದ ದೋಸೆ
ಮಾವಿನ ಹಿಂಡಿ	–	ಮಾವಿನ ಕಾಯಿಯನ್ನು ಅರೆದು ಮಾಡುವ ಚಟ್ನಿಯಂತಹ ಪದಾರ್ಥ
ಮಾಂಬಳ	–	ಮಾವಿನ ಹಣ್ಣಿನ ರಸವನ್ನು ಒಣಗಿಸಿ ಮಾಡುವ ಪದಾರ್ಥ
ಮುದ್ದುಳಿ	–	ಮಂದವಾದ ಪದಾರ್ಥ
ಮೊಸರವಲಕ್ಕಿ	–	ಮೊಸರು ಬೆರೆಸಿದ ಅವಲಕ್ಕಿ
ಮ್ಯಾಲಾರ	–	ಸಾಂಬಾರು
ರಸಾಣೆ	–	ರಸಾಯನ
ಶಾಮಿಗಿ	–	ಶಾವಿಗೆ
ಸಾಸ್ಮೆ	–	ತರಕಾರಿಗೆ ಹಸಿಯಾಗಿ ತೆಂಗಿನಕಾಯಿ ಅರೆದು ಹಾಕಿ ಮಾಡುವ ಪದಾರ್ಥ
ಸೀಮೆಣಸು	–	ಸಿಹಿಯಾದ ಸಾಂಬಾರಿನಂತಿರುವ ಪದಾರ್ಥ
ಸೆಂಡ್ಗಿ	–	ಸೆಂಡಿಗೆ
ಹಪ್ಳ	–	ಹಪ್ಪಳ

ಹಂಚಟ್	–	ಹಣ್ಣಿನ ರಸದಿಂದ ಮಾಡಿದ ತಿನಿಸು
ಹಾಲ್‌ಬಾಯಿ	–	ಅಕ್ಕಿ, ಸೌತೆಕಾಯಿಯನ್ನು ನುಣ್ಣಗೆ ಕಡೆದು ಮಾಡುವ ತಿಂಡಿ
ಹುಗ್ಗಿ	–	ಹುಗ್ಗಿ
ಹುಳಿ ಅವಲಕ್ಕಿ	–	ಮೆಣಸು, ಸಾಸಿವೆ ಇನ್ನಿತರ ವಸ್ತುಗಳನ್ನು ಸೇರಿಸಿ ಅರೆದು ಮಾಡಿದ ಮಿಶ್ರಣ ಸೇರಿಸಿ ಕಲಸಿದ ಅವಲಕ್ಕಿ
ಹೆಸರು ಗಂಜಿ	–	ಹೆಸರುಕಾಳು, ಬೇಳೆಯ ಗಂಜಿ
ಹೋಳಿಗಿ	–	ಹೋಳಿಗೆ

ಜಾನುವಾರುಗಳ ಆಹಾರ

ಅಕ್ಕಚ್ಚು	–	ಜಾನುವಾರುಗಳಿಗೆ ಕುಡಿಯಲು ಕೊಡುವ ಅಕ್ಕಿ ತೊಳೆದ ನೀರು ಇತ್ಯಾದಿ
ಬಾಯ್ರ್	–	ಜಾನುವಾರುಗಳಿಗೆ ಕುಡಿಯಲು ಕೊಡುವುದು
ಮಡ್ಡಿ	–	ಹುರುಳಿ, ಅಕ್ಕಿ ಬೇಯಿಸಿ ಜಾನುವಾರುಗಳಿಗೆ ತಿನ್ನಲು ಕೊಡುವ ಆಹಾರ

ಉಡುಗೆ

ಅಂಗಿ	–	ಅಂಗಿ
ಅಂಗೋಸ್ತ್ರ	–	ಮೈಗೆ ಸುತ್ತಿಕೊಳ್ಳುವ ಹತ್ತಿ ಬಟ್ಟೆ
ಅರ್‌ಸೀರಿ	–	ತುಂಡು ಸೀರೆ
ಎಳೆವಸ್ತ್ರ	–	ದೂರದೂರಿಗೆ ಹೋಗುವಾಗ ಧರಿಸುವ ಹೆಚ್ಚು ನೂಲಿನ ಎಳೆ ಇರುವ ವಸ್ತ್ರ
ಕಣ	–	ರವಿಕೆಯ ಬಟ್ಟೆ
ಕಾವಿ ಸಾಟಿ	–	ಸನ್ಯಾಸಿಗಳು ಉಟ್ಟುಕೊಳ್ಳುವ ಕಾವಿ ಬಟ್ಟೆ
ಕಿರಿಗೆ	–	ಸಣ್ಣ ಅಥವಾ ತುಂಡು ಸೀರೆ
ಕೆಂಪು ಸೀರೆ	–	ಬ್ರಾಹ್ಮಣರಲ್ಲಿ ವಿಧವೆಯರು ಉಡುವ ಸೀರೆ
ಕೋವಣ	–	ಲಂಗೋಟಿ
ಕ್ವಾಣಕ	–	ಲಂಗೋಟಿ
ಗಂಜಿ ಪರಾಕ	–	ತೆಳುವಾದ, ದೂರ ದೂರ ನೂಲಿರುವ ಹತ್ತಿಯ ಬಟ್ಟೆ
ಗಚ್ಚಿನ ಮುಂಡಾಸು	–	ಅಲಂಕಾರಿಕ ಮುಂಡಾಸು
ಚಂಪಿ	–	ಸೀರೆಯ ಸಣ್ಣ ತುಂಡು
ದೋತರ	–	ವೇಷ್ಟಿ

ಪಂಜಿ	–	ಹತ್ತಿಯ ಸಣ್ಣ ವಸ್ತ್ರ
ಪಟ್ಕಚ್ಚೆ	–	ಪಟ್ಟಿಯಿಂದ ಕೂಡಿದ ಕಚ್ಚೆ
ಪರ್ಕ್ಯಾಳಿ ಪಂಚೆ	–	ದೂರ ದೂರ ನೂಲಿದ್ದ ಪಂಚೆ
ಬಕ್ಕಣ	–	ಅಂಗಿಯ ಜೇಬು
ಬಚ್ಚ್‌ಖಾನಿ	–	ಮದುಮಕ್ಕಳಿಗೆ ಕೊಡುವ ವಸ್ತ್ರ
ಬೈರಾಸ	–	ಮೈಒರೆಸಿಕೊಳ್ಳಲು, ಉಟ್ಟುಕೊಳ್ಳಲು ಬಳಸುವ ಸಣ್ಣ ವಸ್ತ್ರ
ಮಲೆಕಟ್	–	ಸ್ತನ ಮುಚ್ಚುವ ಉಡುಗೆ
ಮುಂಡಾಸು	–	ತಲೆಯ ಮೇಲೆ ವಸ್ತ್ರ ಸುತ್ತಿಕೊಳ್ಳುವುದು
ಮುಂಡು	–	ಲುಂಗಿ
ಮುಗಟ	–	ರೇಶ್ಮೆ ಸೀರೆ
ಮುಟ್ಟಾಳೆ	–	ಕೃಷಿಕರು ತಲೆಯಲ್ಲಿ ಧರಿಸುವ ಅಡಿಕೆ ಹಾಳೆಯ ಟೊಪ್ಪಿ
ಮುಸ್ತಾಪು	–	ಎತ್ತುಗಳ ಮೈಮೇಲೆ ಹಾಕುವ ಬಟ್ಟೆ
ಯಲವಸ್ತ್ರ	–	ರೇಷ್ಮೆಯ ಶಾಲು, ಮೇಲೊಸ್ತ್ರ
ರವ್ಕಿ	–	ರವಿಕೆ
ರುಮಾಲ್	–	ತಲೆಯ ಮೇಲೆ ಧರಿಸುವ ಮುಂಡಾಸಿನಂತಹ ಉಡುಗೆ
ಲಂಗದಾವಣಿ	–	ಲಂಗ, ರವಕೆಯ ಮೇಲೆ ಸಣ್ಣ ವಸ್ತ್ರವನ್ನು ಸೆರಗಿನಂತೆ ಧರಿಸುವುದು
ಲುಂಗಿ	–	ಪಂಚೆ
ವಲ್ಲಿ	–	ಹೊದ್ದುಕೊಳ್ಳುವ ವಸ್ತ್ರ
ಶಾಲು	–	ಮೈಮೇಲೆ ಹೊದ್ದುಕೊಳ್ಳುವ ವಸ್ತ್ರ
ಸಕಲಾತಿ	–	ಮೈಮೇಲೆ ಹೊದ್ದುಕೊಳ್ಳುವ ವಸ್ತ್ರ
ಸಾಲೇರ ಪಂಚೆ	–	ನೇಕಾರರು ನೇಯ್ದ ಪಂಚೆ
ಸೀರಿ	–	ಸೀರೆ
ಓಜಾರ್	–	ಉದ್ದವಾದ ಪ್ಯಾಂಟಿನಂತಹ ಸಡಿಲವಾದ ಉಡುಗೆ

ತೊಡುಗೆ

ಅಡ್ಡಕೇದಗೆ	–	ಜಲ್ಲಿಯನ್ನು ಅಲಂಕರಿಸುವ ಆಭರಣ
ಅಡ್ಡಿಕೆ	–	ಒಂದು ಬಗೆಯ ಕತ್ತಿನ ಆಭರಣ
ಉಗ್ರಡ್ಗೆ	–	ಕುತ್ತಿಗೆಯ ಆಭರಣ
ಉಡಿದಾರ	–	ಸೊಂಟದ ಸುತ್ತ ಕಟ್ಟುವ ಸರಪಳಿಯಂತಹ ಆಭರಣ

ಉಡ್‌ಸೀಣ್	–	ಉಡುದಾರ
ಒಡ್ಯಾಣ	–	ಸೊಂಟದ ಅಭರಣ
ಒತ್ತುಂಗಿಲ	–	ಕಾಲುಂಗುರ ಕಳಚಿ ಹೋಗದ ಹಾಗೆ ಮೇಲುಗಡೆ ಹಾಕುವ ಸಣ್ಣ ಉಂಗುರ
ಕಟ್ಟಾಣಿ ಸರು	–	ಚಿನ್ನದ ಗುಂಡಿನೊಂದಿಗೆ ಮಣಿ ಪೋಣಿಸಿದ ಸರ
ಕಡಗ	–	ದಪ್ಪನಾದ ಬಳೆ
ಕರಿಮಣಿ ಸರು	–	ಮದುವೆಯ ಬಳಿಕ ಹೆಣ್ಣುಮಕ್ಕಳು ಧರಿಸುವ ಕಪ್ಪುಮಣಿಯುಳ್ಳ ಸರ
ಕಾಲ್‌ಮಿಂಚು	–	ಕಾಲುಂಗುರದಂತಹ ಬೆಳ್ಳಿಯ ಆಭರಣ
ಕುಚ್ಚು	–	ಜಡೆಯ ಗೊಂಡೆ
ಕೇದಿಗೆ ಹೂಗ್	–	ಜಲ್ಲಿಯ ಮೇಲೆ ತೊಡುವ ಅರ್ಧಚಂದ್ರಾಕೃತಿಯ ಆಭರಣ
ಕೈಮಿಂಚು	–	ಉಂಗುರದಂತಹ ಬೆಳ್ಳಿಯ ಆಭರಣ
ಕೊಡ್ಗಿ	–	ಕಿವಿಯ ಆಭರಣ
ಗೆಜ್ಜಟ್ಟಿಕೆ	–	ಒಂದು ಬಗೆಯ ಕತ್ತಿನ ಆಭರಣ
ಗೆಜ್ಜಿ ಪಾಡಗ	–	ಕಾಲ್‌ಬಳೆ
ಚಕ್ರ ಸರ	–	ಚಕ್ರದ ಆಕಾರದ ಚಿನ್ನದ ಮಣಿಯ ಸರ
ಚೂಡಾಮಣಿ	–	ತಲೆಯಲ್ಲಿ ಧರಿಸುವ ಆಭರಣ
ಜಡಿಹೂಗ್	–	ಜಡೆಗೆ ಹಾಕುವ ಚಿನ್ನದ ಹೂವು
ಜಡೆಗೊಂಡೆ	–	ಜಡೆಯ ಕೆಳಗಿನ ಕುಚ್ಚು
ಜಡೆಹೂಗು	–	ಜಡೆಯನ್ನು ಅಲಂಕರಿಸಲು ಬಳಸುವ ಚಿನ್ನದ ಹೂವು
ಜನಿವಾರ	–	ಉಪನಯನದ ಬಳಿಕ ಹುಡುಗ ಧರಿಸುವ ಪವಿತ್ರ ನೂಲು
ಜಿಮ್ಕಿ	–	ಕಿವಿಯಲ್ಲಿ ಧರಿಸುವ ಓಲಾಡುವ ಆಭರಣ
ಜೋಡು	–	ಚಪ್ಪಲಿ
ಟಿಕ್ಕಿ	–	ಸಣ್ಣದಾದ ಕಿವಿಯ ಆಭರಣ, ಸಾಮಾನ್ಯವಾಗಿ ಮಕ್ಕಳು ತೊಡುತ್ತಾರೆ
ತಲ್‌ಸುತ್ತು	–	ತಲೆಯಲ್ಲಿ ಧರಿಸುವ ಆಭರಣ
ತಾಳಿಬಟ್ಟ್	–	ಕರಿಮಣಿಯ ಪದಕ
ದಾಂಬುಲ್ಲುರ್ಬಳಿ	–	ದಪ್ಪ ಗಾತ್ರದ ನೇವಳ

ನತ್ತು	–	ಮದುವೆಗೆ ಮೊದಲು ಹೆಣ್ಣು ಮಕ್ಕಳು ಧರಿಸುವ ಮೂಗಿನ ಆಭರಣ
ಪಿಲ್ಲಿ	–	ಕಾಲಿನ ಎರಡನೆಯ ಬೆರಳಿಗೆ ಹಾಕುವ ಉಂಗುರದಂಥ ಆಭರಣ
ಬಟ್‌ಮಾಲ್ಕಿ	–	ಬಟ್ಟು ಹಾಕಿದ ಸರ
ಬಾಸಿಂಗ	–	ಮದುವೆಯ ಸಂದರ್ಭದಲ್ಲಿ ಹಣೆಯ ಸುತ್ತ ಕಟ್ಟುವ ತೊಡುಗೆ
ಮಾಗಾಯಿ	–	ಮಕ್ಕಳ ಕೊರಳಿಗೆ ಹಾಕುವ ಆಭರಣ
ಮಿಣೆಲು	–	ಕಿವಿಯ ಆಭರಣ
ಮುಂದಲೆ ಬಟ್ಟ್	–	ಬೈತಲೆಯ ನೇರಕ್ಕೆ ಧರಿಸುವ ಆಭರಣ
ಮುಗುಳು	–	ಕಿವಿ ಹಾಲೆಯ ಮೇಲ್ಭಾಗದಲ್ಲಿ ಚುಚ್ಚಿಕೊಳ್ಳುವ ಆಭರಣ
ಮುರು	–	ಸಾಮಾನ್ಯವಾಗಿ ಗಂಡಸರು ಧರಿಸುವ ಕಿವಿಯ ಆಭರಣ
ಮೂಗ್ತಿ	–	ಮದುವೆಯಾದ ಮೇಲೆ ಹೆಣ್ಣು ಮಕ್ಕಳು ಧರಿಸುವ ಮೂಗಿನ ಆಭರಣ
ರಾಗಟೆ	–	ಜಲ್ಲಿಯನ್ನು ಅಲಂಕರಿಸಲು ಹಾಕುವ ಒಡವೆ
ವಂಟೆ	–	ಸಾಮಾನ್ಯವಾಗಿ ಗಂಡಸರು ಧರಿಸುವ ಕಿವಿಯ ಆಭರಣ
ವಾಲಿ	–	ಓಲೆ
ಸರ್ಪಳಿ	–	ಹೆಂಗಸರ ಕಿವಿಯ ಆಭರಣ
ಹಗ್ಳದ ಸರು	–	ಹವಳದ ಸರ

ಜಾನುವಾರುಗಳ ತೊಡುಗೆಗಳು

ಕಾಸಾನ್ ತಾಳಿ	–	ಜಾನುವಾರಿನ ಕತ್ತಿಗೆ ಹಾಕುವ ಸರ
ಕೋಡ್ ಮಿಟ್ಟಿ	–	ಜಾನುವಾರಿನ ಕೋಡಿಗೆ ತೊಡಿಸುವ ತೊಡುಗೆ
ನೊಸಲುಗಂಧ	–	ಓಟದ ಹೋರಿಯ ನೊಸಲಿಗೆ ಕಟ್ಟುವ ಲೋಹದ ಆಭರಣ

ಶೃಂಗಾರ ಸಾಮಗ್ರಿಗಳು

ಅರಶಿನ	–	ಅರಶಿನದ ಪುಡಿ ಬಳಸಿ ಮಾಡುವ ಸಿಂಗಾರ
ಕಾಡಿಗಿ	–	ಕಾಡಿಗೆ
ಕುಂಕ್ಮ	–	ಕುಂಕುಮ
ಚೌಲಿ	–	ಕೂದಲು ಕಡಿಮೆ ಇದ್ದಾಗ ಮುಡಿ ಅಥವಾ ಜಡೆ ಕಟ್ಟಲು ಸೇರಿಸುವ ಕೃತಕ ಅಥವಾ ಹಳೆಕೂದಲು

ಬಾಚಣ್ಗಿ – ಬಾಚಣಿಗೆ

ಮದರಂಗಿ – ಮದರಂಗಿ ಗಿಡದ ಸೊಪ್ಪನ್ನು ಅರೆದು ಕೈಮೇಲೆ ಬಿಡಿಸಿಕೊಳ್ಳುವ ಚಿತ್ತಾರ

ಆಟಗಳು

ಉಯ್ಯಾಲೆ

ಒಂಟ್ ಕಾಲ್ ಆಟ

ಗಜ್ಜುಗದಾಟ

ಗುಡ್ಣದಾಟ

ಚಿಟ್‌ಬಿಲ್

ಚಿಣಿ ದಾಂಡು

ಚೆನ್ನೆಮಣೆ

ಜಿಲಿಬಿಲಿ

ಟೊಪ್ಪಿ ಆಟ

ಡೂಡೂ

ತಿರಗಾಂಪಟ್ಟೆ ಆಟ

ಪಗಡಿ

ಪಿಟ್ಲಿ

ಮೂರು ಕಾಲಿನ ಓಟ

ಸೋಡಿ ಆಟ

ಹಲ್ಲೆಕಾಯಿ

ಹೆಗ್ಗಣಕಚಗುಳಿ ಆಟ

ಹೊಕ್ಕೋಟ್ ಆಟ

ಪಾತ್ರೆ, ಬುಟ್ಟಿಗಳು ಇತ್ಯಾದಿ:

ಅಂಡಿ – ಉದ್ದನೆಯ ಲೋಹದ ಪಾತ್ರೆ

ಅಳ್ಗಿ – ಒಂದು ಬಗೆಯ ಮಡಕೆ

ಇರ್ಕಿ – ಸಿಂಬೆ (ಪಾತ್ರೆಗಳ ಅಡಿಗಿಡುವ ಹುಲ್ಲಿನ ಚೆಂಡೆ)

ಉಗ್ಗ – ದ್ರವ ಪದಾರ್ಥ ಬಡಿಸುವ ಪಾತ್ರೆ

ಕಂದಲುಗಿಂಡಿ – ಮಗೆ

ಕಚ್ಚಲ್ಗಿ – ಅಡುಗೆ ಮನೆಯಲ್ಲಿ ಸಾಮಾನುಗಳನ್ನು ಇಡುವ ಹಲಗೆ

ಕಡಾಲ್ – ಮಜ್ಜಿಗೆ ಕಡೆಯುವ ಕೋಲು

ಕಣ್ ಹೆಡ್ಗಿ – ತೂತಿರುವ ಬೆತ್ತದಿಂದ ಮಾಡಿದ ದೊಡ್ಡ ಬುಟ್ಟಿ ರೀತಿಯ ರಚನೆ

ಕಲ್ಲುಮಗು – ಒಳಕಲ್ಲಿನ ಗುಂಡು

ಕಾಸಂಡಿ – ಹಾಲು ಕರೆಯುವ ತಂಬಿಗೆ

ಕುಕ್ಕಿ – ಬಿಳಲಿನಿಂದ ಮಾಡಿದ ಉದ್ದನೆಯ ಬುಟ್ಟಿ

ಕೇಲು – ಗುಂಡಗಿನ, ಮೂಲೆಯಲ್ಲಿ ಕಾಲಿರುವ ದೊಡ್ಡ ಮಣ್ಣಿನ ಪಾತ್ರೆ

ಕೈಬಟ್ಲ್ – ಅನ್ನ ಬಡಿಸುವ ಪಾತ್ರೆ

ಕೈಲು – ಉದ್ದ ಹಿಡಿಯ ಪಾತ್ರ

ಕೊಟ್ಟೆ – ಮರದ ಎಲೆಯಿಂದ ಮಾಡಿದ ದೊನ್ನೆ

ಕೊಡ್ಪಾನ – ಕೊಡ

ಕೊಳಗ – ಅಳೆಯಲು ಬಳಸುವ ಮರದ ದೊಡ್ಡ ಪಾತ್ರೆ

ಕ್ವಾರ್ಕಿ – ಮಣ್ಣಿನ ಬಟ್ಟಲು

ಗಂಗಾಣ – ಊಟದ ತಟ್ಟೆ

ಗಡ್ಗಿ – ಮಣ್ಣಿನ ಕೊಡ

ಗದ್ದ – ಮಣ್ಣಿನ ಪಾತ್ರೆ/ ಬಾಣಂತಿಗೆ ಮಾತ್ರ ನೀಡುವುದು

ಗಿಂಡ್ಗಿ – ಸಣ್ಣ ಬಾಯಿಯ ಪಾತ್ರೆ

ಗಿಣ್ಲ್ – ಚಿಕ್ಕ ಗುಂಡಗಿನ ತಟ್ಟೆ

ಗೂಡು – ಬಿಳಲಿನ ಬುಟ್ಟಿ

ಗೆರಸೆ – ಮೊರ

ಗೌಲ್ ಮಡ್ಕೆ – ಮಾಂಸಾಹಾರ ಅಡುಗೆ ಮಾಡುವ ಮಣ್ಣಿನ ಪಾತ್ರೆ

ಚರ್ಗಿ – ದೊಡ್ಡ ಪಾತ್ರೆ

ಚಿಡಿ – ಮಡಿಕೆ

ಚಿಪ್ಪ್ – ತೆಂಗಿನ ಕಾಯಿಯ ಗೆರಟೆಗೆ ಹಿಡಿ ಜೋಡಿಸಿ ಮಾಡಿದ ಸೌಟು

ಚೊಂಬು – ತಂಬಿಗೆ

ಚೋರೆ – ಮೀನು ಬೇಯಿಸುವ ಪಾತ್ರೆ

ಚೋರೊಟ್ಟೆ – ತೂತುಮಡಿಕೆ

ಜ್ವಾರಿ – ಮಜ್ಜಿಗೆ ಹಾಕುವ ಮಣ್ಣಿನ ಪಾತ್ರೆ

ತಪ್ಪಲೆ – ಲೋಹದ ದುಂಡಗಿನ ಸಣ್ಣ ಪಾತ್ರೆ

ತಳಿಗಿ – ಹರಿವಾಣದಂತಿರುವ ತಟ್ಟೆ

ತಾಂಬಳ/ತಾಂಬಣ – ಲೋಹದ (ಎಲೆ ಅಡಿಕೆ) ಹರಿವಾಣ

ದೊನ್ನೆ – ಎಲೆಯಿಂದ ಮಾಡಿದ ಚಿಕ್ಕ ಪಾತ್ರೆ

ದ್ವಾಸಿ ಕಲ್ಲ್ – ದೋಸೆ ಹುಯ್ಯುವ ಕಲ್ಲು

ದ್ವಾಸಿ ಬಾವ್ಡಿ	–	ದೋಸೆ ಹಾಕಿ ಕಾವಲಿಯ ಮೇಲೆ ಮುಚ್ಚುವ ಮಣ್ಣಿನ ಮುಚ್ಚಳ
ಪಡ್ಗ	–	ಪೀಕದಾನಿ
ಪತ್ತಾಸ್	–	ಮರದ ದೊಡ್ಡ ಪೆಟ್ಟಿಗೆ
ಪಿಂಗಾಣಿ	–	ಪಿಂಗಾಣಿಯ ಪಾತ್ರೆ
ಬಾಗ್ ಮರ್ಗಿ	–	ಅನ್ನ ಬಾಗಲು ಬಳಸುವ ಮರ್ಗಿ
ಬಾಣಿ	–	ಅಕ್ಕಚ್ಚು ಕೊಡುವ ಪಾತ್ರೆ
ಬಾಣ್ಲ್	–	ಬಾಂಡಲಿ
ಬಿಸ್ಕಾಲು	–	ಅಡಿಗೆ ಒಲೆ ಚಿಟ್ಟೆಯ ಮೇಲೆ ಸಾಂಬಾರು ಜೀನಸು ಇಡುವ ಹಲಗೆ
ಬುಟ್ಟಿ	–	ಬುಟ್ಟಿ
ಬೋಗುಣಿ	–	ಅಗಲವಾದ ಪಾತ್ರೆ
ಭರಣಿ	–	ಪಿಂಗಾಣಿಯ ಮುಚ್ಚಳವಿರುವ ಪಾತ್ರೆ, ಉಪ್ಪು, ಉಪ್ಪಿನಕಾಯಿ ಮುಂತಾದವುಗಳನ್ನು ಇಡಲು ಬಳಸುತ್ತಾರೆ
ಮಂಕರ್ಕಿ	–	ಬಿಳಲಿನ ದೊಡ್ಡ ಬುಟ್ಟಿ
ಮರ್ಗಿ	–	ದೊಡ್ಡ ಪಾತ್ರೆ
ಮರ್‌ಚಟಿಕಿ	–	ಅನ್ನ ಬಾಗಲು ಬಳಸುವ ಸಾಧನ
ಸಟ್ಟುಗ	–	ದೋಸೆ ಏಳಿಸುವ ಸೌಟು
ಸಾಂಬಾರ್ ಬಟ್ಲ್	–	ಸಾಂಬಾರ ಪದಾರ್ಥಗಳನ್ನು ಇಡುವ ಬೇರೆ ಬೇರೆ ಅರೆಗಳುಳ್ಳ ಬಟ್ಟಲು
ಸಿಬ್ಬಲು	–	ಸಣ್ಣ ಬೀಳಿನಿಂದ ಮಾಡಿದ ತೂತಿರುವ ಬುಟ್ಟಿ
ಹನಿಮರ್ಗಿ	–	ಜಾನುವಾರುಗಳಿಗೆ ಆಹಾರ ಹಾಕಲು ಹಟ್ಟಿಯ ದಂಡೆಯ ಮೇಲೆ ಇರುವ ಕಲ್ಲಿನ ಪಾತ್ರೆ
ಹರಿ	–	ಹಂಡೆ
ಹರಿವಾಣ	–	ವೀಳ್ಯದ ತಟ್ಟೆ
ಹುಟ್ಟ್	–	ಸೌಟು
ಹೆಡಿಗೆ	–	ಬೆತ್ತ/ಬೀಳಿನಿಂದ ಮಾಡಿದ ದೊಡ್ಡ ಗಾತ್ರದ ಬುಟ್ಟಿ

ಅಡುಗೆಗೆ ಮತ್ತು ಮನೆಯಲ್ಲಿ ಬಳಸುವ ಇತರ ಸಲಕರಣೆಗಳು

ಚಾಂಪರ್ಕಿ ಸೂಡಿ	–	ತೆಂಗಿನ ಮರದ ಹಾಳೆ ಮತ್ತು ಅದರ ಬುಡಭಾಗವನ್ನು ಸೇರಿಸಿ ಮಾಡಿದ ಪಂಜು
ಸಿಕ್ಕ	–	ಪಾತ್ರೆ ಮುಂತಾದುವುಗಳನ್ನು ತೂಗು ಹಾಕಲು ಬಳಸುವ ಸಾಧನ

ಸೆಳ್ಳೀಕೋಲು	–	ಒಂದು ಜಾತಿಯ ಮರದಿಂದ ಮಾಡಿದ ಕೋಲು
ಹಿಡಿಕಡ್ಡಿ	–	ಪೊರಕೆ ಕಡ್ಡಿ
ಹಿಡಿಸುಡಿ	–	ಕಸಪೊರಕೆ
ಹೆರ್ಮಣಿ	–	ತುರಿಮಣೆ
ಅರುಕಲ್	–	ರುಬ್ಬುವ ಕಲ್ಲು
ಒನ್ಕಿ	–	ಒನಕೆ
ಒರ್ಲ್	–	ಒರಳು
ಕುಟ್ವಾಣಿ	–	ಕುಟ್ಟಲು ಬಳಸುವ ಮರದ ಅಥವಾ ಕಲ್ಲಿನ ಸಾಧನ
ಕೆರ್ಮಣೆ	–	ತುರಿಮಣೆ
ಕೊರ್ಬಿ	–	ಮರದ ಸಣ್ಣ ತುಂಡು
ಚಿಪ್ಪಳು ಕೋಲು	–	ಚರಿಗೆ ಇಬ್ಬರು ಹಿಡಿದು ಅನ್ನ ಬಾಗುವಾಗ ಬಳಸುವ ಕತ್ತರಿಯಂಥ ಸಾಧನ
ಬಲ್ಗಿ	–	ಒನ್ಕಿ
ಬೀಸುಕಲ್ಲ್	–	ಬೀಸುವ ಕಲ್ಲು
ಬೇಂಬ್	–	ಅವಲಕ್ಕಿ ಮುಂತಾದುವನ್ನು ಕುಟ್ಟಲು ಬಳಸುವ ಹಲ್ಲಿರದ ಒನಕೆಯಂತಹ ಸಾಧನ
ಮೆಟ್‌ಕತ್ತಿ	–	ತರಕಾರಿ ಹೆಚ್ಚುವ ಕತ್ತಿ

ಅಳತೆಯ ಮಾನ

ಸಿದ್ದಿ	–	ಪಾವು
ಒಂದು ಸೇರ್	–	ನಾಲ್ಕ್ ಪಾವು
ಒಂದು ಮುಡಿ	–	೪೨ ಸೇರ್
೧ಕಳಸಿಗಿ	–	೧೪ಸೇರ್
೧ಮಾನಿಗಿ	–	೪ ಕಳಸಿಗಿ

ಖಂಡುಗ, ಕೊಳಗ, ಕೊರ್ಜಿ

ದ್ರವ ಪದಾರ್ಥಗಳನ್ನು ಅಳೆಯುವ ಮಾನ

ಸಿದ್ದಿ

ಸೊಲಿಗೆ

ಬ್ಯಾಳೆ

ಕೂಡ

ನಕ್ಷತ್ರಗಳನ್ನು ವಿಶಿಷ್ಟವಾಗಿ ಗುರುತಿಸಿರುವ ಬಗೆ

ವದಿ ಆರ್ಲ: ಸುಮಾರು ಐದು ಗಂಟೆಯ ಹೊತ್ತಿಗೆ ಮೂಡುತ್ತದೆ. ಕೋಳಿ ಬೇಗನೆ ಕೂಗಿದರೆ ಜನರು ಸಮಯವನ್ನು ಸ್ಪಷ್ಟಪಡಿಸಿಕೊಳ್ಳುತ್ತಿದ್ದುದು ಈ ನಕ್ಷತ್ರ ನೋಡಿ.

ಕೋಳಿಗೂಡು ಆರ್ಲ: ಈ ನಕ್ಷತ್ರವು ಕೋಳಿ ಕೂಗುವ ಹೊತ್ತಲ್ಲಿ ಕಂತುತ್ತದೆ. ಚಂದ್ರನ ಹಿಂದೆ ಇರುತ್ತದೆ. ಕೋಳಿ ನಿಜವಾಗಿ ಹೊತ್ತಿಗೆ ಸರಿಯಾಗಿ ಕೂಗಿತೇ ಎನ್ನುವುದನ್ನು ಇದರಿಂದ ಖಚಿತಪಡಿಸಿಕೊಳ್ಳುತ್ತಿದ್ದರು.

ಆಚಾರಿ ಅಳ್ತಿ ಕೋಲು: ಆಚಾರಿ ಅಳ್ತಿ ಕೋಲು ಹಾಗೂ ಕೋಳಿಗೂಡು ಆರ್ಲ ಎರಡೂ ಜೊತೆಯಾಗಿ ಇರುತ್ತವೆ. ಇದು ಕೂಡಾ ಬೆಳಗ್ಗೆ ಕಂತುತ್ತದೆ.

ಉಂಬ ಆರ್ಲ: ಈ ನಕ್ಷತ್ರವು ಕೂಡಾ ಚಂದ್ರನ ಹಿಂದೆ ಇರುತ್ತದೆ. ರಾತ್ರಿ ಇದು ಮುಳುಗಿದ ನಂತರವೇ ಜನರು ಊಟ ಮಾಡುತ್ತಿದ್ದರು.

ಬೆಳ್ಳಿ ಆರ್ಲ: ಇದು ಕೂಡಾ ಬೆಳಗ್ಗೆ ಕೋಳಿ ಕೂಗುವ ಹೊತ್ತಲ್ಲಿ ಮೂಡುತ್ತದೆ.

ನಕ್ಷತ್ರ ಮತ್ತು ಮಳೆ, ಬೆಳೆಗಳ ಸಂಬಂಧ

ಕೃತ್ತಿಕಾ	–	ಕೃತ್ತಿಕ ಕಾಯ್ಕ್
ರೋಹಿಣಿ	–	ರೋಹಿಣಿ ಮಳೆ ದೋಣಿ ಹಾಕತ್
ಮೃಗಶಿರ	–	ಮೃಗ ಮೈ ಕೊಡ್ಕತ್ ಮೃಗಶಿರೆಗೆ ನೆಟ್ರೆ ಮುರ್ಗಿ ಹಾಕಿ ಬೆಳಿತ್
ಆರ್ದ್ರ	–	ಆದ್ರಿ ಮಳೆ ಬಂದ್ರೆ ಆದಷ್ಟು ಬೆಳು ಆದ್ರಿ ಮಳೆ ಬಂದ್ರೆ ಆರೂ ನಕ್ಷತ್ರದ ಮಳೆ ಬತ್ತತ್
ಪುನರ್ವಸು	–	ಪುನರಸು ಮಳಿ ಪುರಸೊತ್ತ್ ಇಲ್ದೆ ಹೋಯ್ತ್
ಪುಷ್ಯ	–	ಪುಷ್ಯ ಮಳೆ ಪುಸ್ ಆಯ್ತ್
ಆಶ್ಲೇಷ	–	ಅಸ್ಲಿ ಮಳೆ ಕಸ್ಲಿ ಕಟ್ಕ್ ಬತ್ತತ್ ಅಸ್ಲಿ ಮಳೆ ಬಂದ್ರೆ ಅಸ್ಲ್ ಅಕ್ಕ್
ಮಾಘ	–	ಮಗಿ ಮಳೆ ಮಗ್ಗ್ದ್ ಮಗ್ಗ್ದ್ ಹೊಯ್ಯತ್
ಹುಬ್ಬ	–	ಉಬ್ಬಿ ಮಳೆ ಬಂದ್ರೆ ಅಬ್ಬಿ ಹಾಲ್ ಕುಡ್ದಂಗೆ
ಉತ್ತರಾ	–	ಉತ್ರಿ ಮಳೆ ಬಂದ್ರೆ ಕುತ್ರಿ ಕೂಳ್
ಚಿತ್ರಾ	–	ಚಿತ್ರಿ ಮಳಿ ಬಂದ್ರೆ ಚಿತ್ರಾನ್ನ
ವಿಶಾಖ	–	ವಿಶಾಖಿ ಮಳಿ ಬಂದ್ರೆ ವಿಷ ಸುರಿದ್ಹಂಗೆ

• • •